ಶ್ರೀವೇದವ್ಯಾಸಪ್ರಣೀತ

ಶ್ರೀಮದ್ಭಾಗವತಾಂತರ್ಗತ

ಸಪ್ತಮಸ್ಕಂಧ

# ಶ್ರೀನರಸಿಂಹ ಅವತಾರ ಕಥಾವೈಭವ

## (ಶ್ರೀ ಪ್ರಹ್ಲಾದರಾಜರ ಮಹಿಮೆ)



ನೃಸಿಂಹೋऽಖಿಲಾಜ್ಞಾನಮತಧ್ವಾಂತದಿವಾಕರಃ ।
ಜಯತ್ಯಮಿತಸದ್ಜ್ಞಾನಸುಖಶಕ್ತಿಪಯೋನಿಧಿಃ ॥

ಸಂಗ್ರಹ / ನಿರೂಪಣೆ

**ಪ್ರೊ॥ ಬದರೀನಾಥಾಚಾರ್ಯ ಘೂಳಿ ಎಂ.ಎ.**

Sri Narasimhavatara Katha (Prahlada Raja Mahime) Compiled and Edited by Prof. Badarinathacharya Ghooli M.A., Retired Professor. Published by Madhava Madhwa Prakashana No. 164, "Soudamini" 7th Cross, 9th Main, BEML Layout, Rajarajeshwarinagar, Bangalore-560 089 Phone : 080-28602191

First Edition : June 2009

Typeset (DTP) By
**Sri Raghavendra Enterprises**
Banashankari I Stage,
Bangalore-560 050
Phone 080-22421294

## ಮೊದಲ ನುಡಿ

ಶ್ರೀ ಲಕ್ಷ್ಮೀನರಸಿಂಹ ದೇವರ ಅವತಾರ ಅದ್ಭುತ. ರೂಪವೂ ಅದ್ಭುತ. ಶ್ರೀಹರಿಯ ಚರಿತ್ರೆಯೂ ಅತ್ಯದ್ಭುತ. ಹೀಗೆ ಅದ್ಭುತ ಮಹಿಮಾನ್ವಿತನಾದ ಶ್ರೀಹರಿಯ ವರ್ಣನೆ ಶ್ರೀಮದ್ಭಾಗವತದಲ್ಲಿ ವೇದವ್ಯಾಸರು ರಚಿಸಿರುವುದೂ ಅದ್ಭುತ. ಇದೇ ರೀತಿ ಭಕ್ತ ಶಿಖಾಮಣಿ ಪ್ರಹ್ಲಾದರ ಚರಿತ್ರೆ ಶ್ರೀಮನ್ನಾರಾಯಣನಲ್ಲಿ ತೋರಿದ ನಿಷ್ಠಾ ಪ್ರೀತಿ ವಿಕಾರ ಹೊಂದದೆ ಏಕ ಮನಸ್ಕನಾಗಿ ಭಕ್ತಿಯ ವರ್ಣನೆ ರೋಮಾಂಚಕ, ಆದರಣೀಯ. ಭಕ್ತಿ ಎಂದರೆ ಪ್ರಹ್ಲಾದರೇ ದೃಷ್ಟಾಂತ.

ಪ್ರಹ್ಲಾದರಿಗೆ ಯಾವ ಕೊರೆತೆಯಿದ್ದಿತು ? ರಾಜ ಮನೆತನ ವೈಭವ ಪ್ರೀತಿಸುತ್ತಿದ್ದ ಮಾತಾ ಪಿತಾ ರಾಕ್ಷಸರಾದರೂ ಮೊದಲು ಅಕ್ಕರೆಯ ಪ್ರೇಮಭಾವ. ಎಲ್ಲಾ ಇದ್ದರೂ ಯಾವುದನ್ನೂ ಅಪೇಕ್ಷಿಸದೆ ಸುಖ ಭೋಗಗಳು ಕೈಯೊಡ್ಡಿ ಕರೆಯುತ್ತಿದ್ದರೂ ವಿರಕ್ತನಾಗಿ ಶ್ರೀಹರಿಯಲ್ಲಿ ವಿಚಲಿತ ಮನಸ್ಕನಾಗಿ **"ತ್ವಮೇವ ಶರಣಂ ಮಮ"** ಎಂದು ಎಷ್ಟೇ ಹಿಂಸೆ ಕೋಪ ತಾಪಗಳಿಗೆ ಕೊನೆಗೆ ವಿಷಪ್ರಾಶನವನ್ನು ಮಾಡಿಸಿದರೂ ಶ್ರೀಹರಿಪ್ರಸಾದವೆಂದು ಅವನನ್ನೇ ನಂಬಿದ ಮಹಾನುಭಾವ.

ಪ್ರಹ್ಲಾದರ ಚರಿತ್ರೆ ನೃಸಿಂಹರ ಕಥಾ ನಾವು ಕೇಳಿದ್ದೇವೆ. "ಚಂದಮಾಮ" ಚಿತ್ರಕಥಾಗಳಲ್ಲಿ ಓದಿದ್ದೇವೆ. ಸಿನಿಮಾ ತೆಗೆದದ್ದನ್ನು ನೋಡಿದ್ದೇವೆ. ಎಲ್ಲಾ ಗೊತ್ತಿದೆ, ಅದನ್ನೇ ಪುನಃ ನೀವು ಪುಸ್ತಕ ರೂಪದಲ್ಲಿ ಬರೆದದ್ದು ಯಾವ ರೀತಿಯ ವೈಶಿಷ್ಟ್ಯತೆ ಎಂದು ಕೇಳಿದರೆ **"ಕಿಂ ತತ್ರ ಚಿತ್ರಂ ಚರಿತಂ ನಿವೇದ್ಯಂ"** ಸಿನಿಮಾ, ಚಂದಮಾಮ ಇತ್ಯಾದಿಗಳಲ್ಲಿ ಬರೀ ಕಥೆ ಇರುವುದು. ಕೆಲವೊಮ್ಮೆ, ದುಷ್ಟ ಪಾತ್ರಗಳಲ್ಲಿ ಸಜ್ಜನಿಕೆ ತೋರಿಸುವಂತೆ ಬರೆದಿದೆ. ಆದರೆ ಇಲ್ಲಿ ತತ್ವದೃಷ್ಟಿಯಿಂದ ತತ್ರಾಪಿ ಶ್ರೀಮದಾಚಾರ್ಯರು ತಿಳಿಸಿರುವ ಪ್ರಮೇಯಗಳನ್ನು ನಿರೂಪಿಸುವ ಒಂದು ಪ್ರಯತ್ನ.

ಶ್ರೀಹರಿಯ ಭಕ್ತರ ಕಥಾಮಹಿಮೆ ಎಷ್ಟು ಕೇಳಿದರೂ ಮತ್ತೆ ಮತ್ತೆ ಸೊಗಸಾಗಿ ಹೊಸದಾಗಿ ಕಾಣುವುದು.

**ತದೇವ ರಮ್ಯಂ ರುಚಿರಂ ನವಂ ನವಂ । ತದೇವ ಯುಷ್ಮತ್‍ಮನಸೊ ಮಹೋತ್ಸವಂ ।**
**ತದೇವ ಶೋಕಾರ್ಣವ ಶೋಷಣಂನೃಣಾಂ । ಯದುತ್ತಮಶ್ಲೋಕ ಕಥಾ (ಗುಣಾ)ನು ವರ್ಣನಂ॥**

ಹೀಗೆ ತಿಳಿಸಿದಂತೆ ಭಗವಂತನ ಭಗವದ್ಭಕ್ತರ ಕಥಾ ಎಷ್ಟು ಸಲ ಕೇಳಿದರೂ ಮತ್ತೆ ಮತ್ತೆ ಕೇಳಬೇಕೆನಿಸುವುದು. ಇದರಿಂದ ದೇಹೇಂದ್ರಿಯಗಳು ಪರಿಶುದ್ಧವಾಗಿ ಅಂತಃಕರಣವು ಪವಿತ್ರವಾಗಿ ನಿರ್ಮತ್ಸರಾಣಾಂ ಎಂಬಂತೆ ಅರಿಷಡ್ವರ್ಗಗಳನ್ನು ಅದುಮಲು ಸಹಾಯವಾಗಿ ಶ್ರೀಶನಲ್ಲಿ ಏಕಾಂತ ಭಕ್ತಿ ಜನಿಸಬೇಕಾದರೆ ಅವನನ್ನು ಸ್ತುತಿಸಿದ ಭಕ್ತಶಿಖಾಮಣಿಗಳ ಕಥೆ ಕೇಳುವುದರಿಂದ ಶಾಶ್ವತವಾಗಿ ನಿಲ್ಲುವುದು.

ಈ ಕೃತಿಯಿಂದ ಅಂತಹ ಭಕ್ತಿಗೆ ಸ್ವಲ್ಪ ಕಾರಣವಾಗಬಹುದೇನೋ ಎಂಬ ಅಪೇಕ್ಷೆಯಿಂದ ನನ್ನನ್ನು ಈ ಮಾರ್ಗದಲ್ಲಿ ಬಾಲ್ಯದಿಂದಲೂ ಪ್ರಚೋದಿಸಿ ಉಪದೇಶ ಪ್ರೋತ್ಸಾಹ ಕೊಟ್ಟು ಉದ್ಧಾರ ಮಾಡಿದ ನನ್ನ **ಜನನೀ ಸೌಭಾಗ್ಯವತೀ ರುಕ್ಮಿಣೀಬಾಯಿ, ನನ್ನ ಜನಕ ಗುರುವಾಗಿ ಶಿಕ್ಷಣ ನೀಡಿದ ಪಂಡಿತ ಶಿರೋಮಣಿ ಭಾಗವತ ರತ್ನರೆಂದೇ ಕರೆಸಿಕೊಂಡ ಕೃಷ್ಣಮೂರ್ತಿ ಆಚಾರ್ಯ ಘೂಳೀ** ಇವರಿಗೆ ಈ ಕೀರ್ತಿ ಸಲ್ಲುತ್ತದೆ. ಅವರ ಅಂತರ್ಯಾಮಿ ಲಕ್ಷ್ಮೀ ವೆಂಕಟೇಶ, ಶ್ರೀ ಲಕ್ಷ್ಮೀ ನರಸಿಂಹದೇವರ ಚರಣಗಳಲ್ಲಿ ಈ ಕುಸುಮವನ್ನು ಭಕ್ತಿಪೂರ್ವಕ ಅರ್ಪಿಸುತ್ತೇನೆ.

ನಮ್ಮ ಕಾಲೋನಿಯಲ್ಲಿಯ ಪಂ॥ ವಿದ್ವಾನ್ ಪೂಜ್ಯಶ್ರೀ ದೊಡ್ಡಬಳ್ಳಾಪುರ ಮಧ್ವನಾಥಾಚಾರ್ಯರು ಬಹಳ ದಿನಗಳಿಂದ ನನಗೆ ಪ್ರೋತ್ಸಾಹ ಬೆಂಬಲ ಕೊಟ್ಟ ಮಹನೀಯರು. ಅವರಲ್ಲಿ ಎಷ್ಟು ವಿದ್ವತ್ತಿದೆಯೋ ಅಷ್ಟೇ ವಿನಯಾನ್ವಿತರು. ಸರಳ ಸ್ವಭಾವ. ಇಂತಹವರು ನನ್ನ ಕೃತಿಗಳನ್ನು ಓದಿ ಸೂಕ್ತ ಸಲಹೆ ಮಾರ್ಗದರ್ಶನ ಕೊಟ್ಟು ನನಗೆ ಗುರುಸ್ಥಾನದಲ್ಲಿರುತ್ತಾರೆ. ನಾನು ಅವರಿಗೆ ಅನಂತ ಶಿರಸಾಷ್ಟಾಂಗ ನಮಸ್ಕಾರಗಳನ್ನು ಭಕ್ತಿಯಿಂದ ಅರ್ಪಿಸುತ್ತೇನೆ.

ನನ್ನ ಎಲ್ಲಾ ಕೃತಿಗಳನ್ನು ಸಕಾಲಕ್ಕೆ ಬೇಸರವಿಲ್ಲದೆ, ಚಿ॥ ಪಿ. ಎಸ್. ರಾಘವೇಂದ್ರ ಅವರು ಡಿ.ಟಿ.ಪಿ. ಮಾಡಿ ಪ್ರೂಫ್‌ಗಳನ್ನು ಕೊಟ್ಟಿರುತ್ತಾರೆ. ಹಾಗೆ ಅವರ ತಂದೆ ಶ್ರೀ ಡಿ. ವಿ. ಪ್ರಭಾಕರ ಅವರೂ ಸಹ ಸಹಕಾರ ಕೊಟ್ಟಿರುವುದನ್ನು ನಾನು ಕೃತಜ್ಞತೆಯಿಂದ ಸ್ಮರಿಸುತ್ತೇನೆ.

ಈ ಕೃತಿಯು ಕೇವಲ ಕಥಾನಿರೂಪಣೆ ಆಗಿರದೆ ಅಡಗಿರುವ ತತ್ವಪ್ರಮೇಯಗಳನ್ನು ಸಂಗ್ರಹ ಮಾಡಿ ತಿಳಿಸಲಾಗಿದೆ. ಶ್ರೀಮದಾಚಾರ್ಯರ ಭಾರತ ತಾತ್ಪರ್ಯ ನಿರ್ಣಯ, ಭಾಗವತ ತಾತ್ಪರ್ಯ ನಿರ್ಣಯ ಶ್ರೀವಿಜಯಧ್ವಜರ ಪದರತ್ನಾವಳಿ (ಭಾಗವತ ಟಿಪ್ಪಣಿ) ಶ್ರೀಮಾದನೂರು ವಿಷ್ಣುತೀರ್ಥರ ಭಾಗವತ ಸಾರೋದ್ಧಾರ, ಯಾದವಾರ್ಯರ ಟಿಪ್ಪಣಿ, ನಮ್ಮ ತಂದೆಯವರು ಬರೆದ ಭಾಗವತಾಂಮೃತಂ, ತೆಲುಗು ವಿದ್ವಾಂಸ ಪೋತನ ಬರೆದ ಭಾಗವತ ಎಲ್ಲವುಗಳ ಸಹಾಯ ಪಡೆದು ಯಥಾವತ್ ಪ್ರಮೇಯಗಳಿಗೆ ಹೆಚ್ಚು ಪ್ರಾಧಾನ್ಯತೆ ಕೊಟ್ಟು ಶೋಧಿಸಿ ಅತಿ ವಿಸ್ತಾರವಾಗಿಯೂ, ಅತಿ ಸಂಕ್ಷೇಪವಾಗಿಯೂ ಆಗದೆ ಆಬಾಲ ವೃದ್ಧರಿಗೂ ನೃಸಿಂಹದೇವರ ಕಥಾ ಸಾರವನ್ನು ಸುಲಭ ಶೈಲಿಯಲ್ಲಿ ಬರೆಯುವ ಪ್ರಯತ್ನ.

ಈ ಕೃತಿಯಿಂದ ಸಜ್ಜನ ವೃಂದವು ಸಂತೋಷಪಟ್ಟರೆ, ಆದರದಿಂದ ಸ್ವೀಕರಿಸಿದರೆ ನನ್ನ ಶ್ರಮ ಸಾರ್ಥಕವಾಗಿ ಶ್ರೀಪ್ರಹ್ಲಾದವರದ ಶ್ರೀಲಕ್ಷ್ಮೀನೃಸಿಂಹ ದೇವರ ಕೃಪೆಗೆ ಪಾತ್ರರಾಗೋಣ ಬನ್ನಿ. ಈ ರಸವನ್ನು ಸವಿಯೋಣ.

**ಪ್ರೊ॥ ಬದರೀನಾಥಾಚಾರ್ಯ ಘೂಳೀ**

# ಶ್ರೀ ನರಸಿಂಹಾವತಾರ ಕಥಾ

## (ಶ್ರೀ ಪ್ರಹ್ಲಾದರಾಜ ಮಹಿಮೆ)

### ಶ್ರೀಮದ್ಭಾಗವತ ಮಂಗಳಶ್ಲೋಕ

ಓಂ ಜನ್ಮಾದ್ಯಸ್ಯ ಯತೋ ಅನ್ವಯಾದಿತರತಶ್ಚಾರ್ಥೇಷ್ವಭಿಜ್ಞಃ
ಸ್ವರಾಟ್ ತೇನೇ ಬ್ರಹ್ಮಹೃದಾಯಆದಿತವಯೇ ಮುಹ್ಯಂತಿಯಂ ಸೂರಯಃ ।
ತೇಜೋ ವಾರಿಮೃದಾಂ ಯಥಾ ವಿನಿಮಯೋ ಯತ್ರ ತ್ರಿಸರ್ಗೋ ಮೃಷಾ
ಧಾಮ್ನಾ ಸ್ವೇನಸದಾನಿರಸ್ತಕುಹಕಂ ಸತ್ಯಂ ಪರಂ ಧೀಮಹೀ ॥

### ಶ್ರೀಮನ್ಮಧ್ವಾಚಾರ್ಯರ ಭಾಗವತ ತಾತ್ಪರ್ಯ ನಿರ್ಣಯ ಮಂಗಳಶ್ಲೋಕ

ಓಂ ಸೃಷ್ಟಿಸ್ಥಿತ್ಯಪ್ಯಯೇಹಾನಿಯತಿ ದೃಶಿತಮೋಬಂಧಮೋಕ್ಷಾಶ್ಚ
ಯಸ್ಮಾದಸ್ಯ ಶ್ರೀಬ್ರಹ್ಮರುದ್ರಪ್ರಭೃತಿಸುರನರದ್ವೀಶ ಶತ್ರಾತ್ಮಕಸ್ಯ ।
ವಿಷ್ಣೋರ್ವರ್ಯಸ್ತಾಃ ಸಮಸ್ತಾಃ ಸಕಲ ಗುಣನಿಧಿಃ ಸರ್ವದೋಷವ್ಯಪೇತಃ
ಪೂರ್ಣಾನಂದೋಽವ್ಯಯೋ ಯೋ ಗುರುರಪಿಪರಮಶ್ಚಿಂತಯೇತಂ ಮಹಾಂತಂ॥

### ಶ್ರೀವಿಜಯಧ್ವಜೀಯರ ಮಂಗಳಪದ್ಯ (ಪದರತ್ನಾವಳಿ)

**ಅಥಕಲಿಮಲಾಪನೂತ್ತಯೇವಿಧಿಭವಪುರಸ್ಸರೈರಮಶವರ್ಯೈರಾದರಾತ್ ಪ್ರಾರ್ಥಿತೋ ದಿತಿಸುತಬಲ ಭರಪರಿಖಿನ್ನಧರಣೀತಲೇ, ಚಿರಸಮಯ ಸಮಾಚೀರ್ಣತಪಸ್ಯಾಯಾಂ ಸತ್ಯವತ್ಯಾಂಪರಾಶರಾತ್ ಅವತೀರ್ಣೋ ವ್ಯಾಸನಾಮ ಮುರ ಮಥನಃ ಸಮುದ್ಧೃತ್ಯಸಮುತ್ಪನ್ನ ನಿಗಮ ಕಲ್ಪತರಲ್ಪಮತಿ ದಯಾಳುಃ ಶಾಖೋಪಶಾಖಾಭೇದೇನ ವಿಭಕ್ತವೇದಃ ತದರ್ಥನಿರ್ಣಯೇಚ್ಛುರ್ವಿರಚಿತಬ್ರಹ್ಮಸೂತ್ರಃ ತದನಧಿಕಾರಿ ಜನಾಪವರ್ಗಾಯ ಪ್ರಕಾಶಿತ ಪುರಾಣಸಂಹಿತೋ ವೇದಾಂರ್ಥಪ್ರಕಾಶಿಕಾಂ ದ್ವಾದಶಸ್ಕಂಧ ಸಮ್ಮಿತಾಂ ಅಷ್ಟಾದಶಸಹಸ್ರ ಸಂಖ್ಯೋಪೇತಾಂ ಭಾಗವತ ಪುರಾಣಸಂಹಿತಾಂ ಚಿಕೀರ್ಷುಃ**

**ವಿಘ್ನಾಭಾವೋಪಿ ಕಾಲದೋಷೇಣ ವಿಹಿತಾನ್ ಭಾಗವತಧರ್ಮಾನ್ನಾವಿಶ್ಚಿ ಕೂರ್ಷು:। ನಿರಂತರೋಕ್ತಿಬ್ರಹ್ಮಸ್ವರೂಪೋಪಿ ನಿರಂತರಾಂಸೋಪಿ ಪ್ರೇಕ್ಷಾವಚ್ಚಿಕ್ಷಾಂಸ್ಯೈ ಮಂಗಳಾಚರಣಾನಾಂ ಅನೇಕ ಪ್ರಂಯೋಜನಾಯು ಚ ಸರ್ವೇಷ್ಟ ದೇವತಾಂ ನಾರಾಯಣಾಖ್ಯಂ ನಮಸ್ಕರೋತಿ ಜನ್ಮಾಧ್ಯಸ್ಯ ಇತಿ.**

ಶ್ರೀಮದ್ಭಾಗವತದಲ್ಲಿ ಮುಖ್ಯಪ್ರತಿಪಾದ್ಯನಾದ ಶ್ರೀಮನ್ನಾರಾಯಣನೆಂದು ತಿಳಿಸಲು ಅನೇಕ ಪ್ರಮಾಣಗಳಿಂದ ಸಮರ್ಥಿತವಾಗಿರುವುದು. ಉಪಕ್ರಮಾದಿ ತಾತ್ಪರ್ಯ ಯುಕ್ತ್ಯಾಪೇತ ಸರ್ವ ಶೃತಿ ಸ್ಮೃತಿ ತಾತ್ಪರ್ಯ ಪರ್ಯಾಲೋಚನಯಾ ಜಗತ್ಸೃಷ್ಟ್ಯಾದಿ ಕರ್ತೃತ್ವಾತ್, ಸರ್ವಜ್ಞತ್ವಾತ್, ಅನನ್ಯಾಧಿಪತಿತ್ವಾತ್, ಚತುರ್ಮುಖಜ್ಞಾನೋಪ

ದೇಷ್ಟೃತ್ವಾತ್, ಸ್ವಾನುಗ್ರಹ ಮಂತರೇಣ ದುರಜ್ಞಯತ್ವಾತ್, ಸ್ವಪ್ರಯೋಜನಾನುದ್ದೇಶೇನ ಕೇವಲ ಲೀಲಾಯೈವ ಜಗತ್ಸರ್ಜನಾದಿ ಪ್ರವೃತ್ತಿಮತ್ವಾತ್, ಸ್ವತ ಏವ ನಿರಸ್ತೇಂದ್ರಿಯರಹಿತ ಜಾಲತ್ವೇನ ಸತ್ಯ ಮಹಿಮನಿತ್ವಾತ್ ನಿರ್ದುಃಖ ನಿತ್ಯ ನಿರತಿಶಯಾನಂದಾದ್ಯನುಭವ ರೂಪತ್ವಾತ್ಚ್ಛ ಸರ್ವ ಗುಣಪೂರ್ಣೋವಿಷ್ಣುಃ ಸರ್ವೈಃ ಧ್ಯೇಯಃ

ಉಪಕ್ರಮ ಇತ್ಯಾದಿ ತಾತ್ಪರ್ಯಗಳಿಂದ ತಿಳಿಸಿದಂತೆ ಸಮಸ್ತ ವೇದ ಪುರಾಣಗಳಲ್ಲಿ ಉಕ್ತವಾದವುಗಳನ್ನು ಚೆನ್ನಾಗಿ ಪರಿಶೀಲಿಸಿದ್ದರಿಂದ ಶ್ರೀಮಹಾವಿಷ್ಣುವೇ ಧ್ಯಾನಕ್ಕೆ ಯೋಗ್ಯನು. ಅಂತಹ ವಿಷ್ಣುವು ಜಗತ್ತಿಗೆ ಜನ್ಮದಾತ. ಚತುರ್ಮುಖ ಬ್ರಹ್ಮದೇವರಿಗೆ ಜ್ಞಾನೋಪದೇಶ ಮಾಡಿದ್ದರಿಂದ ನಾರಾಯಣನು ಸರ್ವಜ್ಞನಾಗಿರುವುದರಿಂದ ಅವನ ಅನುಗ್ರಹವಿಲ್ಲದೇ ಶ್ರೀಹರಿಯ ವಿಷಯಜ್ಞಾನವು ಸುಲಭವಾಗಿ ಲಭಿಸದಿರುವುದರಿಂದಲೂ, ಜಗತ್ಸೃಷ್ಟಿ ಮಾಡಲೂ ತನಗೆ ಯಾವ ಪ್ರಯೋಜನವಿಲ್ಲದಿದ್ದರೂ, ಅನಾಯಾಸವಾಗಿ ಲೀಲಾಜಾಲವಾಗಿ ಸೃಷ್ಟಿಕಾರ್ಯದಲ್ಲಿ ತೊಡಗಿರುತ್ತಾನಾದ್ದರಿಂದಲೂ, ಪರಮಾತ್ಮನು ಇಂದ್ರಜಾಲನಂತೆ (ಮಿಥ್ಯಾಸೃಷ್ಟಿ) ಮಾಡದೆ ಸತ್ಯವೂ ಆಗಿರುವುದರಿಂದ, ಶ್ರೀಹರಿಯು ಮಹಾಮಹಿಮೆಯುಳ್ಳವನು ನಿತ್ಯ ನಿರಸ್ತನಿರ್ದುಃಖ ನಿತ್ಯಾನಂದ ಸ್ವರೂಪವುಳ್ಳವನೂ, ಸಮಸ್ತ ಅನಂತ ಗುಣಭರಿತನಾದ್ದರಿಂದ ಧ್ಯಾನ ಮಾಡುವುದು ಉಚಿತವು.

ಆದ್ದರಿಂದ ಧೀಮಹಿ ಎಂದು ಗ್ರಾಯತ್ರೀ ಮಂತ್ರಾರ್ಥವವನ್ನೇ ತಿಳಿಸುವುದು. ಮತ್ತೂ ಬ್ರಹ್ಮಮೀಮಾಂಸಾರ್ಥವೂ ಇಲ್ಲಿ ಸೂಚಿತವಾಗಿರುವುದನ್ನು ಕಾಣಬಹುದು.

**ಯತ್ರಾಧಿಕೃತ್ಯಗಾಯತ್ರೀಂ ವರ್ಣ್ಯತೆ ಧರ್ಮವಿಸ್ತರಃ ।**
**ವೃತ್ತಾಸುರ ವಧಶ್ಚಾಪಿ ಯತ್ತದ್ಭಾಗವತಂ ವಿದುಃ ॥**
**ಅರ್ಥೋಽಯಂ ಬ್ರಹ್ಮಸೂತ್ರಾಣಾಂ ಭಾರತಾರ್ಥವಿನಿರ್ಣಯಃ**
**ಗಾಯತ್ರೀ ಭಾಷ್ಯರೂಪೋಸಾ ವೇದಾರ್ಥಪರಿಬೃಂಹಿತಃ ॥**

ಎಂಬ ಪ್ರಮಾಣಗಳಿಂದ ಶ್ರೀಮದ್ಭಾಗವತವು ಪರಮ ಪ್ರಮಾಣ. ಇಂತಹ ಮಹಾಪುರಾಣವು ಶ್ರೀನಾರಾಯಣ ಅವತಾರರಾದ ಶ್ರೀವೇದವ್ಯಾಸದೇವರೇ ಭಕ್ತಾನುಕಂಪದಿಂದ ರಚಿಸಿ ಸಜ್ಜನರಿಗೆ ಮಹೋಪಕಾರ ಮಾಡಿರುವರು.

ಶ್ರೀ ವೇದವ್ಯಾಸರಿಗೆ ನಮಿಸಿ ಈ ಗ್ರಂಥ ಅಧ್ಯಯನ ಮಾಡುವವರು ಅಧಿಕಾರಿಗಳು ಯಾರು ಎಂದು ತಿಳಿಸುತ್ತಾರೆ.

**ಧರ್ಮಃ ಪ್ರೋಜ್ಜಿತಕೈತವೋಽತ್ರಪರಮೋ ನಿರ್ಮಚ್ಛರಾಣಾಂ**
**ಸತಾಂ ವೇದ್ಯಂ ವಾಸ್ತವಸ್ತವಮತ್ರವಸ್ತು ಶಿವದಂ ತಾಪತ್ರಯೋನ್ಮೂಲನಮ್**
**ಶ್ರೀಮದ್ಭಾಗವತೇ ಮಹಾಮುನಿಕೃತೇ ಕಿಂವಾಽಪರೈಃರೀಶ್ವರಃ ಸದ್ಯೋ**
**ಹೃದ್ಯವರುಧ್ಯತೆಽತ್ರ ಕೃತಿಭಿಃ ಶುಷೂಭಿಸ್ತತ್ಕಣಾತ್ ॥** (ಭಾಗ ೧-೨)



ಶ್ರೀಮದ್ಭಾಗವತವು ಯಾರಿಂದ ಉಪದೇಶ ಹೊಂದಿತು ? ಜಗತ್ತಿಗೆ ಹೇಗೆ ಬಂದ (ತಂದ) ಮಹಾನುಭಾವರನ್ನು ಸ್ಮರಿಸಲಾಗಿದೆ ?

**ನಿಗಮಕಲ್ಪತರೋರ್ಗಲಿತಂ ಫಲಂ ಶುಕಮುಖಾದಮೃತದ್ರವ ಸಂಯುತಂ ।**
**ಪಿಚಿತ ಭಾಗವತಂ ರಸಮಾಲಯಂ ಮುಹುಹರಹೋರಸಿಕಾಃ ಭುವಿಭಾವುಕಾಃ**

**ಯಂ ಪ್ರವ್ರಜಂತಮನುಪೇತಕೃತ್ಯಂ ದ್ವೈಪಾಯನೋವಿರಹಕಾತರ ಆಜುಹಾವ**
**ಪುತ್ರೇತಿತನ್ಮಯತಯಾತರವೋಽಪಿನೇದುಸ್ತಂ ಸರ್ವಭೂತಹೃದಯಂ ಮುನಿಮಾನತೋಽಸ್ಮಿ ॥**
(ಭಾಗ ೧.೨)

**ಭಾಗವತ ಆಗತಿಕ್ರಮ**

ಶ್ರೀಮದ್ಭಾಗವತವನ್ನು ಶ್ರೀವೇದವ್ಯಾಸರು ತಮ್ಮ ಪುತ್ರರಾದ ಶುಕಮುನಿಗಳಿಗೆ ಉಪದೇಶ ಮಾಡಿದರು (ಸೂತರೂ ಅಲ್ಲೇ ಇದ್ದು ಕೇಳಿದರು). ಶ್ರೀ ಶುಕಮುನಿಗಳು ಪಾಂಡವೀಯನಾದ ಪರೀಕ್ಷಿತರಾಜನಿಗೆ ಅಂತ್ಯಕಾಲ ಸಮೀಪವಾಗಿರುವುದನ್ನು ತಿಳಿದು ಭಗವತ್ಸಂಕಲ್ಪಾನುಸಾರ ಗಂಗಾತೀರದಲ್ಲಿ ಏಳು ದಿನಗಳ ಕಾಲ ಪ್ರವಚನ ಮಾಡಿದರು.

**ಭಾಗವತ ಶ್ರವಣ ಪಠಣಾದಿಗಳಿಂದ ಲಭಿಸುವ ಮಹಾಫಲ**

**ತಸ್ಮಾದೇಕೇನ ಮನಸಾ ಭಗವಾನ್ ಸಾತ್ವತಾಂಪತಿಃ ।**
**ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ ಪೂಜ್ಯಶ್ಚ ನಿತ್ಯದಾ ॥** (ಭಾಗ ೨-೧೫)

**ಶೃಣ್ವತಾಂ ಸ್ವಕಥಾಂ ಕೃಷ್ಣಃ ಪುಣ್ಯಶ್ರವಣಕೀರ್ತನಃ ।**
**ಹೃದ್ಯಂತಃಸ್ಥೋ ಹ್ಯಭದ್ರಾಣಿ ವಿಧುನೋತಿ ಸುಹೃತ್ ಸತಾಮ್** (ಭಾಗ ೨-೧೮)

ಇಷ್ಟು ಭಾಗವತಪುರಾಣ. ಅವತಾರಿಕಾ ನಂತರ ಸಪ್ತಮಸ್ಕಂಧ ಸಂಕ್ಷೇಪಾನುವಾದ ಮಾಡಲು ತತ್ಪೂರ್ವ ಕಥಾನುವಾದವನ್ನು ತಿಳಿಸಲಾಗಿದೆ.

**ಸ್ವಸ್ತ್ಯಸ್ತು ಅಶೇಷ ಸನ್ಮಂಗಾಲಾನಿ ಭವಂತು ।**
**ಶ್ಲೋಕೈಕ ಶ್ರವಣ ಪಠಣ ಮಾತ್ರೇಣ**
**ವಕ್ತುಶ್ಚ ಶ್ರೋತೃಣಾಂನಿಖಿಲ ಕಲಿಕೃತ ಕಲ್ಮಷೋಪನೋ**
**ದನುಪಟುತರೆ ಮೋಕ್ಷಾದಿ ಪುರುಷಾರ್ಥ ಸಾಧನೀಭೂತೆ ।**
**ಶ್ರೀಮದ್ಭಾಗವತೆ ಮಹಾಮುನಿ ಕೃತೆ ಸಧ್ಯೋ ಶ್ರೀನೃಸಿಂಹಾವತಾರ**
**ಕಥಾನುವಾದೇ ಪ್ರಸಕ್ತೆ ಸತಿ ಕಿಂಚಿತ್ ಪೂರ್ವಕಥಾನುವಾದಃ ಓಂ**

**ಶ್ರೀಮದ್ಭಾಗವತ ೧ನೇ ಸ್ಕಂಧ ೨ನೇ ಶ್ಲೋಕಾಭಿಪ್ರಾಯ**

ಧರ್ಮಮಾರ್ಗದಲ್ಲೇ ಸಕ್ತರಾದ ಯಾವ ರೀತಿಯ ಕಾಪಟ್ಯವಿಲ್ಲದ ನಿಷ್ಕಾಮಕರ್ಮ ಸಹಿತರಾದ ಶ್ರೀಹರಿಯ ಪ್ರಸಾದ (ಪ್ರೀತಿ) ಬಯಸುವವರ, ಭಜಿಸುವವರಾದ

ಭಗವದ್ಭಕ್ತರಾದವರ ಹೃದಯದಲ್ಲಿ ಶ್ರೀಶನನ್ನು ಸ್ಮರಿಸಿದಾಕ್ಷಣ ಬಂದು ನೆಲಸುವನು. ಶ್ರೀಮನ್ನಾರಾಯಣನಾದರೋ ಜ್ಞಾನಾನಂದಪೂರ್ಣನು. ನಿತ್ಯ ನಿರ್ದೋಷಿಯು. ಭಕ್ತಜನ ಸಾಂಸಾರಿಕ ತಾಪತ್ರಯಗಳನ್ನು ನಿರ್ಮೂಲ ಮಾಡುವವನು ಎಂದು ಏಕಾಂತ ಭಕ್ತಿಯಿಂದ ಸೇವಿಪ ಜನರಿಗೆ ತನ್ನಯ ಉತ್ತಮ ವೈಕುಂಠಾದಿ ಲೋಕಗಳಲ್ಲಿರುವಂತೆ ಅನುಗ್ರಹಿಸುವನು. ಇಂತಹ ಪರಮಾತ್ಮನು ಈ ಗ್ರಂಥದಲ್ಲಿ ಮುಖ್ಯವಾಗಿ ಪ್ರತಿಪಾದ್ಯನು ಎಂದು ಚೆನ್ನಾಗಿ ತಿಳಿದು ಶ್ರೀಮದ್ಭಾಗವತವೆಂಬ ಅಮೃತವನ್ನು ಸ್ವಾದಿಸಿರಿ. (ಅಧ್ಯಯನ, ಪಾರಾಯಣ) ಎಲ್ಲಿಯವರೆಗೆ ಅಂತ ಕೇಳಬೇಡಿರಿ. ಈ ಭೌತಿಕ ದೇಹ ಪತನದವರೆಗೇ ಅಲ್ಲದೆ ತದನಂತರವೂ ಮುಕ್ತಿ ಹೊಂದುವ ಪೂರ್ವ ಲಿಂಗದೇಹ ಪತನವಾಗುವವರೆಗೂ ಮುಕ್ತಿಯಲ್ಲಿಯೂ ಶ್ರೀಹರಿಯ ಜ್ಞಾನದಿಂದ ಉದ್ಧರಿಸಿರುತ್ತೀರಿ.

ಭಕ್ತಿಗೆ ವಶನಾಗಿ ಹೃದಯದಲ್ಲಿ ಸದಾ ನೆಲೆಸಿ ಕಾಪಾಡುತ್ತಾನೆ ಚಿಂತೆ ಬೇಡ. ಎಷ್ಟು ಶಾಸ್ತ್ರ ಓದಿದರೇನು. ಭಗವಂತನಲ್ಲಿ ಭಕ್ತಿ (ಸ್ವಾಮಿ, ನೀನೇ ನನಗೆ ಗತಿ) ಇಲ್ಲದಿದ್ದರೆ ಜನ್ಮ ವ್ಯರ್ಥವಲ್ಲವೇ ? ಸಮಸ್ತ ಶಾಸ್ತ್ರಗಳು ಪರಮೇಶನ ಭಕ್ತಿಗೆ ಪ್ರಾಧಾನ್ಯತೆ ಕೊಟ್ಟಿರುತ್ತವೆ. ಆದ್ದರಿಂದ ಶ್ರೀಮದ್ಭಾಗವತವು ಇಂತಹ ಭಕ್ತಿಪ್ರಧಾನ ಶಾಸ್ತ್ರವು. ನಿತ್ಯ ಅಭ್ಯಸಿಸಿರಿ (ಅಮೃತಪಾನ ಮಾಡಿರಿ).

ದಿನವೂ ಭಾಗವತವನ್ನು ಪಾರಾಯಣ ಮಾಡಿರಿ. ಆಗಲಿಲ್ಲ. ಒಂದು ಅಧ್ಯಾಯ ಅದೂ ಆಗೋಲ್ಲ. ಒಂದು ಪಾದ ಅದೂ ಆಗೋಲ್ಲವೆನ್ನುವಿರಾ ? ಒಂದು ಶ್ಲೋಕವನ್ನಾದರೂ ಓದಿರಿ. ಇಷ್ಟೂ ಆಗದಿದ್ದಲ್ಲಿ ನಿಮ್ಮನ್ನು ಕಾಪಾಡುವವರ್‍ಯಾರೂ ಇರುವುದಿಲ್ಲ. ನಿಮ್ಮ ಜನ್ಮಕ್ಕೆ ಧಿಕ್ಕಾರ.

**ಶ್ಲೋಕಾರ್ಧಂ ಶ್ಲೋಕ ಪಾದಂವಾ ನಿತ್ಯಂ ಭಾಗವತೋದ್ಭವಂ ।**
**ಪಠೇತ್ಸ್ರುಣೋತಿಯೋ ಭಕ್ತ್ಯಾ ಗೋ ಸಹಸ್ರಫಲಂಲಭೇತ್ ।**
**ವಾಸುದೇವಕಥಾಪ್ರಶ್ನ ಪುರುಷಾನ್‌ತ್ರೀನ್ ಪುನಾತಿ ವಕ್ತಾರಂ**
**ಪೃಚ್ಛಕಂ ಶ್ರೋತೃಂ ತತ್ಪಾದ ಸಲಿಲಂ ಯಥಾ ॥**
**ಓಂ ನಮೋ ಭಗವತೇ ವಾಸುದೇವಾಯ ಅಮಿತ ತೇಜಸಾ ಯಸ್ಯ**
**ಪ್ರಸಾದಾತ್‌ಪ್ರವಕ್ಷಾಮಿ ನಾರಾಯಣಕಥಾಂ ಇಮಂ ॥**

ಶ್ರೀಮದ್ಭಾಗವತವನ್ನು ಉತ್ತಮ ಪಂಡಿತರಿಂದ ಹೇಳಿಸಬೇಕು. ದಿನನಿತ್ಯ ಹೇಳಿರಿ ಎನ್ನುವವರು, ಪ್ರವಚನ ಮಾಡುವವರು, ಪ್ರವಚನ ಭಕ್ತಿಯಿಂದ ಕೇಳಲು ಬಂದವರು, ಪುನೀತರಾಗುತ್ತರೆ. ಹೇಗೆ ಎಂದರೆ, ಪಾವನಿ ಗಂಗಾ ನದಿಯಲ್ಲಿ ಸ್ನಾನ ಮಾಡಿದರೆ ದೇಹಾಂತಃ ಇಂತಹ ಪುರುಷಾರ್ಥ ಕೊಡುವ ಮಹಾಪುರಾಣವನ್ನು ಶ್ರೀವಾಸುದೇವರ ಕರುಣೆಯಿಂದ ಹೇಳುತ್ತಿದ್ದೇನೆ.



## ಶ್ರೀಲಕ್ಷ್ಮೀನೃಸಿಂಹ ಪಾಹಿ

## ಸಪ್ತಮಸ್ಕಂಧ ಪೂರ್ವದಲ್ಲಿ
## ಷಷ್ಠ ಸ್ಕಂಧ ಮರುಜ್ಜನ್ಮ ಕಥಾ

**ಶ್ರೀರಾಜೋವಾಚ**

**ಕಥಂ ತು ಆಸುರಂ ಭಾವಮಪೋಹ್ಯೋಪ್ತತ್ತಿಕಂ ಗುರೋ**
**ಇಂದ್ರೇಣ ಪ್ರಾಪಿತಾಃ ಸಾಮ್ಯಂ ಕಿಂತತ್‌ಸಾಧುಕೃತಂ ಹಿತೈಃ ॥**
**ಇಮೇ ಶ್ರದ್ಧಧತೇ ವಿದ್ವಾನ್ ಋಷಯೋಽಪಿ ಮಹಾ ಸಹ ।**
**ಪರಿಜ್ಞಾನಾಯ ಭಗವವಂಸ್ತನ್ನೊ ವ್ಯಾಖ್ಯಾತುಮರ್ಹಸಿ ॥**

ಶುಕಾಚಾರ್ಯರು ಉತ್ತರಿಸುತ್ತಾರೆ. ರಾಜನ್, ಹಿಂದೆ ಆರನೆ ಅಧ್ಯಾಯದಲ್ಲಿ ಕಶ್ಯಪರಿಗೆ ಅದಿತಿ, ದಿತಿ ಎಂಬ ಪತ್ನಿಯರೆಂದು ಹಿಂದೆ ತಿಳಿಸಿದೆ. ಅದಿತಿಯು ಪುತ್ರರೆಲ್ಲಾ ದೇವತೆಗಳಾದರು. ಇಂದ್ರನು ಸರ್ವಾಧಿಪತಿಯಾದನು. ದಿತಿಯ ಮಕ್ಕಳನ್ನು ದೈತ್ಯರೆಂದು ತಿಳಿಸಿದ್ದೇನೆ. ದಿತಿಯ ಪುತ್ರರಲ್ಲಿ ನಾಲ್ಕನೆಯವನು ತ್ವಷ್ಟ್ರ. ಅವರ ಮಗನಾದ ವಿಶ್ವರೂಪ ಮಹಾ ಮೇಧಾವಿ. ನಾರಾಯಣವರ್ಮವನ್ನು ಇಂದ್ರನಿಗೆ ಉಪದೇಶ ಮಾಡಿದರೂ, ವಿಶ್ವರೂಪ ಇಂದ್ರನ ಋತ್ವಿಕನಾಗಿ ಯಜ್ಞ ಮಾಡುತ್ತಿದ್ದ. ಮಾಡುವಾಗ ಹವಿಸ್ಸನ್ನು ಗುಟ್ಟಾಗಿ ತನ್ನ ತಾಯಿಯ ಪ್ರೀತಿ (ರಚನಾ) ಸಂತತಿ ರಾಕ್ಷಸರಿಗೆ ಕೊಡುತ್ತಿದ್ದ. ವಿಷಯ ತಿಳಿದು ಇಂದ್ರ ವಿಶ್ವರೂಪನನ್ನು ಸಂಹರಿಸಿದ. ಮಗನನ್ನು ಕೊಂದನೆಂಬ ದ್ವೇಷ ಸಿಟ್ಟಿನಿಂದ ತ್ವಷ್ಟ್ರ ಯಜ್ಞ ಮಾಡಿ ವೃತ್ತಾಸುರನೆಂಬ ಮಹಾಪರಾಕ್ರಮಿಯನ್ನು ಪಡೆದು ದೇವತೆಗಳು ಹಿಂಸೆಗೊಳಗಾದರು. ಇವನನ್ನು ಇಂದ್ರ ಕೊಂದ.

### ದಿತಿಯು ವಿಲಾಪ – ಕಶ್ಯಪರ ಸೇವೆ ಫಲ – ವರ ಬೇಡಿದ್ದು ಪುಂಸವನ ವ್ರತೋಪದೇಶ – ಮರುತ್ತುಗಳ ಜನನ

### ರಾಜನ ಪ್ರಶ್ನೆ

ಕಶ್ಯಪರ ದ್ವಿತೀಯ ಪತ್ನಿ ದಿತಿಯಲ್ಲಿ ಹಿರಣ್ಯಕಶಿಪು, ಹಿರಣ್ಯಾಕ್ಷರು ಮಕ್ಕಳಾದರು. ಅವರ ವಂಶದಲ್ಲೇ ಭಾಗವತ ಭಕ್ತ ಶಿರೋಮಣಿ ಪ್ರಹ್ಲಾದ, ಸಹ್ಲಾದ, ಅನುಹ್ಲಾದರಾದರು. ಪ್ರಹ್ಲಾದನ ಪುತ್ರ ವಿರೋಚನ, ಇವನ ಮಗ ಬಲಿ, ಬಾಣಾಸುರ ಮುಂತಾದ ಮಹಾಬಲಶಾಲಿಗಳಾದರು.

ಇವರ ವಂಶಜರಲ್ಲಿ ೪೯ ಮರುತ್ತುಗಳು ಹುಟ್ಟಿ ಇಂದ್ರನ ಸೋದರರಾದರು. ಮರುತ್ತುಗಳ ಸಂತತಿ ಇಲ್ಲಿಗೇ ನಿಂತಿತು ಎಂದು ತಿಳಿಸಿದಾಗ ರಾಜನ ಪ್ರಶ್ನೆ : ಗುರುಗಳೇ, ದಿತಿಯ ಮಕ್ಕಳು ಅಸುರರಾಗಬೇಕಿತ್ತು. ಆದರೆ ಈಗ ದೇವತಾ ಕಕ್ಷದಲ್ಲಿ ಸೇರಿ ಇಂದ್ರನ ಸೋದರರಾಗಲು ಏನು ಕಾರಣ ? ದಯಮಾಡಿ ತಿಳಿಸಿರಿ.

**ಶ್ರೀ ಶುಕಾಚಾರ್ಯರು ಹೇಳಿದರು :** ದಿತಿಯು ತನ್ನ ಮಕ್ಕಳನ್ನು ಸಂಹರಿಸಿ ದೇವತೆಗಳಿಗೆ ಜಯವಾಗುವಂತೆ ಮಾಡಿದ ಶ್ರೀಹರಿ ಎಂದು ತಿಳಿದು ದಿತಿಗೆ ಬಹಳ ಚಿಂತೆ ದುಃಖವೂ ಆಯಿತು.

**ಹತಪುತ್ರಾ ದಿತಿಃ ಶಕ್ರಪಾರ್ಷ್ಣಿಗ್ರಾಹೇಣ ವಿಷ್ಣುನಾ ।**
**ಮನ್ಯುನಾ ಶೋಕದೀಪ್ತೇನ ಜ್ವಲಂತೀ ಪರ್ಯ ಚಿಂತಯತ್ ॥**

ಇದಕ್ಕೆ ಕಾರಣ ಇಂದ್ರನೇ ಎಂದು ವಿಚಾರಿಸಿ ಹೇಗಾದರೂ ಮಾಡಿ ಇಂದ್ರನನ್ನು ಸಂಹರಿಸುವ ಪುತ್ರನನ್ನು ಪಡೆಯಬೇಕೆಂದು ಚಿಂತಿಸಿದಳು. ಹೀಗಾಗಿ ತನ್ನ ಮನೋಕಾಮ್ನ ಹೊಂದಲು ಪತಿ ಕಶ್ಯಪರ ಸೇವೆ ವಿಶಿಷ್ಟವಾಗಿ ಮಾಡಿದಳು. ಕಶ್ಯಪರು ಸೇವೆಗೆ ಪ್ರೀತರಾಗಿ ದಿತಿಯನ್ನು ಕೇಳಿದರು. ಮಂಗಳೇ ಸಂತೋಷವಾಗಿದೆ. ಏನು ಬೇಕು ಕೇಳು ಎಂದರು.

**ಯೋಽಹಂ ತ್ವಯಾಽರ್ಚಿತಾ ಭದ್ರೇ ಈಂಗಭಾವೇನ ಭಕ್ತಿತಃ ।**
**ಕಂ ತೇ ಸಂಹಾದಯೇಕಾಮಮಸತೀನಾಂ ಸುದುರ್ಲಭಮ್ ॥**

**ದಿತಿ :** ನನ್ನ ಸೇವೆಯಿಂದ ಪ್ರಸನ್ನರಾಗಿದ್ದ ಪಕ್ಷದಲ್ಲಿ ತತ್ಪ್ರತಿಯಾಗಿ ನನಗೆ ಒಬ್ಬ ಪುತ್ರನನ್ನು ದಯಪಾಲಿಸಿರಿ. ಆ ಪುತ್ರನು ಇಂದ್ರನನ್ನು ಸಂಹಾರ ಮಾಡುವ ಸಾಮರ್ಥ್ಯವಿರಬೇಕು.

**ವರದೋಯದಿಮೇ ಬ್ರಹ್ಮನ್ ಪುತ್ರಮಿಂದ್ರಹಣಂ ವೃಣೇ ।**
**ಅಮೃತ್ಯುಮೃತಪುತ್ರಾಽಹಂ ಯೇನ ಮೇಂಭೂತಿತೌ ಸುತೌ ॥**

ಇಂತಹವರು ಬೇಕೆಂದು ಹೇಳಿದ ದಿತಿಯ ಬಗ್ಗೆ ಪೇಚಿಗೆ ಬಿದ್ದು ಬೆಚ್ಚಿಬಿದ್ದರು.

ತಾನು ಸ್ತ್ರೀ ದಾಸನಾಗಿರುವೆನೆಂದು ತನ್ನನ್ನು ನಿಂದಿಸಿದರು. ಎಂಥಾ ಘೋರವರ ದೇವರಾಟ್‌ನನ್ನು ಕೊಲ್ಲುವಂಥ ಮಗ ಬೇಕಾ ? ವರ ಕೊಡುವೆನೆಂದು ಹೇಳಿದ್ದೇ ತಪ್ಪಾಯಿತಲ್ಲಾ ! ಧಿಕ್ಕಾರವಿರಲಿ ಎಂದುಕೊಂಡರು. ಏನು ಮಾಡುವುದು. ವರ ಕೊಡುತ್ತೇನೆ ಅಂತ ಹೇಳಿ ಆಗಿದೆ. ಪ್ರತ್ಯವಾಯವಿಲ್ಲ. ವಿಚಾರ ಮಾಡಿ ಒಂದು ಉಪಾಯವನ್ನು ಸೂಚಿಸಿದರು.

**ಧಿಮಾಂ ಕ್ಮಾಮಾಮ್ ಬತಾ ಮಧುಸ್ವಾರ್ಥೇಹಂ ಲಾಲಿತೇಂದ್ರಿಯಃ ।**

**ಸತಿಮಣಿ** ಕೇಳು. ಇಂದ್ರನನ್ನು ಸಂಹರಿಸುವುದು ಅಷ್ಟು ಸುಲಭವಲ್ಲ. ಆದರೂ ವ್ರತನಿಯಮಾದಿಗಳಿಂದ ಸಾಧಿಸಬಹುದು. ಅಂತಹ ಒಂದು ವ್ರತವಿದೆ.

**ಪುತ್ರಸ್ತೇ ಭವಿತಾ ಭದ್ರೇ ಇಂದ್ರಹಾ ದೇವಬಾಂಧವಃ ।**
**ಸಂವತ್ಸರಂ ವ್ರತ ಮಿದಂ ಯದ ಜ್ಞೋಧಾರಯಿಷ್ಯಸಿ ॥**

ಒಂದು ವರ್ಷ ಈ ಪುಂಸವನ ವ್ರತವೆಂಬುದನ್ನು ಶ್ರದ್ಧೆಯಿಂದ ನಿಷ್ಠಾವಂತಳಾಗಿ ಯಾವ ಲೋಪ ಬಾರದಂತೆ ಆಚರಿಸಿದೆಯಾದರೆ ನಿನ್ನ ಮನೋಭೀಷ್ಟ ಪೂರೈಸುವ ಮಗನನ್ನು ಪಡೆಯಬಹುದು.



**ಪುಂಸವನ ಮಂತ್ರ – ಭಗವಂತನನ್ನು ಪೂಜಿಸುವಾಗ ಮಂತ್ರಗಳು**

**ಪೂಜಯೇತ್ ಪ್ರಾತರಾಶಾತ್ ಪ್ರಾಕ್ ಭಗವಂತಂ ಶ್ರೀಯಾಸಹ ।**
**ನಮಸ್ತೇ ನಿರಪೇಕ್ಷಾಯ ಪೂರ್ಣಕಾಮಾಯ ನಮೋಽಸ್ತುತೆ ।**
**ಮಹಾವಿಭೂತಿಪತಯೋ ನಮಃ ಸಂಕಲ್ಪಿತ ಸಿದ್ಧಯೋ ॥**
**ವಿಷ್ಣುಂ ಮಹಾಮಾಯೋ ಮಹಾಪುರುಷಲಕ್ಷಣೇ**
**ಪ್ರೀಯೇಥಾ ಮೇ ಮಹಾಭಾಗೇ ಲೋಕಮಾತರ್ನಮೋಽಸ್ತುತೆ ॥**
**ಓಂ ನಮೋ ಭಗವತೇ ಮಹಾಪುರುಷಾಯ ಮಹಾನುಭಾವಾಯ**
**ಮಹಾವಿಭೂತಿಪತಯೇ ಬಲಿಮುಪಾಹರಣೀತಿ ।**

ಈ ಮಂತ್ರಗಳಿಂದ ೧೨ ಆಹುತಿಗಳನ್ನು ಸಮರ್ಪಿಸಬೇಕು.

ಎಚ್ಚರವಿರಲಿ ಎಂದಾಗ ದಿತಿ ಸಂತುಷ್ಟಳಾಗಿ ಪತಿದೇವ ಧನ್ಯೋಸ್ಮಿ ಆ ವ್ರತವಿಧಾನ ಉಪದೇಶಿಸಿರಿ. ನಾನು ನಿಯಮದಿಂದ ಪಾಲಿಸುತ್ತೇನೆ.

**ವ್ರತಃ ಪುಂಸವನ ಬ್ರಹ್ಮನ್ ಭವತಾ ಯದುದೀರಿತಮ್ ।**

ಪ್ರಿಯೇ, ದಿತಿ ಕೇಳು. ವ್ರತನಿಯಮ ವಿಧಾನಗಳನ್ನು ವ್ರತಗ್ರಹಣವಾದ ದಿನದಿಂದ ಪರರನ್ನು ನಿಂದಿಸಬಾರದು. ನಿನ್ನಾಣೆ, ನನ್ನಾಣೆ ಎಂದು ಆಣೆ ಮಾಡಬಾರದು, ಸಿಟ್ಟಾಗಬಾರದು. ಸತ್ಯವಾಕ್ಯಳಾಗಿರಬೇಕು. ಉಗುರು ಕೂದಲುಗಳನ್ನು ಕತ್ತರಿಸಬಾರದು. ದುಷ್ಟಸಂಗ ಸಂವಾದ ಮಾಡಬಾರದು. ಬೆತ್ತಲೆಯಾಗಿ ಸ್ನಾನ ಸರ್ವಥಾ ಮಾಡಬಾರದು. ಶುಭ್ರ ಧವಳ ವಸ್ತ್ರ ಧರಿಸಿರಬೇಕು. ತಲೆಕೂದಲುಗಳನ್ನು ತ್ರಿವೇಣಿಯಾಗಿರಬೇಕು. ನಿರ್ಮಾಲ್ಯ ಹೂ ಧರಿಸಿ ನಿಷಿದ್ಧ ಪದಾರ್ಥಗಳನ್ನು ಸೇವಿಸಬಾರದು. ಶೂದ್ರಾನ್ನ ರಜಸ್ವಲೆಯರ ದರ್ಶನ, ಅನ್ನ ಯಾಚಿಸಿ ತಿನ್ನಬಾರದು. ತಲೆ ಮೇಲೆ ಮುಸುಕು. ಅರ್ಧನಗ್ನಳಾಗಿರಬಾರದು. ಮಲಮೂತ್ರ ವಿಸರ್ಜನೆಯಾದ ನಂತರ ಕೈಕಾಲುಗಳನ್ನು ಚೆನ್ನಾಗಿ ತೊಳೆಯಬೇಕು. ಹಿಂಬದಿ ಕಾಲು ತೊಯ್ದಿರಬೇಕು. ಕಾಲು ತೊಳೆದ ಮೇಲೆ ಒಣ ಬಟ್ಟೆಯಿಂದ ಒರಸಿಕೊಳ್ಳಬೇಕು. ಗಾದಿಯ ಮೇಲೆ ಮಲಗಬಾರದು. ಮಧ್ಯಾಹ್ನ ಮಲಗಬಾರದು. ಹೀಗೆ ನಿಯಮವಿದ್ದು ನಿತ್ಯ ಶುಭಮಂಗಳ ದ್ರವ್ಯವೆನಿಸಿದ ಅರಶಿನ ಕುಂಕುಮದಿಂದ ಅಲಂಕೃತಳಾಗಿ ಮುತ್ತೈದೆಯರಿಗೆ ವಾಯನ, ವಸ್ತ್ರ ಆಭರಣಗಳಿಂದ ಪೂಜಿಸಿ ಅವರ ಅಂತರ್ಯಾಮಿ ಶ್ರೀಹರಿಯನ್ನು ಸ್ಮರಿಸಿ ಪೂಜಿಸಬೇಕು. ಈ ರೀತಿ ವ್ರತಸ್ಥಳಾದರೆ, ಇಂದ್ರ ಶತ್ರುವನ್ನು ಪಡೆಯುವೆ ಎಂದು ಹೇಳಿ ಆಶೀರ್ವದಿಸಿ ಹೊರಟರು.

ಯೋಗ್ಯ ಕಾಲ ಬಂದಿತು. ದಿತಿ ಗರ್ಭದಾರಣ ಮಾಡಿದಳು. ವ್ರತಾಚರಣೆ ಅವಿಘ್ನವಾಗಿ ಸಾಗುತ್ತಿತ್ತು.

ದೇವಸಂಕಲ್ಪವೇ ಬೇರೆ ಇದ್ದಿತು. ಕಶ್ಯಪರು ವ್ರತೋಪದೇಶ ಮಾಡುವಾಗ ಅನೇಕ ನಿಯಮಗಳನ್ನು ಬೋಧಿಸಿದ್ದರೂ ಅವರಿಗೆ ಗೊತ್ತಿತ್ತು, ವ್ರತ ವಿಘ್ನವಾಗುವುದೆಂದು

(ವಿಘ್ನವಾಗಲೆಂದೂ ಹರಿಯಲ್ಲಿ ಕೇಳಿಕೊಂಡಿದ್ದರು.) **ಶುಕ್ಲೇ ಮಾರ್ಗಶಿರೇ ಪಕ್ಷೇಯೋಷಿದ್ ಭರ್ತುರನುಜ್ಞಯಾ ॥**

ದೈತ್ಯರು ಎಷ್ಟೇ ಕಠಿಣ ವ್ರತ, ತಪಸ್ಸುಗಳಿಂದ ಸಜ್ಜನರು ಭಗವದ್ಭಕ್ತರು ವಿನಾಶವಾಗುವುದನ್ನು ಪರಮಾತ್ಮ ಎಂದಿಗೂ ಸಹಿಸುವುದಿಲ್ಲ.

ಇಂದ್ರನಿಗೆ ದಿತಿಯ ವ್ರತ ವೃತ್ತಾಂತ ತಿಳಿಯಿತು. ಅವಳ ವ್ರತ ಕೈಂಕರ್ಯಕ್ಕಾಗಿ ಇಂದ್ರ ಬ್ರಾಹ್ಮಣ ಬಾಲಕ ವೇಷ ಧರಿಸಿ ಸೇವೆಗೆ ನಿಂತ. ವ್ರತ ಭಂಗವಾಗುವುದಕ್ಕಾಗಿ ಕಾಯುತ್ತಿದ್ದ. ಹರಿಸಂಕಲ್ಪದಂತೆ ದಿತಿ ದೇವಿ ಒಂದು ದಿನ ಮಧ್ಯಾಹ್ನ ಮೂತ್ರ ವಿಸರ್ಜಿಸಿ ಕೈಕಾಲು ತೊಳೆಯದೆ ಹಾಗೇ ಬಂದು ಮಲಗಿ ನಿದ್ರಿಸಿದಳು. ಇದೇ ಸಮಯವೆಂದು ತಿಳಿದ ಇಂದ್ರ ತನ್ನ ತಪೋಬಲದಿಂದ ಸೂಕ್ಷ್ಮ ರೂಪ ತಾಳಿ ದಿತಿ ಗರ್ಭ ಪ್ರವೇಶ ಮಾಡಿ ವಜ್ರಾಯುಧದಿಂದ ಗರ್ಭವನ್ನು ಏಳು ತುಂಡುಗಳನ್ನಾಗಿ ಮಾಡಿದ.

**ಚಕರ್ತ ಸಪ್ತಧಾ ಗರ್ಭಂ ವಜ್ರೇಹ ಕನಕಪ್ರಭಾವ್ ॥**

ಆದರೆ ಅವು ಸಾಯಲಿಲ್ಲ. ಮತ್ತೇ ಒಂದೊಂದನ್ನು ಏಳು ತೃಣಕಗಳನ್ನಾಗಿ ಮಾಡಿದರೂ ಸಾಯಲಿಲ್ಲ. ಅವರೆಲ್ಲರೂ ಕೂಗಿ ಹೇಳಿದರೂ ಇಂದ್ರ ಜೇಷ್ಠ ನಾವು ನಿನ್ನ ಸೋದರರು. ನಾವು ಸಾಯುವುದಿಲ್ಲ ಎನ್ನುವುದನ್ನು ಕೇಳಿ ಇಂದ್ರ ಅವರಿಗೆ ಅಭಯ ನೀಡಿ ಯೋಚಿಸಬೇಡಿರಿ, ನೀವು ಮರುದ್ದೇವತೆಗಳು. ದೇವತೆಗಳೇ ಹೀಗೆ ೭ x ೭ = ೪೯ ಮರುದ್ದೇವತೆಗಳಾದರು. ದಿತಿಗೆ ಎಚ್ಚರವಾಯಿತು. ನೋಡುತ್ತಾಳೆ, ೪೯ ಮಕ್ಕಳು ಜನಿಸಿದ್ದರು. ಹೀಗೇಕಾಯಿತು ಎಂದು ಚಿಂತಳಾಗಿರುವಾಗ, ಇಂದ್ರ ಪ್ರತ್ಯಕ್ಷನಾಗಿ ತಾಯಿ, ನಾನೇ ಮಾಡಿದ್ದು. ಇವರೆಲ್ಲಾ ದೇವತೆಗಳು. ನನ್ನ ಸೋದರರು ಎಂದು ಹೇಳಿ ಅವರೆಲ್ಲರನ್ನೂ ಕರೆದುಕೊಂಡು ತನ್ನ ಲೋಕಕ್ಕೆ ಹೋದನು.

**ದಿತಿರುವಾಚ :** **ಏಕಃ ಸಂಕಲ್ಪಿತಃ ಪುತ್ರಃ ಸಪ್ತ ಸಪ್ತಾಭಾವನ್ ಕಥಮ್ ।
ಯದಿ ತೇ ವಿದಿತಂ ಪುತ್ರ ಸತ್ಯಂಕಥಯಮಾ ಮೃಷಾಂ ॥**

ಪರೀಕ್ಷಿತರಾಜನ್ ನಿನ್ನ ಪ್ರಶ್ನೆಗೆ ಉತ್ತರವು ಬಂದಿತಲ್ಲವೇ ?

**ಏಯಂ ತೇ ಸರ್ವಮಾಖ್ಯಾತಂ ಯನ್ಮಾಂ ತ್ವಂ ಪರಿಪುಚ್ಚಸಿ ।
ಮಂಗಲಂ ಮರುತಾಂ ಜನ್ಮ ಕಿಂ ಭೂಯಃ ಕಥಯಾಮಿತೇ ॥**

ಇಂತಹ ಮಂಗಳಕರವಾದ ಮರುದ್ಗಣರ ಕಥೆಯನ್ನು ನೀನು ಕೇಳಿದಂತೆ ತಿಳಿಸಿರುವೆನು ಎಂದು ಶುಕಾಚಾರ್ಯರು ತಿಳಿಸಿದರು.

ಮುಂದೆ ಸಪ್ತಮ ಸ್ಕಂಧದಲ್ಲಿ ನಿರೂಪಿಸಿದ ಭಗವದ್ಭಕ್ತಾಗ್ರಣಿ ಶ್ರೀ ಪ್ರಹ್ಲಾದರ ನಿಮಿತ್ತವಾಗಿ ಶ್ರೀಮನ್ನಾರಾಯಣನು ಶ್ರೀ ನರಸಿಂಹ ಅವತಾರ ಕಥಾ ತಿಳಿಸುವ ಪೂರ್ವ ಪ್ರಸಂಗವನ್ನು ವಿವರಿಸುತ್ತಾರೆ.

*******



ಹರಿಃ ಓಂ

ಶ್ರೀಲಕ್ಷ್ಮೀನರಸಿಂಹಾಯನಮಃ

## ಆದ್ಯ ಕಥಾ ಪ್ರಾರಂಭಃ

**ಹರಿಃ ಓಂ
ನರಸಿಂಹವಪುರ್ಭೀಮಂ
ಸ್ತಂಭಸ್ತಂಭವಮದ್ಭುತಂ ॥
ಭಕ್ತತ್ರಾಣಾಯಭಿಭ್ರಾಣಂ
ವಾಸುದೇವ ಮುಪಾಸ್ಮಹೇ ॥**

ಶ್ರೀ ನರಸಿಂಹ ದೇವರ ಅವತಾರಕಥಾ ಪ್ರಾರಂಭ, ಪೂರ್ವದಲ್ಲಿ ಅವತಾರಿಕಾ ರೂಪವಾಗಿ ಪರೀಕ್ಷಿತರಾಜನು ಪ್ರಶ್ನಿಸುತ್ತಾನೆ.

**ಸೂಚನೆ :** ಇಲ್ಲಿ ಸಪ್ತಮ ಸ್ಕಂಧಾರಭ್ಯ ಹತ್ತು ಅಧ್ಯಾಯಗಳಲ್ಲಿರುವ ಪ್ರತಿ ಶ್ಲೋಕಾರ್ಥವನ್ನು ಬರೆದಿಲ್ಲವಾದರೂ, ಎಲ್ಲಿ ತಾತ್ವಿಕ ವಿಷಯಗಳಿಗೆ ಸಮೀಚೀನ ಅರ್ಥ ವಿವರಣೆ ಮಾತ್ರ ಇರುವುದು.

**ಶ್ರೀರಾಜೋವಾಚ**

ಪರೀಕ್ಷಿತರಾಜನ ಪ್ರಶ್ನೆ : ಶ್ರೀ ಶುಕಮುನಿಗಳೇ, ಭಗವಂತನ ವ್ಯಾಪಾರ ವಿಚಿತ್ರ.

ಶ್ರೀರಮಾರಮಣನಿಗೆ ಪಕ್ಷಪಾತವೆಂಬುದಿರುವುದಿಲ್ಲವಲ್ಲ. ಹೀಗೆ ಬ್ರಹ್ಮಸೂತ್ರವು ತಿಳಿಸುವುದು.

**ಓಂ ವೈಷಮ್ಯನೈರ್ಘೃಣ್ಯೇನ ಸಾಪೇಕ್ಷತ್ವಾತ್ಹೀಃ ದರ್ಶಯತಿ ಓಂ**

ಭಗವಂತನಿಗೆ ಇವರು ಶತೃಗಳು ಎಂದು ಸಂಹರಿಸುವುದಿಲ್ಲ. ತಥಾಹಿ ಇವರು ನನ್ನ ಮಿತ್ರರು ಅಂತ ರಕ್ಷಿಸುವುದಿಲ್ಲ.

ಶ್ರೀಹರಿಗೆ ಈ ರೀತಿಯ ಶತೃ ಮಿತ್ರರೆಂಬುದು ಇರುವುದಿಲ್ಲವೆಂದಾಗ ಲೋಕದಲ್ಲಿ ಕೆಲವರನ್ನು ನಿರ್ದಯನಾಗಿ ಸಂಹರಿಸುವುದನ್ನು, ಮತ್ತೊಬ್ಬರಲ್ಲಿ ದಯೆ ತೋರಿ ರಕ್ಷಿಸುವುದನ್ನು ಕಾಣುತ್ತೇವೆ. ಒಬ್ಬರಲ್ಲಿ ದ್ವೇಷ, ಮತ್ತೊಬ್ಬರಲ್ಲಿ ಮಮತೆ ಇದ್ದಾಗ ಅವನಲ್ಲಿ ಪಕ್ಷಪಾತವಿರುವುದು ಎಂಬ ದೋಷಾರೋಪಣೆ ಮಾಡುವವರಿಗೆ ಇಲ್ಲಿ ಉತ್ತರವಿರುವುದು.

ಮೊದಲಿಗೆ ಪರೀಕ್ಷಿತರಾಜನ ಪ್ರಶ್ನೆ ಏನೆಂದು ತಿಳಿಯೋಣ. ಹಿಂದಿನ ಸ್ಕಂಧದಲ್ಲಿ ಮರುಜನ್ಮ ವೃತ್ತಾಂತ ಕೇಳಿ ಪ್ರಶ್ನಿಸುತ್ತಾನೆ.

**ಸಮಃ ಪ್ರಿಯಃ ಸುಹೃದ್ ಬ್ರಹ್ಮನ್ ಭೂತಾನಾಂ ಭಗವಾನ್ ಸ್ವಯಂ ।**
**ಇಂದ್ರಸ್ಯಾರ್ಥೇ ಕಥಂ ದೈತ್ಯಾನವಧೀದ್ ವಿಷಮೋಯಥಾ ।**

ಪರಮಾತ್ಮನನ್ನು **ಸಮ**ನೆಂದು ಎಲ್ಲಾ ಜೀವರಾಶಿಗಳಲ್ಲಿ ಸಮಭಾವಸ್ವಯಂ ಎಂದಿರುವಾಗ (ಹಾಗೆ ಕರೆಸಿಕೊಳ್ಳುವನು) ದೇವ ದಾನವರಲ್ಲಿ ಸಮಪ್ರಿಯವಾಗಿರಬೇಕಲ್ಲವೇ? ಆದರೆ ಸ್ವಾಮಿ ಇಂದ್ರಾದಿ ದೇವತೆಗಳ ಪಕ್ಷ ಹಿಡಿದು ಜಯ ತಂದುಕೊಡಲು, ದೈತರನ್ನು ಸಂಹಾರವೇಕೆ ಮಾಡಬೇಕು ? ದ್ವೇಷವಿರುವುದೆಂದು ತಿಳಿಯುವುದು. ಇಂದ್ರಾದಿ ದೇವತೆಗಳಿಗೆ ತಾನು ಈಗ ಸಹಾಯ ಮಾಡಿದರೆ ಅವರು ಮುಂದೆ ತನಗೆ ಪ್ರತಿಯಾಗಿ ಆಪತ್ಕಾಲದಲ್ಲಿ ಸಹಾಯ ಮಾಡುವುದು ಎಂಬ ಅಪೇಕ್ಷೆ ಸರ್ವಥಾ ಇರುವುದಿಲ್ಲ. ಹಾಗೇನೆ ದೈತ್ಯರು ಎಂದಾದರೂ ತನ್ನನ್ನು ಸಂಹರಿಸಲು ಯತ್ನಿಸುತ್ತಾರೆಂಬ ಭಯದಿಂದ ಅವರನ್ನು ಮೊದಲಿಗೆ ಮುಗಿಸಿಬಿಡಬೇಕೆಂಬ ಭಯವ್ಯಾವುದೂ ಇರುವುದಿಲ್ಲ. ಇಂದ್ರಾದಿಗಳಿಂದ ಸಹಾಯವಾಗಲಿ ದೈತ್ಯರಿಂದ ಹಿಂಸೆ, ಕಾಟ (ತೊಂದರೆ) ಬರುವುದಾಗಲಿ ಇಲ್ಲದಿದ್ದಾಗ ದೈತ್ಯರನ್ನೇ ಸಂಹರಿಸುವುದು ದೇವತೆಗಳಿಗೆ ಸಹಾಯ, ಜಯ ತಂದುಕೊಡುವುದನ್ನು ನೋಡಿದರೆ ಭಗವಂತನನ್ನು ಸಮನೆಂದು ಹೇಗೆ ಕರೆಯಲಾಗುವುದು ಅಲ್ಲವೇ ? ಅವನಲ್ಲಿ ಪಕ್ಷಪಾತ ಇದ್ದಂತ ಭಾಸವಾಗುವುದು. ಮುನಿಗಳೇ ಈ ಸಂಶಯ (ಅಪಾತತಃ) ನನ್ನನ್ನು ಬಾಧಿಸುತ್ತಿದೆ. ನೀವು ಸಂಶಯವನ್ನು ಪರಿಹರಿಸಿರಿ ಎಂದು ರಾಜನು ಹೇಳಿದನು. ಪರಮಾತ್ಮನು ಯಾವಾಗಲೂ ಆನಂದ ಸ್ವರೂಪನು. ದುಃಖ ಲೇಶವೂ ಇರುವುದಿಲ್ಲ. ಪ್ರಾಕೃತ ಗುಣ ಸಂಪರ್ಕವಿಲ್ಲದವನೂ ನಿರ್ದೋಷನೂ ಹೀಗಿರುವಾಗ ದೇವತೆಗಳಿಂದ ಉಪಕಾರಾಪೇಕ್ಷೆಯಾಗಲು ದೈತ್ಯರಿಂದಾಗುವ ಅಪಕಾರವಾಗುವುದೆಂಬ ಭಯವೂ ಇರುವುದಿಲ್ಲ.

Lord Narayana is supposed to be evenminded (ಸಮ) towards all. That being the case, His partiality towards Gods alone is troubling me/ mind. Please clear my suspicion.

**ಇತಿನಃ ಸುಮಹಾಭಾಗ ನಾರಾಯಣಗುಣಾನ್‌ಪ್ರತಿ ।**
**ಸಂಶಯಃ ಸುಮಹಾನ್ ಜಾತಸ್ತಂ ಭವಾನ್ಸ್ಟೇತ್ತುಮರ್ಹತಿ ॥**

ಶುಕಮುನಿಗಳೇ, ಶ್ರೀಮನ್ನಾರಾಯಣನ ಗುಣಗಳ ಬಗ್ಗೆ ನನಗೇಕೋ ಸಂಶಯವಿರುವುದು. ತಾವು ಶಾಸ್ತ್ರಗಳನ್ನು ಚೆನ್ನಾಗಿ ತಿಳಿದವರು. ನನ್ನ ಈ ಸಂದೇಹ ನಿವಾರಿಸಲು ನೀವು ಸಮರ್ಥರೆಂದು ಪ್ರಾರ್ಥಿಸುತ್ತೇನೆ.



ಹೀಗೆ ಪ್ರಾರ್ಥಿತರಾದ ಶುಕಾಚಾರ್ಯರು :

**ಸಾಧು ಪೃಷ್ಟಂ ಮಹಾರಾಜ ಹರೇಶ್ಚರಿತಮದ್ಭುತಂ ।**
**ಯತ್ರಭಾಗವತಮಹಾತ್ಮ್ಯಂ ಭಗವದ್ಭಕ್ತಿವರ್ಧನಂ ॥**
**ಗೀಯತೇ ಪರಮಂ ಪುಣ್ಯಂ ಋಷಿಭಿರ್ನಾರದಾದಿಭಿಃ ।**
**ನತ್ವಾ ಕೃಷ್ಣಾಯ ಮುನಯೇ ಕಥಇಷ್ಯೇ ಹರೇಃ ಕಥಾಮ್ ॥**

ರಾಜನ್, ನಿನ್ನ ಪ್ರಶ್ನೆ ಶ್ಲಾಘನೀಯವಾಗಿದೆ. ಭಗವಂತನ, ಅವನ ಭಕ್ತರ ಚರಿತೆಯು ಪ್ರಕಟವಾಗುವುದು. ನಿನ್ನ ಪ್ರಶ್ನೆಯಲ್ಲಿ ತಿಳಿಸಿದಂತೆ ಶ್ರೀಹರಿ ನಿತ್ಯಾನಂದ ಸ್ವರೂಪನು, ಸರ್ವದೋಷವರ್ಜಿತನೂ ಎಂದಾಗ ಅವನಿಗೆ ಪಕ್ಷಪಾತವೆಂಬುದು ಸರ್ವಥಾ ಇರುವುದಿಲ್ಲ ಎಂದು ಹೇಳಿದ್ದು ಸತ್ಯವೇ. ಇದರಿಂದಾಗಿ ಭಗವಂತನಲ್ಲಿ ಅವನ ಭಕ್ತರಲ್ಲಿ ಭಕ್ತಿವೃದ್ಧಿ ಆಗುವುದು. ಇಂತಹ ಅದ್ಭುತ ಶ್ರೀಶನ ಚರಿತ್ರೆಯನ್ನು ತಿಳಿಸುವೆನು ಎಂದು ಹೇಳಿ ಶ್ರೀವೇದವ್ಯಾಸರಿಗೆ ವಂದಿಸಿ ಪ್ರಾರಂಭಮಾಡುತ್ತಾರೆ.

ರಾಜನ್, ಪ್ರಕೃತಿ–ಚೇತನ–ಅಚೇತನವೆಂದು ಎರಡು ವಿಧ. ಅವು ನಿತ್ಯ ಸತ್ಯ, ಚೇತನ ಪ್ರಕೃತಿಯಿಂದ ಹುಟ್ಟಿದವರು ದೇವ ದಾನವ ಮನುಷ್ಯರೆಂದು, ಅವರಲ್ಲಿಯೂ ಸಾತ್ವಿಕ, ರಾಜಸ, ತಾಮಸ ಗುಣಗಳಿರುವುದು. ಈ ಗುಣಗಳೂ ಅನಾದಿ.

ದೇವತೆಗಳಲ್ಲಿ ಸಾತ್ವಿಕಾಂಶ ವಿಶೇಷವಾಗಿರುವುದು. ರಾಜಸ ಸ್ವಲ್ಪವೇ ಆಗಾಗ ವ್ಯಕ್ತವಾಗುವುದು.

ದಾನವ (ರಾಕ್ಷಸ, ದೈತ್ಯ)ರಲ್ಲಿ ತಾಮಸ ಗುಣವೇ ಹೆಚ್ಚಾಗಿರುತ್ತದೆ. ಮನುಷ್ಯರಲ್ಲಿ ಸಾತ್ವಿಕಾಂಶ ಸ್ವಲ್ಪ, ರಾಜಸ ಗುಣ ಮಧ್ಯಮ, ತಾಮಸ ಗುಣ ಆಗಾಗ ಅಭಿವ್ಯಕ್ತವಾಗಿರುವುದರಿಂದ ನಿತ್ಯ ಸಂಸಾರಿಗಳೆಂದು ಕರೆಯಲಾಗಿದೆ.

ಇವು ಮೂರು ಜಡ ಪ್ರಕೃತಿಗೆ ಸಂಬಂಧಿಸಿರುತ್ತವೆ. ಚೇತನ, ಅಚೇತನ, ಪ್ರಕೃತಿಗಳು ಭಗವಂತನ ಅಧೀನವಾಗುವುದು. ಅವುಗಳಲ್ಲಿ ಇದ್ದು (ಪ್ರವೇಶಿಸಿ) ದೇವ, ದಾನವ, ಮಾನವಾದಿ ಶರೀರಗಳನ್ನು ನಿರ್ಮಿಸುತ್ತಾನೆ, ನಿರ್ಮಿಸಿ ಅವುಗಳಲ್ಲಿ ಪ್ರವೇಶಿಸಿ ಆ ಗುಣಗಳನುಸಾರ ಕ್ರೀಡಿಸುತ್ತಾನೆ.

ದೈತ್ಯರಲ್ಲಿರುವ ತಾಮಸ ಗುಣಯುಕ್ತರಾದವರನ್ನು ವರಾಹ, ನಾರಸಿಂಹ ರೂಪಗಳನ್ನು ಹೊಂದಿ ದೈತ್ಯರನ್ನು ಬಾಧಿಸುತ್ತಾನೆ (ಸಂಹಾರ ಮಾಡುತ್ತಾನೆ). ಆದ್ದರಿಂದ ಅವರಿಗೆ ಬಾಧಕನಾಗುತ್ತಾನೆ.

ದೈತ್ಯರು ಬಾಧ್ಯರಾದಾಗ ಅವರಲ್ಲಿ ಇದ್ದು ನಿಯಾಮಕನಾಗಿರುವುದರಿಂದ ಶ್ರೀಹರಿಯನ್ನು ಬಾಧ್ಯನೆನಿಸುತ್ತಾನೆ.

ಬಾಧ್ಯರಲ್ಲಿ ಪ್ರವೇಶಿಸಿದಾಗ ಬಾಧ್ಯನೆಂದು, ಬಾಧಕರಲ್ಲಿದ್ದಾಗ ಬಾಧಕನು ಆಗಿರುವಾಗ ಪರಮಾತ್ಮನು ಬಾಧ್ಯ ಬಾಧಕಗಳು ಅವನ ಸ್ವರೂಪಗಳಲ್ಲ.

ಏಕೆಂದರೆ ಭಗವಂತ ನಿರ್ಗುಣನು. ಅಂಥ ಪ್ರಕೃತಿ ಸಂಬಂಧ ಇಲ್ಲದವನಾದ್ದರಿಂದ ಭಗವಂತನು ಅಚಿಂತ್ಯ ಅದ್ಭುತ ಶಕ್ತಿ ಜ್ಞಾನಾಂದಾದಿ ಶ್ರೇಷ್ಠ ಗುಣ ಸಹಿತನು. ಜನ್ಮ, ಮರಣಾದಿಗಳು ಶ್ರೀಹರಿಗೆ ಇರುವುದಿಲ್ಲ. ಶಸ್ವದೇಶ ಪ್ರಕಾರನು. ತನ್ನ ಸಂಕಲ್ಪಾನುಸಾರ ಗುಣತ್ರಯಗಳಿಂದ ಕೂಡಿದ ಪ್ರಕೃತಿಯನ್ನು ನಿಮಿತ್ತವಾಗಿ ದೇವ, ದಾನವ, ಮಾನವಾದಿ ಶರೀರಾದಿಗಳನ್ನು ಕೊಟ್ಟು ಅವರಲ್ಲಿ ತಾನು ಪ್ರವೇಶಿಸುತ್ತಾನೆ. ಈ ಮೂರೂ ಗುಣಗಳು ಏಕಕಾಲದಲ್ಲಿ ವೃದ್ಧಿ ನಾಶವಾಗುವುದಿಲ್ಲ. ಒಂದು ಕಾಲದಲ್ಲಿ ಸತ್ವಗುಣ ವೃದ್ಧಿಯಾದಾಗ ತಮೋಗುಣ ಕ್ಷಯವಾಗುವುದು. ಆ ಸಮಯದಲ್ಲಿ ದೇವತೆಗಳಿಗೆ ಜಯವಾಗುವುದು. ಮತ್ತೊಮ್ಮೆ ತಮೋಗುಣ ವೃದ್ಧಿಯಾದಾಗ ದೈತ್ಯರು ಜಯಶಾಲಿಗಳಾಗುವರು. ಆಗ ಇಂದ್ರಾದಿ ದೇವತೆಗಳಿಗೆ ಸೋಲುಂಟಾಗುವುದು.

**ಸತ್ವಂ ರಜಸ್ತಮೋ ಇತಿ ಪ್ರಕೃತೇರ್ನಾತ್ಮನೋ ಗುಣಾಃ ।**
**ನ ತೇಷಾಂ ಯುಗ ಪದ್ರಾಜನ್ ಹ್ರಾಸ ಉನ್ನಾಹ ಏವ ಚ ॥**

ಸತ್ವಗುಣ ವೃದ್ಧಿ ಕಾಲದಲ್ಲಿ ದೇವತೆ, ಮುನಿ, ಋಷಿಗಳಿಗೆ ಬಲಾದಿಗಳಿಂದ ವೃದ್ಧಿಪಡಿಸುವನು. ರಜೋಗುಣ ಉನ್ನಾಹ ಸಮಯದಲ್ಲಿ ನಿತ್ಯ ಸಂಸಾರಿಗಳಿಗೆ ತಮೋಗುಣ ವೃದ್ಧಿಯಾದಾಗ ಅಯೋಗ್ಯರಾದ ರಾಕ್ಷಸ ಯಕ್ಷರನ್ನು ಕಾಲಕ್ಕನುಗುಣವಾಗಿ ಅವರಲ್ಲಿ ಪ್ರವೇಶಿಸಿ ವೃದ್ಧಿ ಹ್ರಾಸವಾಗುವಂತೆ ಮಾಡುವನು.

**ಜಯಕಾಲೇತು ಸತ್ವಸ್ಯ ದೇವರ್ಷೀನ್ ರಜಸೋಽಸುರಾನ್ ।**
**ತಮಸೋ ಯಕ್ಷರಾಕ್ಷಾಂಸಿ ತತ್ಕಾಲಗುಣೋ ಭಜನ್ ॥**

**ಇಲ್ಲಿ ನಾವು ಮುಖ್ಯವಾಗಿ ತಿಳಿಯಬೇಕು :**

ಪರಮಾತ್ಮನಿಗೆ ಪಕ್ಷಪಾತವಿರುವುದಿಲ್ಲ. ಭಗವಂತ ದೈತ್ಯರನ್ನು ಸಂಹರಿಸಿದನೆಂದರೆ ಅವರು ತಮೋಗುಣ ವಿಶಿಷ್ಟರು (ಸ್ವರೂಪರು). ಅಂದ ಮೇಲೆ ದೈತ್ಯರ ಮೇಲೆ ದ್ವೇಷವಿತ್ತು ಎಂದು ಕೊಂದನೆಂದು, ದೇವತೆಗಳು ಸಾತ್ವಿಕ ಸ್ವಭಾವ ಪ್ರತೀಕವಾದ್ದರಿಂದ ಅವರಿಗೆ ಜಯವಾಗುವಂತೆ ಮಾಡಿದನೇ ಹೊರತು ಅವರಲ್ಲಿ ಪ್ರೀತಿ ಇದೆ ಅಂತ ತಿಳಿಯಬಾರದು.

ಸತ್ವಗುಣ, ದಯಾದಾಕ್ಷಿಣ್ಯ, ದಾಸತ್ವ, ಭಕ್ತಿ ಇತ್ಯಾದಿ ಸದ್ಗುಣಗಳು ದೇವತೆಗಳಲ್ಲಿರುವುದರಿಂದ ಅವರಿಂದ ಸ್ತುತಿಸಿಕೊಂಡು ರಕ್ಷಿಸುತ್ತಾನೆ. ದೈತ್ಯರು ತಮೋಗುಣಭರಿತರಾದ್ದರಿಂದ ಭಗವದ್ವೇಷಿಗಳಾಗಿ ಭಕ್ತರಾದವರನ್ನು ಹಿಂಸಿಸುವ ಪ್ರವೃತ್ತಿ ಸ್ವಭಾವದಿಂದಿದ್ದಾಗ ಭಗವಂತನು ಅವರಲ್ಲಿ ತಾಮಸ ಗುಣಿಗಳನ್ನು ಸಂಹಾರ ಮಾಡುತ್ತಾನೆ ವಿನಃ ಅವರು ಕೇವಲ ದ್ವೇಷಿಗಳೆಂದು ಸಂಹರಿಸುವುದಿಲ್ಲ.



ಶ್ರೀಮದಾಚಾರ್ಯರು ಹೀಗೆ ಅಭಿಪ್ರಾಯವನ್ನು ವಿವರಿಸುತ್ತಾರೆ.

**ಬಾಧ್ಯಾದಿಸ್ಥೋ ಹರಿರ್ನಿತ್ಯಂ ಭಾಧತಾದಿಗತೇತ್ಯಪಿ ।**
**ಗೀಯತೇ ನ ತು ಬಾಧ್ಯತ್ವಾತ್ ಯದ್ ಆದೋಯುಕ್ತತ್ವಾತಃ ।**

**''ಶ್ರೀಹರಿಃ ನ ಬಾಧ್ಯ ನಿರ್ದೋಷತ್ವಾತ್ ಬಾಧಕಸ್ವರೂಪವತ್''** ಎಂಬ ಅನುಮಾನದಿಂದಲೂ ಅಭಿಪ್ರಾಯವು ವ್ಯಕ್ತವಾಗುವುದು.

ದೃಷ್ಟಾಂತ : ನ್ಯಾಯಾಧೀಶನು ಅಪರಾಧಿಗಳ ಕಾರ್ಯಕ್ಕೆ ತಕ್ಕಂತೆ ಶಿಕ್ಷೆ ಕೊಡುತ್ತಾನೆ. ಅಪರಾಧಿಯನ್ನು ದ್ವೇಷದಿಂದ ಶಿಕ್ಷೆ ಕೊಡುವುದಿಲ್ಲ. ನ್ಯಾಯಾಧೀಶನನ್ನು **'ಸಮವರ್ತಿ'** ಎನ್ನಲಾಗುವುದು.

ಹಾಗೇ ಶ್ರೀಹರಿಯು ಎಲ್ಲರಲ್ಲಿಯೂ ಸಮನಾಗಿರುತ್ತಾನೆ. ಅವನನ್ನು **ಸಮ**ನೆಂದು ಕರೆಯುವುದು ಯೋಗ್ಯವೆ.

ಇಲ್ಲಿ ಪ್ರಪಂಚದಲ್ಲಿ ಕಾಣುವ ದೃಷ್ಟಾಂತ ವಿಚಾರ ಮಾಡೋಣ.

ಈಗ ಮಾವಿನ ಹಣ್ಣಿನ ಕಾಲ. (ಉತ್ತರಾಯಣ ವಸಂತಋತು) ಮಾವಿನ ಹಣ್ಣಿನಂತೆ ಇರುವ ಕಿತ್ತಲೆ ಹಣ್ಣುಗಳು ವೃದ್ಧಿ ಹೆಚ್ಚಾಗಿ ಬೆಳೆದು ಮಾರುಕಟ್ಟೆಯಲ್ಲಿ ಸಿಗುವುದು. ಆದರೆ ಕೆಲ ಹಣ್ಣುಗಳು ಸಿಗುವುದಿಲ್ಲ. ಹ್ರಾಸವಾಗುವುದು. ಹಣ್ಣುಗಳು ಗಿಡದಲ್ಲಿ ಇರುತ್ತೆ. ತೋರುವುದಿಲ್ಲ. ಮೊಸರಿನಲ್ಲಿ ತುಪ್ಪವಿದೆ ಹೊರಗೆ ಕಾಣುವುದಿಲ್ಲ. ಆದರೆ ಮೊಸರನ್ನು ಕಡೆದಾಗ ಮಜ್ಜಿಗೆಯಿಂದ ನವನೀತ (ಬೆಣ್ಣೆ) ಹೊರಗೆ ಬರುವುದು. ಬೆಣ್ಣೆಯನ್ನು ಕಾಯಿಸಿದಾಗ ತುಪ್ಪ ಬರುವುದು. ಈ ದೃಷ್ಟಾಂತದ ಹಿಂದೆ ಒಂದು ತತ್ತ್ವವು ಅಡಗಿದೆ ಎಂದು. ಶ್ರೀಮದಾಚಾರ್ಯರು **ಭಾಗ. ತಾ.** ದಿಂದ ತಿಳಿಸುತ್ತಾರೆ. ಭಗವಂತನು ಸರ್ವರ ದೇಹಾದಿಗಳಲ್ಲಿದ್ದರೂ ತೋರ್ಗೊಡುವುದಿಲ್ಲ. ಶಾಸ್ತ್ರಗಳನ್ನು ಚೆನ್ನಾಗಿ ಪಠನ ಮಾಡದೇ ದೇಹ ಇಂದ್ರಿಯಗಳಿಂದ ಪರಮಾತ್ಮನು ಭಿನ್ನನೆಂದು ಗೊತ್ತಾಗುವುದಿಲ್ಲ.

ಜ್ಞಾನಿಗಳು ಶಾಸ್ತ್ರ, ಶ್ರವಣ, ಮನನಾದಿಗಳಿಂದ ವಿಚಾರ ಮಾಡಿದಾಗ ದೇಹೇಂದ್ರಿಯಾದಿಗಳಿಂದ ಭಿನ್ನನಷ್ಟೇ ಅಲ್ಲದೆ, ದೇಹೇಂದ್ರಿಯಗಳ ನಿಯಾಮಕನೆಂಬುದನ್ನು ತಿಳಿಯುತ್ತಾರೆ.

**ದಧಿಸ್ಥಘೃತವತ್ಕಾಷ್ಠವಹ್ನಿವಚ್ಚ ಜನಾರ್ದನಃ ।**
**ದೇಹೇಂದ್ರಿಯಾಸು ಜೀವೇಭ್ಯಃ ವಿವಿಚ್ಚಜ್ಞಾಯತೇ ನ ತು ॥**
**ಘೃತಮಿವ ಪಯಸಿ ನಿಗೂಢಂ ಭೂತೆ ಭೂತೆ ಚ ವಸತಿ ವಿಜ್ಞಾನಂ ।**
**ಸತತಂ ಮಂಥಯಿತವ್ಯಂ ಮನಸಾಮಂಥನಾ ಭೂತೇನ ॥**

ಬೆಂಕಿಪಟ್ಟಣ(Match Box)ದಲ್ಲಿರುವ ಒಂದೊಂದು ಕಡ್ಡಿಯಲ್ಲಿಯೂ ಬೆಂಕಿ

ಇರುವುದಲ್ಲವೇ ? ಆದರೆ ಬೆಂಕಿ ಕಾಣುವುದಿಲ್ಲ. ಬೆಂಕಿಕಡ್ಡಿಯನ್ನು Boxಗೆ ಗೀಚಿದರೆ ಬೆಂಕಿ ಹೊರಗೆ ವ್ಯಕ್ತವಾಗುವ ರೀತಿಯಲ್ಲಿ ದೇಹೇಂದ್ರಿಯಾದಿಗಳಲ್ಲಿ ಭಗವಂತನು ಇದ್ದರೂ ಇದ್ದಾನೆಂಬುದು ತಿಳಿಯದೆ ಅಜ್ಞಾನಿಯಂತೆ, ಜ್ಞಾನಿಗೆ ದೇಹೇಂದ್ರಿಯಾದಿಗಳಲ್ಲಿಯೂ ಇರುವನೆಂದೂ, ನಿಯಾಮಕನೆಂದೂ ಶಾಸ್ತ್ರಮಥನಾದಿಗಳಿಂದ ವ್ಯಕ್ತವಾಗುವುದು.

ದೇಹೇಂದ್ರಿಯವೇ ಭಗವಂತನಲ್ಲ. ದೇಹ ಇಂದ್ರಿಯಗಳಿಗಿಂತ ಅತ್ಯಂತ ಭಿನ್ನ ಸ್ವತಂತ್ರನೆಂದೂ ತಿಳಿಯುತ್ತಾರೆ. ಇದರಿಂದ ಜೀವಾಭಿನ್ನ ದೇವನಿದ್ದಾನೆಂದು ದೇಹವೇ ಜೀವನೆಂದು ಜೀವಾಭಿನ್ನ ಬ್ರಹ್ಮನಿರುವನೆಂದು ತಿಳಿಸುವ ಮತವನ್ನು ಖಂಡಿಸಿರುವುದನ್ನು ಮಾರ್ಮಿಕವಾಗಿ ತಿಳಿಸಲಾಗಿದೆ.

## ಭಗವಂತನ ಸ್ಪಷ್ಟ ವಿಚಾರ

ಜೀವರಿಗೆ ದೇಹಾದಿಗಳನ್ನು ಕೊಡಬೇಕೆಂದು ಯಾವಾಗ ಸಂಕಲ್ಪ ಮಾಡುತ್ತಾನೋ ಆಗ ಆಯಾ ಜೀವರ ಸ್ವಗುಣಕ್ಕನುಸಾರ ಮಹದಾದಿ ರಜೋಗುಣಳ ಪ್ರಕಾರ (ಯೋಗ್ಯತೆಗೆ ತಕ್ಕಂತೆ) ಮನುಷ್ಯ ಪಶು ನಾಯಿ ಮೃಗಗಳ ಶರೀರಾದಿಗಳನ್ನು ಸೃಷ್ಟಿಸುತ್ತಾನೆ. ಮೇಲ್ನೋಟಕ್ಕೆ ಶ್ರೀಹರಿಗೆ ವೈಷಮ್ಯವಿದ್ದಂತೆ ಕಾಣುವುದು. ಹೀಗೆ ದೇವತೆಗಳಿಗೆ ಸುಖವನ್ನುಂಟುಮಾಡಲೂ ಅವರ ಸತ್ವ ಗುಣಗಳನುಸಾರ ಅವರಲ್ಲಿ ಪ್ರವೇಶಿಸಿ ಕ್ರೀಡಿಸುತ್ತಾನೆ. ಇದರಿಂದ ಸ್ಥಿತಿಗೆ ಕಾರಣವಾಗುವುದು. ಲಯ ಮಾಡಬೇಕೆಂದು ನಿಶ್ಚಯಿಸಿದಾಗ ತಾನು ಯೋಗ ನಿದ್ರೆ ಮಾಡುತ್ತಾನೆ. ಆವಾಗ ತಮೋಗುಣ ಶಕ್ತಿಯು ವೃದ್ಧಿಯಾಗುವುದು. ಹೀಗೆ ಮಾಡುವಾಗ ಸತ್ವರಜ ತಮೋಗುಣಗಳ ಲೇಪವಿರುವುದಿಲ್ಲ.

## ಸತ್ಯ ಜಗತ್ತು ನಿರ್ಮಾಣ

ರಾಜನೇ ಕೇಳು ಜಗತ್ತನ್ನು ಸೃಷ್ಟಿಸಿದ. ಅದು ಸತ್ಯವಾದದ್ದೆ, ಮಿಥ್ಯೆಯಲ್ಲ. ಸೃಷ್ಟಿಸಿದ ಜಗತ್ತಿಗೆ ತಾನೇ ನಿಯಾಮಕನು, ಆಧಾರನು.

ಪ್ರಧಾನ ಪುರುಷನಾದ ಚತುರ್ಮುಖ ಬ್ರಹ್ಮನ ಸೃಷ್ಟಿ ಮಾಡಿದ. ಪ್ರಕೃತಿಯೆಂದರೆ ಶ್ರೀ, ಭೂ, ದುರ್ಗಾ ದೇವಿಯರು. ಸತ್ವ ರಜೋ ತಾಮಸ ಗುಣಾದಿ ದೇವತೆಯರು ಪ್ರಕೃತಿಯನ್ನು ಉಪಾಸನ ಕಾರಣವನ್ನಾಗಿಸಿ, ಬ್ರಹ್ಮದೇವರ ಮೂಲಕ ಜಗತ್ತು, ಕಾಲ, ಲಯ, ವರ್ಷ, ಮಾಸ, ಋತ್ವಾದಿಯನ್ನಾಗಿ ವಿಭಾಗ ಮಾಡುತ್ತಾನೆ.

ಲಿಂಗ ದೇಹ ಸಂಬಂಧದಿಂದ ಇಂದ್ರರು, ದೈತ್ಯರು ಇವರೆಲ್ಲಾ ಹೆಚ್ಚು ಸಾಮರ್ಥ್ಯವನ್ನು, ಕ್ರಿಮೀ ಕೀಟಗಳಲ್ಲಿ ಅಲ್ಪಸಾಮರ್ಥ್ಯ, ಆನೆ, ಮೊಸಳೆ, ಮೃಗಗಳಲ್ಲಿ ಹೆಚ್ಚಿದ ಸಾಮರ್ಥ್ಯ ಕೊಟ್ಟು ಪ್ರಕಟಿಸುವನು.

ಈ ರೀತಿಯ ಜಗತ್ಸೃಷ್ಟಿ ಭಗವಂತನ ವಿಚಿತ್ರ ಲೀಲೆಯೂ, ಮಾಯಾಸೃಷ್ಟಿ ಭಗವಂತ



(ಇಂದ್ರಜಾಲಿಕನಂತೆ) ಮಾಡುವುದಿಲ್ಲ. ಜಗತ್ತು ತಾನಾಗಿಯೇ ಹುಟ್ಟಿತು. Evolution ಎನ್ನುವರಿದ್ದಾರೆ. Gas ಇದ್ದಿತು. ಅದು ತಿರುತಿರುಗೆ ಗರ್‌ಗರ್ ಅಂತ ತಿರುಗುವಾಗ ಒಂದೊಂದೇ ಭೂಮಿ ಅನಿಲ ಗಾಳಿಗಳು ಉತ್ಪನ್ನವಾಯಿತು. ಇದಕ್ಕೆ ಭಗವಂತನು ಕಾರಣವೆಂಬುದನ್ನು ಸಮ್ಮತಿಸುವುದಿಲ್ಲ. ಇಂತಹ ಕುವಿಜ್ಞಾನ (Science)ವನ್ನು ಖಂಡಿಸಲಾಗಿದೆ.

ಈ ಪ್ರಕರಣವನ್ನು ಉಪಸಂಹಾರ ಮಾಡಲಾಗಿದೆ.

ಶ್ರೀಹರಿಯಲ್ಲಿ ಪ್ರೇಮ, ಪ್ರೀತಿ, ಸ್ನೇಹ, ಭಕ್ತಿ ಮಾಡುವುದು ಸಾತ್ವಿಕರ ಸ್ವಭಾವ. ದೇವತೆಗಳು ಈ ರೀತಿ ಸ್ನೇಹ ಪ್ರಕಟಿಸುತ್ತಾರಾದ್ದರಿಂದ ಅವರಲ್ಲಿ (ಹೃದಯ) ಸನ್ನಿಹಿತನಾಗಿ ಜಯ ಸುಖಾದಿಗಳನ್ನು ಕೊಡುತ್ತಾನೆ. ಸ್ವಾಭಾವಿಕವಾಗಿ ಅಸುರರು ಭಗವಂತನನ್ನು ದ್ವೇಷ ಮಾಡುತ್ತಾರಾದ್ದರಿಂದ ಸೋಲು ಅಪಜಯವಾಗುವುದು. ಜೀವರ ಸ್ವಭಾವದಂತೆ, ತಕ್ಕಂತೆ ಫಲಕೊಡುವ ಸ್ವಾಮಿಯಲ್ಲಿ ವೈಷಮ್ಯವೆಂಬುದೇ ಇರುವುದಿಲ್ಲ. ತಸ್ಮಾತ್ ಶ್ರೀಹರಿಯು **ಸಮ**ನೇ ಆಗಿರುವನು. ಪರೀಕ್ಷಿತರಾಜನ ಮೊದಲ ಪ್ರಶ್ನೆಗೆ ಸಮನು ಎಂಬುದನ್ನು ವಿವರಿಸುತ್ತಾ **"ಕಥಂ ಅವಧೀತ್ ವಿಷಮೋ ಯಥಾ"** ಎಂಬ ಪ್ರಶ್ನೆಗೆ ಶ್ರೀಮದಾಚಾರ್ಯರು ಅನುವ್ಯಾಖ್ಯಾನದಲ್ಲಿ ಸ್ಪಷ್ಟವಾಗಿ ತಿಳಿಸುತ್ತಾರೆ.

**ನ ವಿಷ್ಣೋಃ ವಿಷಮ ತ್ವಂ ತು ಯೋಗ್ಯತಾಪೇಕ್ಷಯಾಕ್ವಚಿತ ।**
**ವಿಷಮತ್ವಂ ತು ದೋಷಾಯ ಶುಭಾಶುವಿಪರ್ಯಯೋ ॥**
**ವೈಷಮ್ಯ ನಿರ್ಘೃಣತ್ವಂ ಚ ವೇದಾಽಪ್ರಾಮಾಣ್ಯ ಕಾರಣ್ಯಂ ।**
**ನಾಂಗೀಕಾರ್ಯಮತೋಽನತ್ತು ನ ವೈಷ್ಯಮ್ಯಾದಿನಾಮಕಂ ॥**

(ಅನು.ವ್ಯಾ. ೨-೧-೧೧ ೧೧೨)

ದುರ್ಮಾರ್ಗರಿಗೆ ಸುಖವಾಗುವಂತೆ ಮಾಡುವುದೇ ವೈಷಮ್ಯವು. ಧರ್ಮಿಷ್ಟರಿಗೆ ದುಃಖವಾಗುವಂತೆ ಮಾಡುವುದು ನೈರ್ಘೃಣ್ಯವು ಎಂದು ಹೇಳಿದರೆ ವೇದಶಾಸ್ತ್ರಗಳಲ್ಲಿ ತಿಳಿಸಿದ್ದು ತಪ್ಪು (ಅಪ್ರಮಾಣ್ಯ) ಎಂದು ಹೇಳಬೇಕಾಗುತ್ತದೆ. **"ಧರ್ಮಿಸ್ವರ್ಗಂ ವಿಧರ್ಮಿನಿರಯಂ"** ಎಂಬ ಶೃತಿ ತಿಳಿಸುವುದು. ಧರ್ಮಿಷ್ಠರಿಗೆ ಸುಖವು ಅಧರ್ಮಿಗಳಿಗೆ ದುಃಖವು ಎಂದೇ ಸಾರಾಂಶ.

ಶ್ರೀಹರಿಯು ಸೃಷ್ಟಿಸಿದ ಜಗತ್ತನ್ನು ತಾನೇ ರಕ್ಷಿಸುತ್ತಾನೆ. ಪಾಲನೆ ಮಾಡಲಿಚ್ಛಿಸಿ, ಸತ್ವ ಗುಣಸಹಿತರಾದ ದೇವತೆಗಳನ್ನು ಯುಗಗಳನುಸಾರ ವೃದ್ಧಿಮಾಡಿದನಾದರೂ ಸೃಷ್ಟಿ ಸ್ಥಿತಿ ನಿಯಮನ ಜ್ಞಾನ ಅಜ್ಞಾನ ಬಂಧ ಮೋಕ್ಷಗಳನ್ನು ತಾನೇ ಮಾಡುವನು.

## ದೇವಾನಾಂ ಪ್ರಿಯ ಎಂದು ತಿಳಿಸುವ ಆಖ್ಯಾಯಿಕ

**ಅತ್ರೈವೋದಾಹೃತಃ ಪೂರ್ವ ಮಿತಿಹಾಸಸುರರ್ಷಿಣಾ ।**
**ಪ್ರೀತ್ಯಾ ಮಹಾಕ್ರತೌ ರಾಜನ್ ಪೃಚ್ಛತೇಽಜಾತ ಶತ್ರವೇ ॥**

**ಮಹಾಭಾರತ ಕಥಾ ಪ್ರಸಂಗ : ರಾಜಸೂಯಯಾಗ ಶ್ರೀಕೃಷ್ಣನಿಗೆ ಅಗ್ರಪೂಜೆಯ ಸಮಯ**

ಈ ವಿಷಯದಲ್ಲಿ ಧರ್ಮರಾಜ ರಾಜಸೂಯ ಯಾಗ ಮಾಡಲು ಉದ್ಯುಕ್ತನಾದಾಗ ಒಂದು ವಿಚಿತ್ರವನ್ನು ಕಂಡು ಆಶ್ಚರ್ಯದಿಂದ ನಾರದರನ್ನು ಪ್ರಶ್ನೆ ಮಾಡಿದಾಗ ನಾರದರು ಉತ್ತರಿಸುತ್ತಾರೆ.

**ಶುಕ್ರಾಚಾರ್ಯರ ವಿವರಣೆ**

ರಾಜನ್, ಪರೀಕ್ಷಿತ್ ನಿನ್ನ ತಾತನಾದ ಧರ್ಮರಾಜ ರಾಜಸೂಯ ಯಾಗ ಮಾಡಬೇಕೆಂದು ಹಿರಿಯರ ಸೂಚನೆಯಂತೆ ಅಪ್ಪಣೆ ತೆಗೆದು ಅಗ್ರಪೂಜೆ ಮಾಡಲು ಶ್ರೀಕೃಷ್ಣನನ್ನು ಆಹ್ವಾನಿಸುತ್ತಾನೆ. ಭಗವಂತನನ್ನು ಉತ್ತಮ ಸಿಂಹಾಸನದಲ್ಲಿ ಕೂಡಿಸಿದಾಗ ಕೃಷ್ಣ ದ್ವೇಷಿ ಶಿಶುಪಾಲನು ಎದ್ದು ನಿಂತ. ಅಗ್ರಪೂಜೆ ಕೃಷ್ಣನಿಗೆ ಕೊಟ್ಟಿದ್ದನ್ನು ಒಪ್ಪದೇ ಟೀಕಿಸಿ ಶ್ರೀಕೃಷ್ಣನನ್ನು ಅವಾಚ್ಯ ಮಾತುಗಳಿಂದ ನಿಂದಿಸುತ್ತಾನೆ. ಶ್ರೀಕೃಷ್ಣ ಅವನ ನಿಂದಾ ವಾಕ್ಯಗಳನ್ನು ಕೇಳಿ ಕೊನೆಗೆ ಶಿಶುಪಾಲನನ್ನು ಚಕ್ರದಿಂದ ಶಿರಚ್ಛೇದನ ಮಾಡಿದ. ಶಿಶುಪಾಲ ಮರಣಿಸಿದಾಗ ಅವನ ಆತ್ಮ ಶ್ರೀಕೃಷ್ಣನ ಪಾದಗಳನ್ನು ಸೇರಿ ಸಾಯುಜ್ಯ ಹೊಂದಿತು.

ಇಷ್ಟು ನೋಡಿದ ಧರ್ಮರಾಜನಿಗೆ ಅತ್ಯಾಶ್ಚರ್ಯವಾಯಿತು. ಆಗ ನಾರದರನ್ನು ಕೇಳಿದ.

ಮುನಿವರ್ಯ ಏನಿದು ಆಶ್ಚರ್ಯ. ಪರಮಾತ್ಮನ ಅಂಗದಲ್ಲಿ ಪ್ರವೇಶ ಹೊಂದಿದ್ದು ನೋಡಿದೆ. ಇಂತಹ ಭಾಗ್ಯ ಮಹಾಮಹಾಯೋಗಿಗಳಿಗೆ, ಏಕಾಂತ ಭಕ್ತರಿಗೆ ದುರ್ಲಭವಾಗಿರುವಾಗ ಶ್ರೀಕೃಷ್ಣ ದ್ವೇಷಿ ಚೇದಿರಾಜನಿಗೆ ಹೇಗೆ ದೊರೆಯಿತು ?

ಹಿಂದೆ ಇಂತಹ ಬ್ರಹ್ಮದ್ವೇಷಿ ವೇನನು ಪರಮಾತ್ಮನನ್ನು ನಿಂದಿಸಿದಾಗ ಮುನಿ ಬ್ರಾಹ್ಮಣರು ಶಾಪ ಕೊಟ್ಟ ಕಾರಣದಿಂದ ತಮಸ್ಸಿಗೆ ಕಳುಹಿಸಲ್ಪಟ್ಟ. ಆದರೆ ಈಗ ಈ ಹರಿದ್ವೇಷಿಯು ಕೃಷ್ಣನನ್ನು ಅವಾಚ್ಯ ವಾಕ್ಯಗಳಿಂದ ನಿಂದಿಸಿದರೂ ತಮಸ್ಸಿಗೆ ಹೋಗಬೇಕಿತ್ತಲ್ಲವೇ ? ಹಾಗಲ್ಲದೇ ಸಾಯುಜ್ಯವೆಂತು ಲಭಿಸಿತು ಕುತೂಹಲವಾಗುತ್ತಿದೆ. ನಾರದರೇ ವಿಷಯವನ್ನು ತಿಳಿಸಿರಿ.

ದಮಘೋಷನೆಂಬುವರ ಮಗ ಶಿಶುಪಾಲ. ಮಹಾಪಾಪಿ. ಇವನಂತೆ ದಂತವಕ್ರನೆಂಬುವನೂ ಕೃಷ್ಣದ್ವೇಷಿ. ಇವರು ಹುಟ್ಟಿದಾಗಿನಿಂದ ತೊದಲು ನುಡಿಗಳಾರಂಭವಾಗುತ್ತಲೇ ಶ್ರೀಕೃಷ್ಣನನ್ನು ಬೈಯುವುದು. ನಿಂದಿಸುತ್ತಲೇ ಬೆಳೆದರು. ಅಂಥ ಪರಮ ಪಾಪಿಗಳ ನಾಲಗೆಗೆ ತೊನ್ನು ಹೊಡೆದು ಬಾಯಿ ಕತ್ತರಿಸಬೇಕಿತ್ತು. ಅಂಥಾದರಲ್ಲಿ ಶಿಶುಪಾಲನು ಮರಣಾ ನಂತರ ಅವನ ಆತ್ಮವು ಎಲ್ಲರೂ ನೋಡುತ್ತಿರುವಾಗ ಕೃಷ್ಣನ ದೇಹದಲ್ಲಿ ಪ್ರವೇಶಿಸಿದ್ದು ಇನ್ನೂ ಪರಮಾಶ್ಚರ್ಯ.

**ದಮಘೋಷೋಸುತಃ ಪಾಪ ಆರಭ್ಯ ಕಲಭಾಷಣಾತ್ ।**
**ಸಂಪ್ರತ್ಯಮರ್ಷೀ ಗೋವಿಂದೆ ದಂತವಕ್ರಶ್ಚದುರ್ಮತಿಃ ॥**



**ಶಪತೋರ ಸಕೃದ್‌ವಿಷ್ಣುಂಯದ್ಬ್ರಹ್ಮ ಪರಮವ್ಯಯಂ ।**
**ಶ್ವಿತ್ರೋನ ಜಾತೋಜಿಹ್ವಾಯಾಂ ನಾಂಧಂ ವಿವಿಶಿತು ಸ್ತಮಃ ॥**

ಪರಮಾತ್ಮನನ್ನು ಅವನ ಸ್ವರೂಪವನ್ನು ಸಂಪೂರ್ಣವಾಗಿ ತಿಳಿಯಲು ಯಾರಿಂದಲೂ ಸಾಧ್ಯವಿಲ್ಲ. ಇಂತು ಗುಣಪೂರ್ಣನನ್ನು ದೋಷರಹಿತನಾದ ಶ್ರೀಕೃಷ್ಣನನ್ನು ಯದ್ವಾತದ್ವಾ ಮನಬಂದಂತೆ ಬೈಯುವ ನಿಂದಿಸಿದ ಶಿಶುಪಾಲ ಎಲ್ಲರೂ ಕಾಣುತ್ತಿರುವಂತೆ ಕೃಷ್ಣನಲ್ಲಿ ಪ್ರವೇಶ ಮಾಡಿದ್ದಾದರೂ ಹೇಗೆ ಅಂದ ಮೇಲೆ ನಾವೂ ಶಿಶುಪಾಲನಿಗಿಂತ ಇನ್ನಷ್ಟು ಹೆಚ್ಚಿನ ರೀತಿ ನಿಂದಿಸುತ್ತೇವೆ, ಬೈಯ್ಯುತ್ತೇವೆ. ನಮಗೂ ಮೋಕ್ಷವಾಗಬಾರದೇಕೆ ? ಎಂಬ ಶಂಕೆ ಹುಟ್ಟುತ್ತದೆ.

ನಾರದರೆ ನನಗೆ ದೀಪವು ಗಾಳಿಗೆ ಚಲಿಸುವಂತೆ ನನ್ನ ಮನಸ್ಸೂ ಹೋಯ್ದಾಡುತ್ತದೆ. ಈ ಮಾತನ್ನು ಕೇಳಿ ನಾರದರು ಎಲ್ಲರೂ ಕೇಳಿಸುವಂತೆ ಸಭೆಯಲ್ಲಿ ಹೇಳಲಾರಂಭಿಸಿದರು.

**ನಾರದರ ಉತ್ತರ :** ಧರ್ಮಜನ ಅಭಿಪ್ರಾಯವನ್ನು ಮೂರು ರೀತಿಯಾಗಿರುವುದೆಂದು ಅವುಗಳಿಗೆ ಸೂಕ್ತ ಸಮಾಧಾನ.

---

ವೇನನು ಅಂಧಃತಮಸಾಯಿತೆಂದು ಹೇಳಿದಾಗ ವಿವರಣೆ.

**ಅಹಂ ಬ್ರಹ್ಮೇತಿ ವೇನಸ್ತು ಧ್ಯಾಯನ್ ಆಪಾಽಧರಂತಮಃ ।**
**ಸ್ವಯಂವೇನಶ್ಚತುರ್ಥಸ್ತು ಮಹಾತಾಮಸಿ ಪಾತಿತಃ ॥**

(ಭಾತ. ತಾ. ೪.೧೪.೨೮)

**ಅರ್ಥ :** ವೇನ ಅಹಂಬ್ರಹ್ಮಾಸ್ಮಿ ಅಂತಲೇ ಉಪಾಸನ ಮಾಡಿದಾಗ ತಮಸ್ಸೇ ಫಲವಾಯಿತು. ವೇನನಲ್ಲಿ ನಾಲ್ಕು ಅಂಶಗಳಿದ್ದಿತು. (೧) ಸತ್ವ ಅಂಶದಿಂದ ಪೃಥು. (೨) ರಾಜ ಸಾಂಶದಿಂದ್ದವನು ಸ್ವರ್ಗಕ್ಕೇ ಹೋದನು. (೩) ನಿಷಾದನೆಂಬುವನು ವೇನನ ದೇಹದಿಂದ ಹುಟ್ಟಿದ. (೪) ನಾಲ್ಕನೇ ಅಂಶ ತಾಮಸ ಅಂಶ. ತಾಮಸನಾದ್ದರಿಂದ ಬ್ರಾಹ್ಮಣರ ಶಾಪನಿಮಿತ್ತ ಅಂಧಃತಮಸ್ಸಿನಲ್ಲಿ ಬಿದ್ದನು.

---

(೧) ಶಿಶುಪಾಲ ಶ್ರೀಕೃಷ್ಣನನ್ನು ತುಂಬು ಸಭೆಯಲ್ಲಿ ನಿಂದಿಸಿದ. ಇದನ್ನು ಕೇಳಿ ಸಭೆಯಲ್ಲಿ ಹಿರಿಯರು, ಜ್ಞಾನಿಗಳು, ಬಂಧುಗಳೂ ಎಲ್ಲರು ಕೇಳಿಸುವಂತೆ ಮಾನತೆಗೆದು ಕೇವಲ ದೋಷಗಳನ್ನು ಏಳಿಸಿ ಕೃಷ್ಣನ character assassination ಮಾಡಿದಾಗ ಕೃಷ್ಣನಿಗೆ ಕೋಪ ತಕ್ಷಣ ಏಕೆ ಬರಲಿಲ್ಲ ? ಹಾಗಾಗದೇ ಪ್ರತಿಯಾಗಿ ಶಿಶುಪಾಲನಿಗೆ ಸಾಯುಜ್ಯರೂಪ ಸಂಭಾವನೆ ಕೊಡುವುದು ಸರಿಯೇ ?

(೨) ಒಬ್ಬ ಜೀವಿ ಜನ್ಮಜನ್ಮಾಂತರಗಳಲ್ಲಿ ಭಗವದ್ವಿಷಯಕ ಜ್ಞಾನ ಶಾಸ್ತ್ರಾಧ್ಯಯನ ಧ್ಯಾನಾದಿಗಳನ್ನು ಮಾಡಿದವರಿಗೇ ದುರ್ಲಭವಾಗಿರುವ ಮುಕ್ತಿ ಶಿಶುಪಾಲ ಅಂತಹ ಸಾಧನ ಮಾಡದೇ ಇರುವಾಗ ಮುಕ್ತಿಯಾದರೂ ಲಭಿಸಿತಲ್ಲಾ. ಆಶ್ಚರ್ಯ.

(೩) ಮುಕ್ತಿ ಹೊಂದಲೂ ದ್ವೇಷವೂ ಒಂದು ಸಾಧನವೆನ್ನೋಣವೇ ? ಹಾಗಿದ್ದರೆ ವೇನನಿಗೂ ಮುಕ್ತಿ ಲಭಿಸಬೇಕಿತ್ತು. ಅಲ್ಲದೇ ತಮಸ್ಸಾಯಿತು.

ಹೀಗೆ ಮೂರು ವಿಕಲ್ಪಗಳಿಂದ ಧರ್ಮನಂದನ ನಾರದರಲ್ಲಿ ಕೇಳುತ್ತಾನೆ. ಆ ಮೂರು ವಿಕಲ್ಪಗಳಿಗೆ ಹೀಗೆ ಉತ್ತರವಿದೆ.

ಭಗವಂತನಿಗೆ ಶಿಶುಪಾಲನ ಮಾತುಗಳಿಂದ ಕೋಪ ದ್ವೇಷ ಏಕೆ ಬರಲಿಲ್ಲ? ಎನ್ನುವುದಕ್ಕೆ – ಸಿಟ್ಟು, ದ್ವೇಷ, ಅಸೂಯೆ (ರಾಗ ದ್ವೇಷಾದಿಗಳು) ಪ್ರಕೃತಿ ನಿರ್ಮಿತ (ಪಂಚಭೌತಿಕ) ಶರೀರಗಳಿಗೆ ಬರುವುದು. ಪ್ರತ್ಯಕ್ಷ ಸಿದ್ಧ. ನಿಂದಿಸಿದವನನ್ನು ತಕ್ಷಣ ಪ್ರತಿಕ್ರಿಯೆ ಹೊಡೆಯುವುದು, ಸಂಹರಿಸುವುದು ಮಾನವನ ಸಹಜ ಪ್ರಕ್ರಿಯೆ.

ಆದರೆ ಶ್ರೀಕೃಷ್ಣ ಯಾರು ? ಸಾಕ್ಷಾತ್ ಭಗವಂತನೇ. ಭಗವಂತನಿಗೆ ರಾಗದ್ವೇಷಾದಿಗಳ ಸಂಪರ್ಕವಿರುವುದಿಲ್ಲ. ಏಕೆಂದರೆ ಶ್ರೀಹರಿಯ ಶರೀರ ಅಪ್ರಾಕೃತ ಜ್ಞಾನಾಂದಾತ್ಮಕವಾದದ್ದು. ಆದ್ದರಿಂದ ಪ್ರಾಕೃತ ಶರೀರ ರಹಿತನಿಗೆ ರಾಗದ್ವೇಷಾದಿಗಳು ಬರಲು ಸಾಧ್ಯವಿಲ್ಲ. ಆಯಿತು. ಶಿಶುಪಾಲ ಕೃಷ್ಣನನ್ನು ಎಷ್ಟು ಬೈಯ್ಯಬೇಕೋ ಅಷ್ಟೂ ಆದ ಮೇಲೆ ಕೋಪದಿಂದ ತನ್ನ ಸುದರ್ಶನ ಚಕ್ರದಿಂದ ಶಿಶುಪಾಲನ ತಲೆ ಕತ್ತರಿಸಿದ. ಅಷ್ಟು ಸಮಯ ಬೇಕಿತ್ತೇ ? ಎಂದರೆ ಶಿಶುಪಾಲನ ತಾಯಿಗೆ ಭಗವಂತ ವಚನ ಕೊಟ್ಟ ಪ್ರಕಾರ ನೂರು ನಿಂದಾರೂಪ ಮಾತುಗಳವರೆಗೂ ಸಹಿಸುತ್ತೇನೆ ಅಂದಿದ್ದು. ಅದಕ್ಕಾಗಿ ನೂರು ತಪ್ಪು ಮಾಡುವವರೆಗೂ ಸಹಿಸಿ ನಂತರ ಸಂಹರಿಸಿದ. ಇರಲಿ. ಆದರೆ ಅಂಥವನ ಮೇಲೆ ಅನುಗ್ರಹ ಏಕೆ ಮಾಡಿದ್ದು? ಶ್ರೇಷ್ಠ ಸ್ಥಾನ ಕೊಡಬಹುದೇ ?

ನಾವೂ ಸಹ ಭಗವಂತನನ್ನು ದ್ವೇಷಿಸುತ್ತೇವೆ. ನಮಗೂ ಸದ್ಗತಿ ಆಗಲಿ ಎಂದು ತಿಳಿಯುವುದು ಅಜ್ಞಾನಿಗಳ ಮಾತು.

ಭಗವಂತನನ್ನು ದ್ವೇಷ ಮಾಡುವವನನ್ನೂ ಅಲ್ಲದೆ, ಅವನ ಬಂಧು ಮಾತಾಪಿತೃಗಳಿಗೂ ನಿತ್ಯ ನರಕವಾಗುವುದಾಗಿ ಶಾಸ್ತ್ರ ತಿಳಿಸುತ್ತದೆ. ಇಲ್ಲಿ ಶಿಶುಪಾಲನ ವಿಷಯವೇ ಬೇರೆ. ಮುಂದೆ ತಿಳಿಸಲಾಗಿದೆ.

ಬೈದರೂ ಭಗವಂತನಿಗೆ ಕೋಪಾದಿಗಳು ಏಕೆ ಬರಲಿಲ್ಲವೆಂಬುದಕ್ಕೆ ಹಿಂದೆ ಉತ್ತರಿಸಲಾಗಿದೆ.



**ಸದ್ದೇಹಃ ಸುಖಗಂಧಶ್ಚ ಜ್ಞಾನಾಭಾಃ ಸತ್ಪರಾಕ್ರಮಃ ಜ್ಞಾನ ಜ್ಞಾನ ಸುಖಾಽಸುಖಃ**

ಶಿಶುಪಾಲ ಕೃಷ್ಣನನ್ನು ಜಾರ, ಚೋರ, ವಂಚಕ ಇತ್ಯಾದಿ ಶಬ್ದಗಳಿಂದ ಬೈದ. ಶ್ರೀಕೃಷ್ಣನಿಗೆ ಸಂಬಂಧಪಟ್ಟ ವಸ್ತುವು/ವಾಕ್ಯಗಳು ಇರುವುದಿಲ್ಲ. ಆದರೆ ಇಲ್ಲಿ ಯಾವು ತನ್ನಲ್ಲಿಲ್ಲದೆ ಇರುವ ವಸ್ತು ವಾಕ್ಯಗಳನ್ನು ಕೇಳಿ, ಇವೆಲ್ಲಾ ನನಗೆ ಸಂಬಂಧಪಟ್ಟಿದೆ ಅಂತ ತಿಳಿಯುವಷ್ಟು ಶ್ರೀಕೃಷ್ಣ ಅವಿವೇಕಿಯಲ್ಲ. ಶಿಶುಪಾಲ ನಿಂದ್ಯಾರೋಪ ಶ್ರೀಹರಿಗೆ ಸಂಬಂಧವಿಲ್ಲವಾದ್ದರಿಂದ ರಾಗದ್ವೇಷ ಬರಲೂ ಸಾಧ್ಯವಿಲ್ಲ ಎನ್ನುವಂತೆ ಶ್ರೀಶನು ಸ್ವೀಕರಿಸಿದೆ ಹಿಂತಿರುಗಿಸಿದ. ಇಂತಹ ಗುಣಗಳು ಶ್ರೀಶನಲಿಲ್ಲದ ಕಾರಣ ರಾಗದ್ವೇಷ ಹೇಗಾಗುತ್ತದೆ ?

ಒಟ್ಟು ತಾತ್ಪರ್ಯ : ಸ್ವತಂತ್ರನು ಜ್ಞಾನಾಂದಾದಿ ವಿಲಕ್ಷಣನಾದ ಭಗವಂತನಿಗೆ ಶತೃಗಳಿಂದ ನಿಂದ್ಯಾಸ್ತುತಿ ಪ್ರಶಂಸೆ. ಮಾನಾಪಮಾನ ಕೆಡುಕು ಹೇಗೆ ತಾನೆ ಆಗುವುದು ?

ಹೀಗಿರುವಾಗ ಶ್ರೀರಮಾರಮಣನನ್ನು ದ್ವೇಷದಿಂದ ಭಯಪಡಿಸುವುದೆಂದಾಗಾಲಿ ಪ್ರೇಮದಿಂದ, ಕಾಮದಿಂದಾಗಲಿ ಮನಸ್ಸನ್ನು ಶ್ರೀಹರಿಯಲ್ಲೆ ಅವನನ್ನೆ ಚಿಂತಿಸುತ್ತಿರುವವನನ್ನು ಕಾಪಾಡುತ್ತಾನೆ. ಆಯಿತು. ನಮ್ಮ ಪ್ರಶ್ನೆಗೆ ಉತ್ತರ ಬರಲಿಲ್ಲವೆಂದರೆ ಸಮಾಧಾನ – ವೈರತ್ವದಿಂದ ಭಗವಂತನಲ್ಲಿ ಚಿಂತಿಸುತ್ತಾ ಎಡಬಿಡದೇ ಸ್ಮರಣೆ ಮಾಡುವ ಬಾಂಧವ್ಯದಿಂದಿರುವವನೂ ಭಕ್ತನೆಂದೇ ಕರೆಸಿಕೊಳ್ಳುತ್ತಾನೆ.

ದೇವತೆಗಳಿಗೆ ದೈತ್ಯರು ಮಾಡಿದ ಅಪರಾಧವೇನು ? ಎನ್ನುವ ಪ್ರಶ್ನೆಗೆ ದೇವತೆಗಳು ಭಗವಂತನ ಭಕ್ತರು. ಭಕ್ತರನ್ನು ನಿಂದಿಸುವುದಾಗಲಿ ಹಿಂಸೆ ಕೊಡುವುದರಿಂದ ಭಕ್ತರ ಅಂತರ್ಯಾಮಿ ಸಹಿಸುವುದಿಲ್ಲ. ದೇವತೆಗಳಲ್ಲಿ ಪ್ರವೇಶಿಸಿ ದ್ವೇಷಿಸುವಂತೆ ಮಾಡಿ ದೈತ್ಯರನ್ನು ಸಂಹಾರ ಮಾಡಲು ಹೇತುವಾಗುತ್ತಾನೆ.

ಈ ಪ್ರಸಂಗದಲ್ಲಿ ಶಿಶುಪಾಲ ಕೃಷ್ಣದ್ವೇಷಿ ಇರಬಹುದು. ಆದರೆ ಇಪ್ಪತ್ತು ನಾಲ್ಕು ತಾಸು ಕೃಷ್ಣನನ್ನೇ ಚಿಂತಿಸುತ್ತಿದ್ದ. ವಾಕ್‌ನಿಂದ ಬೈಯ್ಯುವ ಮಾತುಗಳು ಬಂದರೂ ಮನಸ್ಸಿನಲ್ಲಿ ಸದಾ ಕೃಷ್ಣಸ್ಮರಣೆ ಇದ್ದಿತು. ಈ ರೀತಿಯ ಚಿಂತನೆ ವೇನನಲ್ಲಿ ಇದ್ದಿಲ್ಲ. ಶಿಶುಪಾಲ ತಾನೇ ಬ್ರಹ್ಮನೆಂದೂ ಎಂದಿಗೂ ತಿಳಿದಿದ್ದಿಲ್ಲ. So Sri Krishna awarded a great boon.

ಧರ್ಮರಾಜ ಇಷ್ಟು ಸುದೀರ್ಘ ವಿವರಣೆ ಕೊಡಲು ನಿನ್ನ ಪ್ರಶ್ನೆಗೆ ಸೂಕ್ತ ಸಮಾಧಾನಕ್ಕಾಗಿ.

ಇದಕ್ಕೊಂದು ದೃಷ್ಟಾಂತ ಕೊಡುತ್ತೇನೆ. ಕಾಮ, ದ್ವೇಷ ಇವುಗಳಿಂದ ಶ್ರೀಹರಿಯಲ್ಲೇ ಮನಸ್ಸನಿಟ್ಟಿರುವವನನ್ನು ಹಂಸಪಕ್ಷಿಯಂತೆ ಹಾಲಿನಲ್ಲಿ ಬೆರೆತ ನೀರಿನಂತೆ ಹಂಸವು ನೀರನ್ನು ಬಿಟ್ಟು ಹಾಲನ್ನು ಮಾತ್ರ ಸ್ವೀಕರಿಸಿದಂತೆ ದ್ವೇಷವೆಂಬ ನೀರನ್ನು ತ್ಯಜಿಸಿ ನಾಮಸ್ಮರಣೆ ಎಂಬ ಕ್ಷೀರವನ್ನು ಮಾತ್ರ ಸ್ವೀಕರಿಸಿದಂತೆ ಅನುಗ್ರಹಿಸುತ್ತಾನೆ. ಹಂಸಕ್ಷೀರನ್ಯಾಯ ಎನ್ನಲಾಗಿದೆ.

**ಕೀಟಃ ಪೇಶ ಸ್ಕೃತಾ ರುಧಧಿಃ ಕುಡ್ಯೇಯಾಂತ ಮನುಸ್ಮರನ್ ।**
**ಸಂರಂಭಭಯ ಯೋಗೇನ ವಿಂದತೇ ತತತ್ಸರೂಪತಾವ್ ॥**

**ಒಂದು ದೃಷ್ಟಾಂತ :** ಕುರುಡೀ ಕುಠಾರ (ಕಣಜ ಹುಳವು) ಒಂದು ಕೀಟವನ್ನು ಹಿಡಿದು ಕೂಡಿ ಹಾಕುತ್ತದೆ (ಬಂಧಿಸುತ್ತದೆ). ಕೀಟಕಕ್ಕೆ ದುಃಖವಾಗಿ ತನ್ನನ್ನು ತಿಂದುಬಿಡಬಹುದೆಂಬ ಭಯದಿಂದ ಕಣಜ ಹುಳವನ್ನು ದ್ವೇಷಿಸುತ್ತದೆ. ಆದರೆ ಕಣಜವು ತನಗೆ ಇದ್ದಲ್ಲೇ ನಿತ್ಯವೂ ಆಹಾರ ಕೊಡುತ್ತಾ ಹೋಗುವುದರಿಂದ ಪೋಷಿಸುತ್ತಾ ಇರುವುದನ್ನು ಬಿಟ್ಟು ಕಣಜವನ್ನು ಪ್ರೀತಿಸಲಾರಂಭಿಸಿ ಕಣಜವನ್ನೇ ಸ್ಮರಿಸುತ್ತಾ ಯಾವಾಗ ಬರುವುದೋ ಎಂದು ದಾರಿ ಕಾಯುತ್ತಿರುತ್ತದೆ. ಹೀಗೆ ಅದರ ಮೇಲೆ ಸ್ನೇಹ ಹುಟ್ಟಿತು. ನನ್ನ ಶತೃವಲ್ಲ, ಬಂಧು ಪಾಲಕನೆಂದು ಸದಾ ಕಣಜವನ್ನೇ ನೆನೆಯುತ್ತಾ ಇರುವುದು. ಮೊದಮೊದಲು ಕೀಟಕ್ಕೆ ಭಯ, ಕೋಪವಿದ್ದದ್ದು ಈಗ ಕ್ರಮೇಣ ಸ್ನೇಹ ಹೆಚ್ಚಾಗಿ ಬೆಳೆಯಿತು. ಹೀಗೆ ಅಧಿಕ ಸ್ನೇಹ ಸ್ಮರಣೆಯಿಂದಾಗಿ ಕೀಟವು ಕಣಜದಂತೆ ರೂಪ ಹೊಂದಿತು. ಸಾಮೀಪ್ಯ ಪಡೆಯಿತು.

**ಈ ದೃಷ್ಟಾಂತದಿಂದ ತಿಳಿಯಬೇಕಾದ್ದು**

ಶಿಶುಪಾಲನಲ್ಲಿ ಎರಡು ಜೀವರು ಇದ್ದರು. ಭಗವದ್ಭಕ್ತ ಜಯನೆಂಬ ವೈಕುಂಠ ಪಾರ್ಶ್ವದ ದ್ವಾರಪಾಲಕನೆಂಬ ಜೀವನನ್ನು (ಕೀಟವನ್ನು) ಶಿಶುಪಾಲನೆಂಬ ದೈತ್ಯನು ತನ್ನ ದೇಹದಲ್ಲಿ ಬಂಧಿಸಿದ್ದ.

ಕೀಟವು (ಜಯನು) ಸದಾ ಹರಿಸ್ಮರಣೆ ಮಾಡಿ, ಸ್ವಾಮೀ, ಈ ಬಂಧನದಿಂದ ಮುಕ್ತನನ್ನಾಗಿ ಮಾಡು ಎಂದು ಸ್ಮರಿಸುತ್ತಿದ್ದ.

ಅಸುರಾವೇಶ ಕಾರಣವಾಗಿ ಹರಿಯನ್ನು ನಿಂದಿಸಿದರೂ ಗಮನಿಸದೇ ಜಯನೆಂಬ ಭಕ್ತನನ್ನು ಸಲಹಿ ದುಷ್ಟ ದೈತ್ಯನಾದ ಶಿಶುಪಾಲನನ್ನು ಸಂಹರಿಸಿದ.

ಶಿಶುಪಾಲನೆಂಬ ದೈತ್ಯನಲ್ಲಿ ಶಾಪನಿಮಿತ್ತ ಜಯನೆಂಬ ಭಕ್ತನು ಬಂಧಿಯಾಗಿದ್ದ. ಬಂಧಿಯಾದ ಜಯನಿಗೆ ಸ್ವಯೋಗ್ಯ ವೈಕುಂಠ ಪ್ರಾಪ್ತವಾಯಿತು. ಅಸುರನಾದ ಶಿಶುಪಾಲನಿಗೆ ತಮಸ್ಸೆ ಫಲವಾಯಿತು.



ಆದ್ದರಿಂದ ಭಗವಂತನನ್ನು ದ್ವೇಷಿಸಿದವರಿಗೆ ಮುಕ್ತಿಯಾಗುವುದೆಂದು ಸರ್ವಥಾ ತಿಳಿಯಬಾರದು.

ಭಕ್ತಿಯಿಂದಲೇ ನಾಮಸ್ಮರಣೆ ಚಿಂತನೆ ಇತ್ಯಾದಿಗಳಿಂದಲೇ ಭಗವತ್ಪ್ರೀತಿಗೆ ಮುಖ್ಯ ಕಾರಣ ಅನ್ಯಥಾ ಭಾವಿಸಬಾರದು ಎಂಬ ಮಹತತ್ತ್ವವನ್ನು ತಿಳಿಸಲಾಗಿದೆ.

ಈ ಪ್ರಮೇಯವನ್ನು ಶ್ರೀಮದಾಚಾರ್ಯರು ಸ್ಪಷ್ಟವಾಗಿ ನಾಲ್ಕಾರು ಶ್ಲೋಕಗಳಿಂದ ಭಾಗವತ ತಾತ್ಪರ್ಯದಲ್ಲಿ ವಿವರಿಸುತ್ತಾರೆ.

---

ಭಗವದ್ಭಕ್ತರು ಶ್ರೀಹರಿಯನ್ನು ಅನನ್ಯ ಮನಸ್ಕರಾಗಿ ಪರಮಾತ್ಮನ ಗುಣಸ್ವರೂಪಗಳನ್ನು ಧ್ಯಾನ ಮಾಡುತ್ತಾ ಮಾಡುತ್ತಾ (ಸ್ಮರಿಸುತ್ತಾ) ಅವನ ಅನುಗ್ರಹದಿಂದ ಸಾರೂಪ್ಯವೆಂಬ ಮೋಕ್ಷವನ್ನು (ಅವನಂತೇ) ಹೊಂದುತ್ತಾರೆ.

ಇಲ್ಲಿ ಅವರಂತೇ ಅಂತ ಹೇಳಿದಾಗ ಸಾದೃಶವೇ ಹೊರತು ಅವನೇ ಆಗುವುದಿಲ್ಲ. ಜೀವಬ್ರಹ್ಮನಾಗುತ್ತಾನೆಂಬುದನ್ನು ನಿರಾಕರಿಸಿದಂತಾಯಿತು.

ವಿಷಯಕ್ಕೆ ಬರೋಣ. ಅಸುರ ದ್ವೇಷ ಮಾಡಿದರೂ ಆವಿಷ್ಠನಾದ ಜಯನು ಮಾತ್ರ ಸದಾ ಕೃಷ್ಣ ಧ್ಯಾನ ಮಾಡಿ ಅಸುರನಿಂದ ಮಾಡಿದ ಪಾಪಗಳನ್ನು ಹರಿಧ್ಯಾನದಿಂದ ಕಳೆದುಕೊಂಡನು.

---

ಇದೇ ರೀತಿ ಶಿಶುಪಾಲ ದ್ವೇಷ ಸಹಿತ ಭಕ್ತಿಯುಕ್ತನಾದಂತೆ ಕಾಮದಿಂದ ಗೋಪಿಕಾಸ್ತ್ರೀಯರು, ಭಯದಿಂದ ಕಂಸ, ಸಂಬಂಧ (ಬಂಧು)ವೆಂದು ವೃಷ್ಣೀಕುಲದವರೆಂದು ಸ್ನೇಹದಿಂದ ರಾಜನ್, ನೀನು ಭಕ್ತಿಯಿಂದ ನಾವು (ಋಷಿಮುನಿಗಳು) ಶ್ರೀಹರಿಯನ್ನು ಹೊಂದುತ್ತೇವೆ.

**ಗೊಪ್ಯಾಃ ಕಾಮಾದ್ ಭಯಾತ್ ಕಂಸೋ ದ್ವೇಷಾತ್ ಚೈದ್ಯಾದಯೋನೃಪಾ ।**
**ಸಂಬಂಧಾದ್ ವೃಷ್ಣಯಃ ಸ್ನೇಹಾದ್ ಯೂಯಂ ಭಕ್ತ್ಯಾವಯಂ ವಿಭೋಃ ॥**

**ಗೋಪಿಕಾಸ್ತ್ರೀಯರಲ್ಲಿ ಭಕ್ತಿ ಸಹಿತ ಕಾಮನೇ ಇದ್ದಿತು**

ಗೋಪಿಕಾ ಸ್ತ್ರೀಯರು ಯಾರು ? ಇವರು ಪೂರ್ವಜನ್ಮದಲ್ಲಿ ಋಷಿಗಳಾಗಿದ್ದರೆಂದು, ಅಪ್ಸರ ಸ್ತ್ರೀಯರಾಗಿದ್ದಾರೆಂದು ಆಗ ಭಗವಂತನ ಅಂಗ ಸಂಗವನ್ನು ಬೇಡಿ ಅರ್ಥಿಸಿದರು. ಅವರೆಲ್ಲಾ ಈಗ ಬೃಂದಾವನದಲ್ಲಿ ಗೋಪಿಯರಾಗಿ ಅವತರಿಸಿದರು. ಅವರ ಪ್ರಾರ್ಥನೆಯಂತೆ ಭಗವಂತ ಅವರೊಂದಿಗೆ ಒಮ್ಮೆ ಕ್ರೀಡಿಸಿದ. (ಭಗವಂತನು ಲಕ್ಷ್ಮೀದೇವಿಗೆ ತಕ್ಕ ಅಪ್ರಾಕೃತ ಶರೀರ ಸಂಗ) ಕಂಡ ಕಂಡ ಹೆಂಗಸರೊಂದಿಗೆ ಕ್ರೀಡಿಸುವವನಲ್ಲ. ಇಲ್ಲಿ ಗೋಪಿಯರ ಕಾಮನೆ

ಪೂರ್ಣಮಾಡಲು ಲಕ್ಷ್ಮೀದೇವಿ ಸಾನ್ನಿಧ್ಯವಿದ್ದಿತೇ ವಿನಃ ಅನ್ಯಥಾ ತಿಳಿಯಬಾರದು. ಪರಮಾತ್ಮ ಎಲ್ಲಾ ಅವತಾರಗಳು ಹೀಗೆ ಅಂತ ತಿಳಿದರೆ, ಬಾಧಕವಿಲ್ಲ. ಅದನ್ನು ಬಿಟ್ಟು ಶ್ರೀಕೃಷ್ಣ ಸ್ತ್ರೀಲೋಲಾ ಜಾರನೆಂದು ಅನ್ಯಥೋಪಾಸನೆ ಮಾಡಿದರೆ ನರಕವೇ ಆಗುವುದು.

**ಸಂದೇಹಮೇಲವಮ್ಮ ಶ್ರೀರಾಮುನಿಪ್ರೀತಿ । ಒಕೇಬಾಣಮು ಒಕೇಭಾವಮುಕು ಶ್ರೀರಾಮುನಿ ಪ್ರೇಮು ॥** ಎಂದು ತೆಲುಗು ಕವಿ ಸುಂದರವಾಗಿ ತಿಳಿಸುತ್ತಾನೆ. ಗೋಪಿಯರು ಭಕ್ತಿ ಸಹಿತ ಕಾಮವಿದ್ದಿತು. ತಮ್ಮ ಕಾಮ ಪೂರ್ಣವಾದ ನಂತರ ಭಕ್ತಿ ಪಕ್ವವಾಯಿತು. ಪರಿಣಾಮ ಮುಕ್ತಿ ಹೊಂದಿದರು.

ಭಯದಿಂದ ಕಂಸನೆಂದಿದೆ.

ಕಂಸನಲ್ಲಿಯೂ ಭೃಗು ಮುನಿಗಳು ಆವಿಷ್ಠರಾಗಿದ್ದರು. ಕಂಸನೆಂಬ ದೈತ್ಯ ಕೃಷ್ಣ ದ್ವೇಷಿ. ಕೃಷ್ಣ ಯಾವಾಗ ಬರುತ್ತಾನೋ, ಸಂಹರಿಸುತ್ತಾನೋ ಎಂಬ ಭಯವಿದ್ದಿತು. ಹೀಗಾಗಿ ಹಗಲೂ ರಾತ್ರಿ ಕೃಷ್ಣ ಸ್ಮರಣೆ ಮಾಡುತ್ತಿದ್ದ. ಆದರೆ ಕೃಷ್ಣ ಧ್ಯಾನ ಮಾಡುತ್ತಿದ್ದುದು ಅಡಗಿದ್ದ ಭೃಗು ಋಷಿಗಳೆಂದು ತಿಳಿಯಬೇಕು.

ಇನ್ನು ಚೈದ್ಯಾದಿಗಳೆಂದರೆ ಆಗಲೇ ತಿಳಿಸಿದಂತೆ ಅವನಲ್ಲಿ ಅಡಗಿದ್ದ ಜಯನೆಂಬ ಹರಿಭಕ್ತ ಚೈದ್ಯನಲ್ಲಿದ್ದಾಗ ಆ ಪಾಪಿ ಕೃಷ್ಣನನ್ನು ಬೈಯ್ಯುತ್ತಿರುವುದನ್ನು ನಿರ್ವಾಹವಿಲ್ಲದೆ, ಬಂಧಿತನಾದ ದೇವತೆ ಕೇಳಬೇಕಾಯಿತು. ಶಿಶುಪಾಲ ವಧಾ ನಂತರ ಬಿಡುಗಡೆ ಹೊಂದಿ ಮಾಡದೇ ಇರುವ ಪಾಪಗಳನ್ನು ಶ್ರೀಕೃಷ್ಣ ದರ್ಶನ ಚಕ್ರದಿಂದ ಪವಿತ್ರನಾಗಿ ಪುಣ್ಯಲೋಕ ಸೇರಿದನು.

ಧರ್ಮರಾಜ – ನೀವಾದರೂ ದೇವತೆಗಳು. ಶ್ರೀಕೃಷ್ಣನ ಏಕಾಂತ ಭಕ್ತರು. ಹೇಳುವುದೇನು ? (ಸ್ನೇಹವೇ ಭಕ್ತಿಸ್ವರೂಪವಾಗಿತ್ತು) ನಾವು ಮುನಿಗಳಾದವರು. ಭಗವಂತನನ್ನು ಭಕ್ತಿಯಿಂದ ಭಜಿಸಿ ಆತನ ಅನುಗ್ರಹಕ್ಕೆ ಪಾತ್ರರಾಗುತ್ತೇವೆ.

ಆದ್ದರಿಂದ ದ್ವೇಷ, ಕಾಮ, ಸ್ನೇಹ, ಭಯ ಎಲ್ಲವೂ ಭಕ್ತಿಸಹಿತವಾಗಿದ್ದ ಕಾರಣ ಸದ್ಗತಿ ಆಗುವುದು.

ದ್ವೇಷ ಭಯಾದಿಗಳಿಂದ ಭಗವಂತನ ಪ್ರೀತಿ ಕಾರಣವಾಗುವುದಿಲ್ಲ. ಭಕ್ತಿಯೇ ಪ್ರಧಾನ. ಭಕ್ತಿರಹಿತ ಪೂಜೆ, ಧ್ಯಾನ, ಅಧ್ಯಯನ ಕೇವಲ ಡಾಂಬಿಕ. ಭಕ್ತಿ ಎಂದಾಕ್ಷಣ ಮೂಢ ಭಕ್ತಿಯಲ್ಲ.

ಭಕ್ತಿಗೆ ಕೆಲ ರಕ್ಷಣಗಳನ್ನು ಆಚಾರ್ಯ ಶ್ರೀಮಧ್ವರು ವಿವರಿಸುತ್ತಾರೆ. **''ಮಹಾತ್ಮ್ಯ ಜ್ಞಾನ ಪೂರ್ವಸ್ತು ಸುದೃಢಸ್ನೇಹೋ ಭಕ್ತಿರಿತಿಪ್ರೋಕ್ತಃ''**



ಭಕ್ತಿಯು ಪರಮಾತ್ಮನ ವಿಷಯ. ಅವನ ಮಹಾತ್ಮ್ಯ, ಜ್ಞಾನ ತಿಳಿದು ತನ್ನ ತನ್ನ ಎಲ್ಲವುಗಳಿಂದ ಸಾವಿರಾರು ಪಟ್ಟು ಪರಮಾತ್ಮನಲ್ಲಿ ಪ್ರೀತಿ ಎಂಬ ಪ್ರವಾಹ ನಿರಂತ ಹರಿದು ಹೋಗುತ್ತಿರಬೇಕು. ಅಂಥಾದನ್ನು ಭಕ್ತಿ ಎನ್ನಲಾಗಿದೆ.

ಶ್ರೀಮದಾಚಾರ್ಯರು ಇದನ್ನೇ ಭಾ.ತಾ.ದಲ್ಲಿ ತಿಳಿಸುತ್ತಾರೆ.

**ಗೋಪ್ಯಾಃ ಕಾಮಾಯುತಾಚಕ್ತಾಃ**
**ಕಂಸಾವಿಷ್ಟಭೃಗುಃ ಸ್ಮಲತಃ ।**
**ಜ್ಞೆಯೋ ಭಯಯುತೋ ಭಕ್ತಃ ಚೈದ್ಯಾದಿಸ್ಥಾಃಜಯಾದಯಃ ।**
**ವಿದ್ವೇಷ ಸಂಯುತಾ ಭಕ್ತಾಃ ವೃಷ್ಣಯೋ ಬಂಧುತಾಯುತಾಃ ॥**
**ಬಹುಮಾನ ಸ್ನೇಹ ಸಾಮ್ಯಾದ್ ದೇವಾ ಭಕ್ತಾಃ ಪ್ರಕೀರ್ತಿತಾಃ ।**
**ಸ್ನೇಹೋಪಸರ್ಜನಾದೇವ ಬಹುಮಾನಾನ್ ಮುನೀಶ್ವರಾಃ ।**
**ಬಹುಮಾನೋಽಪಿ ದೇವಾನಾಂ ಋಷಿಭ್ಯೋಽಭ್ಯಧಿಕೋಯತಃ ।**
**ಬ್ರಹ್ಮ ವೀಂದ್ರೇಂದ್ರಕಾಮಾದೇಃ ಇತರೇಷಾಂ ಯಥಾಪದಂ ॥**

**ಗೋಪ್ಯಾಃ ಕಾಮಾತ್** ಎಂಬಲ್ಲಿ ಪಂಚಮ್ಯರ್ಥವಿದೆ.

ಲ್ಯಬ್‌ಲೋಪೇಪಂಚಮಿ ಎಂಬ ಪ್ರಮಾಣಾನುಸಾರ ಕಾಮನಿಮಿತ್ತ ಎಂದಾಗುವುದು. ಕಾಮವೆಂಬುದನ್ನು ಗಣನೆಗೆ ತೆಗೆದುಕೊಳ್ಳಬೇಕು. ಆದರೂ **''ಭಕ್ತ್ಯಾಃ''** ಎಂದು ತೃತೀಯಾ ವಿಭಕ್ತಿ ಪ್ರಯೋಗವಿದೆ. ಅಂದರೆ ಗೋಪಿಯರ ಕಾಮ ಸಹಿತ ಭಕ್ತಿ (ಭಕ್ತಿಯಿಂದ ಕೂಡಿದ ಪ್ರೇಮ, ದ್ವೇಷ ಇತ್ಯಾದಿಯಾಗಿ ತಿಳಿಯಬೇಕು).

ಶಿಶುಪಾಲ ಈ ಜನ್ಮದಲ್ಲಿ ಯಾವ ಸಾಧನೆ ಮಾಡಿದ್ದಿಲ್ಲವೆಂಬ ಆ ಶಂಕಾ ನಿವಾರಿಸಿದಂತಾಯಿತು. ವೇನನಲ್ಲಿ ಇಂತಹ ಒಂದು ಮಾತ್ರವೂ ಇದ್ದಿಲ್ಲ. ಬರೀ ದ್ವೇಷಿಸುವುದೇ ಇದ್ದಿತು. ಆದ್ದರಿಂದ ತಮಸ್ಸೇ ಗತಿಯಾಯಿತು.

ದ್ವೇಷದಿಂದ ಭಗವತ್ಪ್ರಸಾದ ಎಂದಿಗೂ ಸಾಧ್ಯವಿಲ್ಲ. ಭಕ್ತಿಯೂ ಮುಖ್ಯ ಪ್ರಧಾನವೆನ್ನುವುದನ್ನು ಸವಿಸ್ತಾರವಾಗಿ ತಿಳಿಸಿ, ಶಿಶುಪಾಲನಲ್ಲಿ ಜಯ ದಂತವಕ್ರನಲ್ಲಿ ವಿಜಯರೆಂಬುವರು ಹೇಗೆ ಆವಿಷ್ಠರಾದರು ? ಕಾರಣವೇನು ? ಭಗವಂತನ ವೈಕುಂಠ ಬಾಗಿಲನ್ನು ಕಾಯುವರು ಅಸುರತ್ವವನ್ನು ಏಕೆ ಹೊಂದಿದರು ಎಂಬುದನ್ನು ಮುಂದೆ ನೋಡೋಣ.

**ವಿಶೇಷಾಂಶ :** ಶಲ್ಯಾದಿಗಳಲ್ಲಿ ಸಜ್ಜೀವಿ, ದುರ್ಜೀವಗಳೆಂಬೆರೆಡು (ಜೀವದ್ವಯ) ಸೇರಿದ್ದರು. ದುರ್ಜೀವಗಳ ಪ್ರಭಾವ ಹೆಚ್ಚಾಗಿದ್ದರಿಂದ ಅವರು ಬಂಧಿಯಾಗಿರುವ ಸಜ್ಜೀವಿ ಅಸ್ವತಂತ್ರನಾಗಿ ಕುಣಿಸಿದಂತೆ ಕುಣಿಯುವುದು. ಶ್ರೀಹರಿಯನ್ನು ದ್ವೇಷಿಸಿದ ವಾಕ್ಯಗಳನ್ನು

ಕೇಳಿದರೂ ಏನೂ ಮಾಡುವಂತ್ತಿದ್ದಿಲ್ಲ. ಆದರೆ ಸ್ವರೂಪದಿಂದ ಸುಜೀವಿಗಳು ಹೊರಗಿನವರಿಗೆ ಬ್ರಹ್ಮದೇಷಿಗಳೆಂಬಂತೆ ಗೋಚರವಾಗುತ್ತಿತ್ತು. ಆದರೆ ವೇನರೆಂಬ ಬಕಾಸುರರು ಸ್ವರೂಪದಿಂದಲೂ ಬಹಿರಂಗವಾಗಿಯೂ ಬ್ರಹ್ಮದ್ವೇಷಿಗಳಾಗಿದ್ದ ಕಾರಣ ನಿತ್ಯನರಕಕ್ಕೆ ಕಾರಣರಾದರು.

**ಅಂತರ್ಭಾಕ್ತಾಃ ಬಹಿಃ ಕ್ರೋದ್ದಾಃ ಹಿರಣ್ಯಾದ್ಯಾಃ ಹರಿಂ ಪ್ರತಿ ।**
**ಸರ್ವಕೃದ್ಧಾಃ ಶಂಬರಾದ್ಯಾಃ ಅಂತಃ ಕ್ರೋಧವಶಾಸ್ತಥಾ ॥**
**ಅಂತರ್ಭಕ್ತಾಃ ಬಹಿಃ ವೈರಾಃ ಹಿರಣ್ಯಾದ್ಯಾಃ ಹರೇಯುತಾಃ ॥**
**ತತ್ರಭಕ್ತ್ಯಾ ಅಭವನ್ಪೂತಾಃ ದ್ವೇಷಾ ಆವೇಶಕಾನ್ ಗತಃ ॥**
**ಬಲ್ಯಾದೀಂಶ್ಚ ಹರೇಃ ದ್ವೇಷಂ ಕೃತ್ವಾತತಃ ತಮೋಗತಾಃ ॥**

ಭಾಗ.ತಾ.

**ಆಯಿತು. ಶಿಶುಪಾಲನು ಯಾರು ತಿಳಿಯೋಣ. :**

ನಾರದರು ಧರ್ಮರಾಜನಿಗೆ ಹೇಳುತ್ತಾರೆ – ಶಿಶುಪಾಲ ನಿಮ್ಮ ಚಿಕ್ಕಮ್ಮನ ಮಕ್ಕಳು. ಅವನ ತಮ್ಮ ದಂತವಕ್ತ್ರ. ಕುಂತಿಯ ತಂಗಿ ಶ್ರುತಶ್ರಾವೆ. ದಯಘೋಷನೆಂಬುವವನನ್ನು ಲಗ್ನವಾದಳು. ಅಂದರೆ ಕೃಷ್ಣನ ಸೋದರತ್ತೆ. (ವಸುದೇವನ ತಂಗಿ) ದಯಘೋಷ ಚಂದ್ರವಂಶದ ರಾಜ. ಕೃಷ್ಣನ ಕುಲದವ. ಚೇದಿರಾಜ. ಈತನು ಶ್ರುತಶ್ರಾವೆಯನ್ನು ಲಗ್ನವಾದ. ಇವರಿಗೆ ಹುಟ್ಟಿದವರೇ ಶಿಶುಪಾಲ, ದಂತವಕ್ತ್ರ. ಶಿಶುಪಾಲ ಹುಟ್ಟಿನಿಂದ ವಿಕಾರ ಸ್ವರೂಪನಾಗಿದ್ದ. ನಾಲ್ಕು ತೋಳುಗಳು, ಮೂರು ಕಣ್ಣು ವಿಚಿತ್ರ ಶಿಶುವಿನಿಂದ ತಾಯಿಗೆ ಬಹಳ ಚಿಂತೆ, ಹೆದರಿಕೆ ಆಯಿತು. (Freak child). ಆಗ ಆಕಾಶವಾಣಿಯಾಗಿ **'ಯಾವಾಗ ಒಬ್ಬ ಮಹಾಪುರುಷನ ಸ್ಪರ್ಶವಾಗಿ ವಿಕಾರ ರೂಪ ಹೋಗಿ ಸಹಜ ಶಿಶುವಿನಂತಾಗುವುದೋ ಅವನೇ ಇವನ ಮೃತ್ಯು'.**

ಇದನ್ನು ಕೇಳಿ ತಾಯಿ ವಿಚಿತ್ರ ರೂಪ ಮಗುವನ್ನು ನೋಡಲು ಬಂದವರ ಕೈಲಿ ಕೊಡುತ್ತಿದ್ದಳು. ಆದರೇನೂ ಆಗಲಿಲ್ಲ. ಈ ವಿಷಯ ತಿಳಿದ ಶ್ರೀಕೃಷ್ಣ ಮಗುವನ್ನು ನೋಡಲು ಬಂದಾಗ ಎತ್ತಿಕೊಂಡಾಕ್ಷಣ ಹೆಚ್ಚಿನ ತೋಳು, ಕಣ್ಣು ಕಳಚಿಹೋಯಿತು. ಶ್ರುತಶ್ರಾವೆಗೆ ಹೆದರಿಕೆಯೂ ಸಂತೋಷವೂ ಆಯಿತು.

ಶ್ರೀಕೃಷ್ಣನೇ ಈ ಮಗನ ಮೃತ್ಯು ಎಂದು ತಿಳಿದು ಹೆದರಿಕೆಯಿಂದ ಶ್ರೀಕೃಷ್ಣನನ್ನು ನನ್ನ ಮಗನ ತಪ್ಪುಗಳನ್ನು ಗಣನೆಗೆ ತೆಗೆದುಕೊಳ್ಳಬೇಡ ಎಂದು ಅಂಗಲಾಚಿ ಬೇಡಿದಳು. ಕೃಷ್ಣ ಹೇಳಿದ. ಆಯಿತು. ಆದರೆ ಅವನು ದೊಡ್ಡವನಾದ ಮೇಲೆ ಅಪರಾಧಗಳನ್ನು ನೂರರವರೆಗೆ ಕ್ಷಮಿಸುತ್ತೇನೆ ಎಂದು ಹೇಳಿದ.

ರಾಜಸೂಯ ಯಾಗ ಸಂದರ್ಭ ಶಿಶುಪಾಲ ಕೃಷ್ಣನಿಗೆ ಅಗ್ರಪೂಜೆ ಕೊಟ್ಟಿದ್ದನ್ನು



ಭೀಷ್ಮರನ್ನು ನಿಂಧಿಸಿದ್ದನ್ನು ಕಂಡು ಭೀಮಸೇನ ಶಿಶುಪಾಲನನ್ನು ಸಂಹರಿಸಲು ಹೋದಾಗ ಧರ್ಮರಾಜ ತಡೆದು ಇವನು ಕೃಷ್ಣನ ಬೇಟೆ ಎಂದ. ಹೀಗೆ ನಡೆಯಿತು.

ಶಿಶುಪಾಲ ದಂತವಕ್ತ್ರರು ಅಮುಕ್ತ ವೈಕುಂಠದ ದ್ವಾರಪಾಲಕರಾಗಿದ್ದರು. ಅವರೇ ಜಯ ವಿಜಯರು.

ಹಾಗಾದರೆ ಜಯವಿಜಯರು ನಿಯತ ಭಕ್ತರು. ಇವರಿಗೆ ಪರರ ಶಾಪದಿಂದ ಭೂಲೋಕದಲ್ಲಿ ಜನ್ಮವೇ ಹೇಗಾಯಿತು ? ನಂಬಬೇಕಾ ! ಇವರೂ ಸಹ ಹರಿಯಂತೆ ಪ್ರಾಕೃತ ಸಂಬಂಧವಿಲ್ಲದವರು. ಇನ್ನು ವೈಕುಂಠಕ್ಕೆ ಹೋದವರಿಗೆ ಪುನರ್ಜನ್ಮವೇ ಇಲ್ಲದಿದ್ದಾಗ ಇವರು ಮರಳಿ ಬರಲೂ ಸಾಧ್ಯವಿದೆಯೇ ? ಅಂದ ಮೇಲೆ ಇಂಥವರಿಗೆ ಭುವಿಯಲ್ಲಿ ಹುಟ್ಟುವುದಾದರೂ ಹೇಗೆ ? ಅಂದಾಗ ಬಲವತ್ತಾದ ಶಾಪನಿಮಿತ್ತವಿರಬಹುದೇ? ಅಂತಹ ಶಾಪ ಯಾರು ಕೊಟ್ಟರು ? ಏಕೆ ಕೊಟ್ಟರು ? ತಿಳಿಸಿ ಎಂದು ಕೇಳಿದ.

**ಶಾಪ ಪಡೆದ ಪ್ರಕರಣ – ನಾರದರ ಉತ್ತರ :**

ಧರ್ಮನಂದನ ಕೇಳು.

ಈ ಪ್ರಸಂಗ ತಿಳಿಸುವ ಪೂರ್ವ ಒಂದು ರಹಸ್ಯ ತತ್ತ್ವವಿದೆ. ವೈಕುಂಠವು **ಮುಕ್ತಸ್ಥಾನ, ಅಮುಕ್ತಸ್ಥಾನ** ಎಂದು ಎರಡು ವಿಧ ಹೊಂದಿರುತ್ತದೆ.

(೧) **ಮುಕ್ತಸ್ಥಾನ** ಹೊಂದಿದವರಿಗೆ ಪ್ರಾಕೃತ ಸಂಬಂಧವಿರುವುದಿಲ್ಲವಾದ್ದರಿಂದ ಚಿನ್ಮಯ ರೂಪ, ಆನಂದ ರೂಪವಾಗಿರುತ್ತಾರೆ. ಅಲ್ಲಿಗೆ ಹೋದವರು ಮತ್ತೆ ಸಂಸಾರಾತ್ಮಕ ಭೂಮಿಯಲ್ಲಿ ಜನಿಸುವುದಿಲ್ಲ. **"ನ ಚ ಪುನರಾವರ್ತತೇ ನ ಚ ಪುನರಾವರ್ತತೇ"** ಎಂದು ಸೂತ್ರ ತಿಳಿಸುತ್ತದೆ. ಅಂಥವರಿಗೆ ರಾಗದ್ವೇಷ ಅಸೂಯೆ ಎಂಬುದೇ ಇರುವುದಿಲ್ಲ. ಯಾರ ಶಾಪವೂ ತಗಲುವುದಿಲ್ಲ. ಅವರನ್ನು ನಿತ್ಯಮುಕ್ತರೆಂದು ಕರೆಯಲಾಗಿದೆ. ಅಲ್ಲಿ ಮುಕ್ತರು ತಮಗಿಂತ ಕಡಿಮೆ ಯೋಗ್ಯತೆಯುಳ್ಳವರನ್ನು ನಿಯಮಿಸುತ್ತಾರೆ. ಹೀಗೆ ಅಲ್ಲಿಯೂ ತಾರತಮ್ಯ. ತಾರತಮ್ಯರೂಪ ಸುಖವು ಇರುವುದು. ರಮಾದೇವಿ ಅತ್ಯುತ್ತಮಳು. ಅವಳಿಗಿಂತ ಅನಂತಾನಂತ ಗುಣಾನಂದ ರೂಪನೇ ಜಗತ್‌ಪ್ರಭುವು ಶ್ರೀನಾರಾಯಣನು. ಸರ್ವನಿಯಾಮಕನು ಸರ್ವೋತ್ತಮನು.

(೨) **ಅಮುಕ್ತಸ್ಥಾನ** ಪಡೆದವರಿಗೆ ಜಯವಿಜಯ ಗರುಡ ಶೇಷಾದಿಗಳಿಗೆ ಶಾಪಗಳು, ವರಗಳು ಪ್ರಭಾವಿತವಾಗುವುದು. ಹೀಗಾಗಿ ಜಯವಿಜಯರು ಅಮುಕ್ತ ವೈಕುಂಠ ದ್ವಾರಪಾಲಕರಾಗಿದ್ದರಿಂದ ಶಾಪ ಪಡೆಯುವಂತಾಯಿತು. ಏಕೆಂದರೆ ಇಲ್ಲಿರುವವರಿಗೆ ಸ್ವಲ್ಪ ಪ್ರಾಕೃತ ಸ್ವಭಾವ ಬಾಧಿಸುವುದರಿಂದ ಅಸೂಯೆ, ದ್ವೇಷ, ಅಹಂ ಎಂಬ ಗುಣಗಳಿರುವುದು. ಆದರೂ ಅವು ತಾತ್ಕಾಲಿಕ ಮಾತ್ರ.

ಭಗವಂತ ಮುಂದೆ ತನ್ನ ಮಹಿಮಾಲೋಕದಲ್ಲಿ ಪ್ರಕಟಿಸಲು ಅವರಲ್ಲಿ ನಿಂತು ರಾಗದ್ವೇಷ ಶಾಪ ಪ್ರದಾನಾದಿಗಳಿಂದ ಒಂದು ನಾಟಕವಾಡುತ್ತಾನೆ. ಅಹಂಕಾರ ಬರುವಂತೆ ಮಾಡುತ್ತಾನೆ. ಶಾಪ ಕೊಡುವಂತೆ ಪ್ರೇರೇಪಿಸುತ್ತಾನೆ. ಹೀಗೆ ಜಗನ್ನಾಟಕ ಸೂತ್ರಧಾರಿ ವಿಷಯ. ಅತ್ಯದ್ಭುತ ಅಗಮ್ಯ.

ಬ್ರಹ್ಮಮಾನಸ ಪುತ್ರರಾದ ಸನಕಾದಿ ಮುನಿಗಳು ಭಗವಂತನ ದರ್ಶನ ಪಡೆಯಬೇಕೆಂದು ಇಲ್ಲಿ ಬರುತ್ತಾರೆ. ಸನಕಾದಿ ಋಷಿಗಳು ನಾಲ್ವರು. ಸನಕ, ಸನಂದನ, ಸನಾತನ, ಸನತ್ಕುಮಾರರೆಂದು. ಗಾತ್ರದಲ್ಲಿ ಚಿಕ್ಕಮಕ್ಕಳಂತೆ ವೈರಾಗ್ಯ ದಿಗಂಬರರು. ಊರ್ಧ್ವರೇತಸ್ಕರು. ಬ್ರಹ್ಮದೇವ ಸೃಷ್ಟಿಕಾರ್ಯದಲ್ಲಿ ತಮ್ಮನ್ನು ತೊಡಗಿಸಲು ಸಮ್ಮತಿಸಲಿಲ್ಲ.

**ಯಥೋತ್ಪನ್ನಸ್ತಥೈವಾಹಂ ಕುಮಾರ ಇತಿವಿದ್ಧಿಮಾಮ್ ।**
**ತಸ್ಮಾತ್ಸನತ್ಕುಮಾರೇತಿ ನಾಮ್ನೈತನ್ಮೆ ಪ್ರತಿಷ್ಠಿತಂ ॥**

ಸನಕಾದಿ ಋಷಿಗಳು ಬ್ರಹ್ಮಮಾನಸ ಪುತ್ರರು. ಇವರನ್ನು ಸೃಷ್ಟಿಸಿ ತಾನು ಮಾಡಲಿರುವ ಸೃಷ್ಟಿಕಾರ್ಯದಲ್ಲಿ ತೊಡಗಿರೆಂದು ಹೇಳಿದಾಗ "ನಾವು ಸಂಸಾರ ಮಾಡಲು ಇಷ್ಟಪಡುವುದಿಲ್ಲ. ನಾವು ಮೋಕ್ಷಾಕಾಂಕ್ಷಿಗಳಾಗಿರಲು ಇಚ್ಛಿಸುತ್ತೇವೆ" ಅಂತ ಹೇಳಿದಾಗ ಬ್ರಹ್ಮದೇವರಿಗೆ ಕೋಪ ಬಂದಿತು. ಸಿಟ್ಟಿನಿಂದ ಅವರ ಕಣ್ಣುಗಳಿಂದ ಹೊರಟಜ್ವಾಲೆಯೇ ಶುದ್ರಾವತಾರವಾಯಿತು.

ಒಂದು ಸಲ ಸನಕಾದಿ ಮುನಿಕುಮಾರರು ಭಗವಂತನ ದರ್ಶನ ಪಡೆಯಲಪೇಕ್ಷಿಸಿಸಿ ಶ್ರೀಶೇಚ್ಛೆಯಂತೆ ವೈಕುಂಠ ದ್ವಾರಕ್ಕೆ ಬಂದರು. ವೈಕುಂಠ ದ್ವಾರಪಾಲಕರಾದ ಜಯವಿಜಯರು ಈ ಸನತ್ಕುಮಾರರು ದಿಗಂಬರರಾಗಿ ಬಂದಿರುವುದನ್ನು ಕಂಡು ವೈಕುಂಠಪುರದೊಳಗೆ ಹೋಗದಂತೆ ಅಡ್ಡಿಮಾಡಿದರು. ತಮ್ಮನ್ನು ಪ್ರವೇಶ ಮಾಡಲು ತಡೆದುದನ್ನು ಕಂಡು ತುಸು ಕೋಪವು ಬಂದಿತು. "ಭಗವಂತನ ನಿವಾಸ ಸ್ಥಾನ ವೈಕುಂಠ. ಇಲ್ಲಿ ರಜೌಗುಣ, ತಮೋಗುಣಗಳೆರಡಿರುವವರಿಗೆ ಸಲ್ಲದು. ಅಂತಹ ರಜಸ್ತಮೋ ಗುಣಗಳನ್ನು ಹೊಂದಿರುವಿರಿ. ನಿಮ್ಮಂಥವರು ಇಲ್ಲಿರಲು ಯೋಗ್ಯತೆ ಇಲ್ಲ. ಅಜ್ಞಾನದಿಂದ ಯುಕ್ತಾऽಯುಕ್ತ ತಿಳಿಯದ ಮೂಢರು, ಪಾಪಿಗಳು. ಆದ್ದರಿಂದ ನೀವು ಕೂಡಲೇ ಅಸುರ ಯೋನಿಯಲ್ಲಿ ಹುಟ್ಟಿರಿ" ಎಂದು ಶಪಿಸಿದರು.

ಪರಬ್ರಹ್ಮನ ಅಪರೋಕ್ಷ ಹೊಂದಿದ ಮುನಿಕುಮಾರರಿಂದ ಶಾಪ ಪಡೆದರು. ಮುನಿಗಳಾದ ಬ್ರಹ್ಮಜ್ಞಾನಿಗಳಿಗೆ ಕೋಪವೆನ್ನುವುದು ಕ್ಷಣಮಾತ್ರ. ಆಮೇಲೆ ಅವರಲ್ಲಿ ದಯತೋರಿಸಿ ವಿಶಾಪವನ್ನೂ ಕೊಟ್ಟರು. ನೀವು ರಾಕ್ಷಸರಾಗಿ ಮೂರು ಜನ್ಮಗಳಲ್ಲಿ



ಮಾತ್ರ ಅನುಭವಿಸಿರಿ. ನಂತರ ನಿಮ್ಮ ಸ್ವಸ್ಥಾನಕ್ಕೆ ಬರುವಿರೀ ಎಂದು. ಇಲ್ಲಿ ಐದು ಮುಖ್ಯ ಪ್ರಮೇಯಗಳನ್ನು ಕಾಣಬೇಕು.

೧) ಸನಕಾದಿ ಮುನಿಕುಮಾರರು ಅಪರೋಕ್ಷ ಜ್ಞಾನಿಗಳು. ಕಾಮಕ್ರೋದಾದಿ ರಾಜಸ ಗುಣರಹಿತರು. ಅಂಥವರಿಗೆ ವೈಕುಂಠ ದ್ವಾರಪಾಲಕರು ತಡೆದದ್ದರಿಂದ ಸಿಟ್ಟು ಬಂದಿತು ಎಂದಿದೆ. ಮಹಾಜ್ಞಾನಿಗಳಿಗೆ ರಾಜಸ ಗುಣಯುಕ್ತವಾದ ಸಿಟ್ಟು ಬರಬೇಕೇ ? ತಾತ್ಕಾಲಿಕವಾಗಿ ಎಂದರೂ ಸಿಟ್ಟು ಸತ್ವಗುಣವಲ್ಲ. ಸಿಟ್ಟು ಸಿಟ್ಟೆ.

೨) ಸನಕಾದಿ ಕುಮಾರರು ಬ್ರಹ್ಮಾಪರೋಕ್ಷ ಪಡೆದವರು. ಶ್ರೀಹರಿಯನ್ನು ಸರ್ವತ್ರ ವ್ಯಾಪ್ತ ಸರ್ವ ಹೃದಯಗುಹಾವಾಸಿ. ಆ ಭಗವಂತನನ್ನು ತಮ್ಮ ಹೃದಯ ಮಂದಿರದಲ್ಲೇ ಸದಾ ಕಾಣುತ್ತಿದ್ದವರು. ಅವರು ಭಕ್ತಿಯಿಂದ ಕೃಷ್ಣಾ ಎಂದು ಕೂಗಿದಾಗ ಅವರಿದ್ದಲ್ಲೇ ಪ್ರತ್ಯಕ್ಷನಾಗುತ್ತಿದ್ದ. ಹಾಗಿದ್ದ ಮೇಲೆ ವೈಕುಂಠದಲ್ಲಿರುವವನೆಂದು ಕಾಣಲು ಪ್ರತ್ಯೇಕ ಏಕೆ ಬರಬೇಕಿತ್ತು ? "ಕಂಡ ಕಂಡಲ್ಲೆಲ್ಲಾ ಹರಿಯ ಕಾಂಬರೋ ರಂಗ ನಿನ್ನ ಕೊಂಡಾಡುವ ಮಂಗಳಾತ್ಮರ ಸಂಗ ಸುಖವಿತ್ತು ಕಾಯೋ ಕರುಣಾಸಾಗರ" ಎಂಬಂತೆ.

೩) ಜಯವಿಜಯರು ರಾಜಸ, ತಾಮಸ ಗುಣಗಳ ಪ್ರಭಾವದಿಂದ ಮುನಿಗಳನ್ನು ಪಡೆದರೆಂದಿದೆ. ಈ ಕುಮಾರರು ಮಹಾಜ್ಞಾನಿಗಳು. ಪರಮಾತ್ಮನ ಅಂತರಂಗ ಭಕ್ತರೆಂಬುದು ಅವರಿಗೆ ಗೊತ್ತಿರಲಿಲ್ಲವೇ ? ಗೊತ್ತಿದ್ದರೂ ಹರಿಯ ವಿಚಿತ್ರ ಸಂಕಲ್ಪಾನುಸಾರ ರಾಜಸಾದಿ ಗುಣಗಳಿಗೆ ಬಲಿಯಾದರು. ಸನಕಾದಿ ಋಷಿಗಳು ಹರಿದರ್ಶನ ಪಡೆಯಲು ಎಷ್ಟೋ ಸಲ ಬಂದಿದ್ದರು. ಅವರಿಗೆ ವೈಕುಂಠದಲ್ಲಿ ಮುಕ್ತ ಪ್ರವೇಶವಿರುವುದು.

೪) ಜಯವಿಜಯರಿಗೆ ಶಾಪಕೊಟ್ಟು ಮೂರು ಜನ್ಮ ಭೂಲೋಕದಲ್ಲಿ ಅಸುರರಾಗಿ ಹುಟ್ಟಿರಿ ಎಂದರು. ಇದರಿಂದ ನಿಜವಾದ ಅಸುರರಿಗೆ ಆನಂದವೇ ಆಯಿತು. ಒಳ್ಳೆಯ ಅವಕಾಶ. ನಾರಾಯಣನನ್ನು ನಿಂದಿಸಿ ನಿರ್ಗುಣ ಇತ್ಯಾದಿಗಳನ್ನು ಬಹಿರಂಗಪಡಿಸಲು ಯೋಗ್ಯ ಅವಕಾಶ. ದೇವತೆಗಳನ್ನು ತಮ್ಮ ವಶದಲ್ಲಿ ಇಟ್ಟುಕೊಂಡು ತಾವು ನುಡಿದಂತೆ ತಮ್ಮ ಮತವು ಸಮ್ಮತವಾಗುವುದು. ನಾವು ಅಸುರರಾಗಿ ಜನಿಸಿದಾಗ ಮುನಿಶಾಪ ವಶಾತ್ ದೇವತೆಗಳನ್ನು ಆವಿಷ್ಕರನ್ನಾಗಿ ಮಾಡಿಕೊಳ್ಳಲು ಸದವಕಾಶವೆಂದು ಭಾವಿಸಿದರು.

೫) ಮೂರು ಜನ್ಮ ಅಸುರ ಯೋನಿಯಲ್ಲಿ ಹುಟ್ಟಿರಿ ಅಂತ ಮುನಿಕುಮಾರರು ಶಾಪ ಕೊಡಬೇಕಾದರೆ ಅವರಲ್ಲಿ ಶ್ರೀಹರಿಯು ಈ ಪ್ರಕಾರ ನುಡಿಸಿದ. ಇದು ಶ್ರೀಹರಿಯ ಸಂಕಲ್ಪವೇ. ವಿಶಾಪವನ್ನು ಕೊಡಿಸಿದ. ಶಾಪ ಕೊಟ್ಟಾಯಿತು. ಶ್ರೀಹರಿ ಭಕ್ತರನ್ನು ಎಂದೆಂದಿಗೂ ಕೈಬಿಡುವುದಿಲ್ಲ.

**ನಮೇಭಕ್ತಪ್ರಣಶ್ಯತಿ**

ಸನಕಾದಿ ಮುನಿಗಳು ಭಕ್ತರೇ, ಭೃತ್ಯರೇ. ಅವರ ಮಾತು ಸತ್ಯವನ್ನಾಗಿ ಮಾಡಬೇಕು. (ನಿಜ ಭೃತ್ಯ ಭಾಷಿತಂ ಸತ್ಯಂ) ಆದರೆ ಪರಮಾತ್ಮ ಶಾಪದ ಕಾಲಕ್ಕೆ ಸಮಯದ ಎಲ್ಲೆ ಕೊಟ್ಟು ಕೇಳಿದ. "ನೀವು ಮೂರು ಜನ್ಮ ಅಸುರರಾಗಿ ಹುಟ್ಟಿದಾಗ ನನ್ನನ್ನು ಅತಿ ದೀರ್ಘವಾಗಿ ನಿಂದಿಸಿ ಅಂತ್ಯಗೊಳ್ಳುತ್ತೀರಾ ? ಅಥವಾ ಅಲ್ಪಕಾಲ ಅಸುರಾವಿಷ್ಠರಾಗಿ ಭಜಿಸುತ್ತಾ ನನ್ನಿಂದಲೇ ಸಂಹರಿಸಲ್ಪಡುತ್ತೀರೋ ಕೇಳಿ" ಎಂದಾಗ ಜಯವಿಜಯರು "ಸ್ವಾಮೀ, ನಮ್ಮನ್ನು (ನಮ್ಮಲ್ಲಿದ್ದ ದೈತ್ಯರನ್ನು) ಬೇಗನೇ ಸಂಹರಿಸಿ ಮುಕ್ತಗೊಳಿಸು" ಎಂದು ಪ್ರಾರ್ಥಿಸಿದರು. ಶ್ರೀಹರಿ ಅವರ ಪ್ರಾರ್ಥನೆಯನ್ನು ಮನ್ನಿಸಿ ಅವರ ಮಾತನ್ನು ಸತ್ಯ ಮಾಡಲು "ನಿಜ ಭೃತ್ಯ ಭಾಷಿತಂ" ಎಂಬ ತತ್ತ್ವವನ್ನು ನಾವು ಕಾಣಬೇಕು. ಮೇಲೆ ಕೆಲ ಅಂಶಗಳನ್ನು ವಿವರಿಸುತ್ತಾ ಎರಡನೇ ವಿಕಲ್ಪಕ್ಕೆ ಹೀಗೆ ಉತ್ತರಿಸಬಹುದು. ಯದ್ಯಪಿ ಸನಕಾದಿ ಮುನಿವರ್ಯರು ಬ್ರಹ್ಮಜ್ಞಾನಿಗಳೇ. ತಮ್ಮ ಅಂತರ್ಯಾಮಿಯನ್ನು ಸದಾ ಕಾಣುತ್ತಿದ್ದರು. ಆದರೆ ಬಿಂಬರೂಪವನ್ನು ಪ್ರತ್ಯಕ್ಷ ಕಾಣಬೇಕೆಂಬ ಹಂಬಲವಿದ್ದಿತು.

ನಮ್ಮ ಮನೆಯಲ್ಲಿ ಅಥವಾ ನಮ್ಮ ಕಾಲೋನಿಯಲ್ಲಿ ವೆಂಕಟೇಶ ದೇವಸ್ಥಾನದಲ್ಲಿ ಪ್ರತಿಮಾ ದೇವಾಲಯಗಳಿರುವುದು ನಿಜ. ಅವು ಏಕಾಂಶ ರೂಪ. ಹಾಗೆ ತಿಳಿದು ತಿರುಪತಿಗೇಕೆ ಹೋಗಿ ಅಲ್ಲಿಯೂ ಶ್ರೀನಿವಾಸನನ್ನು ಕಾಣಲು ಹೋಗುತ್ತೇವೆ. ಏಕೆ ? ತಿರುಪತಿಯಲ್ಲಿ ಭಕ್ತವತ್ಸಲನ ಸಾಕ್ಷಾತ್ ರೂಪ **ಜನರೇಟರ್** ಇದ್ದಂತೆ. ಬಾಕಿ ದೇವಾಲಯಗಳಲ್ಲಿರುವ ಶ್ರೀನಿವಾಸನ ಮೂರ್ತಿಗಳು **ಬಲ್ಬು**ಗಳಿದ್ದಂತೆ. ಜನರೇಟರ್ ನೇರ ಬೆಳಕನ್ನು ಹುಟ್ಟಿಸುವುದು. ಆ ಬೆಳಕು ಎಲ್ಲಾ ಕಡೆ ಪ್ರಕಾಶವಾಗಲು ಬಲ್ಬುಗಳನ್ನು (ದೇಹಾದಿಗಳಲ್ಲಿ) ಸ್ಥಾಪಿಸಬೇಕು. ಹೌದೋ ಅಲ್ಲವೋ ? ಅಂತೆಯೇ ಮಹಾತ್ಮರು ಸದಾ ಪರಮಾತ್ಮನ ದರ್ಶನ ಪಡೆಯುತ್ತಿದ್ದರೂ ಸಾಕ್ಷಾತ್ ಸನ್ನಿಧಾನಯುಕ್ತ ಶ್ರೀಹರಿಯನ್ನು ಕಾಣಲು ವೈಕುಂಠಕ್ಕೆ ತೆರಳಿದರೆಂದು ತಿಳಿಯಬಹುದು.

ಸನಕಾದಿ ಮುನಿಗಳಿಂದ ಶಪ್ತರಾಗಿ ಜಯವಿಜಯರು ಭೂಮಿಯಲ್ಲಿ ಅದಿತಿಯ ಮಕ್ಕಳಾಗಿ ಹುಟ್ಟಿದರು.

**ಇಲ್ಲಿ ಒಂದು ವಿಶೇಷಾಂಷ :** ಜಯವಿಜಯರು ಮುನಿಕುಮಾರರಿಂದ ಶಪ್ತರಾಗಿ ಅಸುರ ಯೋನಿಯಲ್ಲಿ ಹುಟ್ಟಬೇಕಾದವರು ರಾವಣ ಕುಂಭಕರ್ಣರು ರಾಕ್ಷಸರಾಗಿ ಜನಿಸಿದರು. ಅಸುರ ರಾಕ್ಷಸರೆಂಬುದು ಭಿನ್ನವಲ್ಲವೇ (ಪಾಪಿಷ್ಠಾ **ಮಾಸುರೀಂ** ಬಾಲೀಕ ಯತಮಾಶ್ಚತಃ) ಎಂದರೆ ಉತ್ತರ.

ಅಸುರ ಅಂದರೂ ಒಂದೇ ರಾಕ್ಷಸನೆಂದರೂ ಒಂದೇ ಎಂದಾಗಿರುವುದು. (ಅಸ್ಯಂತಿ



ಕ್ಷಿಪಂತಿ ದೇವಾನ್ ಅಸುರಾಃ – ನಿಘಂಟು) ಆದರೂ ಅಸುರ ರಾಕ್ಷಸರು ಸ್ವಲ್ಪ ಭಿನ್ನರೇ ಆಗಿರುತ್ತಾರೆಂದು ಮನುಸ್ಮೃತಿ ತಿಳಿಸುವುದು.

**ಬ್ರಾಹ್ಮೋ ದೈವಸ್ತಥೈವಾರ್ಷಃ ಪಾಜಾಪತ್ಯಸ್ತಥ್ಯಸುರಾಃ ।**
**ಗಂಧರ್ವೋ ರಾಕ್ಷಸಶ್ಚೈವ ಪೈಶಾಚಾಷ್ಟಯೋಽಅಧಮಾಃ** ಮನುಸ್ಮೃತಿಃ

ಮೊದಲನೆಯ ಜನ್ಮ ಹಿರಣ್ಯಾಕಶಿಪು ದೊಡ್ಡವ, ಹಿರಣ್ಯಾಕ್ಷ ಕಿರಿಯವ. ಈ ಇಬ್ಬರೂ ದೈತ್ಯ ದಾನವರಿಂದ ಮೊದಲು ಪೂಜಿಸಿಕೊಳ್ಳುತ್ತಿದ್ದು ಅಷ್ಟು ಬಲಶಾಲಿಗಳು ಪರಾಕ್ರಮಿಗಳೂ ಆಗಿ ಮೆರೆದರು.

ತಮ್ಮನಾದ ಹಿರಣ್ಯಾಕ್ಷನ ಶಕ್ತಿ ಎಷ್ಟಿತ್ತೆಂದರೆ, ಇಡೀ ಭೂಮಂಡಲವನ್ನು ವಶದಲ್ಲಿ ತಂದು ಸಮುದ್ರದಲ್ಲಿ ಮುಳುಗಿಸಿದ. (ಇವ ಬ್ರಹ್ಮದೇವರನ್ನು ಉಗ್ರ ತಪಸ್ಸಿನಿಂದ ಅನೇಕ ವರಗಳನ್ನು ಪಡೆದಿದ್ದ. ಲೋಕಕಂಟಕ.) ಈತನು ವೈವಸ್ವತಮನ್ವಂತರದಲ್ಲಿ ಶ್ವೇತವರಾಹಕಲ್ಪದಲ್ಲಿದ್ದವ. ಖುಷದ್ಭಾನು ಎಂಬ ಮಡದಿಯಲ್ಲಿ ಹತ್ತು ಮಂದಿ ಪುತ್ರರು ಜನಿಸಿದರು. ಶಂಬಕಾಸುರ, ಕಾಲನಾಭನೇ ಆದಿಯಾಗಿದ್ದರು. ಇವನ ದುರುದ್ದೇಶವೆಂದರೆ ಈ ಭೂಮಿಯನ್ನು ಬಲಾತ್ಕಾರದಿಂದ ಹಿಡಿದು ಮುಳುಗಿಸಿದರೆ, ಭೂದೇವಿಯನ್ನು ಸೆರೆ ಹಿಡಿದಂತಾಗುವುದು. ಅವಳನ್ನು ಕಾಪಾಡಲು ಶ್ರೀಹರಿ ಬಂದೇ ಬರುತ್ತಾನೆ. ಆಗ ಹರಿಯನ್ನು ಸುಲಭವಾಗಿ ಸಂಹರಿಸಬಹುದೆಂದೂ ಭೂದೇವಿಯನ್ನು ತನ್ನ ವಶಳನ್ನಾಗಿ ಮಾಡಿಕೊಳ್ಳಬಹುದೆಂಬ ದುಷ್ಟಬುದ್ಧಿಯಿತ್ತು. ಇದರಿಂದ ಪರಮಾತ್ಮನು ವರಾಹರೂಪದಿಂದ ಅವನನ್ನು ಸಂಹರಿಸಿ ಭೂದೇವಿಯನ್ನು ತನ್ನ ಕೋರೆ ಹಲ್ಲುಗಳಿಂದ ಎತ್ತಿ ಯಥಾಸ್ಥಾನದಲ್ಲಿರಿಸಿದ ಶ್ರೀಹರಿ.

ಹಿರಣ್ಯಕಶಿಪು ತನ್ನ ತಮ್ಮನನ್ನು ಸಂಹರಿಸಿದ ವರಾಹರೂಪಿ ನಾರಾಯಣನ ಬಗ್ಗೆ ಇನ್ನಷ್ಟು ದ್ವೇಷ ಹೆಚ್ಚಾಯಿತು.

ಶ್ರೀಮದಾಚಾರ್ಯರು ಈ ವಿಷಯವನ್ನೇ ಸ್ಪಷ್ಟಪಡಿಸುತ್ತಾರೆ.

**ಹಿರಣ್ಯಕಶಿಪುರ್ಭ್ರೂತಂ ಅಮನ್ಯತೇ ಮೃತೌ ಹರಿಮ್ ।**
**ಅತೋ ಭಯಾನಕೋ ಜಾತಃ ತತ್ರರಾಜಾನಮೇವ ಚ ।**
**ಮತ್ವಾ ರಾಜೈವ ಸಂಜಾತಃ ಕೃಷ್ಣಂ ಚಕ್ರಾದಿಲಕ್ಷಣೈಃ ।**
**ಮೃತಿಕಾಲೇಹರಿಂ ಚೈವ ಮತ್ವಾ ಭಕ್ತ್ಯೈವಕೇವಲಂ ॥**
**ದ್ವಾಸ್ಥತ್ವಂ ಹರಿ ಮಾವಿಶ್ಯ ಪ್ರಾಪ್ಯೈ ಮನುಜೋಽಪಿ ತು ॥** (ಭಾಗ.ತಾ.)

ಹಿರಣ್ಯಕಶಿಪು ಸಾಯುವಾಗ ಶ್ರೀನೃಸಿಂಹನನ್ನು ನೋಡಿ ಏನಿದು ಭಯಂಕರ ರಾಕ್ಷಸನೆಂದು ತಿಳಿದು (ನಮೃಗೋನಮಾನುಷಂ) ಎಂದು ಮರಣಿಸಿದ್ದರಿಂದ, ಇದೇ

ರೀತಿ ಹಿರಣ್ಯಾಕ್ಷ ವರಾಹ ರೂಪಿಯನ್ನು ನೋಡುತ್ತಲೇ ಸತ್ತಿದ್ದರಿಂದ ಇಬ್ಬರೂ ರಾವಣ ಕುಂಭಕರ್ಣರಾಗಿ ರಾಕ್ಷಸಯೋನಿಯಲ್ಲಿ ಜನ್ನಿಸಿದರು.

ರಾವಣ ಕುಂಭಕರ್ಣರನ್ನು ಸಂಹರಿಸುವಾಗ ಭಗವಂತನನ್ನು ಈತನೊಬ್ಬ ಮಾನವನೆಂದು ತಿಳಿದು ಸತ್ತ. ಕಾರಣ ಮುಂದಿನ ಜನ್ಮದಲ್ಲಿ ರಾಜಕುಮಾರರಾಗಿ ಭಗವಂತನನ್ನು ಒಬ್ಬ ಮಾನವನೆಂದು ತಿಳಿದು, ಶಿಶುಪಾಲ ದಂತವಕ್ತ್ರರಾಗಿ, ರಾಜಕುಮಾರರಾಗಿಯೇ ಹುಟ್ಟಿದರು. ಹೀಗೆ ಮರಣಕಾಲದಲ್ಲಿ ಯಾವುದನ್ನು ಸ್ಮರಿಸುತ್ತಾ ಮರುಣಿಸುತ್ತಾರೋ ಅವರು ಮುಂದಿನ ಜನ್ಮದಲ್ಲಿ ಅದೇ ಆಗಿ ಹುಟ್ಟುತ್ತಾರೆ.

**ಯಂ ಯಂ ವಾಪಿ ಸ್ಮರನ್ ಭಾವಂ ತ್ಯಜತ್ಯಂತೇ ಶಲೇವರಂ**
**ತಂ ತಮೇವೈತಿ ಕಾಂತೇಯ ಸದಾ ಸದ್ಭಾಭಾವಿತಾಃ** (ಗೀತಾ)

ಧರ್ಮರಾಜ ಶಿಶುಪಾಲನಲ್ಲಿ ಆವಿಷ್ಠಿತನಾದ ಜಯನೆಂಬ ದೇವತೆ ಶ್ರೀಕೃಷ್ಣನನ್ನು ಧ್ಯಾನಿಸುತ್ತಾ (ನಿಂದಾಸ್ತುತಿ) ಮರಣಿಸಿದ್ದರಿಂದ ಪರಮಾತ್ಮನ ದೇಹದಲ್ಲಿ ಸಾಯುಜ್ಯ (ಸ್ವಯೋಗ್ಯಮುಕ್ತ)ವನ್ನು ಪಡೆದನು. ಜಯನು **"ವೈರಾನು ಬಂಧೇನ"** ಎಂದು ಹೇಳಿದಾಗ ಭಕ್ತಿ ಪ್ರಾಧಾನ್ಯ ವೈರನಿಮಿತ್ತ ಕಾರಣ ಅನುಬಂಧ ಭಕ್ತಿ.

**"ಅನುಬಂಧಸ್ತು ಭಕ್ತಿಃ ಸ್ಯಾದ್ ಬಂಧಃ ಸ್ನೇಹಃ ಉದಾಹೃತ"** ಭಾಗ.ತಾ.

## ಪ್ರಹ್ಲಾದರಾಜರ ಕಥಾರಂಭ ಅವತಾರಿಕಾ

**ಹಿರಣ್ಯಕಶಿಪು ಪುತ್ರಂ ಪ್ರಹ್ಲಾದಂ ಭಗವತ್ಪ್ರಿಯಂ**
**ಜಿಘಾಸುರರೋನ್ ನಾನಾಯಾತನಾ ಮೃತ್ಯಹೇತ ವೆ ॥** (ಭಾ. ೭-೧-೪೩)

**ತಂಸರ್ವಭೂತಾತ್ಮಭೂತಂ ಪ್ರಶಾಂತಂ ಸಮದರ್ಶನಮ್ ।**
**ಭಗವತ್ತೇಜಸಾ ಸ್ಪೃಷ್ಟಂ ನಾಶಕ್ನೋತ್‌ಹಂತುಮುದ್ಯವೇ ॥** (೪೪)

ಪರಮಭಾಗವತೋತ್ತಮ ಭಕ್ತನಾದ ಪ್ರಹ್ಲಾದನನ್ನು (ಭಕ್ತನೆಂದು ತಿಳಿಯದೆ) ಹಿರಣ್ಯಕಶಿಪು ಪುತ್ರನನ್ನು ಸಾಯಿಸಬೇಕೆಂದು ನಾನಾ ವಿಧವಾದ ಶಾರಿಕ ದಂಡನೆಗೊಳಪಡಿಸಿದನು. ಆದರೆ ಪ್ರಹ್ಲಾದನು ಶ್ರೀಹರಿಯನ್ನು ಸರ್ವತ್ರ, ಸರ್ವವ್ಯಾಪ್ತ, ಸರ್ವಾಂತರ್ಯಾಮಿ ನಿಮಾಯಕನಾಗಿರುವನೆಂಬ ಜ್ಞಾನವಿದ್ದಿತು. ಅಂತಹ ಹರಿಭಕ್ತನನ್ನು (ಪುತ್ರವಾತ್ಸಲ್ಯಕ್ಕೆ ವಿರುದ್ಧವಾಗಿ) ಸಂಹರಿಸಲು ಅನೇಕ ವಿಧ ಕ್ರಮಗಳಿಂದಲೂ ಸಾಧ್ಯವಾಗಲಿಲ್ಲವಲ್ಲಾ. ಈ ರೀತಿ ದ್ವೇಷ ಹುಟ್ಟಿ ಸಂಹರಿಸಬೇಕೆಂಬ ಬುದ್ಧಿಯಾದರೋ ಹೇಗೆ – ಏಕೆ ಬಂದಿತು ? ಎಂಬುದನ್ನು ರಾಜ ಕೇಳಿದನು.



### ಹಿರಣ್ಯಕಶಿಪುವಿನ ಜನ್ಮ ಹರಿಯನ್ನು ದ್ವೇಷಿಸಿದ್ದು

ಸನಕಾದಿ ಮುನಿಗಳಿಂದ ಶಾಪ ಪಡೆದ ಜಯವಿಜಯರು ಹಿರಣ್ಯಕಶಿಪು ಹಿರಣ್ಯಾಕ್ಷರಾಗಿ ಭೂಮಿಯಲ್ಲಿ ಹುಟ್ಟಿದರು.

### ಹಿರಣ್ಯಕಶ್ಯಪ ಹಿರಣ್ಯಾಕ್ಷರ ಜನ್ಮಕಥಾ

ದಿತಿ ದೇವಿ ಒಂದು ದಿನ ಸಂಜೆ ಕಾಮಪೀಡಿತಳಾಗಿ ತಪಸ್ಸು ಮಾಡುತ್ತಿದ್ದ ಕಶ್ಯಪರಲ್ಲಿ ಬಂದು ತನ್ನ ಕಾಮಾಗ್ನಿಯನ್ನು ಸಂತೈಸಲು ಬಗೆಬಗೆಯಾಗಿ ಕೇಳಿದಳು. ಕಶ್ಯಪರು ಹೇಳಿದರು. ಪ್ರಿಯೇ, ಕೇಳು. ಈಗ ಪ್ರದೋಷಕಾಲವಿದೆ. ರುದ್ರದೇವರು ಪಾರ್ವತೀ ಸಮೇತ ಸಂಚರಿಸುವ ಸಮಯ. ಪತಿಪತ್ನಿಯರ ಸಂಗ ದೂಷಿತವಾಗಿರುವುದು. ತಸ್ಮಾತ್ ಒಂದು ಘಳಿಗೆ ತಡೆ. ಆಗ ನಿನ್ನ ಮನೋರಥವನ್ನು ಪೂರ್ಣಮಾಡುವೆನೆಂದರೂ ಕೇಳದೆ ದಿತಿ ತನ್ನ ವಸ್ತ್ರಗಳನ್ನು ಕಳಚಿ ಕಶ್ಯಪರನ್ನು ಬಲಾತ್ಕಾರದಿಂದ ಎಳೆದಳು. ಕಶ್ಯಪರಿಗೆ ಶ್ರೀಹರಿಚಿತ್ತ ಹೀಗಿರುವಾಗ ವಿಧಿವಿಲಾಸವೆಂದು ದಿತಿಯೊಂದಿಗೆ ಕೂಡಿದರು. ನಂತರ, ದಿತಿಗೆ ಲಜ್ಜೆಯಾಯಿತು. ಒಂದು ಕ್ಷಣ ಸುಖಕ್ಕಾಗಿ ಎಂಥಾ ಅನರ್ಥಕ್ಕೆ ಗುರಿಯಾದೆ ಅಂದುಕೊಂಡು ಪತಿಯ ಕ್ಷಮೆ ಕೇಳಿದಳು. ಆದರೇನು ಮಾಡುವುದು. ಹರಿಸಂಕಲ್ಪದಂತೆ ಗರ್ಭಧಾರಣೆ ಮಾಡಿದಳು. ಕಶ್ಯಪರು ದಿತಿಗೆ ಹೇಳಿದರು. ಮಂಗಳೇ, ಕೇಳು. ನೀನು ಈ ದೋಷಿತ ಕಾಲದಲ್ಲಿ ಗರ್ಭಧಾರಣೆ ಮಾಡಿದೆ. ಇದರ ಫಲವಾಗಿ ನಿನಗೆ ಇಬ್ಬರು ಕ್ರೂರಿಗಳು ಹರಿದ್ವೇಷಿಗಳಾದ ಮಕ್ಕಳು ಆಗುತ್ತಾರೆ. ಮಹಾಪರಾಕ್ರಮಿಗಳು ಹರಿನಿಂದನೆಯಿಂದ ಶ್ರೀಶನಿಂದಲೇ ಸಂಹೃತರಾಗುತ್ತಾರೆ ಎಂದಾಗ ದಿತಿಗೆ ಭಯವಾಗಿ ನಡುಗಿದಳು. ಸ್ವಾಮೀ, ನನ್ನ ತಪ್ಪನ್ನು ಮನ್ನಿಸಿ. ಗತಿಯೇನು? ಎಂದಾಗ ಕಶ್ಯಪರು ಪ್ರಿಯೇ, ಚಿಂತಿಸಬೇಡ. ಅವರನ್ನು ಭಗವಂತನೇ ಸಂಹರಿಸುತ್ತಾನೆ. ಆದರೆ ಹಿರಣ್ಯಕಶಿಪುವಿನ ಪುತ್ರ ಶ್ರೀಮಹಾವಿಷ್ಣು ಭಕ್ತನಾಗಿ ನಿನ್ನ ವಂಶವನ್ನೇ ಉದ್ಧಾರ ಮಾಡುತ್ತಾನೆ. ಆದ್ದರಿಂದ ಮಕ್ಕಳು ದುಷ್ಟರಾದರೂ ಮೊಮ್ಮಗ ಪರಮ ಭಾಗವತೋತ್ತಮನಾಗಿ ಜನಿಸುತ್ತಾನೆ ಎಂದು ಹೇಳಿ ಸಂತೈಸಿದರು.

[ **ವಿಶೇಷಾಂಶ :** ೪೮ನೇ ಶ್ಲೋಕದಲ್ಲಿ **"ವೈರಾನುಬಂಧೇನ"** ಎನ್ನುವ ವಾಕ್ಯಕ್ಕೆ ನಮ್ಮಲ್ಲೇ ವೈಷ್ಣವರಾದವರು **"ನಿರಂತರ ಎಡಬಿಡದೆ"** ಶ್ರೀಹರಿಯನ್ನು ದ್ವೇಷದಿಂದ ಮುಕ್ತಿ ಎಂದು ಅನುವಾದ ಮಾಡಿರುತ್ತಾರೆ ಅಂದಾಗ ಹರಿದ್ವೇಷ ನಿರಂತರವಾಗಿ ದ್ವೇಷಿಸುವುದರಿಂದಲೂ ಮುಕ್ತಿ ಹೊಂದುತ್ತಾರೆ ಎನ್ನುವಂತೆ ಅರ್ಥವಾಗುವುದು. ಇಂತಹ ವ್ಯಾಖ್ಯಾನ ಸರ್ವಥಾ ತಪ್ಪು. ಹಾಗಿದ್ದ ಮೇಲೆ ದುರ್ಯೋಧನ, ಶಕುನಿಗಳು ಕೃಷ್ಣನನ್ನು ಇದೇ ರೀತಿ ವೈರದಿಂದ ಕಾಣುತ್ತಿದ್ದರು. ಅವರಿಗೆ ಮುಕ್ತಿಯಾಗಲಿಲ್ಲವೇಕೆ ? ತದ್ವಿರುದ್ಧವಾಗಿ ತಮಸ್ಸೆ ಆಯಿತು. ಆದ್ದರಿಂದ **"ಅನುಬಂಧಸ್ತು ಭಕ್ತಿಃ ಸಾದ್ಬಂಧಃ ಸ್ನೇಹ ಉದಾಹೃತಃ"** ವೈರಾನುಬಂಧತ್ವವು ಭಕ್ತಿಯಿಂದ ಕೂಡಿರಬೇಕಾದ ವೈರ. ಅನುಬಂಧವೆಂದರೆ

ಪರಮಾತ್ಮನಲ್ಲಿ ಭಕ್ತಿಯಿಂದಲೇ ಎಂದು ತಿಳಿಯಬೇಕು ಎಂದು ಭಾಗವತ ತಾತ್ಪರ್ಯದಲ್ಲಿ ಶ್ರೀಮದಾಚಾರ್ಯರು ತಿಳಿಸಿರುತ್ತಾರೆ. ]

ಹೀಗೆ ದಿತಿ ದೇವಿಗೆ ಹಿರಣ್ಯಕಶಿಪು ಹಿರಣ್ಯಾಕ್ಷರೆಂಬ ಸುತರು ಹುಟ್ಟಿದರು. ಸಿಂಹಿಕೆ ಎಂಬುವಳು ಮಗಳು. ಹಿರಣ್ಯಕಶಿಪು ಜಂಭನೆಂಬ ರಾಕ್ಷಸನ ಮಗಳಾದ ಕಯಾದುವನ್ನು ಲಗ್ನವಾಗಿ ನಾಲ್ಕು ಪುತ್ರರನ್ನು ಪಡೆದ – ಪ್ರಹ್ಲಾದ, ಸಂಹ್ಲಾದ, ಅನುಹ್ಲಾದ ಮತ್ತು ಹ್ಲಾದ. ಭಾರತದಲ್ಲಿ ಐವರು ಪುತ್ರರೆಂದಿದೆ. ಐದನೆಯವ ಶಿಬಿ ಎಂದು. ಹಿರಣ್ಯಾಕ್ಷನು ಋಷಭಾನು (ಋಷದ್ಭಾನು) ಎಂಬುವವಳನ್ನು ಮದುವೆಯಾದ. ಇವನಿಗೆ ಶಕುನಿ, ಶಂಬರ, ದೃಷ್ಟಿಭೂತ, ಸಂತಾಪನ, ವೃಕ, ಕಾಲನಾಭ, ಮಹಾನಾಥ, ಹರಿಶ್ಮಶ್ರು, ಉತ್ಕಟ ಮುಂತಾದ ಪುತ್ರರಿದ್ದರು. ಹರಣಿ ಎಂಬ ಪುತ್ರಿ. ಹೀಗೆ ಹಿರಣ್ಯಕಶಿಪು, ಹಿರಣ್ಯಾಕ್ಷರ ಸೋದರಿ ಸಿಂಹಿಕೆ ವಿಪ್ರಚಿತ್ತಿ ಎಂಬ ರಾಕ್ಷಸನನ್ನು ಮದುವೆಯಾದಳು. ಹಿರಣ್ಯಾಕ್ಷ, ಹಿರಣ್ಯಕಶಿಪು ದಿತಿ ಪುತ್ರರಾಗಿ ಜನಿಸಿ ಅವರಲ್ಲಿ ಜಯವಿಜಯರೆಂಬ ದೇವತೆಗಳು ಆವಿಷ್ಕಾರಾದರು ಎಂಬುದು ಸ್ಪಷ್ಟ.

ಶಿಶುಪಾಲ ದಂತವಕ್ತ್ರರಿಗೆ (ಜಯವಿಜಯರಿಗೆ) ಇದು ಮೂರನೇ ಹಾಗೂ ಕೊನೆಯ ಜನ್ಮ. ಇವರ ಸಂಹಾರಾ ನಂತರ ಪುನಃ ಮನುಷ್ಯ ರಾಕ್ಷಸರಾಗಿ ಜನ್ಮವಿರುವುದಿಲ್ಲ. ಭಗವಂತನ ಸಂಕಲ್ಪಾನುಸಾರ ಶಿಶುಪಾಲನ ವಧೆಯಾದ ಮೇಲೆ (ಅವನಲ್ಲಿದ್ದ ಜಯವಿಜಯ) ಶಾಪಮುಕ್ತರಾಗಿ ತಮ್ಮತಮ್ಮ ವೈಕುಂಠಕ್ಕೆ ಹಿಂತಿರುಗಿದರು.

---

**ದಂತವಕ್ತ್ರ :** ಈತನೂ ವಸುದೇವನ ಸೋದರಿ ದೇವಕಿ ತಂಗಿ ಶೃತದೇವಿ ವೃದ್ಧಶರ್ಮನನ್ನು ಲಗ್ನವಾಗಿ ದಂತವಕ್ತ್ರನನ್ನು ಪಡೆದಳು. ಹೆಸರಿಗೆ ತಕ್ಕಂತೆ ಅವನ ಹಲ್ಲು (ದಂತಗಳು) ವಕ್ರವತ್ತಾಗಿದ್ದಿತು. ಈತನು ಶಿಶುಪಾಲ ಸಾಲ್ವರಾಜ ಪೌಂಡ್ರಕವಾಸುದೇವನು ಜರಾಸಂಧರ ಆಪ್ತಮಿತ್ರ.

ರಾಜಸೂಯ ಯಾಗದಲ್ಲಿ ಶಿಶುಪಾಲ ಶ್ರೀಕೃಷ್ಣನಿಂದ ಹತನಾದ ಸುದ್ದಿ ಕೇಳಿ ಸಾಲ್ವನೊಂದಿಗೆ ದ್ವಾರಕಾ ನಗರದ ಮೇಲೆ ದಂಡೆತ್ತಿ ಹೋದರು. ಆಗ ಕೃಷ್ಣ ಇದ್ದಿಲ್ಲ. ಪ್ರದ್ಯುಮ್ನ ಇವರೊಂದಿಗೆ ಯುದ್ಧ ಮಾಡುತ್ತಿದ್ದ. ನಂತರ ಶ್ರೀಕೃಷ್ಣ ಬಂದು ಸಾಲ್ವನನ್ನು ಸಂಹರಿಸಿದ. ದಂತವಕ್ತ್ರ ತನ್ನ ಪೌರುಷವನ್ನು ಕೊಚ್ಚಿಕೊಳ್ಳುತ್ತಾ ಕೃಷ್ಣನ ಎದುರಿಗೆ ಹೋರಾಡಿ ಕೊನೆಗೆ ಶ್ರೀಕೃಷ್ಣನ ಗದೆ ಕೌಮೋದಕೀಯಿಂದ ಹತನಾದ. ಆಗ ಶ್ರೀಕೃಷ್ಣನ ದೇಹದಲ್ಲಿ ಅವನ ಆತ್ಮ ಸಾನ್ನಿಧ್ಯ ಹೊಂದಿತು. ಹೀಗೆ ವಿಜಯನೆಂಬ ವೈಕುಂಠ ಬಾಗಿಲ ಕಾಯಲು ಶಿಶುಪಾಲನಂತೆ ಸೇರಿದ. (ಭಾಗ. ೧೦.೭೮)



ಹರಿಃ ಓಂ

ಶ್ರೀಮದ್ಭಾಗವತ

## ಶ್ರೀನರಸಿಂಹಾವತಾರ ಕಥಾ

**(ಭಕ್ತಾಗ್ರಣಿ ಪ್ರಹ್ಲಾದ ಚರಿತೆ)**

**ಸಪ್ತಮ ಸ್ಕಂದ**

ಹಿರಣ್ಯಾಕ್ಷನ ವಧಾ ನಂತರ ಪತ್ನಿಯರಿಗೆ ಸಮಾಧಾನ, ಭಾಗವತ ತತ್ವವನ್ನು ಉಪದೇಶ ಮಾಡಿದ ಹಿರಣ್ಯಕಶಿಪು ಸುಯಜ್ಞನ ಹಾಗೂ ಕಪೋಥ ಕಥೆ, ಇಲ್ಲಿ ಸಂಕ್ಷೇಪವಾಗಿ ತಿಳಿಸಲಾಗಿದೆ.

ಧರ್ಮರಾಜನ್ ಕೇಳು – ಹಿರಣ್ಯಾಕ್ಷನನ್ನು ಶ್ರೀಹರಿ ವರಾಹ ರೂಪದಿಂದ ಸಂಹರಿಸಿದನೆಂದು ತಿಳಿದು ಹಿರಣ್ಯಕಶಿಪು ಅತೀವ ಕ್ರೋಧದಿಂದ ಮೈಯಲ್ಲಾ ಕಂಪಿತವಾಗಿ ಕಣ್ಣುಗಳು ಕೆಂಪಾಗಿ ಅಲ್ಲಿದ್ದ ದೈತ್ಯರನ್ನು ಕುರಿತು ದೈತ್ಯಬಂಧುಗಳೇ, ಗಮನವಿಟ್ಟು ಕೇಳಿರಿ. ನನ್ನ ಮಾತಿನಂತೆ ನೀವೆಲ್ಲಾ ಆಚರಿಸಬೇಕು. ತಿಳಿಯಿತಾ ! ಆ ಹರಿ ನನ್ನ ತಮ್ಮನನ್ನು ಅನ್ಯಾಯವಾಗಿ ವಧಿಸಿದ. ನಾನು ಅಂತಹ ದೇವತಾ ಪಕ್ಷಪಾತಿಯಾದ ಹರಿಯನ್ನು ಎಲ್ಲೇ ಇರಲಿ ಹುಡುಕಿ ಸಂಹರಿಸಿ ಅವನ ರಕ್ತದಿಂದ ನನ್ನ ತಮ್ಮನಿಗೆ ತರ್ಪಣ ಕೊಡುತ್ತೇನೆ. ಅಲ್ಲಿಯವರೆಗೂ ನನಗೆ ಶಾಂತಿಯಾಗದು. ಹರಿ ಸಂಹೃತನಾದರೆ ಅವನನ್ನು ಆಶ್ರಯಿಸಿದ ದೇವತೆಗಳು ಬೇರು ಕಡಿದ ಮರದಂತೆ ತಾವೇ ನಾಶವಾಗುತ್ತಾರೆ.

ಬ್ರಾಹ್ಮಣರು, ಋಷಿಮುನಿಗಳು ಎಲ್ಲಿರುತ್ತಾರೆ ಅಲ್ಲಿ ತಪಸ್ಸು, ಯಜ್ಞ, ಸ್ವಾಧ್ಯಾಯ ವ್ರತ ಇತ್ಯಾದಿಗಳಿಂದ, ಹರಿಗೆ ಅವರ ಯಜ್ಞ ಹವಿಸ್ಸಿನಿಂದ ಕೊಟ್ಟಿರುತ್ತಾನೆ. ಆದ್ದರಿಂದ ನೀವೆಲ್ಲಾ ಎಲ್ಲಾ ಕಡೆ ಬ್ರಾಹ್ಮಣರು ಯಜ್ಞಯಾಗಾದಿಗಳಾಗುತ್ತಿರುವ ಕಡೆ ಹೋಗಿ ಅವರನ್ನು ಸಂಹರಿಸಿರಿ.

**ಯತ್ರ ಯತ್ರ ದ್ವಿಜಾಗಾವೋ ವೇದಾ ವರ್ಣಾಶ್ರಮಾಃ ಕ್ರಿಯಾಃ ।**
**ತಂತಂ ಜನ ಪದಂ ಯಾತ ಸಂದೀಪಯುತ ವೃಶ್ಚತ ॥**

ಎಲ್ಲೆಲ್ಲಿ ವಿಪ್ರರು ಇರುತ್ತಾರೋ ಅಲ್ಲಿ ವೇದಪಠಣ, ಪ್ರವಚನ, ಯಜ್ಞಾದಿಗಳು ಗೋವುಗಳಿರುವವೋ ಅಲ್ಲೆಲ್ಲಾ ಹೋಗಿ ಎಲ್ಲವನ್ನೂ ನಾಶ ಮಾಡಿರಿ. ಅವರೆಲ್ಲಾ ನಾಶ ಹೊಂದಿದರೆ ಹರಿ ಸ್ವಯಂ ತಾನೇ ನಶಿಸುವನು ಎಂದು ಆಜ್ಞಾಪಿಸಿದಂತೆ ದೈತ್ಯರು ಎಲ್ಲ ಕಡೆ ಸುತ್ತಿ ಧ್ವಂಸ ಮಾಡಲಾರಂಭಿಸಿದರು. ಇವರ ಹಾವಳಿ ಸ್ವರ್ಗಕ್ಕೂ ಲಗ್ಗೆಹಾಕಿತು. ಇಂದ್ರಾದಿ ದೇವತೆಗಳು ದೇಶ ಭ್ರಷ್ಟರಾಗಿ ದಾರಿ ಕಾಣದೆ ಅಡಗಿಕೊಂಡರು. ಹೀಗೆ ಎಲ್ಲಿ ನೋಡಿದರೂ ಕ್ರೂರ, ದಾರುಣ, ಭಯ ವ್ಯಾಪ್ತವಾಗಿ ಸಜ್ಜನರ ಸಂಖ್ಯೆ ಕುಗ್ಗುತ್ತಾ ಬಂದಿತು.

ಈ ಕಡೆ ಹಿರಣ್ಯಕಶಿಪು ತನ್ನ ತಮ್ಮನ ಅಂತ್ಯಕ್ರಿಯೆ ಮಾಡಬೇಕೆಂದು ಹೇಳಿದಾಗ ಗಂಡನ ಶರೀರವನ್ನು ಋಷದ್ಭಾನು ಬಿಟ್ಟುಕೊಡಲಿಲ್ಲ. ಎಷ್ಟು ಹೇಳಿದರೂ ಮೃತ

ದೇಹವನ್ನು ಆಲಂಗಿಸಿ ರೋಧಿಸುತ್ತಿದ್ದಳು. ಆಗ ಹಿರಣ್ಯಕಶಿಪು ನಾದಿನಿಗೆ, ಮಕ್ಕಳಿಗೆ ಹೇಳಿದ. ತಮ್ಮನು ಶೌರ್ಯದಿಂದ ಹೋರಾಡಿ ಮರಣಿಸಿದ್ದಾನೆ. ಅವನು ವೀರಸ್ವರ್ಗವನ್ನೇ ಸೇರಿರುತ್ತಾನೆ. ದುಃಖಿಸಬೇಡಿರಿ. ಮೃತ ಸಂಸ್ಕಾರವಾಗಲೇಬೇಕು. ಆಗ ಮಾತ್ರ ಅವನಿಗೆ ಸದ್ಗತಿ ಆಗುವುದು ಎಂದ.

**ಹಿರಣ್ಯಕಶಿಪು – ಉಪದೇಶವು ದ್ವೈತಮತಾನುಸಾರವಿರುವುದು.**

ಈ ರೀತಿ ತತ್ವ ಬೋಧನೆ ಹಿರಣ್ಯಕಶಿಪುವಿನಲ್ಲಿದ್ದ ಭಕ್ತನಾದ ಜಯನು ಹೇಳಿದನೆಂದು ತಿಳಿಯಬೇಕೇ ವಿನಃ ದೈತ್ಯನಾದವನ ಬಾಯಿಂದ ಹೇಗೆ ಬರಲು ಸಾಧ್ಯ ? ಹಿರಣ್ಯಕಶಿಪು ತತ್ವೋಪದೇಶ ಮಾಡಿದವನು ಹರಿಭಕ್ತನಲ್ಲವೇ ? ಇಂತಹವನು ಮಗ ಹರಿಭಕ್ತನಾದವನನ್ನು ಏಕೆ ಸಂಹರಿಸಲು ಪ್ರಯತ್ನಪಟ್ಟ ಎಂದರೆ **ಅಂತಃ ಹಿರಣ್ಯಕಾದೀನಾಂ ಭಕ್ತಿ ಅಸ್ತ್ವೇವ ಕೇಶವೇ । ಅಸುರಾವೇಶತಃ ತ್ವನ್ಯಾನ್ ಹರಿಸ್ತೋತ್ರನ್ ದ್ವಿಪ್ರಂತಿಹಿ।** ಭಾ.ತಾ.

**ಹಿರಣ್ಯಕನ ಬೋಧನೆ :** ಋಷದ್ಭಾನೂ ಅಳುವುದನ್ನು ಬಿಡು. ಕೇಳು. ಜೀವರು ಒಂದು ಛತ್ರದಲ್ಲಿ ಸೇರುತ್ತಾರೆ. ಎರಡು ದಿನಗಳಾದ ಮೇಲೆ ಅವರವರ ಊರುಗಳಿಗೆ ಹೋಗುತ್ತಾರೆ. ಛತ್ರವು ಅವರಿಗೆ ಸ್ಥಿರವಲ್ಲ.

ರೈಲ್ವೆ ಕಂಪಾರ್ಟ್‌ಮೆಂಟ್‌ನಲ್ಲಿ ನಮಗೆ ನಿಗದಿಸಿದ Berthನಲ್ಲಿ ಕೂಡುತ್ತೇವೆ. ಅಂತೆಯೇ ಅನೇಕ ಯಾತ್ರಿಕರು ತಮ್ಮ ಆಸನದಲ್ಲಿ ಸೇರುತ್ತಾರೆ. ಪ್ರಯಾಣ ಸಮಯದಲ್ಲಿ ಪರಸ್ಪರ ಬಾಂಧವ್ಯ ಊಟ ತಿಂಡಿಗಳಲ್ಲಿ ಭಾಗಿಯಾಗುತ್ತಾರೆ. ಆದರೆ ತಮ್ಮ ತಮ್ಮ ಊರುಗಳು ಬಂದಾಕ್ಷಣ Compartment seat berthನ್ನೂ, ಸ್ನೇಹಿತರನ್ನೂ ತಮ್ಮೊಂದಿಗೆ ಕೊಂಡೊಯ್ಯುವುದಿಲ್ಲ. Seat, berth, compartment ಇವೆಲ್ಲಾ ಅವರಿಗೆ ಸ್ಥಿರವಲ್ಲ. ಯಾರಿಗೆ ಯಾರೋ ಪುರಂದರ ವಿಠಲ. ಈ ಜನ್ಮದಲ್ಲಿ ಇವ ತನ್ನ ಗಂಡ ಹೆಂಡತಿ, ಮಕ್ಕಳು, ಮನೆ, ಸಂಪತ್ತು ಮಾತ್ರ. ಒಂದಲ್ಲಾ ಒಂದು ದಿನ ಎಲ್ಲವನ್ನು ಬಿಟ್ಟು ಹೋಗಬೇಕಾಗುವುದು. ಋಷದ್ಭಾನೂ ಈ ಜನ್ಮದಲ್ಲಿ ಹಿರಣ್ಯಾಕ್ಷ ನಿನ್ನ ಗಂಡನಾಗಿ ಬಾಳಿ ಬಿಟ್ಟುಹೋದ. ಮುಂದೆ ನೀನ್ಯಾರೋ, ಅವನ್ಯಾರೋ ಹೇಳಲು ಬರುವುದಿಲ್ಲ. ಹೋದವ ಮರಳಿ ಬರುವುದಿಲ್ಲ. ನೀವು ಎಷ್ಟು ಕಾಲ ದೇಹವನ್ನು ಇಟ್ಟರೂ ಜೀವ ವಾಪಸ್ಸು ಬರುವುದಿಲ್ಲ. ದೇಹ ಅನಿತ್ಯ, ಜೀವನು ನಿತ್ಯ ಭಗವಂತನಂತೆ, ಭಗವಂತನಾದರೂ ಅಪ್ರಾಕೃತ ಶರೀರವುಳ್ಳವನು ಸರ್ವಜ್ಞ.

ಜೀವನಿಗೆ ದೇಹ ಬಂದಾಗ ನಾನು ನನ್ನದು ಎಂದು ಅಭಿಮಾನ ಹುಟ್ಟಿ ಭ್ರಮಿಸುವನು. ಪರಮಾತ್ಮನ ಪ್ರತಿಬಿಂಬರು. ಬಿಂಬ ಆಡಿದರೆ ಪ್ರತಿಬಿಂಬವೂ ಸ್ಪಂದಿಸುವುದು. ಗಿಡಗಳು ದಡದಲ್ಲಿರುವುದು. ಅವುಗಳ ಪ್ರತಿಬಿಂಬ ನೀರಿನಲ್ಲಿರುವುದು. ಗಿಡಗಳು ಅಲುಗಾಡಿದರೆ, ನೀರಿನಲ್ಲಿರುವ ಪ್ರತಿಬಿಂಬದಂತಿರುವ ಮರಗಳು ಅಲುಗಾಡುವಂತೆ ಕಾಣುತ್ತದೆ. ಗಿಡ ಅಲುಗಾಡುವುದಿಲ್ಲ.

ಋಷದ್ಭಾನೂ ಕೇಳು, ನಿನಗೆ ಅರ್ಥವಾಗುವಂತೆ ಒಂದು ಕಥೆಯನ್ನು ಹೇಳುತ್ತೇನೆ.



**ಸುಯಜ್ಞನ ಕಥಾ :** ಹಿಂದೆ ಸುಯಜ್ಞನೆಂಬ ರಾಜನು ಮಹಾಪರಾಕ್ರಮಿಯಾದರೂ ಒಮ್ಮೆ ಯುದ್ಧದಲ್ಲಿ ಶತ್ರುಗಳಿಂದ ಹತನಾದ. ರಣಭೂಮಿಯಲ್ಲಿ ರಕ್ತದ ಮಡುವಿನಲ್ಲಿ ಶರೀರ ಬಿದ್ದಿದ್ದನ್ನು ಕಂಡು ಹೆಂಡಿರು ಪರಿವಾರದವರು ಆ ಮೃತದೇಹದ ಸುತ್ತುಗಟ್ಟಿ ಜೋರಾಗಿ ರೋದಿಸಲಾರಂಭಿಸಿದರು. ದೈವವನ್ನು ನಿಂದಿಸಿ ಎದೆ ಒಡೆದುಕೊಳ್ಳುತ್ತಿದ್ದರು. ಹೀಗೆ ಸಾಯಂಕಾಲದವರೆಗೆ ಶರೀರವನ್ನು ಆಲಂಗಿಸಿ, ತಮ್ಮ ಪತಿ ಮರಣಿಸಿಲ್ಲ, ಬರುತ್ತಾರೆ ಅಂತ ಗಟ್ಟಿಯಾಗಿ ಅಳುತ್ತಿದ್ದರೂ ಶವ ಸಂಸ್ಕಾರಕ್ಕೆ ಅಡ್ಡಿ ಮಾಡಿದರು. ಇವರ ಅವಸ್ಥೆ ಅತಿ ದಾರುಣವಾಗಿತ್ತು. ಇಂತಹ ಪರಿಸ್ಥಿತಿಯನ್ನು ಯಮಧರ್ಮರಾಜ ನೋಡಿ ಇವರಿಗೆ ಬುದ್ಧಿ ಹೇಳಬೇಕೆಂದು ತಾನು ಚಿಕ್ಕ ಬಾಲಕನ ರೂಪ ತಾಳಿ ಬಂದು, ಎಲ್ಲರೂ ಕೇಳುವಂತೆ ಇವರಿಗೆ **''ವಯಸ್ಸಾಗಿದೆಯೋ ಹೊರತು ಜ್ಞಾನವಿಲ್ಲ, ಅವಿವೇಕಿಗಳಾಗಿ ಅಳುತ್ತಿರುವರು.''** ಏನಿದು ಆಶ್ಚರ್ಯ?

ಮಾನವನು ಹುಟ್ಟಿದಂದಿನಿಂದ ತನ್ನ ಮರಣದ ಘಳಿಗೆಯನ್ನು (Ticket)ನ್ನು ತಂದುಕೊಂಡೇ ಬರುತ್ತಾನೆ. ಹುಟ್ಟಿದವರು ಒಂದಲ್ಲಾ ಒಂದು ದಿನ ಮರಣಿಸಲೇಬೇಕು. ದೇಹ ಶಾಶ್ವತವಲ್ಲ.

**“ಜಾತಸ್ಯ ಮರಣಂ ಧೃವಂ.”** ಎಲ್ಲಿಂದ ಬಂದಿರುವೆವೋ ಅಲ್ಲಿಗೆ ಹೋಗಲೇಬೇಕು. ಇಷ್ಟೂ ತಿಳಿಯದೆ ದುಃಖಪಡುತ್ತಾರಲ್ಲಾ ! ನೀವ್ಯಾರೋ, ಸುಯಜ್ಞ ಯಾರೋ ಗೊತ್ತಿಲ್ಲ. ಈಗ ಮಾತ್ರ ಪತಿಪತ್ನಿಯರಾಗಿರುವಿರಿ. ಹಿಂದೆ ಮುಂದೆ ಈ ಬಾಂಧವ್ಯವಿರುವುದಿಲ್ಲ.

ನಮ್ಮನ್ನು ನೋಡಿ. ನಾವು ಎಷ್ಟು ಧನ್ಯರು. ನಮಗೆ ಜನ್ಮ ಕೊಟ್ಟ ತಾಯಿ ತಂದೆ ಅರಣ್ಯದಲ್ಲಿ ಬಿಟ್ಟರು. ಬಿಟ್ಟು ಹೋಗುವಾಗ ಕಿಂಚಿತ್ತಾದರೂ ಮೋಹ, ದುಃಖಪಡಲಿಲ್ಲ. ನಾನು ಹಾಗೇ ವನಮೃಗಗಳ ಮಧ್ಯೆ ಅವರಿಂದ ಹಿಂಸೆ ಪಡೆದೇ ಬೆಳೆದೆ. ಎಲ್ಲಾ ಶ್ರೀಹರಿ ಅಧೀನ. ಶ್ರೀಶನಿಂದ ರಕ್ಷಿತನಾದೆ. ನೋಡಿ. ಹೆಂಗಸರೇ ಬಂಧುಗಳೆ. ಜೀವ ತನ್ನ ಕರ್ಮಾನುಸಾರ ಜನನ ಮರಣಗಳನ್ನು ಹೊಂದುವನು. ಜೀವನಿತ್ಯ.

**ವಯಂ ಧನ್ಯತಮಾಯದತ್ರತ್ಯಕ್ತಾಃಪಿತೃಭ್ಯಾಂ ನ ವಿಚಿಂತಯಾಮಃ ॥**

ಇಷ್ಟು ಹೇಳಿ ಹಿರಣ್ಯಕಶಿಪು ಪುನಃ ಹೇಳುತ್ತಾನೆ. ಹೆಂಗಸರೇ, ಬಂಧುಗಳೇ, ಹೀಗೆ ನೀವು ದಿನಗಟ್ಟಲೆ, ವರ್ಷಗಟ್ಟಲೆ, ಅವನ ಶರೀರವನ್ನು ಸಂಸ್ಕಾರ ಮಾಡದೇ ಬಿಟ್ಟರೆ ಅವನು ಎಂದಿಗೂ ಮರಳಿ ಬರುವುದಿಲ್ಲ. ಅಲ್ಲದೇ, ದೇಹ ನಶಿಸುವುದು (Decompose) ಆಗಿ ದುರ್ನಾತದಿಂದ ಅಸಹ್ಯವಾಗಿ ಕ್ರಿಮಿಕೀಟಗಳಿಂದ ಹಾಳಾಗುವುದು. ಆದ್ದರಿಂದ ವಿವೇಕಿಗಳಾಗಿ ಸುಯಜ್ಞನಿಗೆ ವೀರಸ್ವರ್ಗವಾಗುವುದನ್ನು ತಡೆಯುವುದರಿಂದ ಅವನಿಗೆ ನರಕವೇ ಆಗುವುದೆಂದು ತಿಳಿದು ದುರಭಿಮಾನ ಬಿಟ್ಟು ಸಂಸ್ಕಾರಕ್ಕೆ ಅಣಿಮಾಡಿರಿ.

ಇನ್ನೊಂದು ದೃಷ್ಟಾಂತ ತಿಳಿಸುತ್ತಾನೆ : ಒಂದು ಜೋಡಿ ಕುರಂಗ ಪಕ್ಷಿಗಳು ಸಂಸಾರ ಮಾಡುತ್ತಿದ್ದವು. ಒಂದು ದಿನ ಬೇಡ ಒಂದು ಬಲೆ ಹಾಕಿದ. ಹೆಣ್ಣು ಪಕ್ಷಿ ಸತ್ತಿತು. ಬೇಡ

ತನ್ನ ಪತ್ನಿ ವಿಪತ್ತಿನಲ್ಲಿರುವುದನ್ನು ಕಂಡು ದುಃಖಿಸಿದನೇ ಆಗಲಿ ಕಾಪಾಡಲಾಗಲಿಲ್ಲ. ಹೀಗೆ ಅಳುತ್ತಿರುವ ಕುರಂಗ ಗಂಡುಪಕ್ಷಿಯನ್ನು ನೋಡಿ ಅದನ್ನೂ ಹೊಡೆದ. ಆದ್ದರಿಂದ ಮಹಿಳೆಯರೇ, ನಿಮ್ಮ ಗತಿ ಹೀಗೇ ಆಗುವುದು. ಇಷ್ಟು ಹೇಳಿದ ಮೇಲೆ ಬಂಧುಗಳು ಶೋಕವನ್ನು ತ್ಯಜಿಸಿ ಶರೀರವನ್ನು ಸಂಸ್ಕಾರವನ್ನು ಮಾಡಲು ಬಿಟ್ಟುಕೊಟ್ಟರು. ಅಂತ್ಯ ಸಂಸ್ಕಾರ ಮಾಡಿದರು.

ಇಂತಹ ತತ್ತ್ವೋಪದೇಶದ ಮಾತುಗಳು ಆಡಿದ್ದು ಹಿರಣ್ಯಕಶಿಪುವಿನಲ್ಲಿದ್ದ ಜಯನ ಮಾತುಗಳೆಂದು ತಿಳಿಯಬೇಕು. ಮೇಲು ನೋಟಕ್ಕೆ ಹಿರಣ್ಯಕಶಿಪುವಿನ ಮಾತುಗಳಂತೆ ತೋರುವುದು.

ಇಷ್ಟೊಂದು ತತ್ವಗಳನ್ನು ಹಿರಣ್ಯಕಶಿಪು ನುಡಿದ ಮೇಲೇ ಅವನಿಗೆ ಎಚ್ಚರವಾಯಿತು. ನಾನೇಕೆ ಹೀಗೆ ಹರಿ ಗುಣಗಾನ ಮಹಿಮೆ ಮಾಡಿದೆ ? ಈ ಅಪಸ್ವರ ನನ್ನಿಂದ ಹೇಗೆ ಬಂದಿತು ? ಶತ್ರುವಾದ ಹರಿಯನ್ನು ಕೊಂಡಾಡುವುದೇ ? ಛೇ. ಎಂತಹ ಮೂರ್ಖನಾದೆ ಅಂತ ತಕ್ಷಣ ನೈಜ ರಾಕ್ಷಸ ಗುಣ ವ್ಯಕ್ತವಾಗಿ ನಾನು ಹಿಂದೆ ವಚನ ಕೊಟ್ಟಂತೆ ಹರಿಯು ಎಲ್ಲೇ ಅಡಗಿರಲಿ ಹುಡುಕಿ ಸಂಹರಿಸುತ್ತೇನೆ. ಆದರೆ ಅದಕ್ಕೆ ವಿಶಿಷ್ಟ ಶಕ್ತಿ ಬಲಾದಿಗಳನ್ನು ಸಂಪಾದಿಸಬೇಕು. ಅದು ತಪಸ್ಸಿನಿಂದ ಸಾಧ್ಯವೆಂದು ನಿರ್ಧರಿಸಿದ.

### ಹಿರಣ್ಯಕನ ಉಗ್ರತಪಸ್ಸು

**ಹಿರಣ್ಯಕಶಿಪೋ ರಾಜನ್ ಅಜೇಯುಮಜರಾಮರಮ್ ।**
**ಆತ್ಮಾನಮಪ್ರತಿದ್ವಂದ್ವಮೇಕರಾಜಂ ವ್ಯಧೀತ್ಸತ ॥**

ಋಷದ್ಭಾನುವಿಗೆ ತತ್ತ್ವೋಪದೇಶ ಮಾಡಿದ ಮೇಲೆ ತಾನು ಅಜರಾಮರ(ರೋಗ ಋಜನಾದಿಗಳಿಲ್ಲದೆ ಮರಣರಹಿತನಾಗಲು ಬಯಸಿ)ತ್ವವನ್ನು, ತನಗೆ ಶತ್ರುಗಳೇ ಇಲ್ಲದಿರುವ ಸರ್ವಾಧಿಕಾರತ್ವವನ್ನು ಹೊಂದಬೇಕೆಂದು ನಿಶ್ಚಯಿಸಿ ಮಂದರ ಪರ್ವತದಲ್ಲಿ ಬ್ರಹ್ಮದೇವರನ್ನು ಕುರಿತು ಅತ್ಯುಗ್ರ ತಪಸ್ಸನ್ನು ಮಾಡಲಾರಂಭಿಸಿದ. (*೧)

ಅವನ ತಪಸ್ಸು ಎಷ್ಟು ದಾರುಣ ಉಗ್ರವಾಗಿತ್ತೆಂದರೆ ತನ್ನ ಎರಡೂ ಕೈಗಳನ್ನು ಮೇಲೆತ್ತಿ ಆಕಾಶದ ಕಡೆಗೆ ಸದಾ ನೋಡುತ್ತಾ ಒಂಟಿ ಕಾಲಿನ ಮೇಲೆ ನಿಂತು ಮಾಡುತ್ತಿದ್ದನು. ಜಟೆಗಟ್ಟಿತು. ಜಟೆಯಿಂದ ಪ್ರಕಾಶವಾದ ವಹ್ನಿ ಹೊಗೆಯಿಂದ ಕೂಡಿ ಭಯಂಕರವಾಗಿ ಕಾಣಿಸುತ್ತಿತ್ತು.

**ಸ ತಪೇ ಮಂದರದ್ರೋಣ್ಯಾಂ ತಪಃ ಪರಮದಾರುಣಮ್ ।**
**ಊರ್ಧ್ವಬಾಹುರ್ನ್ನಭೋದೃಷ್ಟಿಃಪಾದಾಂ ಗುಷ್ಟಾಶ್ರಿತಾವಲಿಃ ॥**
**ಜಟಾದೀದಿಭರೇಜೇಸಂವರ್ತರ್ಕ ಇವಾಂಶುಭಿಃ ।**
**ತಸ್ಮಿನ್ ತಪಸ್ತಪ್ಯಮಾನೇ ದೇವಾಃ ಸ್ಥಾನಾನಿ ಭೇಜಿರೆ ॥**



ಹೀಗೆ ಕಠಿಣ ತಪಸ್ಸನ್ನು ಮಾಡುತ್ತಾ ಒಂದು ಸಾವಿರ ವರ್ಷಗಳಾಯಿತು. ದೇವತೆಗಳು ಹಿರಣ್ಯಕನು ಇನ್ನು ಬರುವುದಿಲ್ಲವೆಂದು ತಿಳಿದು ತಮ್ಮ ತಮ್ಮ ಸ್ಥಾನಕ್ಕೆ ಹೋದರು.

### ಹಿರಣ್ಯಕನ ತಪಃಭಾವ

ದೇವತೆಗಳು ತಮ್ಮ ಲೋಕಗಳಿಗೆ ತೆರಳಿದರಾದರೂ ಸಮಾಧಾನ ಆತಂಕ ಕಾಡುತ್ತಲೇ ಇತ್ತು. ಈ ರಾಕ್ಷಸನ ತಪಸ್ಸು ತತ್ಪರಿಣಾಮವಾಗಿ ತಮಗೇನು ಕಾಡುವುದೋ ಅಂತ ಚಿಂತಿಸುತ್ತಿರುವಾಗ ಹಿರಣ್ಯಕನ ತಪಃ ಪ್ರಭಾವ ತಿಳಿದುಬಂದಿತು. ಹಿರಣ್ಯಕಶಿಪುವಿನ ತಪಸ್ಸು ಅತ್ಯುಗ್ರಮಟ್ಟಕ್ಕೆ ಏರಿತು. ಅವನ ದೇಹದಿಂದ ಪ್ರಜ್ವಲಿಸುವ ಜ್ವಾಲೆ ಎಲ್ಲಾ ಲೋಕಗಳಲ್ಲಿ ಹರಡಲಾರಂಭಿಸಿದವು. ನಕ್ಷತ್ರಗಳು ಕೆಳಗೆ ಬೀಳಲಾರಂಭಿಸಿತು. ಬೆಂಕಿ ಉರಿಯಲಾರಂಭಿಸಿತು.

ಇಂತಹ ಜಾಜ್ವಲ್ಯಮಾನವಾದ ತಾಪ ತಡೆಯಲಾರದೆ ಕಂಗೆಟ್ಟವರಾದ ದೇವತೆಗಳು ಬೇರೆ ದಾರಿ ಕಾಣದೆ ಚತುರ್ಮುಖ ದೇವರಲ್ಲಿ ಹೋಗಿ ಶರಣಾಗತರಾಗಿ ಕೈಜೋಡಿಸಿ ಪ್ರಾರ್ಥಿಸಿದರು. ಬ್ರಹ್ಮದೇವರು ಆಶ್ವಾಸನೆ ಕೊಟ್ಟರು. "**ದೇವದೇವ ದೈತೇಂದ್ರ ತಪಸಾ ತಪ್ತಾ ದಿವಿಸ್ಥಾತುಂ ನ ಶಕ್ನುಮಃ । ತಸ್ಯ ಚೋಪ ಶಮಂ ಭೂಮನ್ ವಿದೇಹಿ ಎದಮನ್ಯಸೇ ॥**"

ಈ ದೈತೇಂದ್ರನ ತಪೋಭೀಷ್ಣವನ್ನು ಕೃಪಯಾ ಉಪಶಮನ ಮಾಡಿರಿ. ಇಲ್ಲವಾದರೆ ಅವನು ಬ್ರಹ್ಮ ಪದವಿಯನ್ನೂ ಹೊಂದಬೇಕೆಂದು ನಿಶ್ಚಯಿಸಿರುತ್ತಾನೆ. "ಈ ಗುರಿ ಮುಟ್ಟಲು ಎಷ್ಟೇ ದಿನಗಳಾಗಲಿ, ವರ್ಷಗಳಾಗಲಿ ನಾನು ಈ ಭೂಮಂಡಲವನ್ನೇ ಬುಡಮೇಲೆ ಮಾಡುವೆನು" ಎಂದೇ ತಪಸ್ಸಿನ ಉದ್ದೇಶವಾಗಿದೆ. ಅಲ್ಲದೇ ತಾನು ದೇವತೆಗಳಿಗೆ ಮದ್ಯಪಾನ, ದೈತ್ಯರಿಗೆ ಅಮೃತ ಕುಡಿಸುವವರೆಗೂ ಬಿಡುವುದಿಲ್ಲ.

ಆದ್ದರಿಂದ ದೇವತೆಗಳ ದೇವ ನೀವು ಎಲ್ಲವನ್ನೂ ಬಲ್ಲ ತ್ರಿಲೋಕಾದಿಪತಿಗಳು ಕೂಡಲೇ ಕಾರ್ಯೋನ್ಮುಖರಾಗಿರಿ ಎಂದು ಬಗೆಬಗೆಯಾಗಿ ಯಾಚಿಸಿದರು.

**ಇತಿವಿಜ್ಞಾಪಿತೋ ದೇವೈರ್ಭಗವಾನಾತ್ಮಭೂರ್ನೃಪ ।**
**ಪರೀತೋ ಭೃಗುದಕ್ಷಾದ್ಯೈರ್ಯಯೌ ದೈತ್ಯೇಶ್ವರಮಾಶ್ರಮಮ್ ॥**

ದೇವತೆಗಳ ಪ್ರಾರ್ಥನಾನುಸಾರ ಬ್ರಹ್ಮದೇವ ಭೃಗು ಇತ್ಯಾದಿಗಳಿಂದ ಕೂಡಿ ಹಿರಣ್ಯಕಶಿಪುವಿನ ಸ್ಥಾನಕ್ಕೆ ಪ್ರತ್ಯಕ್ಷರಾದರು.

ಹಿರಣ್ಯಕಶಿಪುವಿನ ದೇಹದ ಸುತ್ತಲೂ ಹುತ್ತವು ಬೆಳೆದಿತ್ತು. ಅನೇಕ ಗಿಡಬಳ್ಳಿಗಳಿಂದ ಆವೃತವಾಗಿರುವುದಲ್ಲದೆ ಅಸಂಖ್ಯಾತ ಕ್ರಿಮಿಕೀಟಗಳು ಅವನ ಚರ್ಮ ಮಾಂಸಗಳನ್ನು ಕಿತ್ತು ತಿನ್ನುತ್ತಿತ್ತು. ಇಂತಹ ದಾರುಣ ತಪಸ್ಸಿನಿಂದ ಅವನ ದೇಹವು ಕೃಶವಾಗಿ ಕೇವಲ

ಅಸ್ಥಿ ಪಂಜರಗಳಿರುವುದನ್ನು ಬ್ರಹ್ಮದೇವರಿಗೆ ನೋಡಿ ಆಶ್ಚರ್ಯವಾಗಿ ಮಂದಹಾಸದಿಂದ

**ವಿಲಕ್ಷ್ಯ ವಿಸ್ಮಿತಃ ಪ್ರಾಹ ಹಸಂ ಸ್ತಂ ಹಂಸವಾಹನಃ ॥**

ಕಶ್ಯಪ ಪುತ್ರ ಎದ್ದೇಳು. ನಿನ್ನ ತಪಸ್ಸು ಇಂದಿಗೆ ಸಿದ್ಧಿಯಾಗಿದೆ. ನಾನು ನಿನ್ನ ತಪಸ್ಸಿನಿಂದ ಪ್ರೀತನಾಗಿರುವೆ. ಕಣ್ಣು ತೆರೆದು ನೋಡು. ನಿನಗೆ ವರ ಕೊಡಲು ಬಂದಿರುವೆನು. ಕೇಳು. ಏನು ಬೇಕು. ನಿನ್ನ ಮನೋಧಾರಡ್ಯ ಛಲ ಶ್ಲಾಘನೀಯವೇ. ದೇಹ ಕೃಶವಾಗಿ ಬರೀ ಎಲುಬುಗಳು ಅದರಲ್ಲಿ ಪ್ರಾಣಿಗಳೇ ವಾಸ ಮಾಡಿ ವಿವಿಧ ಹಿಂಸೆ ಕೊಡುತ್ತಿದ್ದರೂ ನಿನ್ನ ಅಚಲ ಹಠವಿರುವುದನ್ನು ಕಂಡು ಪ್ರಶಂಶ ಮಾಡಲರ್ಹನಾಗಿರುವೆ. ಇಂತಹ ಘೋರ ತಪಸ್ಸನ್ನು ಹಿಂದೆ ಮುನಿಗಳು ಯಾರೂ ಮಾಡಿಲ್ಲ. ನಿರಾಹಾರನಾಗಿ ಮಾಡಿದ ತಪಸ್ಸು ನೂರಾರು ವರ್ಷ ಮಾಡಿರುವೆ. ಹೊಗಳುವಂಥಾ ಕಠಿಣ ತಪಸ್ಸನ್ನು ಎಷ್ಟೇ ವಿಘ್ನಗಳು ಬಂದರೂ ಎದೆಗುಂದದೆ ಸಾಧಿಸಿರುವೆ. ನಿನ್ನ ತಪೋಪ್ರಭಾವ ನನ್ನನ್ನು ಬಂಧಿಸಿದೆ. ನಾನು ಮರಣರಹಿತನು. ನೀನಾದರೋ ಮರಣವು ಸಿದ್ಧವಿರುವವನಿಗೆ ನನ್ನ ದರ್ಶನ ವಿರಳ. ಮೆಚ್ಚಿದೆ ವರಬೇಡು.

### ಬ್ರಹ್ಮದೇವರ ವರಪ್ರದಾನ

**ಇತ್ಯುಕ್ತ್ವಾಽಽದಿಭವೋ ದೇವೋ ಭಕ್ಷಿತಾಂಗಂಪಿಪೀಲಿಕೈಃ ।**
**ಕಮಂಡಲುಜಲೇನ ಔಕ್ಷದ್ ದಿವ್ಯೇನ ಅಮೋಘುರಾಧಸಾ ॥**

ಆದಿ ಬ್ರಹ್ಮದೇವರು ಅವನನ್ನು ಸಂತೈಸಲು ಹರಿಪಾದೋದಕದಿಂದ ಸಿಂಚಿತವಾದ ಕಮಂಡಲಿನಿಂದ ಪ್ರೋಕ್ಷಿಸಿದರು. ಕೂಡಲೇ ಒಣಗಿದ ಶರೀರವು ಹಿಂದಿನಂತೆ ದಷ್ಟಪುಷ್ಟವಾಗಿ ಸರ್ವಾಯವಗಳು ತುಂಬಿಕೊಂಡು ವಜ್ರಕಾಯನಾದ. ಬಂಗಾರದಂತೆ ದೇಹಕಾಂತಿ ಹೊಳೆಯಿತು. ಅಗ್ನಿಕುಂಡದಿಂದ ಹೊರಬಂದಂತೆ ಎದ್ದುನಿಂತನು.

ಎದುರಿಗೆ ಹಂಸಾರೂಢರಾಗಿ ಬಂದಿರುವ ದೇವತೆಗಳ ದೇವನನ್ನು ಕಂಡನು. ಆನಂದದಿಂದ ಸಾಷ್ಟಾಂಗ ನಮಸ್ಕಾರ ಮಾಡಿದನು.

**ನನಾಮಶಿರಸಾ ಭೂಮೌ ತದ್ದರ್ಶನ ಮಹೋತ್ಸವಃ ॥** (* ೨)

ಎದ್ದುನಿಂತು ಎರಡು ಕೈಗಳಿಂದ ನಮಸ್ಕರಿಸಿ ವಿಧೇಯನಾಗಿ ಕಣ್ಣಲ್ಲಿ ಸಂತೋಷ ಬಾಷ್ಪಗಳು ಸುರಿಯುತ್ತಿರಲು ಗದ್ಗದ ಕಂಠದಿಂದ ಮುಂದೆ ಒಂಭತ್ತು ಶ್ಲೋಕಗಳಿಂದ ಸ್ತೋತ್ರ ಮಾಡಿದನು.

**ವಿಶೇಷ ತತ್ವ :** ಇಲ್ಲಿ ಹಿರಣ್ಯಕಶಿಪು ಬ್ರಹ್ಮರನ್ನು ಸ್ತೋತ್ರ ಮಾಡಿದ ಲಕ್ಷಣಗಳು ಬ್ರಹ್ಮದೇವರಲ್ಲಿ ಇಲ್ಲದೇ ಇದ್ದರೂ ಗುಣಪೂರ್ಣನಾದ ಪರಬ್ರಹ್ಮನ ಗುಣಗಳ



ಸ್ತೋತ್ರವೇ ಆಗಿರುವುದು. ಇದನ್ನು ತಿಳಿಯದೇ ಹಿರಣ್ಯಕನು ಬ್ರಹ್ಮದೇವನಲ್ಲಿರುವುದಾಗಿ ಭ್ರಾಂತಿಯಿಂದ ಮಾಡಲಾಗಿದೆ.

**ಬ್ರಹ್ಮಣ್ಯೋಪ್ಯಧಿಕಂ ವಿಷ್ಣುಂ ಜಾನನ್ನಪಿಹಿರಣ್ಯಕಃ ।**
**ಬ್ರಹ್ಮಾಣಂ ತದ್ಗುಣೈಃ ಸ್ತೌತಿ ತದ್ಯುವಿಷಣ್ಣ ವಿವಕ್ಷಯಾ ॥** ಭಾಗ.ತಾ.

ಚತುರ್ಮುಖ ಬ್ರಹ್ಮನಿಗಿಂತ ಶ್ರೀಮನ್ನಾರಾಯಣನೇ ಸರ್ವೋತ್ತಮನೆಂದು ತಿಳಿದಿದ್ದರೂ ಬ್ರಹ್ಮಾಂತರ್ಯಾಮಿಯಾಗಿರುವನೆಂದು ತಿಳಿಯದೆ ದೈತ್ಯೇಂದ್ರ ಚತುರ್ಮುಖನಲ್ಲಿ ಅಂತಹ ಗುಣಗಳಿರುವುದೆಂಬ ಭ್ರಾಂತಿಯಿಂದ ಸ್ತುತಿಸಿದನೆಂದು ತಿಳಿದುಬರುವುದು. ಇಂತಹದನ್ನು **ಮಿಶ್ರಸ್ತುತಿ** ಎಂದು ಹೇಳಬಹುದು.

ಮಿಶ್ರಸ್ತುತಿಯಿಂದ ಬ್ರಹ್ಮದೇವನನ್ನು ಹೊಗಳಿದಾಗ ಆತನ ತೃಪ್ತಿಕಾರಣವಾಗುವುದು. ಆದರೆ, ಮಿಶ್ರಶೃತಿಯಲ್ಲಿ ಭಗವಂತನನ್ನು ಪ್ರಶಂಶಿಸುವ ವಾಕ್ಯಗಳು ಮಾತ್ರ ಇರುವಾಗ ಮಿಶ್ರಶೃತಿ ಎನ್ನಲಾಗುವುದಿಲ್ಲ.

ಮಿಶ್ರಶೃತಿಯಲ್ಲಿ ಹೊಗಳಿದ ಗುಣಗಳು ಶ್ರೀಹರಿಯಲ್ಲಿಯೇ ಇರುವುದಾಗಲೀ ಚತುರ್ಮುಖನಲ್ಲಿರುವುದಿಲ್ಲ. ಇಂತಹ ಗುಣಗಳ ಸ್ತುತಿ ಜಯನೆಂಬುವನು (ಒಳಗಿದ್ದು) ನುಡಿಸಿದನು. ಹಿರಣ್ಯಕನೆಂಬ ದೈತ್ಯ ಅಜ್ಞಾನದಿಂದ ಚತುರ್ಮುಖನಲ್ಲಿರುವುದೆಂದು ಹೇಳಿದ ಮಾತುಗಳು.

ಹಾಗಾದರೆ ಹಿರಣ್ಯಕನ ತಪಸ್ಸಿಗೆ ಪ್ರೀತನಾಗಿ ಸ್ತುತಿಗೆ ತಾನೇ ವಿಷಯಕನೆಂದು ಶ್ರೀನಾರಾಯಣೇ ಏಕೆ ಪ್ರತ್ಯಕ್ಷನಾಗಲಿಲ್ಲವೆನ್ನುವ ಪ್ರಶ್ನೆಗೆ –

ಶ್ರೀಹರಿಯೇ ಪ್ರತ್ಯಕ್ಷನಾಗಿದ್ದರೆ ಶ್ರೀಹರಿಯ ಸಂಕಲ್ಪವೇ ಅಸ್ತವ್ಯಸ್ತವಾಗುತ್ತಿತ್ತು. ಹಿರಣ್ಯಕ ಹರಿದ್ವೇಷಿ. ಹರಿಯನ್ನು ಸಂಹರಿಸಬೇಕೆಂದೇ ಉಗ್ರ ತಪಸ್ಸನ್ನಾಚರಿಸಿದ. ಒಂದು ವೇಳೆ ನಾರಾಯಣನೇ ಪ್ರತ್ಯಕ್ಷನಾಗಿದ್ದರೆ (೧) ಹಿರಣ್ಯಕನ ಇಚ್ಛೆ ಪ್ರಕಾರ ಹರಿಯೇ ಬಂದಾಗ ಸಂಹರಿಸಲು ಯತ್ನಿಸುತ್ತಿದ್ದ. (೨) ಶ್ರೀಹರಿ ಪ್ರತ್ಯಕ್ಷನಾಗಿದ್ದರೆ ಹಿಂದೆ ಮಾತುಕೊಟ್ಟಂತೆ ಅವನನ್ನು ಈಗಲೇ ಮುಗಿಸಬೇಕಾಗುತ್ತಿತ್ತು.

ಅವನ ಪಾಪಕುಂಭ ತುಂಬಲು ದ್ವೇಷ ಪಕ್ವವಾಗಲೆಂದು ಹರಿಸಂಕಲ್ಪ. ತಸ್ಮಾತ್ ಬ್ರಹ್ಮದೇವರು ಬಂದರು.

ಈ ಪ್ರಮೇಯವನ್ನು ಶ್ರೀಮದಾಚಾರ್ಯರು ವಿವರಿಸುತ್ತಾರೆ.

ಮಿಶ್ರಸ್ತುತಿ ಹಾಗೆಂದರೇನು ? ವಾಕ್ಯಗಳು ಬೇರೆ ಬೇರೆ ವಿಷಯಗಳನ್ನು ತಿಳಿಸುವುದು. ಒಬ್ಬನಲ್ಲಿದ್ದ ಗುಣಗಳನ್ನು ಮತ್ತೊಬ್ಬನಲ್ಲಿರುವುದಾಗಿ ಆರೋಪ ಮಾಡಿ ಭ್ರಮಿಸಿ ಸ್ತೋತ್ರ ಮಾಡುವುದು.

ಮಿಶ್ರಸ್ತುತಿ ಉದಾಹರಣೆಗೆ :–

**ಕಲ್ಪಾಂತೇ ಕಾಲಸೃಷ್ಟೇನ ಯೋಽಂಧೇನ ತಮಸಾಽಽವೃತಮ್ ।**
**ಅಭಿವ್ಯನಗ್ ಜಗದಿದಂ ಸ್ವಯಂ ಜೋತಿಃ ಸ್ವರೋಚಿಷಾ ॥**

**ಸಾಧಾರಣಾರ್ಥ :** ಬ್ರಹ್ಮದೇವನನ್ನು ಆದಿಯಲ್ಲಿ ಈ ಜಗತ್ತು ಪರಬ್ರಹ್ಮನು ಅಂಧಕಾರದಲ್ಲಿ ಮುಳುಗಿದುದನ್ನು ಆ ಅಂಧಕಾರವನ್ನು ತೊಲಗಿಸಿ ಜಗತ್ತಿಗೆ ಪ್ರಕಾಶಮಾನವಾಗುವಂತೆ ಮಾಡಿದ. ಆದ್ದರಿಂದ ಮನುಗಳ ಮೂಲಕ ಕಾಪಾಡಿದ. ನಂತರ ಸಂಹಾರ (ಲಯ) ಕರ್ತನೂ ಮಹತ್ವಾಭಿಮಾನಿಯಾದ ನಿನಗೆ ನಮಸ್ಕಾರವು.

ಪರಮಾತ್ಮನ ಜೇಷ್ಟಪುತ್ರನಾದ ನೀನು ಈ ಜಗತ್ತಿಗೆ ಸೃಷ್ಟಿಕರ್ತನು. ನೀನು ಮಹಾಜ್ಞಾನಿಯು. ನಿನ್ನ ಜ್ಞಾನವನ್ನು ಅನೇಕರು ಹೊಂದಿರುತ್ತಾರೆ. ಇಂತಹ ವಿರಾಟ ಶರೀರ ಸಹಿತನಾದ ನಿನಗೆ ನಮಸ್ಕಾರವು.

ನಾಶರಹಿತನು, ಅವ್ಯಯನು, ಪರಮಾತ್ಮನೂ ನಾಶರಹಿತನಾದವನಲ್ಲಿ ಸದಾ ಧ್ಯಾನಿಸುವನು. ಕಾಲಕ್ಕೆ ನಿಯಾಮಕನು. ಸಮಸ್ತ ಜೀವರಲ್ಲಿ ಇದ್ದು ವ್ಯಾಪಿಸಿ ಅವರಿಂದ ವ್ಯಾಪಾರ ಮಾಡಿಸುವವನು, ಸಕಲ ವೇದಗಳನ್ನೂ ಬಲ್ಲವನು, ವೇದ ಪ್ರತಿಪಾದ್ಯನು ನೀನೇ, ಸ್ವತಂತ್ರನು. ಸೃಷ್ಟಿಸಿದ ಬ್ರಹ್ಮಾಂಡವನ್ನು ನಿನ್ನ ಹೃದಯದಲ್ಲಿ ಧರಿಸಿರುವ ಗುಣಪೂರ್ಣನೂ, ಜನನ ಮರಣಾದಿ ಅವಸ್ಥಾತ್ರಯಗಳಿಂದ ದೂರನು, ಹೇ ವಿಭುವೇ, ಸ್ವಾಮಿಯೂ ನಿನ್ನಯ ಪ್ರಸಾದವಿಲ್ಲದೆ ನಿನ್ನನ್ನೂ ಪ್ರತ್ಯಕ್ಷ ಕಾಣಲಾಗದು. ಅನಂತನು, ಅಗೋಚರನು ಸಮಸ್ತ ಚೇತನಾಚೇತನ ಪ್ರಕೃತಿಯ ಪ್ರೇರಕನೂ ಆದ ಭಗವಂತನಾದ ನಿನಗೆ ನಮೋನಮಃ.

ಹಿರಣ್ಯಕಶಿಪು ಬ್ರಹ್ಮದೇವರನ್ನು ಕುರಿತು ಸ್ತೋತ್ರ ಮಾಡಿದ ಒಂಭತ್ತು ಶ್ಲೋಕಗಳಲ್ಲಿರುವ ಸಮಸ್ತ ಗುಣಗಳು ಮುಖ್ಯವಾಗಿ ಶ್ರೀಮನ್ನಾರಯಣನಲ್ಲೇ ಇರುವುದಾಗಿ ತಿಳಿಯದೇ, ಚತುರ್ಮುಖರನ್ನು ಕೊಂಡಾಡಿದ.

ಜಗತ್‌ಸೃಷ್ಟಿತತ್ವವು ಪಾಲನ ಕರ್ತೃತ್ವವ ಲಯ ಕರ್ತೃತ್ವ ಇತ್ಯಾದಿ ಗುಣಗಳು ಬ್ರಹ್ಮದೇವರಲ್ಲಿರುವುದಿಲ್ಲ. ಅನುಬಂಧ ೧(ಅ) ನೋಡಿ.

ಆದರೂ ಸ್ತೋತ್ರಗಳನ್ನು ದೈತ್ಯಾಂತರ್ಯಾಮಿ ಆವಿಷ್ಟನಾದ ದೇವತೆಯಾದ ಜಯನು ಮಾಡಿದ್ದೆಂದು ತಿಳಿಯಬೇಕೆ. ಹಾಗೆ ತಿಳಿಯದಿದ್ದರೆ ವರ ಪಡೆದ ನಂತರ ರಾಕ್ಷಸನ ಮನೋವೃತ್ತಿ ವ್ಯಾಪಾರಗಳನ್ನು ವೀಕ್ಷಿಸಿದರೆ ರಾಕ್ಷಸನು ಮಾಡಿದ ಸ್ತುತಿಯಲ್ಲವೆಂಬುದು ಸುಸ್ಪಷ್ಟ.

ಜೀವನಾದ (ಜೀವೋತ್ತಮರಾದ) ಬ್ರಹ್ಮದೇವರಲ್ಲಿ ಇಷ್ಟೊಂದು ಮಹಾಗುಣಗಳಿರಲು ಸಾಧ್ಯವಿರುವುದಿಲ್ಲ. ಅಸಂಭವ. ಆದರೆ ಜೀವಾಂತರ್ಯಾಮಿ ಸಮಸ್ತ ಜೀವ ನಿಯಾಮಕನಾದ



ಶ್ರೀಮಹಾವಿಷ್ಣುವಿನಲ್ಲಿ ಪರಮ ಮುಖ್ಯ ವೃತ್ತಿಯಿಂದ ವರ್ಣಿತವಾಗಿರುವುದೆಂದು ತಿಳಿಯಬೇಕೆಂದು ಶ್ರೀಮದಾಚಾರ್ಯರು ತತ್ವವನ್ನು ವಿವರಿಸುತ್ತಾರೆ.

**ಪ್ರಾಯಸ್ತು ಸ್ತುತಿಶಬ್ದೇಷು ಮಿಶ್ರಾವ ಹರಿಂವಿನಾ ।**
**ಕೇಚಿತ್ ಜೀವಗುಣಾಸ್ತತ್ರ ತನ್ನಿಯಂತುಃ ಹರೇ ಪರೇ ॥**
**ಏಕಸ್ಥಾನೈಕಕಾರ್ಯತ್ವಾದ್ವಿಷ್ಣೋಃ ಪ್ರಾಧಾನ್ಯತಸ್ತಥಾ ।**
**ಜೀವಸ್ಯ ತದಧೀನತ್ವಾನ್ನ ಬಿನ್ನಾಧಿಕೃತಂವಚಃ ॥** ಭಾಗ.ತಾ. ೭.೩.೨೫–೨೬

ದೇಹಗಳಲ್ಲಿ ಜೀವ ಪರಬ್ರಹ್ಮರ ಸ್ಥಾನ ಒಂದೇ ಕಡೆ ಇದ್ದರೂ ಫಲ ಕೊಡುವವನು ಭಗವಂತನೊಬ್ಬನಿಗೇ ಸ್ವಾತಂತ್ರ್ಯವಿರುವುದು. ಜೀವ ಫಲಾನುಭವಿ ಮಾತ್ರವೆಂದು ಬ್ರಹ್ಮತರ್ಕದಲ್ಲಿದೆ.

ಹಿರಣ್ಯಕಶಿಪು ಬ್ರಹ್ಮದೇವನನ್ನು ಸ್ತುತಿಮಾಡುವ ಏಳನೇ ಸ್ತೋತ್ರ (ಅಧ್ಯಾಯ ೩–೩೧)ದಲ್ಲಿ (೧) ತ್ವತ್ತಃ ಪರಂ ನಾಪರಮಪ್ಯ (೨) ನೇಜದ್ ಏಜಚ್ಚ ಕಿಂಚಿದಾ ವ್ಯತಿರಿಕ್ತ ಮಸ್ತಿ.

**ವಿದ್ಯಾಕಲಾಸ್ತೇ ತನವಾಕ್ಚ ಸರ್ವಾ ಹಿರಣ್ಯಗರ್ಭೋಽಸಿ ಬೃಹತ್ ತ್ರಿಪ್ರಷ್ಟಃ** (ಅ. ೩–೩೧)

ಈ ಎರಡು ವಾಕ್ಯಗಳಿಗೆ ಕೆಲವರು ತಪ್ಪಾಗಿ ಅರ್ಥೈಸಿರುತ್ತಾರೆ.

**(೧) ತ್ವತ್ತಃ ಪರಂ ನಾಪರಂ** = ಬ್ರಹ್ಮದೇವ ನಿನಗಿಂತ ಭಿನ್ನವಾಗಿ ಶ್ರೇಷ್ಠವಾಗಿರುವುದು. ಬೇರೆ ಇರುವುದಿಲ್ಲ. ನೀನೇ ಎಲ್ಲವೂ ಆಗಿರುವೆ ಎಂದಿದ್ದಾರೆ. ಈ ಅರ್ಥವನ್ನು ಶ್ರೀಮದಾಚಾರ್ಯರು ನಿರಾಕರಿಸುತ್ತಾ ಹೀಗೆ ತಿಳಿಸುತ್ತಾರೆ.

**ಪರಾವರೇಷುಯಸ್ಮಾತ್ ತ್ವಂ ವ್ಯಾಪ್ತೋವಿಷ್ಣುಃ ಸನಾತನಃ ।**
**ತಸ್ಮಾನ್ನ ವ್ಯತಿಕ್ತತ್ವಂ ಇತ್ಯಾಹುಃ ವೇದವಾದಿನಃ ॥** ಭಾಗ.ತಾ.

**ಅರ್ಥ :** ವಸ್ತುಗಳು ಎರಡು ರೀತಿ ಇರುವುದು. ಪರಾ ಮತ್ತು ಅಪರಾ. ಪರಾ : ಅತ್ಯುತ್ತಮನಾದ ನೀನು. ಅಪರಾ : ಉತ್ತಮರಲ್ಲದಿರುವ ವಸ್ತುಗಳ ಅಂತರ್ಯಾಮಿ ಹಾಗೂ ಹೊರಗೂ ವ್ಯಾಪ್ತನಾಗಿರುವನು. ಪರಮಾತ್ಮನನ್ನು ವಿನಃ ಬೇರೆ ಯಾವುದೂ ಸ್ವತಂತ್ರವಾಗಿರುವುದು ಭಗವಂತನೊಬ್ಬನೆ, ಸರ್ವತಂತ್ರಸ್ವತಂತ್ರನೆಂದು ತಿಳಿಯಬೇಕು.

**(೨) ಅನೇಜದ್ :** ಎಂಬುದಕ್ಕೆ ಭಗವಂತ ನೀನು ಹೆದರುವವನಲ್ಲ. ನಿನ್ನನ್ನು ಹೆದರಿಸುವವರು ಯಾರೂ ಇರುವುದಿಲ್ಲ. ಆದರೆ, ನಿನ್ನನ್ನು ಕಂಡು (ನಿನ್ನ ವಿಷಯವಾಗಿ) ಬಾಕಿ ಎಲ್ಲರೂ ಹೆದರುತ್ತಾರೆ. **ಭಿಷಾಸ್ಮಾದ್ವಾತಃಪವತೆ ಭೀಷಾದೇತಿಸೂರ್ಯಃ ಭಿಷಸ್ಮಾದ್‌ಇಂದ್ರಶ್ಚಾಗ್ನಿಃ ಮೃತ್ಯುರ್ಧಾವತಿ ಪಂಚಮಃ** ಇತಿ ಶೃತಿ

**"ಅನೇಜದೇಕಂ ಮನಸೋ ಜವೀಯೋ"** ಎಂಬ ಉಪನಿಷದ್ವಾಕ್ಯ ಪುಷ್ಟಿಕೊಡುತ್ತದೆ.

ಈ ಎರಡು ಗುಣಗಳು ಪರಮಾತ್ಮನಲ್ಲೇ ಇರುವುದಾಗಲಿ ಬ್ರಹ್ಮದೇವರ ಪರವಾಗಿ ಅರ್ಥಮಾಡಿಕೊಡದು ಎಂದು ಗ್ರಹಿಸಬೇಕು. (* ೩)

**ಹಿರಣ್ಯಕನು ಬೇಡಿದ ವರಗಳು**

ಈ ರೀತಿ ಸ್ತೋತ್ರ ಮಾಡಿ ತನಗೆ ಬೇಕಾದ ವರಗಳನ್ನು ಬೇಡುತ್ತಾನೆ. ಶ್ರೀಮದ್ಭಾಗವತದಲ್ಲಿ ಹಿರಣ್ಯಕಶಿಪು ಮೂರು ವರಗಳನ್ನು ಕೇಳುತ್ತಾನೆ (೧೪-೧೫) ಎಂದು ವರ್ಣಿತವಾಗಿದೆ.

(೧) ಬ್ರಹ್ಮದೇವಾ, ನಾನು ಬೇಡಿದ ವರಗಳನ್ನು ಕೊಡುವೆಯಾ ? ಹಾಗಿದ್ದರೆ ಕೇಳು. ಈವರೆಗೂ ನಿನ್ನಿಂದ ಸೃಷ್ಟಿಸಲ್ಪಟ್ಟ ಯಾವ ಭೂತ (ಪ್ರಾಣಿ)ಗಳಿಂದ ಮರಣ ಹೊಂದಬಾರದು. ಚೇತನಾಚೇತನಗಳಿಂದಲೂ ಸಾವು ಬರಬಾರದು.

ಮನೆಯಲ್ಲಿ, ಹೊರಗೆ, ಹಗಲಾಗಲಿ ರಾತ್ರಿಯಾಗಲಿ ಆಯುಧಗಳಿಂದಲೂ ಭೂಮಿಯಲ್ಲಿ, ನಭೋಮಂಡಲದಲ್ಲಿ ನರ, ಮೃಗ, ವಾನರಗಳಿಂದಲೂ ಮೃತ್ಯು ಬರಬಾರದು. ಜಡ ಪದಾರ್ಥಗಳಿಂದ ಜೀವದಾನವ ಸರ್ಪಗಳಿಂದಲೂ ನನಗೆ ಮೃತ್ಯು ಬರಬಾರದು.

ನನಗೆ ವಿರೋಧಿಸುವವರು ಯಾರೂ ಯುದ್ಧದಲ್ಲಿ ಗೆಲ್ಲಬಾರದು. ನಾನು ಏಕ ಚಕ್ರಾಧಿಪತಿಯಾಗಿರುವಂತಹ ವರಗಳನ್ನು ಅನುಗ್ರಹಿಸು ಎಂದು ಕೇಳಿದ.

**ನಾಂತರ್ಬಹಿರ್ದಿವಾನಕ್ತಮನ್ಯಸ್ಮಾದಪಿ ಚಾಯುಧೈಃ**
**ನ ಭೂಮೌ ನಾಂಬರೇಮೃತ್ಯುರ್ನ ನರೈರ್ನಮೃಗೈರಪಿ ।**
**ವ್ಯಸುಭಿರ್ವಾಽಸುಮದ್ಭಿರ್ವಾ ಸುರಾಸುರಮಹೋರಗೈಃ ।**
**ಅಪ್ರತಿದ್ವಂದ್ವತಾ ಯುದ್ಧೇ ಏಕಪತ್ಯಂ ಚ ದೇಹಿನಾಮ್ ॥**
**ಸರ್ವೇಷಾಂ ಲೋಕಪಾಲಾನಾಂ ಮಹಿಮಾನಂ ತಥಾಽಽತ್ಮನಃ ।**
**ತಪೋಯೋಗಪ್ರಭಾವೇನ ಯೋ ನ ರಿಷ್ಯತಿ ಕರ್ಹಿಚಿತ್ ॥**

ಶ್ರೀ ನೃಸಿಂಹ ಪುರಾಣದಲ್ಲಿ ವರಗಳ ವಿವರ ಸ್ವಲ್ಪ ವಿಸ್ತಾರವಾಗಿರುವುದು.

**ನ ಶುಷ್ಕೇಣ ನಚಾರ್ದ್ರೇಣ ನ ಜಲೇನ ನ ವಹ್ನಿನಾ ।**
**ನ ಕಾಷ್ಠೇನ ನಕೀಟೇನ ಪಾಷಾಣೇನ ನ ವಾಯುನಾ ॥**
**ನಾಯುಧೇನ ನಶೂಲೇನ ನ ಶೈಲೇನ ನ ಮಾನುಷೈಃ ।**
**ನ ಸುರೈರಸುರೈರ್ವಾಪಿ ನಗಂಧರ್ವೈಃ ನರಾಕ್ಷಸೈಃ ।**
**ನಕಿನ್ನರೈಃ ನಯಕ್ಷೈಸ್ತು ವಿದ್ಯಾಧರಾ ಭುಜಂಗಮೈಃ ।**
**ನವಾನರೈಃ ಮೃಗೈರ್ವಾಪಿ ನೈವ ಮಾತೃಗಣೈರಪಿ ।**



**ನಾಭ್ಯಂತರೇ ನ ಬಾಹ್ಯೈಃ ತು ನಾನ್ಯೈಃ ಮರಣಹೇತುಭಿಃ ।**
**ನ ದಿನೇ ನಚ ತ್ವತ್ತೋ ಮೇ ತ್ವತ್ ಪ್ರಸಾದಾದ್ ಭವೇನ್ಮೃತಿಃ ॥**

ನರಸಿಂಹಪುರಾಣ

ಹೀಗೆ ೨೭ ವಿಧ ವರ ಕೇಳಿದನೆಂದು ಉಲ್ಲೇಖವಿದೆ.

ಬ್ರಹ್ಮದೇವರಿಗೆ ಒಬ್ಬ ವ್ಯಕ್ತಿ ಏಕಕಾಲದಲ್ಲಿ ಇಷ್ಟೊಂದು ವರಗಳನ್ನು ಹಿಂದೆ ಯಾರೂ ಕೇಳಿದ್ದಿಲ್ಲವೆಂದು ಆಶ್ಚರ್ಯವಾಯಿತು. ನಸುನಕ್ಕು ವರಪ್ರದಾನ ಮಾಡಿದರು.

ಹಿರಣ್ಯಕಶಿಪು ತಾನು ಕೇಳಿದ ವರಗಳಿಂದ ಬ್ರಹ್ಮದೇವರಿಗೆ ದಿಕ್ಕು ತೋಚದಂತೆ (Confuse) ಮಾಡಿದೆ ಅಂದುಕೊಂಡು ತನ್ನ ಬುದ್ಧಿವಂತಿಕೆಯ ಬಗ್ಗೆ ಹಿಗ್ಗಿದ. He thought he has been over smart than Brahmadeva. ವರಗಳ ಹಿಂದು ಮುಂದು ತಿಳಿಯದೆ? ಸರಿ. ತಲೆಬಿಸಿ ಏಕೆ ಮಾಡಿಕೊಳ್ಳಬೇಕೆಂದು ಆಗಲಿ, ಎಂದು ಹೇಳಿದರೆಂದು ಸತ್ಯಧರ್ಮತೀರ್ಥರು ಚಮತ್ಕಾರವಾಗಿ ಬರೆದಿರುತ್ತಾರೆ.

## ಬ್ರಹ್ಮದೇವರ ವರದಾನ

### ತತ್ಪರಿಣಾಮವಾಗಿ ಹಿರಣ್ಯಕಶಿಪುವಿನ ಉನ್ನತ್ತ ವರ್ತನೆ ಅತ್ಯಾಚಾರಗಳಿಂದ ಶ್ರೀ ಪ್ರಹ್ಲಾದರಾಜರ ಅವತಾರಕ್ಕೆ ನಾಂದಿ

**ದಾನವೇಂದ್ರ ಬ್ರಹ್ಮದೇವರಿಂದ ವರ ಪಡೆದಾದ ಮೇಲೆ ಹಿರಣ್ಯಕಶಿಪುವಿನಿಂದ ದುಷ್ಕೃತಿಗಳು :** ರಾಕ್ಷಸರಾಜನ್, ನೀನು ಕೇಳಿದ ವರಗಳನ್ನು ಹಿಂದೆ ಯಾರೂ ಕೇಳಿಲ್ಲ. ಅತಿ ದುರ್ಲಭವಾಗಿರುವುದು. ಆದರೂ ನಿನ್ನ ತಪಸ್ಸು, ಸ್ತೋತ್ರಗಳಿಂದ ಪ್ರಸನ್ನನಾಗಿ ಕೊಡುತ್ತಿರುವೆನು ಎಂದು ಹೇಳಿ ಅವನಿಂದ ಪೂಜಿಸಲ್ಪಟ್ಟವರಾಗಿ ಪ್ರಜಾಪತಿಗಳಿಂದಲೂ ಸ್ತುತಿಸಲ್ಪಟ್ಟವರಾಗಿ ತಮ್ಮ ಲೋಕಕ್ಕೆ ತೆರಳಿದರು.

**ತಾತಮೇ ದುರ್ಲಭಾಃ ಪುಂಸೋ ಯಾನ್ ವೃಣೀಷೇ ವರಾನ್ ಮಮ ।**
**ತಥಾಪಿ ವಿತರಾಮ್ಯಂಗ ವರಾನ್ ಯದ್ಯಪಿದುಲ್ಲಭಾನ್ ।**

ಹೀಗೆ ಲಬ್ಧ ವರನಾದ ದೈತ್ಯ, ಕಾಂಚನ ಶರೀರ, ದೃಢಕಾಯನಾಗಿ ಇನ್ನು ಮುಂದೆ ಯಾರೂ ನನಗೆ ಶತೃಗಳಿರುವುದಿಲ್ಲ. ಅಜೇಯನಾಗಿ ಅಮರತ್ವವನ್ನು ಹೊಂದಿದೆನೆಂದು ತಿಳಿದು ತನ್ನ ಅನುಜನನ್ನು ಕೊಂದ ಶ್ರೀಹರಿಯಲ್ಲಿ ವಿಪರೀತ ದ್ವೇಷಯುಕ್ತನಾಗಿ ಮೆರೆಯಲಾರಂಭಿಸಿದ.

**ಏವಂ ಲಬ್ಧವರೋ ದೈತ್ಯೋ ಬಿಭ್ರದ್ ಹೇಮಮಯಂ ವಪುಃ**
**ಭಗವತ್ಯಕರೋದ್ವೇಷಂ ಭ್ರಾತುರ್ವಧಮನುಸ್ಮರನ್**

ಹೀಗೆ ಉನ್ಮತ್ತನಾಗಿ ಯಾರನ್ನೂ ಲೆಖ್ಖಿಸಿದೆ ತನಗೆ ಪ್ರತಿಸ್ಪರ್ಧಿಗಳು ಈ ಜಗತ್ತಿನಲ್ಲಿಲ್ಲವೆಂದು ಅಹಂಕಾರದಿಂದ ಮೆರೆಯಲಾರಂಭಿಸಿದ. ಕೇಳಬೇಕೆ. ಇಂದಿನಿಂದ ಶ್ರೀಹರಿಯನ್ನು ಮತ್ತಷ್ಟು ದ್ವೇಷಿಸಲಾರಂಭಮಾಡಿದನು. ಎಲ್ಲಾ ಲೋಕಪಾಲಕರನ್ನು ಪರಾಜಯಗೊಳಿಸಿದುದಲ್ಲದೇ, ಅಮರಾಮತಿ ಅವನ ನಂದನವನವನ್ನೂ ಕಸೆದುಬಿಟ್ಟ. ಅಣಿಮಾದಿ ಅಷ್ಟಸಿದ್ಧಿಗಳು ಅವನ ಪಾದ ತಲದಲ್ಲಿ ಹೊರಳಾಡಿದವು. ಬ್ರಹ್ಮ, ವಾಯು, ರುದ್ರರನ್ನು ಹೊರೆತುಪಡಿಸಿ, ಮಿಕ್ಕ ಸಮಸ್ತ ದೇವತೆಗಳನ್ನು ವಶಪಡಿಸಿಕೊಂಡು ಅವರು ಗೊಂಬೆಯಂತೆ ಆಡತೊಡಗಿದರು. ಭೂ, ಸಪ್ತ ದ್ವೀಪಗಳು ಅಧೀನವಾಗಿ ಭೂಮಾತೆ ಅವನ ಆಜ್ಞೆಯಂತೆ ಸುಭಿಕ್ಷೆ ಕೊಡುತ್ತಿದ್ದಳು.

ಸರ್ವಾಧಿಪತ್ಯವನ್ನು ಪಡೆದು ಯಜ್ಞಭಾಗವನ್ನು ತಾನೇ ಸ್ವೀಕರಿಸುತ್ತಿದ್ದ. (ಅನುಬಂಧ ೧(ಅ) ನೋಡಿ.) ಇಂತು ಅತ್ಯಾಚಾರದಿಂದ ಲೋಕವು ನಡುಗಿತು. ಜನರು ಅವನ ಕಾಟ ತಡೆಯಲಾರದೆ ಆಹಾಕಾರದಿಂದ ಗೋಳಾಡುತ್ತಿದ್ದರು. ಭೂಲೋಕ ಸಂಪತ್ತಿನಿಂದ ಮೆರೆದು ಶಾಸ್ತ್ರ ಮರ್ಯಾದೆಯನ್ನು ಲೆಕ್ಕಿಸುತ್ತಿದ್ದಿಲ್ಲ. ಇಷ್ಟಾದರೂ ಅವನು ಜಿತೇಂದ್ರಿಯನಾಗಲಿಲ್ಲವಲ್ಲ. ಶ್ವೇಚ್ಛಾಚಾರಿಯಾಗಿ ಅನುಭವಿಸಿದರೂ ತೃಪ್ತನಾಗಲಿಲ್ಲ.

**ಸ ಇತ್ಥಂ ನಿರ್ಜಿತ ಕುಕುಭ್ ಏಕರಾಡ್ ವಿಪಯಾನ್ ಪ್ರಿಯಾನ್ ।**
**ಯಥೋಪಜೋಷಂ ಭುಂಜಾನೋ ನಾತೃಪ್ಯದಜಿತೇಂದ್ರಿಯಃ ॥**

ಇಂದ್ರಿಯ ಲೋಲುಕನಾಗಿ ಉರಿದುದನ್ನು ಕಂಡು ಸಾಕಷ್ಟು ವರ್ಷಗಳೇ ಕಳೆದುಹೋಯಿತು. ಅವನ ಶಾಸನ ಉಗ್ರವಾಗಿರುವುದನ್ನು ತಡೆಯಲಾರದೆ ದೇವತೆಗಳು ಶ್ರೀಮನ್ನಾರಾಯಣನೇ ನಮ್ಮನ್ನು ಕಾಪಾಡಬೇಕೆಂದು ಶರಣು ಹೋದರು.

### ಶ್ರೀಹರಿಯಲ್ಲಿ ದೇವತೆಗಳ ಪ್ರಾರ್ಥನೆ

ದೇವತೆಗಳು ಭಗವನ್ನಿಷ್ಠಾವಂತರಾಗಿ ಶ್ರೀಹರಿಯನ್ನು ಏಕಾಂತ ಮನಸ್ಕರಾಗಿ

**ಓಂ ನಮೋ ಭಗವತೇ ಮಹಾಷಾಯ ಮಹಾತ್ಮನೇ ।**
**ನಿಶುದ್ಧಾನು ಭವಾನಸಂದೋಹಾಯ ಯತೋಽಭಯಮ್ ।**
**ತೇಷಾಮಾವಿರಭೂದ್ವಾಣಿ ಅರೂಪಾ ಮೇಘನಿಶ್ವನಾ ।**
**ಸಂನಾದಯಂತೀ ಕಕುಭಃ ಸಾಧುನಾಮಭಯಂಕರೀ ॥**

**ಓಂ ನಮೋ ಭಗವತೇ ಮಹಾಷಾಯ ಮಹಾತ್ಮನೇ**

ಮಹಾಪುರುಷನಾದ ಮಹಾತ್ಮನು ನಿರ್ದೋಷ, ಆನಂದ ಸ್ವರೂಪನಾದ ಶ್ರೀಹರಿಯೇ ನಿನಗೆ ನಮನಮಃ ತ್ರಾಹಿ ತ್ರಾಹಿ ಎಂದು ಮೊರೆಯಿಟ್ಟರು.



ಹೀಗೆ ಪ್ರಾರ್ಥಿತನಾದ ಭಗವಂತ ಅವರೆಲ್ಲರಿಗೂ ಕೇಳಿಸುವಂತೆ ಮೇಘ ಮಧ್ಯದಿಂದ ಎಲ್ಲಾ ದಿಕ್ಕುಗಳಲ್ಲಿ ಧ್ವನಿ ಕೇಳಿಸಿತು.

**ಶ್ರೀಶನ ವಾಣಿ :** ನನ್ನ ಭಕ್ತರಾದ ದೇವತೆಗಳಿರಾ ಅಂಜಬೇಡಿರಿ. ನಿಮಗೆ ಶುಭವಾಗುವುದು. ಆ ರಾಕ್ಷಸಾಧಮನ ದೌರಾತ್ಮ್ಯವನ್ನು ಬಲ್ಲೆ. ಅವನ ದುಷ್ಕೃತ್ಯಗಳಿಗೆ ಅಂತ್ಯವಾಗುವಂತೆ ಮಾಡುವೆನು. ಆದರೆ ಅವನ ಪಾಪಕುಂಭವು ತುಂಬಬೇಕು. ಅಲ್ಲಿಯವರೆಗೆ ಸಹಿಸಿ ಕಾಯಬೇಕು. **"ತಸ್ಯ ಶಾಂತಿಂ ಕರಿಷ್ಯಾಮಿ ಕಾಲಸ್ತಾವತ್ ಪ್ರತೀಕ್ಷ್ಯತಾವ್"** ಎಲ್ಲಿಯವರೆಗೆ ಕಾಯಬೇಕೆಂದರೆ ಭಗವಂತ ಒಂದು ಅವಧಿ ಹೇಳುತ್ತಾನೆ.

ವೇದಶಾಸ್ತ್ರಗಳಲ್ಲಿ ದೇವತೆಗಳಲ್ಲಿ ಗೋವುಗಳಿಗೆ ಬ್ರಾಹ್ಮಣರಿಗೆ ಸಾಧು ಸಜ್ಜನರಲ್ಲಿ ಧರ್ಮಬಾಹಿರನಾಗಿ ವರ್ತಿಸಿ ಕೊನೆಗೆ ನನ್ನನ್ನು (ನಾನೇ ಭಗವಂತ ಅಹಂಬ್ರಹ್ಮ) ಅಂತ ದ್ವೇಷಿಸುವನು. ಆಗ ಅವನು ನಾಶ ಹೊಂದುತ್ತಾನೆ. (ಭಗವಂತನ ವಿಶೇಷ ಸಾನ್ನಿಧ್ಯ ದೇವತೆಗಳಲ್ಲಿ, ವೇದಾದಿಗಳಲ್ಲಿ ಶಮದಮಾದಿ ಸಂಪನ್ನ ವೇದವೇದ್ಯರಾದ ಬ್ರಾಹ್ಮಣರಲ್ಲಿ ಇರುವುದೆಂದು ತಿಳಿದು ಯಾರೊಬ್ಬರಲ್ಲಿ ದ್ವೇಷ ಮಾಡಿದರೂ ಪರಮಾತ್ಮನನ್ನು ತಿರಸ್ಕರಿಸಿದಂತೆ ಆಗಿ ನಾಶವಾಗುವುದು. ಇದು ಪರಮಸತ್ಯ)

**ವಿಶೇಷಾಂಶ :** ಶ್ಲೋಕದಲ್ಲಿ (೨೮) **"ಯದಾದೇವೇಷು ವೇದೇಷು ಗೋವಿಪ್ರೇಷು"** ಹಿರಣ್ಯಕನು ಅವರನ್ನು ಹಿಂಸಿಸಿ ದ್ರೋಹ ಬಗೆಯುವನೋ, ಆಗಲೇ ಸಂಹರಿಸುತ್ತೇನೆ ಎಂದಿದ್ದಾನೆ.

**ಪ್ರಶ್ನೆ :** ರಾಕ್ಷಸರು ಈ ಪೂರ್ವದಲ್ಲಿ ಎಷ್ಟೋ ಸಲ ದ್ವೇಷಿಸಿದ್ದಾಗ ಆಗ ಏಕೆ ಸುಮ್ಮನಿದ್ದ ಎಂದರೆ ಈಗ ಪ್ರಹ್ಲಾದನ ನೆಪದಿಂದ ಅವುಗಳನ್ನು ಸಂಹರಿಸಲು ಭಗವಂತ ಎಂದು ಹೇಳಿದ್ದು, ವೇದ ದೇವತೆಗಳು. ಬ್ರಾಹ್ಮಣರಿಗಿಂತ ಪ್ರಹ್ಲಾದನೇ ಅವರೆಲ್ಲರಿಗಿಂತ ಉತ್ತಮ ಭಕ್ತ. ದೇವತೆಗಳನ್ನು ಪೀಡಿಸಿದರೂ ಪರವಾಗಿಲ್ಲ. ಪ್ರಹ್ಲಾದನಿಗೆ ಹಿಂಸೆ ಕೊಡುವುದನ್ನು ಸಹಿಸುವುದಿಲ್ಲ ಎಂಬ ಅರ್ಥ ಬಂದು ಪ್ರಹ್ಲಾದನ ಉತ್ತಮತೆ ತೋರಿಸಿದಾಗ ಒಂದು ರೀತಿ ಪಕ್ಷಪಾತ ಬಂದಿತಲ್ಲಾ ಎಂಬ ಶಂಕಾ ನಿವಾರಿಸಲು **ಉತ್ತರ :** ದೇವತೆಗಳು ಯದ್ಯಪಿ ಉತ್ತಮ ಭಕ್ತರೆ. ಅವರನ್ನು ರಕ್ಷಿಸುತ್ತಲೇ ಬಂದಿದ್ದಾರೆ. ಇದು ಹರಿಗೆ ಹೊಸದೇನಲ್ಲ. ಆದರೆ ಇಲ್ಲಿ ಪ್ರಸಂಗ ಸನ್ನಿವೇಶ ಭಿನ್ನವಾಗಿದೆ. ಪ್ರಹ್ಲಾದನ ಗುಣಗಳನ್ನು ಕೀರ್ತಿಸುವಾಗ, ಅವನನ್ನು ಪ್ರಶಂಸೆ ಮಾಡಿದರೆ ದೇವತೆಗಳಿಗಿಂತ ಶ್ರೇಷ್ಠನೆಂಬ ಅಭಿಪ್ರಾಯವಿರುವುದಿಲ್ಲ. ಅವನ ಕೀರ್ತಿ ಲೋಕದಲ್ಲಿ ಪ್ರಕಾಶಮಾಡುವ ಉದ್ದೇಶವೇ ಆಗಿರುವುದು. ಇದರಿಂದ ಉತ್ತಮರಾದ ದೇವತೆಗಳೂ ಸಹ ಪ್ರಹ್ಲಾದನ ಉತ್ತಮತೆಯನ್ನು ಕೊಂಡಾಡಲಿ ಎಂಬ ಭಾವ ಇದರಿಂದ ಹೊರಡುತ್ತದೆ.

ಪ್ರಹ್ಲಾದನನ್ನು ಹೊಗಳಿದಾಗ ಅವನಿಗೆ ಶ್ರೀಹರಿಯೇ ಪ್ರಮಾಣಪತ್ರ ಕೊಟ್ಟನೆಂದೂ ಸಹ ತಿಳಿದುಬರುವುದು.

ಪ್ರಹ್ಲಾದನನ್ನು ಪ್ರಶಂಶಿಸಿದ್ದರಿಂದ ಅವನಂತೆ ಲೋಕದಲ್ಲಿ ಸಜ್ಜನ ಬಾಲಕರಿಗೆ ಪ್ರೋತ್ಸಾಹ ಕೊಡಬೇಕೆಂಬ ಅಂತರಂಗ ಉದ್ದೇಶ.

ಮುಖ್ಯವಾಗಿ ನನ್ನ ಪರಮ ಭಕ್ತಮಹಾನುಭಾವನೂ, ಭಾಗವತೋತ್ತಮನಾದ ಭಕ್ತಾಗ್ರೇಸರನಾದವನೂ, ಪುತ್ರನಾಗಿ ಜನಿಸಿದ. ಪ್ರಹ್ಲಾದನನ್ನು ಹಿಂಸೆಗೊಳಪಡಿಸಿ ದ್ರೋಹ ಬಗೆಯುವನೋ ಆಗ ನಾನು ಆ ದೈತ್ಯೇಂದ್ರಿಯನನ್ನು ಸಂಹಾರ ಮಾಡುತ್ತೇನೆ. ಅವನ ಸಂಹಾರ ಯಾರ ವರ ಬಲದಿಂದಲೂ ಅಡ್ಡಿಬಾರದೆ (ಲೆಖ್ಖಿಸದೆ) ಆಗುವುದು. ಇದು ನಿಶ್ಚಯ. ಆದ್ದರಿಂದ ನೀವೆಲ್ಲಾ ನಿಶ್ಚಿಂತರಾಗಿ ನಿಮ್ಮ ನಿಮ್ಮ ಕಾರ್ಯ ಕರ್ಮಗಳನ್ನು ಆಚರಿಸುತ್ತಿರಿ ಎಂದು ಆಶ್ವಾಸನೆ ಮಾಡಿದ. ಬಳಿಕ ದೇವತೆಗಳು ಪರಮಾತ್ಮನಿಗೆ ನಮಸ್ಕರಿಸಿ ತಮ್ಮ ತಮ್ಮ ಲೋಕಗಳಿಗೆ ತೆರಳಿದರು.

**ನಿರ್ವೈರಾಯ ಪ್ರಶಾಂತಾಯ ಸ್ವಸುತಾಯ ಮಹಾತ್ಮನೇ ।**
**ಪ್ರಹ್ಲಾದಾಯ ಯದಾ ದ್ರುಹ್ಯೇದ್ಧನಿಷ್ಯೇऽಪಿ ವರೋರ್ಜಿತಮ್ ॥**

ದೈತ್ಯಬಾಲಕನು ಅತಿಪ್ರೀತಿಪಾತ್ರನು. ಭಕ್ತ ಶಿಖಾಮಣಿಯ ಗುಣಗಳನ್ನು ಶ್ರೀಹರಿ ವಿವರಿಸುತ್ತಾ ಮುಂದೆ ಹುಟ್ಟಲಿರುವನ ದೈತ್ಯಬಾಲಕನ ನಾಮಕರಣ ಪ್ರಹ್ಲಾದನೆಂದು ತಾನೇ ಮಾಡಿದನು. ಇವನಿಗೆ ವೈರಿಗಳೇ ಇರುವುದಿಲ್ಲ. ಪ್ರಶಾಂತ ಮನಸ್ಕನು ಭಗವದ್ಭಕ್ತನೆಂದೂ ಕೊಂಡಾಡಿದನು. ಇಂತಹ ಪುತ್ರನು ಹಿರಣ್ಯಕಶಿಪುವಿಗೆ ಜನಿಸುತ್ತಾನೆ. ಈ ರೀತಿ ಪ್ರೀತಿಪಾತ್ರನಾದ ನನ್ನ ಕಿಂಕರನನ್ನು ತಂದೆಯಾಗಿ ದ್ವೇಷಿಸುವುದಲ್ಲದೇ ಅನೇಕ ರೀತಿಯ ಹಿಂಸೆ ಕೊಡುವನು. ಆದರೆ ನನ್ನನ್ನೇ ಸದಾ ಚಿಂತಿಸಿ ಧ್ಯಾನಿಸುತ್ತಾ ನನ್ನನ್ನು ಬಿಟ್ಟು ಅನ್ಯರಲ್ಲಿ ಭಕ್ತಿ ಮಾಡದೇ ಇರುವವನನ್ನು ಯಾವಾಗ ಸಂಹರಿಸಲು ಪ್ರಯತ್ನ ಪಡುವನೋ ಕೂಡಲೇ ಅವನನ್ನು ರಕ್ಷಿಸಿ ಆ ರಾಕ್ಷಸನನ್ನು ಸಾಯಿಸುತ್ತೇನೆ ಎಂದು ಹೇಳಿದ.

**ಪ್ರಹ್ಲಾದರಾಜರ ಜನನ**

ಅತ್ಯಾಶ್ಚರ್ಯಕರವಾದ ವಿಷಯವೆಂದರೆ ಹಿರಣ್ಯಕಶಿಪುವಿಗೆ ನಾಲ್ವರು ಪುತ್ರರಾದರು. ಪ್ರಹ್ಲಾದ, ಅನುಹ್ಲಾದ, ಸಂಹ್ಲಾದ ಮತ್ತು ಹ್ಲಾದರೆಂದು. ಪ್ರಹ್ಲಾದನೇ ಹಿರಿಯ ಮಗ. ಗುಣವಂತ, ವಿಷ್ಣುಭಕ್ತ. ಹುಟ್ಟಿನಿಂದಲೂ ಉತ್ತಮನಾಗಿದ್ದ, ಶ್ರೀಹರಿ ಉಪಾಸಕನು. ಬ್ರಾಹ್ಮಣ ಪ್ರಿಯನೂ, ಶೀಲ ಸತ್ಯವಂತನೂ ಆಗಿ ಬೆಳೆದನು.

ಪ್ರಹ್ಲಾದರಾಜನಲ್ಲಿರುವ ಸದ್ಗುಣಗಳಿಷ್ಟಿವೆ ಎಂದು ಲೆಕ್ಕಮಾಡಿ ಹೇಳಲು ಬರುವುದಿಲ್ಲ. ಅವನ ಸ್ವರೂಪದಿಂದಲೇ ಶ್ರೀರಮಾರಮಣನಲ್ಲಿ ನೈಜ ಭಕ್ತಿ ಇದ್ದಿತು. ಆಟವಾಡುವ



ವಯಸ್ಸಿನಲ್ಲಿ ಇತರೆ ಬಾಲಕರಿಂದ ಕೂಡದೇ ಏಕಾಂತದಲ್ಲಿ ಶ್ರೀಹರಿಯನ್ನು ಧ್ಯಾನಾಸಕ್ತನಾಗಿ ಪರಮಾತ್ಮನ ಅನಂತಾನಂತ ಗುಣಗಳನ್ನು ಚಿಂತಿಸುತ್ತಾ ಭಗವಂತನು ಸೃಷ್ಟಿಸಿದ ಜಗತ್ತು ವಿಶಿಷ್ಟ, ವಿಚಿತ್ರವೆಂದು ಧ್ಯಾನಿಸುತ್ತಾ ತನ್ನ ಅಂತರಂಗದಲ್ಲೇ ಹರಿಯನ್ನು ನೆನೆಯುತ್ತಿದ್ದ.

ಸದಾ ಸರ್ವತ್ರ ಕಾಲದಲ್ಲಿ ಪರಮಾತ್ಮನ ಅಘಾದ ಮಹಿಮೆಯನ್ನು ಕಾಣುತ್ತಾ ಹರ್ಷೋನ್ಮಾದನಾಗಿ ಕೆಲವೊಮ್ಮೆ ನಗುವನು. ಆನಂದದಿಂದ ಕಣ್ಣೀರು ಸುರಿಸುತ್ತಾ ತಿಳಿದಿದ್ದುದು ನಿಜವೇ ಆಗಿತ್ತು. ಪ್ರಹ್ಲಾದನಿಗೆ ಶ್ರೀಹರಿ ಎಂಬ ಪಿಶಾಚವು ತುಂಬಿತ್ತು.

**ತನ್ವನ್ ಪರಾಂ ನಿವೃತ್ತಿಮಾತ್ಮನೋ ಮುಹುಃ ।**
**ದುಸ್ಸಂಗಹೀನಃ ಸ್ವಮನಃ ಶಮಂಂವ್ಯಧಾತ್ ॥**

ಪ್ರಹ್ಲಾದನಲ್ಲಿ ನಿರತಿಶಯ, ನಿರುಪಾದಿತ ಭಕ್ತಿ ಹೆಜ್ಜೆಹೆಜ್ಜೆಗೂ ಸ್ಮರಣೆಮಾಡುತ್ತಾ ಆನಂದ ವಶನಾಗಿರುತ್ತಿದ್ದನು.

**ಒಂದು ಸಂದೇಹ :** ದೈತ್ಯ ಯೋನಿಯಲ್ಲಿ ಹುಟ್ಟಿದರೂ ದೈತ್ಯ ಗುಣಕ್ಕೆ ವಿರುದ್ಧವಾಗಿ ದೇವತೆಗಳಂತೆ ನಿತ್ಯ ಭಗವದ್ಭಕ್ತನಾಗುವುದು ಹೇಗೆ ?

**ಸಮಾಧಾನ :** ಪ್ರಹ್ಲಾದರಾಜನು ಸ್ವರೂಪದಿಂದಲೇ ದೇವತೆಯಾಗಿದ್ದ. ಶಾಪದಿಂದ ಈಗ ಅಸುರ ಜಾತಿಯಲ್ಲಿ ಹುಟ್ಟಬೇಕಾಯಿತು. ಇದಕ್ಕೆ ಕಾರಣವಿರುವುದು. ಪ್ರಹ್ಲಾದನಲ್ಲಿ ವಾಯುದೇವರ ಆವೇಶವಿದ್ದಿತು. ಎಲ್ಲಿ ವಾಯುದೇವರೋ ಅಲ್ಲಿ ಹರಿಭಕ್ತಿ ಸಹಜ. ವಾಯುದೇವರಲ್ಲಿ ವಾಸುದೇವ, ವಾಸುದೇವನಿದ್ದೆಡೆ ವಾಯುದೇವ.

**ವಾಯ್ವಾವೇಶಾಚ್ಚ ಪ್ರಹ್ಲಾದೋ ಹರಿಣಾ ತತ್ವಮಂಜಸಾ ॥**

ಪ್ರಹ್ಲಾದನು ಕರ್ಮಜ ದೇವತೆಯಾಗಿದ್ದಾಗ ನೈಜಗುಣವೇ ಹರಿಯಲ್ಲಿ ಭಕ್ತಿಯಿರಲು ಆಶ್ಚರ್ಯಪಡಬೇಕಿಲ್ಲ.

**ದೇವಾಃ ಶಾಪಾಭಿಭೂತತ್ವಾತ್ ಪ್ರಹ್ಲಾದಾದ್ಯಾಃ ಬಭೂವಿರೇ ।**
**ಪ್ರಹ್ಲಾದೋಪಿ ಮಹಾಭಾಗಃ ಕರ್ಮದೇವ ಸಮಃ ಸ್ಮೃತಃ ॥**

**ಅರ್ಥ :** ನಾರದರನ್ನೂ ತತ್ವಾಭಿಮಾನಿ ದೇವತೆಗಳನ್ನೂ ಬಿಟ್ಟು ಉಳಿದ ಹರಿಭಕ್ತರಲ್ಲಿ ಪ್ರಹ್ಲಾದರಾಜರು ಮಹಾ ವಿಷ್ಣುಭಕ್ತರಾಗಿರುತ್ತಾರೆ. **ಕರ್ಮಜದೇವತೆ**ಗಳ ಗುಂಪಿಗೆ ಸೇರಿದವರು ಎಂದಿದೆ. ಇದನ್ನೇ ಪುರಾಣಗಳಲ್ಲಿ ತಿಳಿಸಲಾಗಿದೆ.

**ಪ್ರಹ್ಲಾದಾದ್ಭುತಯೋ ಕೋ ನು ವಿಷ್ಣುಭಕ್ತೋ ಜಗತ್ರಯೆ ॥**

ಆದ್ದರಿಂದ ಪ್ರಹ್ಲಾದರು ಹರಿವಿಷಯದಲ್ಲಿ ನಿತ್ಯಭಕ್ತರಾಗಿದ್ದರು. ಕಾರಣ ಆಗಲೇ ತಿಳಿಸಿದಂತೆ ಅವರಲ್ಲಿ ವಾಯುದೇವರ ಆವೇಶ ವಿಶಿಷ್ಟವಾಗಿತ್ತು.

**ವಾಯುನಾ ಚ ಸಮಾವಿಷ್ಟಂ ಹರಿಪಾದಾಬ್ಜ ಸಂಶ್ರಯಂ ॥**

ಇಂತಹವರಲ್ಲಿ ಕಲಿಪ್ರಭಾವ ಎಂದಿಗೂ ಸಾಧ್ಯವಿದ್ದಿಲ್ಲ. ಶ್ರೀಮದಾಚಾರ್ಯರು ತಾ॥ ನಿರ್ಣಯದಲ್ಲಿಯೂ ಹೀಗೆ ತಿಳಿಸುತ್ತಾರೆ.

**ಹಿರಣ್ಯಕಶಿಪೋಃ ಪುತ್ರಃ ಪ್ರಹ್ಲಾದೋ ಭಗವತ್ಪ್ರಿಯಃ ।**
**ವಾಯುನಾ ಚ ಸಮಾವಿಷ್ಟಃ ಮಹಾಬಲ ಸಮನ್ವಿತಃ ॥** (ಭಾ.ತಾ.)

ಪ್ರಹ್ಲಾದರು ಕರ್ಮಜದೇವತೆಯಾಗಿ ತಾರತಮ್ಯಕ್ಕನುಸಾರ ೧೫ನೇ ಕಕ್ಷದಲ್ಲಿ ಬರುತ್ತಾರೆ. ತಾರತಮ್ಯಾನುಸಾರ ಕರ್ಮಜದೇವತೆಗಳು ೧೯ನೇ ಕಕ್ಷಕ್ಕೆ ಬರಬೇಕು. ಆದರೆ ಪ್ರಹ್ಲಾದರು ಕರ್ಮಜದೇವತೆಯಾಗಿದ್ದರೂ ವಾಯುವ್ಯಾಶಯುಕ್ತರಾಗಿದ್ದರಿಂದ ೧೫ನೇ ಕಕ್ಷಕ್ಕೆ ಬರುತ್ತಾರೆಂದು ತಿಳಿಯಬೇಕು.

ಶ್ರೀರಾಘವೇಂದ್ರ ಗುರುರಾಜರನ್ನು ಕರ್ಮಜದೇವತೆಗಳಲ್ಲಿ ಸೇರಿಸಲಾಗಿದೆ.

**ಜನಪಕರ್ಮಜರೊಳಗೆ ನಾರದ । ಮುನಿ ಅನುಗ್ರಹಬಲದಿ ಪ್ರಹ್ಲಾ । ದನಳಭೃಗುಮುನಿ ದಕ್ಷಪತ್ನಿಗೆ ಸಮನೆನಿಸಿಕೊಂಬಾ ॥ ಮನುವಿವಸ್ವಾನ್ಗಾಧಿ ಜೀರ್ವರು। ಅನಳಗಿಂತಲಿ ಕಿಂಚಿತಾಧಮ। ಗೆಣೆಯೆನಿಸುವರು ಸಪ್ತಋಷಿಗಳಿಗೆಲ್ಲ ಕಾಲದಲಿ ॥**

ಹರಿಕಥಾಮೃತಸಾರ ಬೃಹತ್ತಾರತಮ್ಯ ಸಂಧಿ ಶ್ಲೋಕ ೨೨

ಇಂತು ಗುಣಭರಿತನಾದ ಮಗನನ್ನು ತಂದೆಯಾದ ಹಿರಣ್ಯಕಶಿಪು ಸಂಹಾರ ಮಾಡಲು ಪ್ರಯತ್ನಪಟ್ಟನಲ್ಲಾ ! ಆಶ್ಚರ್ಯವಾಗುತ್ತಿದೆ.

**ದೇವರ್ಷ ಏತದಿಚ್ಛಾಮೋ ವೇದಿತುಂ ತವ ಸುವ್ರತ ।**
**ಯದಾತ್ಮಜಾಯ ಶುದ್ಧಾಯ ಪಿತಾಽಧಾತ್ ಸಾಧವೇ ಆ ಘಮ್ ॥ (೪೫)**

ಎಂದು ಧರ್ಮರಾಜನು ಪ್ರಶ್ನಿಸಿದಾಗ ನಾರದರು ಸೂಕ್ತ ಸಮಾಧಾನ ಕೊಡುತ್ತಾರೆ. ಧರ್ಮನಂದನಾ ಕೇಳು – ತಂದೆತಾಯಿಗಳು ತಮ್ಮ ಪುತ್ರರು ಅವಿಧೇಯರಾಗಿ ತಮಗೆ ವಿರೋಧ ಮಾಡಿದಾಗ ಅಂತಹ ಪುತ್ರನನ್ನು ಶಿಕ್ಷಿಸಿ ಸರಿಯಾದ ದಾರಿಯಲ್ಲಿ ತರುವುದನ್ನು ಜಗತ್ತಿನಲ್ಲಿ ಕಾಣುತ್ತೇವೆಯೇ ಆಗಲಿ, ಮಗನನ್ನು ಕೊಲ್ಲುವುದಕ್ಕೆ ಎಂದಿಗೂ ಬಯಸುವುದಿಲ್ಲ, ಪ್ರಯತ್ನ ಮಾಡುವುದಿಲ್ಲ. ಅಂತಹದರಲ್ಲಿ ಪರಮ ಭಾಗವತ ಸಾಧು ಗುಣ ಸಂಪನ್ನ ಗುರುಹಿರಿಯರಲ್ಲಿ ಭಕ್ತಿ ವಿಧೇಯತೆ ಉಳ್ಳ ಮಗನ ಬಗ್ಗೆ ತಂದೆ ಹೆಮ್ಮೆ ಪಡಬೇಕೇ ವಿನಃ ಮಗನ ಮೇಲೆ ದ್ವೇಷ ತಿರುಗುಬಾಣವಾಗಿ ತಂದೆಯನ್ನು ಸಂಹರಿಸುವ ಪ್ರಸಂಗ ಇಲ್ಲಿ ಬಂದಿತು. ಆಶ್ಚರ್ಯವಲ್ಲವೇ ನಾರದರೇ, ನನ್ನ ಈ ಕುತೂಹಲವನ್ನು ನಿವಾರಿಸಿ ಎಂದರು.

ರಾಕ್ಷಸಯೋನಿಯಲ್ಲಿ ಹುಟ್ಟಿ ರಾಕ್ಷಸರಂತೆ ವರ್ತಿಸದೇ ವಿರುದ್ಧವಾಗಿ ಶ್ರೀಹರಿಯಲ್ಲಿ ವಿಶಿಷ್ಟ ಭಕ್ತಿ ತೋರಿದುದೇ ಕಾರಣವಾಗಿ ಮಗನ ಹತ್ಯಮಾಡಲೂ ಹಿರಣ್ಯಕನು ಮನಸ್ಸು ಮಾಡಿದನು.



ಪ್ರಹ್ಲಾದನ ವರ್ತನೆ ಯಾವಾಗಿನಿಂದ ತಂದೆಗೆ ಬೇಸರ ತಂದಿತು ಎಂದಾಗ ಪ್ರಹ್ಲಾದನ ವಿದ್ಯಾಭ್ಯಾಸದಿಂದಲೇ ಪ್ರಕಟವಾಯಿತು.

## ಪ್ರಹ್ಲಾದರಾಜನ ಗುರುಕುಲವಾಸ

ಪ್ರಹ್ಲಾದರಾಜನು ಗುರುಕುಲವಾಸಕ್ಕಾಗಿ ಹೋದಾಗ ವಯಸ್ಸೆಷ್ಟಾಗಿತ್ತು ? ಗುರುಕುಲಕ್ಕೆ ವಿದ್ಯಾಭ್ಯಾಸಕ್ಕಾಗಿ ತೆರಳಬೇಕಾದರೆ ಉಪನಯನವಾಗಿರಲೇಬೇಕಲ್ಲವೇ ? ಪ್ರಹ್ಲಾದನಿಗೆ ಉಪನಯನವಾಗಿತ್ತೆಂದು ತಿಳಿದುಬರುವುದು.

## ಉಪನಯನ ಕಾಲ ವಯಸ್ಸು

ಮನುಸ್ಮೃತಿ ಪ್ರಕಾರ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರಿಗೆ ಹುಟ್ಟಿದ ದಿನದಿಂದ ೮, ೧೧, ೧೨ನೇ ವಯಸ್ಸಿನಲ್ಲಿ ಕ್ರಮವಾಗಿ ಆಗಿರಬೇಕು. ಬ್ರಾಹ್ಮಣರಿಗೆ **"ಅಷ್ಟವರ್ಷೋ ಬ್ರಾಹ್ಮಣೋಪನೀತ"** ಎಂಬಂತೆ ಏಳು ತುಂಬಿದ ಮೇಲೆ ಎಂಟನೆಯ ವರ್ಷ ಮುಗಿಯುವುದರೊಳಗೆ ಉಪನಯನ ಮಾಡಬೇಕು (ಬ್ರಹ್ಮೋಪದೇಶ), ಕ್ಷತ್ರಿಯ ಬಾಲಕನಿಗೆ ೧೧ನೇ ವಯಸ್ಸಿನಲ್ಲಿ, ವೈಶ್ಯನಿಗೆ ೧೨ನೇ ಅಥವಾ ೧೬ರ ಒಳಗಾಗಿ ಉಪನಯನ ಮಾಡಬೇಕು.

**ಬ್ರಹ್ಮವರ್ಚಸಕಾಮಸ್ಯ ಕುರ್ಯಾದ್ವಿಪ್ರಸ್ಯ ಪಂಚಮೇ ।**
**ರಾಜ್ಞೋ ಬಲಾರ್ಥಿನ್ಯ ಷಷ್ಠೇ ವೈಶ್ಯಸ್ಯ ಹಾರ್ಥಿನೋಽಷ್ಟಮೇ ॥**

ಇದನ್ನು ಕಾಮ್ಯ ಉಪನಯನವೆನ್ನಲಾಗಿದೆ (ಮನು ೨–೬೭) ಇದು ಪ್ರಶಸ್ತವು.

**ಪ್ರಹ್ಲಾದರಾಜರು** ರಾಕ್ಷಸ ಯೋನಿಯಲ್ಲಿ ಹುಟ್ಟಿದರೂ ಕ್ಷತ್ರಿಯನಂತೆ (ಕ್ಷತ್ರಿಯ ರಾಕ್ಷಸರಂತೆ) ನಡೆದುಕೊಂಡರೂ ಅವನಿಗೆ ೧೧ನೇ ವರ್ಷವಾಗಿರಲಿಕ್ಕೇಬೇಕು.

ಹಿರಣ್ಯಕಶಿಪು ಗುರುಪುತ್ರರನ್ನು ಕರೆಸಿ ಪ್ರಹ್ಲಾದನಿಗೆ ಪಾಠ ಹೇಳಿಕೊಡಿರಿ ಎಂದಾಗ **ಬಾಲಂ ಪ್ರಹ್ಲಾದಂ** ಎಂದು ಮಗನನ್ನು ಬಾಲಕನೆಂದೇ ಹೇಳಿದಾಗ ಪ್ರಹ್ಲಾದನಿಗೆ ಪ್ರಾಯಶಃ ೧೧ ರಿಂದ ೧೫ ವರ್ಷವಾಗಿರಬೇಕು.

## ದೈತ್ಯಗುರು ಶುಕ್ರಾಚಾರ್ಯರ ಪುತ್ರರು – ಷಂಡ ಅಮರ್ಕರು

ಶುಕ್ರಾಚಾರ್ಯ ಭೃಗು ಮಹರ್ಷಿ ಪುಲೋಮಿಯರ ಮಗ. ಶಿವನ (ಶುಕ್ರ) ವೀರ್ಯದಿಂದ ಜನಿಸಿದವನಾದ್ದರಿಂದ ಶುಕ್ರನೆಂದು ಹೆಸರು ಬಂದಿತು. ಷಂಡ ಅಮರ್ಕರೆಂಬ ಇಬ್ಬರು ಪುತ್ರರು. ಇಬ್ಬರೂ ವೇದಶಾಸ್ತ್ರ ಪ್ರವೀಣರು. ಷಂಡಾಮರ್ಕರ ಆಶ್ರಮ ಹಿರಣ್ಯಕಶಿಪುವಿನ ರಾಜಧಾನಿ ಹತ್ತಿರವೇ ಇದ್ದಿತು. ಅವರನ್ನು ಕರೆಸಿ ಹಿರಣ್ಯಕನು ಬಾಲಕ ಪ್ರಹ್ಲಾದನನ್ನು ಸರಿಯಾದ ವಿದ್ಯಾಭ್ಯಾಸ ಮಾಡಲು ಹೇಳಿದನು. ಅಂತೆಯೇ ರಾಜಕುಮಾರನನ್ನು ತಮ್ಮ ಆಶ್ರಮಕ್ಕೆ ಕರೆತಂದು ಇತರೆ ದೈತ್ಯ ಬಾಲಕರೊಂದಿಗೆ ವಿದ್ಯಾಭ್ಯಾಸ ಆರಂಭಿಸಿದರು.

ಪಾಠ ಪ್ರಾರಂಭವಾಯಿತು. ಆದರೆ ರಾಜಕುಮಾರನಿಗೆ ಗುರುಗಳ ಪಾಠ ಕೇಳುತ್ತಿದ್ದನೇ ಹೊರತು ಆಸಕ್ತಿ ತೋರಲಿಲ್ಲ. ಏಕೆಂದರೆ ಗುರುಗಳು ಸತ್ಸಿದ್ಧಾಂತಕ್ಕೆ ವಿರುದ್ಧ ವಿಪರೀತವಾಗಿರುವುದನ್ನು ಗ್ರಹಿಸಿದೆ. ಮನಸಾ ತಿರಸ್ಕರಿಸುತ್ತದೆ.

ಏಕೆ ಪಾಠದಲ್ಲಿ ಶ್ರದ್ಧೆ ಹುಟ್ಟಲಿಲ್ಲವೆಂದರೆ ಗುರುಗಳು ಹೇಳುವುದೆಲ್ಲಾ ದುಷ್ಟಮತ ವಿಷಯವಾಗಿದ್ದಿತು. ಶ್ರೀ ಹರಿಸರ್ವೋತ್ತಮಮತ್ವ ತಾರತಮ್ಯಗಳಿಗೆ ಪ್ರತಿಯಾಗಿ ಮಾಯಾವಾದಾದಿ ಮತಗಳು ಹೇಳುವುದನ್ನು ಸಮ್ಮತಿಸಲಿಲ್ಲ.

**ಈ ವಿಷಯದಲ್ಲಿ ಶ್ರೀವಿಜಯಧ್ವಜರು ರಮ್ಯವಾಗಿ ವಿವರಿಸುತ್ತಾರೆ.**

ಹೀಗೆ ಒಂದು ಪಕ್ಷ ಕಾಲ ಕಳೆಯಿತು. ಹಿರಣ್ಯಕನು ಮಗನನ್ನು ನೋಡಬೇಕೆಂಬ ಬಯಕೆಯಿಂದ ಗುರುಕುಲದಿಂದ ಕರೆಸಿದನು. ಪ್ರಹ್ಲಾದನು ಸ್ಫುರದ್ರೂಪಿ ಬುದ್ಧಿವಂತನೆಂದು ಅಕ್ಕರೆಯಿಂದ ತನ್ನ ತೊಡೆಯ ಮೇಲೆ ಕೂಡಿಸಿಕೊಂಡು ಮುದ್ದಾಡಿ ಹಸನ್ಮುಖನಾಗಿ ವತ್ಸ, ಪ್ರಹ್ಲಾದ, ಇಷ್ಟು ದಿನಗಳಲ್ಲಿ ಗುರುಗಳಿಂದ ಕಲಿತಿರುವುದರಲ್ಲಿ **ಸಾಧು ಯಾವುದು** ? (ಪ್ರಿಯವಾಗುವ ನನ್ನನ್ನು ಸಂತೋಷಪಡಿಸುವ) ಎಂಬುದನ್ನು ನಿನ್ನ ಪುಟ್ಟ ಮುಖಾರವಿಂದದಿಂದ ಕೇಳಬಯಸುತ್ತೇನೆ. ಹೇಳು ಎಂದು ಪ್ರೀತಿಯಿಂದ ಹೇಳಿದ.

ಪ್ರಹ್ಲಾದ ಬಾಲಕನ ಉತ್ತರ ತಂದೆಗೆ ಮಾತುಗಳು ಜ್ವಾಲಾಮುಖಿ (Volcano) ಯಂತಾಯಿತು. ಪ್ರಹ್ಲಾದನು ತಂದೆ, ದೈತ್ಯೇಂದ್ರ, ನಾನು ತಿಳಿದಿರುವ ಸಾಧುವಿದ್ಯೆಯೆಂದರೆ ಜಗತ್ತಿನಲ್ಲಿ ಮನುಷ್ಯರು ಹುಟ್ಟಿದಾರಭ್ಯ ವಿಷಯ ಲೋಲುಪರಾಗಿ ತನ್ಮಯರಾಗಿ ಇದೇ ಸುಖವೆಂದು ಭ್ರಮಿಸುತ್ತಾರೆ. ಆದರೆ ಸಂಸಾರವು ದುಃಖಮಯವೆಂಬುದನ್ನು ತಿಳಿಯದೆ ಸಂಸಾರವೆಂಬ ಹಾಳು ಭಾವಿಯಲ್ಲಿ ಬಿದ್ದಿರುತ್ತಾರೆ. ಇಂತಹ ಅಜ್ಞಾನವು ಕಳೆಯಬೇಕಾದರೆ ಜ್ಞಾನ ನೀಡುವ ಸಜ್ಜನರ ಸಂಗದಿಂದಾಗಿ ಶ್ರೀಹರಿಯಲ್ಲಿ ಶರಣು ಹೋಗಬೇಕು. ಅವನನ್ನೇ ಆಶ್ರಯಿಸಬೇಕು.

**ತತ್ಸಾಧು ಮನ್ಯೇಽಸುರವರ್ಯ ದೇಹಿನಾಂ ಸದಾ ಸಮುದ್ವಿಗ್ನಧಿಯಾಮಸದ್ಗ್ರಹಾತ್।**
**ಹಿತ್ವಾಽಽತ್ಮಪಾತಂ ಗೃಹಾಂಧಕೂಪಂ ವನಂಗತೋ ಯದ್ಧರೀಮಾಶ್ರಯೇತ್ ॥**

**ವನಂಗತೋ ಯದ್ಧರೀಮಾಶ್ರಯೇತ್** : ಹೀಗೆ ಪ್ರಹ್ಲಾದನು ಹೇಳಿದಾಗ ಶ್ರೀಹರಿಯನ್ನು ಕಾಣಲೂ (ಆಶ್ರಯಿಸಲು) ಅರಣ್ಯಕ್ಕೆ ಹೋಗಿ ಭಗವಂತನನ್ನು ಭಜಿಸು ಎಂಬ ಸಾಮಾನ್ಯ ಅರ್ಥವಾಗುವುದು. ಆದರೆ ಶ್ರೀಹರಿಯನ್ನು ಉಪಾಶಿಸಲು ಅರಣ್ಯಕ್ಕೆ ಪ್ರಹ್ಲಾದನೇ ಹೋಗದಿದ್ದರೂ ಪರಮಾತ್ಮನನ್ನು ಆರಾಧಿಸುತ್ತಿದ್ದ. ವನಕ್ಕೆ ಹೋಗಲಿಲ್ಲ. ಇಲ್ಲಿ ವನ ಎಂದರೆ ನೀರು, ನದೀ ತಟಾಕ, ಚಿಲುಮೆ, ವನ ವಾಸುವಸ್ಥಾನ, ಮನೆ, ಪ್ರವಾಸ, **ವನಂಕಾನನನೀರಯೋಃ । ಪ್ರವಾಸೆ ನಿಲಯೇ ಚಾಪಿ ವನಂ ಪ್ರಸ್ರವಣೇಪಿ ಚ** (ನಿಘಂಟು). ಪ್ರವಾಸ ಅಂದರೆ ಇಲ್ಲಿ ಸಜ್ಜನರ ಸಂಗ ದೊರೆಯುವುದೂ ಅಲ್ಲದೆ ಗಂಗಾ ಯಮುನಾದಿ ಪುಣ್ಯ ನದಿಗಳಿರುವಲ್ಲಿಗೆ ತಲವಕಾರ ಉಪನಿಷತ್ತಿನಲ್ಲಿ (ಆನೇ ಖಂಡ–ಆರಲ್ಲಿ) **''ಅಭಿಕ್ಷ್ಣಂ ಸಂಕಲ್ಪಃ ತದ್ವನಂ ನಾಮ ತದ್ವನಮಿತ್ಯಾಪೀಸೀತವ್ಯಮ್''** ಇಲ್ಲಿ ತದ್ವನಂ **ವನಂ** ಎಂದರೆ ಭಗವಂತನು ಸರ್ವತ್ರ ವ್ಯಾಪ್ತನು ಮತ್ತೂ ಸರ್ವರಿಂದಲೂ ಸೇವ್ಯನು. ಆದ್ದರಿಂದ ಅವನನ್ನು ವನಂ ಎಂದು ಭಜಿಸುವರೋ, ಉಪಾಸನ ಮಾಡುವರೋ ಅವರೂ ಸಹ ಅವರ ಕಿರಿಯರಿಂದ ಅಪೇಕ್ಷಿತನಾಗುತ್ತಾನೆ. Everybody likes Him, respected by Everybody ವರಣೀಯತ್ವಾತ್ = ವನಂ (ಭಾಷ್ಯ)

ಇಂಥಾದನ್ನು ನಾನು ಸಾಧು ವಿದ್ಯೆ ಎಂದು ತಿಳಿದಿರುತ್ತೇನೆ ಎಂದುತ್ತರಿಸಿದ. ಹಿರಣ್ಯಕಶಿಪು ತನ್ನ ಮಗನ ಬಾಯಿಂದ ಬಂದ ಮಾತುಗಳನ್ನು ಕೇಳಿ ಸ್ವಲ್ಪ ನಗುತ್ತಾ ''ಬಾಲಕನಾದ ನನ್ನ ಪುತ್ರನ ಬುದ್ಧಿ ಯಾರೋ ಕೆಡಿಸಿರುತ್ತಾರೆ. ಇಲ್ಲದಿದ್ದರೆ, ನನ್ನ ಶತೃವಾದ ಆ ಹರಿಯನ್ನು ನನ್ನೆದುರಿಗೆ ಹೊಗಳುವುದುಂಟೆ ? ಅವನಿಗೇನು ಗೊತ್ತು. ಅವರು ಹೇಳಿಕೊಟ್ಟಂತೆ ನುಡಿಯುತ್ತಿದ್ದಾನೆ. ಷಂಡ ಮರ್ಕರೆ ! ನಿಮ್ಮ ಗುರುಕುಲದಲ್ಲಿ ಕೆಲ ದೇವತೆಗಳು ಕಾಣದಂತೆ ಇವನ ಬುದ್ಧಿ ಭ್ರಮೆಯಾಗುವಂತೆ ಮಾಡಿರುತ್ತಾರೆ. ಆದ್ದರಿಂದ ಗುರುಪುತ್ರರೇ ಇವನನ್ನು ಕರೆದುಕೊಂಡು ಹೋಗಿ. ಇವನಿಗೆ ಸರಿಯಾದ ತ್ರಿವರ್ಗ (ಧರ್ಮ, ಅರ್ಥ, ಕಾಮ) ಗಳನ್ನಷ್ಟೇ ಬೋಧಿಸಿರಿ. ದೇವತೆಗಳು ನಿಮ್ಮ ಆಶ್ರಮದಲ್ಲಿ ನುಸುಳಿ ಬಾರದಂತೆ ಎಚ್ಚರವಹಿಸಿರಿ ಎಂದು ಹೇಳಿ ಕಳುಹಿಸಿದನು.

## ಗುರುಕುಲಕ್ಕೆ ಮರಳಿ ಬಂದ ಪ್ರಹ್ಲಾದ

ಪ್ರಹ್ಲಾದ ಆಶ್ರಮಕ್ಕೆ ಬಂದ ನಂತರ ಅವನನ್ನು ಹತ್ತಿರ ಕೂಡಿಸಿ, ಬೆದರಿಸಿದರು. ಬೈದರು. ಯಾವುದಕ್ಕೂ ಜಗ್ಗದೇ, ಹೆದರದೇ ಇದ್ದಾಗ ಗುರುಗಳು ದೈತ್ಯ ಬಾಲಕನಿಗೆ ಹಿತವಾಗಿ, ಮೃದುವಾಗಿ **''ದೈತ್ಯಪುತ್ರ, ನೀನು ರಾಕ್ಷಸಕುಲಕ್ಕೇ ಕಳಂಕ ತರಬಾರದು. ನಿನಗೆ ಶುಭವಾಗಲಿ. ಆದರೆ ನಿಜ ಹೇಳು. ನಾವು ಕಲಿಸದೇ ಇರುವುದನ್ನು ನಿನ್ನ ತಂದೆಯ ಮುಂದೆ ವಿಪರೀತವಾಗಿ ರಾಕ್ಷಸರ ಶತೃವಾದ ಹರಿಯನ್ನೇಕೆ ಸ್ತೋತ್ರ ಮಾಡಿದೆ. ಯಾರು ಹೇಳಿಕೊಟ್ಟರು. ನಿಜ ಹೇಳು''** ಎಂದು ಹೇಳಿದರು.

**ಪ್ರಹ್ಲಾದನ ಉತ್ತರ :** ಗುರುಗಳೇ, ನಾನು ಯಾರಿಂದಲೂ ಕಲಿತಿಲ್ಲ. ನಾನು ಸ್ವತಂತ್ರವಾಗಿಯೂ ಹೇಳುತ್ತಿಲ್ಲ. ಸರ್ವತಂತ್ರ ಸ್ವತಂತ್ರನಾದ ಶ್ರೀಹರಿಯೇ ಪ್ರೇರಕನಾಗಿರುವಾಗ, ನನಗಿರುವ ಜ್ಞಾನ ಮತ್ತೊಬ್ಬರಿಂದ ಬಂದಿದ್ದರೆ, ಅಜ್ಞಾನ ಮಿಥ್ಯಾಜ್ಞಾನದಿಂದ ಭ್ರಾಂತನಾಗುತ್ತಿದ್ದೆ. ಆದರೆ, ಸರ್ವಜೀವರ ಅವರವರ ಯೋಗ್ಯತಾನುಸಾರ ಬುದ್ಧಿ ಹುಟ್ಟುವಂತೆ ಮಾಡುವವನು ಆ ಸರ್ವೋತ್ತಮನಾದ ಶ್ರೀಮಾನ್ ನಾರಾಯಣನು. ಆದ್ದರಿಂದ ಗುರುಗಳೇ, ನಾವು ಹೇಳಿಕೊಡದಿರುವ ಬುದ್ಧಿ ಹೇಗೆ ಬಂದಿತು

ಅಂದರಲ್ಲಾ ಇದರಿಂದ ನಿಮ್ಮ ಅಜ್ಞಾನ ವ್ಯಕ್ತವಾಯಿತು. ನಾನು ನನ್ನದು ಎಂಬುದೇ ಅಜ್ಞಾನಿಗಳಾಡುವ ಮಾತು. ಪಶುಬುದ್ಧಿ. ಇಂತಹ ದುಷ್ಟಬುದ್ಧಿ ನಾಶವಾಗಬೇಕಾದರೆ ಶ್ರೀಮನ್ನಾರಾಯಣನನ್ನೇ ಸ್ವತಂತ್ರ ಸರ್ವರ ಬುದ್ಧಿ ಇಂದ್ರಿಯಗಳ ಪ್ರೇರಕನೆಂದು ತಿಳಿದಾಗ ನಿಜ ಜ್ಞಾನವು ಜನಿಸುವುದು.

ಹೀಗೆ ನನ್ನ ಬುದ್ಧಿಯು ಶ್ರೀಹರಿಯ ಚರಣಗಳಲ್ಲಿ ನೈಜವಾಗಿಯೇ ನನ್ನ ಮನಸ್ಸು ಆಕರ್ಷಿತವಾಗಿರುವುದು. ಕಬ್ಬಿಣವು ಅಯಸ್ಕಾಂತದ ಕಡೆಗೆ ಹೇಗೆ ತಾನಾಗಿ ಎಳೆಯಲ್ಪಡುವುದೋ ಅದರಂತೆ ಅಯಸ್ಕಾಂತದ ಕಡೆ ಬರಲು (ಆಕರ್ಷಿಸಲು) ಕಬ್ಬಿಣಕ್ಕೆ ಯಾರು ಹೇಳಿಕೊಡುತ್ತಾರೆ ಹೇಳಿ. ಹಾಗೆ ಶ್ರೀಹರಿಯ ಮಹಿಮೆ ಎಂಬ ಅಯಸ್ಕಾಂತ ನನ್ನ ಮನಸ್ಸು (ಚಿತ್ತವು) ಆಕರ್ಷಿತವಾಗಿರುವುದು.

**ಇಷ್ಟು ಉತ್ತರಿಸಿದಾಗ** ಗುರುಪುತ್ರರಿಗೆ ಡಂಗು ಬಡಿದಂತಾಯಿತು. ಶಿಕ್ಷಿಸೋಣವೆಂದರೆ ರಾಜಪುತ್ರವೆಂದು ಹಿಂಜರೆದು ಕೂಗಾಡಿದರು. ಯಾರಲ್ಲಿ ? ಬೆತ್ತ ತನ್ನಿರಿ. ಇವನನ್ನು ದಂಡಿಸೋಣ. ಇಲ್ಲವಾದರೆ ಕುಲವೈರಿ ಅಡ್ಡದಾರಿ ಹಿಡಿಯುತ್ತಾನೆ. ಎಲ್ಲಿಂದ ಬಂದೆಯೋ ದುಷ್ಟ ? ನಮ್ಮನ್ನು ರಾಜ ಶಿಕ್ಷಿಸದೆ ಬಿಡುವುದಿಲ್ಲ. ರಾಕ್ಷಸ ಕುಲಕ್ಕೆ ಕಪ್ಪುಮಸಿ ಹಚ್ಚುತ್ತೀಯ.

**ದೈತೇಯ ಚಂದನವನೇ ಜಾತೋಽಯಂ ಕಂಟಕದ್ರುಮಃ ।**
**ತನ್ಮೂಲೋನ್ಮೂಲ ಪರಶೋಃ ವಿಷ್ಣೋಃ ನಾಲಾಯಿತೋರ್ಭಕಃ ॥**

ದೈತ್ಯಕುಲವೆಂಬ ಗಂಧದ ಮರಗಳ ಮಧ್ಯೆ ಮುಳ್ಳುಗಿಡ (ಜಾಲೀಗಿಡ)ದಂತೆ ಹುಟ್ಟಿರುವನು. ಇವನು ಹರಿ ಎಂಬ ಕಾವಿಗೆ ಕೊಡಲಿಯಂತಾಗಿ ಇಡೀ ರಾಕ್ಷಸವಂಶವನ್ನೇ ನಾಶಮಾಡಲಿರುವನು. **ಈ ಒಂದು ವಾಕ್ಯಕ್ಕೆ ಶ್ರೀ ಸತ್ಯಧರ್ಮತೀರ್ಥರು "ದೈತೇಯ ಕಂಟಕವನೇ ಜಾತೋಯಂ ಚಂದನದ್ರುಮಃ"** ದೈತ್ಯರೆಂಬ ಮುಳ್ಳುಗುಂಪೆಯಲ್ಲಿ ಪ್ರಹ್ಲಾದನೆಂಬ ಶ್ರೀಗಂಧದ ಮರ ಹುಟ್ಟಿತಲ್ಲಾ ಎಂದು ಚಮತ್ಕಾರವಾಗಿ ವರ್ಣಿಸಿರುತ್ತಾರೆ.

ಹೀಗೆಂದು ಬೆದರಿಸಿ, ಗದರಿಸಿ ಅವನನ್ನು ತಂದೆ ಹೇಳಿದಂತೆ ಪಾಠ ಹೇಳಿಕೊಡಲು ಆರಂಭಿಸಿದರು. ಪಾಠವು ಮುಂದುವರಿಯಿತು. ಕೆಲ ದಿನಗಳಾದ ನಂತರ ಪ್ರಹ್ಲಾದನಿಗೆ ತಾವು ಸರಿಯಾಗಿ ಬುದ್ಧಿ ಕಲಿಸಿರುವೆವೆಂದು ತಂದೆ ಹಿರಣ್ಯಕನಲ್ಲಿಗೆ ಕರೆದುಕೊಂಡು ಬಂದರು.

## ಪ್ರಹ್ಲಾದನ ವಿನಯ, ಮಾತಾಪಿತೃ ಭಕ್ತಿ

**ದೈತ್ಯೇಂದ್ರಂ ದರ್ಶಯಾಮಾಸ ಮಾತೃಮೃಷ್ಟಮಲಂಕೃತಮ್ ॥** ಮನೆಗೆ ಬಂದ ನಂತರ ತಾಯಿ ಕಯಾದು ಆನಂದದಿಂದ ಕರೆದು ಮಂಗಳಸ್ನಾನ ಮಾಡಿಸಿ ವಸ್ತ್ರಾಭರಣಾದಿಗಳಿಂದ ಅಲಂಕಾರ ಮಾಡಿ ಹೇಳಿದಳು–ವತ್ಸಾ, ಮಗು ಪ್ರಹ್ಲಾದ ನಿನ್ನ



ತಂದೆ ಒಪ್ಪುವಂತೆ ಮಾತನಾಡು ಎಂದು. ಹಿರಣ್ಯಕನು ಮಗನು ವಿನೀತನಾಗಿರುವುದನ್ನು ಕಂಡು ಆನಂದವಾಯಿತು.

**ಪಾದಯೋಃ ಪತಿತಂ ಬಾಲಂ ಪ್ರತಿನಂದ್ಯಾಶಿಷಾಸುರಃ ।**
**(ಪ್ರಣತ್ನಂ ಪಾದಯೋರ್ಬಾಲಂ ಪ್ರತಿನಂದ್ಯಾಽಶೀಷಾಽಸುರಃ)**
**ಪರಿಷ್ವಜ್ಯ ಚಿರಂ ದೋರ್ಭ್ಯಾಂ ಪರಮಾಮಾಪನಿರ್ವೃತಿಮ್ ॥**

ತಾಯಿಯಿಂದ ಕಳುಹಿಸಲ್ಪಟ್ಟ ಪ್ರಹ್ಲಾದ ಬಂದವನೇ ತನ್ನ ತಂದೆಯ ಚರಣಗಳನ್ನು ಮುಟ್ಟಿ ನಮಸ್ಕರಿಸಿದ. ಇಂತು ಭಕ್ತಿ ವಿನಯಾನ್ವಿತನಾದ ಮಗನನ್ನು ಎರಡೂ ಕೈಗಳಿಂದ ಎತ್ತಿ ಆಲಿಂಗನ ಮಾಡಿ ಆನಂದಭರಿತನಾದನು. ಮಗನನ್ನು ತನ್ನ ತೊಡೆಯ ಮೇಲೆ ಕೂಡಿಸಿ ಮಗನ ಶಿರವನ್ನೇ ಆಘ್ರಾಣಿಸಿ ಪ್ರೀತಿಸಿ ಆನಂದಿಸಿದನು.

ಹಿರಣ್ಯಕಶಿಪುವಿಗೆ ಈ ರೀತಿ ಆನಂದ ಕ್ಷಣಕಾಲ ಮಾತ್ರ ಇದ್ದಿತು. ಪ್ರಹ್ಲಾದನು ನಿರ್ಭಯವಾಗಿ ಮಾತನಾಡಿದ್ದನ್ನು ಕೇಳಿ ಆಘಾತವಾಯಿತು.

ಹಿರಣ್ಯಕಶಿಪು ಕೇಳಿದ.

**ಪ್ರಹ್ಲಾದಾನೋಚ್ಯತಾಂ ತಾತ ಸ್ವಧೀತಂಕಿಂಚಿದುತ್ತಮಮ್ ।**
**ಕಾಲೇನೈತಾವತಾಽಽಯುಷ್ಮನ ಯದಶಿಕ್ಷದ್ ಗುರೋರ್ಭವನಂ ॥**

ಮಗನೇ, ಪ್ರಹ್ಲಾದ, ನೀನು ದೀರ್ಘಾಯುಷ್ಯವಂತನಾಗು. ನಿನ್ನ ವಿನಯ ಪಿತೃಭಕ್ತಿಗೆ ಆನಂದವಾಗಿದೆ. ಪುತ್ರ, ಗುರುಕುಲದಲ್ಲಿ ಗುರುಗಳು ಹೇಳಿಕೊಟ್ಟ ವಿದ್ಯೆಯ ಒಂದಂಶವನ್ನು ನನಗೆ ಹರ್ಷವಾಗುವಂತೆ ವಿವರಿಸು ಎಂದನು.

ಪ್ರಹ್ಲಾದನು ನಿರ್ಭಯನಾಗಿ ಉತ್ತರಿಸುತ್ತಾನೆ. ತಂದೇ, (ಗುರುಗಳಿಂದ) ಇಲ್ಲಿ ಗುರುಗಳೆಂದರೆ ನಾರದರೆಂದಿಟ್ಟುಕೊಳ್ಳಬೇಕು. ಕಲಿತ ಪಾಠಗಳು – ನಾನು ಗುರುಗಳಿಂದ ಶ್ರೀಹರಿಯಲ್ಲಿ ಒಂಭತ್ತು ಮುಖ್ಯ ವಿಧ ಭಕ್ತಿ ಮಾಡುವುದನ್ನು ಕಲಿತನಷ್ಟೇ ಅಲ್ಲದೆ ಅದೇ ರೀತಿ ಭಕ್ತಿಯೂ ಇರುವುದು.

## ನವವಿಧಭಕ್ತಿ

**ಶ್ರವಣಂ ಕೀರ್ತನಂ ವಿಷ್ಣೋಃ ಸ್ಮರಣಂ ಪಾದಸೇವನಂ ।**
**ಅರ್ಚನಂ ವಂದನಂ ದಾಸ್ಯಂ ಸಖ್ಯಮಾತ್ಮ ನಿವೇದನಂ ॥**
**ಇತಿಪುಂಸಾಂಽರ್ಪಿತಾ ವಿಷ್ಣೌ ಭಕ್ತಿಶ್ಚೇನ್ನವಲಕ್ಷಣಾ ।**
**ಕ್ರಿಯತೇ ಭಗವತ್ಯದ್ಧಾ ತನ್ಮನ್ಯೇಽಧೀತಮುತ್ತಮಮ್ ॥**

ಶ್ರವಣಂ, ಕೀರ್ತನಂ (ವಿಷ್ಣುವಿನಲ್ಲಿ) ಸ್ಮರಣ, ಪಾದಸೇವ, ಅರ್ಚನೆ, ವಂದನ, ದಾಸ್ಯತ್ವ,

ಸಖ್ಯತ್ವ, ಕೊನೆಗೆ ಆತ್ಮ ನೀವದನೆ ಇವು ಒಂಭತ್ತು ರೀತಿಯ ಭಕ್ತಿ ಶ್ರೀಮಹಾವಿಷ್ಣುವಿನಲ್ಲಿ ಅರ್ಪಿತವು. ಮಾನವನು ಮಾಡಿದರೆ ಅದೇ ಉತ್ಕೃಷ್ಟ ಶಾಸ್ತ್ರಾಧ್ಯಯನವೆಂಬುದೇ ನನ್ನ ತೀರ್ಮಾನ. ಅಂತೆಯೇ ನಾನು ಕಲಿತಿರುವೆನು ಎಂದು ಪ್ರಹ್ಲಾದನು ನಿರ್ಭಯವಾಗಿ ಹೇಳಿದ.

**ವಿಶೇಷಾಂಶ :** ಮೇಲೆ ಹೇಳಿದ ಒಂಭತ್ತು ವಿಧಗಳಲ್ಲಿ ಒಂದರಿಂದಲೇ ಭಗವತ್ಪ್ರಸಾದವಾಗಿ ಲಭ್ಯವಾದ ಉದಾಹರಣೆಗಳನ್ನು ಕಾಣಬಹುದು.

(೧) **ಶ್ರವಣಂ :** ಶ್ರೀಮದ್ಭಾಗವತವನ್ನು ಪರೀಕ್ಷಿತರಾಜನು ಶುಕಮುನಿಗಳಿಂದ ೧೪೦ ತಾಸು ವಿಶ್ರಮಿಸಿದೆ ಏಳು ದಿನಗಳು ಶ್ರವಣ ಮಾಡಿದ್ದು, ಶ್ರವಣಂ ದಿನವೊಂದಕ್ಕೆ ೧೮ ತಾಸು ಏಳು ದಿನಗಳು ಹಸಿವೆ ನೀರಡಿಕೆ ಇಲ್ಲದೆ ೨೪ ತಾಸುಗಳಲ್ಲಿ ಬೆಳಿಗ್ಗೆ ಸೂರ್ಯೋದಯಾ ನಂತರ ೭-೦೦ ರಿಂದ ರಾತ್ರಿ ೯-೦೦ ರವರೆಗೆ (೯-೦೦ ನಂತರ ಬೆಳಿಗ್ಗೆ ೪-೦೦ ಘಂಟೆಯಲ್ಲಿ ಅಲ್ಪ ಭೋಜನ ನಿದ್ರ) ಬೆಳಗಿನ ಝಾವ ೪-೦೦ ರಿಂದ ೭-೦೦ರವರೆಗೆ ಪ್ರಾತಃಕಾಲೀನ ಕಾರ್ಯ ಸ್ನಾನ ಜಪಾದಿಗಳಾದ ನಂತರ ೭-೦೦ ಘಂಟೆಗೆ ಪ್ರವಚನಾರಂಭವಾಗುತ್ತಿತ್ತು. ಹೀಗೆ ಏಳು ದಿನಗಳಲ್ಲಿ ೧೮,೦೦೦ ಭಾಗವತ ಗ್ರಂಥ ಉಪನ್ಯಾಸ ನಡೆಯಿತು. ಇದನ್ನು ಸಪ್ತಾಹವೆನ್ನಲಾಗಿದೆ. [ಶ್ರೀಮದ್ಭಾಗವತ ಸಪ್ತಾಹವು ಭಾದ್ರಪದ ಮಾಸ ಶುಕ್ಲ ಪಾಡ್ಯದಿಂದ ಸಾಮಾನ್ಯವಾಗಿ ದಶಮಿಯವರೆಗೆ ಇರುವುದು].

(೨) **ಕೀರ್ತನಂ :** ಭಾಗವತ ಪ್ರವಚನ ರೂಪ, ಹರಿಕೀರ್ತನ ಮಾಡಿದ ಶುಕಮುನಿಗಳು.

(೩) **ಸ್ಮರಣಂ :** ಗರ್ಭದಲ್ಲಿದ್ದಾಗಿನಿಂದ ಹರಿಸ್ಮರಣೆಗೆ ಪ್ರಹ್ಲಾದರೇ ದೃಷ್ಟಾಂತವಾಗಿರುತ್ತಾರೆ. ಶ್ರೀಹರಿಯ ರೂಪ ಸ್ಮರಣೆ ಅಲ್ಲದೆ ಅರ್ಜುನ ಶ್ರೀಕೃಷ್ಣ ಸ್ಮರಣೆ ನಿದ್ರಾ ಸುಷುಕ್ತಿಯಲ್ಲೂ ಇದ್ದಿತು. ಶ್ರೀ ಮುಖ್ಯಪ್ರಾಣದೇವರ ನಿತ್ಯ ೧೬,೮೦೦ ಹರಿಸ್ಮರಣೆ ಇದ್ದಿತು. (ಹಂಸಮಂತ್ರ ಜಪಿಸುತ್ತಾರೆ.)

(೪) **ಪಾದಸೇವನಂ (ಸಾಷ್ಟಾಂಗ ನಮಸ್ಕಾರ) :** ಶ್ರೀ ಹನುಮಂತ ದೇವರಂತೆ ಶ್ರೀರಾಮನ ಪಾದಸೇವನೆ (ಪಾದಸೇವನೆ ಅಂದರೆ **"ತ್ವತ್ಪಾದರ ವಿಂದಯೋಃ ಸಂಸಕ್ತಿಂ"** ಎಂದು ವಿಜಯಧ್ವಜರು ತಿಳಿಸಿದಂತೆ ಶ್ರೀಹರಿ ಚರಣಗಳಲ್ಲಿಯೂ ಮನಸ್ಸು ಆಸಕ್ತವಾಗಿರುವುದು) ದಾಸನಂತೆ ಹರಿಪಾದ ಸೇವ **"ದಾಸೋಹಂ ಕೋಸಲೇಂದ್ರಸ್ಯ"** ಅವ್ಯೆಹಿ ದೂತ ಮಾಗತಂ. ರಾವಣಾ, ನಾನು ರಾಮನ ದಾಸ. ಈಗ ಅವನ ದೂತನಾಗಿ ಬಂದಿರುವೆ. ಈ ರೀತಿಯ ದಾಸ್ಯ ಭಾವ ಅತ್ಯುತ್ತಮ.

(೫) **ಅರ್ಚನಂ :** ಶ್ರೀಹರಿಯ ಸಾನ್ನಿಧ್ಯವಿರುವ ಪ್ರತಿಮಾ, ಸಾಲಿಗ್ರಾಮಗಳನ್ನು ಶಾಸ್ತ್ರೋಕ್ತ ಷೋಡಶೋಪಚಾರ ಭಕ್ತಿಯಿಂದ ಮಾಡುವುದು.



(೬) **ವಂದನಂ :** ಶ್ರೀಹರಿಯ ಪ್ರತೀಕಗಳಾದ ದೇವಾಲಯಗಳಲ್ಲಿರುವ ಜ್ಞಾನಿಗಳಿಂದ (ಅಥವಾ ಸ್ವಯಂ ವ್ಯಕ್ತಿ ಮೂರ್ತಿಗಳು) ಪ್ರತಿಷ್ಠಿತ ಮೂರ್ತಿಗಳಿಗೆ ಸಾಷ್ಟಾಂಗ ನಮಸ್ಕಾರ ಮಾಡುವುದು.

(೭) **ದಾಸ್ಯಂ :** ಹನುಮಂತ ದೇವರೇ ಇದಕ್ಕೆ ಸೂಕ್ತ ಉದಾಹರಣೆ. ಹರಿದಾಸನೆಂದು ಅವನ ಸರ್ವೋತ್ತಮತ್ವಾದಿ ಗುಣಗಳನ್ನು ಧ್ಯಾನಿಸುವುದು. ಇದಕ್ಕೆ ವಿರುದ್ಧವಾಗಿ 'ಸೋಹಂ' ಎಂದು ಉಪಾಸನೆ ಮಾಡಿದರೆ ತಮಸ್ಸೆ ಆಗುವುದು. ದಾಸೋಹಂ ಎಂದೆ ಭಜಿಸಬೇಕು.

(೮) **ಸಖ್ಯಮ್ :** ಪಂಚ ಪಾಂಡವರಲ್ಲಿ ಅರ್ಜುನನು (ಭೀಮಸೇನರೇ) ಶ್ರೀಕೃಷ್ಣನ ಸಖ್ಯವನ್ನೇ ಮಾಡುತ್ತಿದ್ದರು.

(೯) **ಆತ್ಮನಿವೇದನ :** ತನ್ನನ್ನು ಶ್ರೀಹರಿಯಲ್ಲಿ ಸಮರ್ಪಿಸುವುದು. ಆತ್ಮನಿವೇದನಂ ಎಂಬುವುದಕ್ಕೆ ಶ್ರೀರಾಮಾನುಜಾಚಾರ್ಯರು ಪ್ರಪತ್ತಿ (ಶರಣಾಗತಿ) ಎಂಬ ಅರ್ಥ ಬರುವಂತೆ ಬರೆದಿದ್ದಾರೆ. ಶರಣಾಗತಿ ದಡ್ಡನೂ ಮಾಡುತ್ತಾನೆ. ವೀರಶೈವ ಸಿದ್ಧಾಂತದ ಪ್ರಕಾರ ಶರಣು ಹೋಗು – ಬೇಡು ಎಂದಿದೆ. ಅವರ ವಾಕ್ಯಗಳು ಸವ್ಯಾಹತಿ. ಶ್ರೀರಾಮಾನುಜರ ಪ್ರಕಾರ ಮುಕ್ತಿ ಎಂದರೆ ಶ್ರೀಹರಿಯ ಸಮ ಸಮ ಆನಂದಾನುಭವ, ಜೀವನಿಗೂ ಬ್ರಹ್ಮನಿಗೂ ಆಗಲದನುಭವದಲ್ಲಿ ಭೇದವಿರುವುದಿಲ್ಲವೆಂದ ಮೇಲೆ ತಾರತಮ್ಯವೇ ಇಲ್ಲದಿದ್ದಾಗ ಹೇಗೆ. ಇನ್ನು ವೀರಶೈವ ಮತದಂತೆ ಎಲ್ಲರೂ ಶಿವೈಕ್ಯರಾಗುತ್ತಾರೆ ಎಂದಾಗ ಶಿವ/ಜೀವರು ಒಂದೇ. ಜೀವನು ಶಿವನಾಗುತ್ತಾನೆ (ಸೇರುತ್ತಾನೆ). ಹೀಗೆ ಹೇಳಿದಾಗ ಶರಣು ಯಾರು, ಯಾರಿಗೆ, ಶರಣರು ಯಾರು, ಶರಣ್ಯನು ಯಾರು. ಭೇದವೇ ಇಲ್ಲದಿದ್ದಾಗ ಆತ್ಮನಿವೇದನಾವೆಂಬ ಶಬ್ದಕ್ಕೆ ಅಪವಾದವಾಗುವುದು.

ಶ್ರೀಮದಾಚಾರ್ಯರು ಈ ವಾಕ್ಯಕ್ಕೆ ಮೇಲೆ ತಿಳಿಸಿದಂತೆ ಭಕ್ತನಾದವನು ಎಂಟು ವಿಧ ಭಕ್ತಿ ಮಾಡಿದಾಗ ಮುಕ್ತಿಯು ನಿಶ್ಚಿತ. ಮುಕ್ತಿ ಪಡೆಯುವವರೆಗೂ ಸೇವಾದಿಗಳನ್ನು ಮಾಡಿ ಪ್ರಸನ್ನೀಕರಿಸಲು ಅವನ ನಿಯಮದಂತೆ ನಡೆದೇ ಈಗ ಮುಕ್ತಿಯಾಗಿದೆ. ಮುಂದೆ ಅವನ ನಿಯಾಮಕತ್ವದ ಅವಶ್ಯಕತೆ ಬೇಕಿಲ್ಲ ಎನ್ನುವುದು ತಪ್ಪುಕಲ್ಪನೆ ಎಂದು ತಿಳಿಸಲು

**ಮುಕ್ತಸ್ಯಾಪಿ ಮಮಾಂತಸ್ಥೆ ನಿಯಂತೈವ ಹರಿಃ ಸದಾ ।**
**ಇತಿಜ್ಞಾನಂ ಸಮುದ್ದಿಷ್ಟಂ ಸಖ್ಯಮಾತ್ಮನಿವೇದನಂ ॥** ಭಾ.ತಾ.

ಮೋಕ್ಷವನ್ನು ಪಡೆದ ಮೇಲೂ ಅಲ್ಲಿ ಶ್ರೀಹರಿಯು ನಿಯಾಮಕನಾಗಿ ಸದಾ ನೆಲೆಸಿರುವನು ಎಂದು ತಿಳಿಯುವುದು. ಸಮೀಚೀನ ಜ್ಞಾನ, ಇದನ್ನೇ **ಆತ್ಮನಿವೇದನಂ** ಎನ್ನಲಾಗಿದೆ. ಎಷ್ಟು ಸೊಗಸಾದ ಪ್ರಾಮಾಣಿಕ ವಿವರಣೆ ಅಲ್ಲವೇ ?

**ವಿಶೇಷ ವಿವರಣೆ :** ಭಗವಂತನ ಪಾದ ನಮಗೆ ಲಭಿಸುವುದಾದರೂ ಹೇಗೆ

ಸಾಧ್ಯ ? ಪಂಢರಪುರಕ್ಕೆ ಹೋಗುತ್ತೇವೆ. ಅಲ್ಲಿ ದೇವಾಲಯದ ಗರ್ಭಗುಡಿಯಲ್ಲಿ ಪಾಡುರಂಗನ ಮೂರ್ತಿ ಇರುವುದು. ದರ್ಶನಕ್ಕಾಗಿ ಹೋದಾಗ ಅಲ್ಲಿ ಅರ್ಚಕರು **"ಪಾವುಪಡ"** ಎಂದು ಮರಾಠಿಯಲ್ಲಿ ಕಾಲಿಗೆ ಬೀಳಿರಿ ಎಂದು ಹೇಳುತ್ತಾರೆ. ಹಾಗೆ ದೇವರ ಎರಡೂ ಕಾಲುಗಳನ್ನು ಮುಟ್ಟಿ ನಮ್ಮ ತಲೆಯಿಂದ ಮುಟ್ಟುತ್ತೇವೆ. ಆಗ ಭಗವಂತನ ಪಾದ ಸಿಕ್ಕಿತಲ್ಲಾ ಎನ್ನುವುದು ಅಜ್ಞರ ಮಾತು. ಪಾಡುರಂಗನು ಅಲ್ಲಿ ಸ್ವಯಂ ವ್ಯಕ್ತ ನಿಜವೇ. ಆದರೆ ನಾವು ಮುಟ್ಟುವುದು ಒಂದು ಕಲ್ಲಿನ ಮೂರ್ತಿಯನ್ನಷ್ಟೇ ಹೊರತು ಸಾಕ್ಷಾತ್ ಪರಮಾತ್ಮನ ಪಾದಗಳನ್ನೆಂದು ತಿಳಿಯಬಾರದು. ಹಾಗೆ ಕಾಲು ತೊಳೆಯುವುದೂ ಅಷ್ಟೆ. ಹಾಗಾದರೆ ಈ ವಾಕ್ಯದ ವಿವರಣೆ ಏನು ? **"ಪಾದಾಭ್ಯಾಂ ಸೇವನಂ"** ನಮ್ಮ ಪಾದಗಳಿಂದ ತೀರ್ಥಕ್ಷೇತ್ರಾದಿಗಳಲ್ಲಿರುವ ಭಗವಂತನ ಆಲಯಗಳಿಗೆ ನಡೆದುಹೋಗಬೇಕು ಎಂದೂ ತಿಳಿಯಬೇಕು.

ಇಷ್ಟು ವಿಷಯ ಈ ನವವಿಧ ಭಕ್ತಿಯ ಬಗ್ಗೆ ವಿವರಿಸಲಾಗಿದೆ. ಪ್ರಹ್ಲಾದರಾಜನು ತಂದೆಗೆ ಉತ್ತರಿಸುವಲ್ಲಿ ಅವನ ಅಂತರಂಗದಲ್ಲಿ ಎಷ್ಟೆಲ್ಲಾ ಅಡಿಗಿರಬೇಕು.

ಪ್ರಹ್ಲಾದನು ಉತ್ತರಿಸಿದ್ದನ್ನು ಕೇಳಿ ಹಿರಣ್ಯಕಶಿಪುವಿಗೆ ಸಿಡಿಲು ಬಡಿದಂತಾಯಿತು. ಅತೀ ಕೋಪದಿಂದ ಕಣ್ಣು ಕೆಂಪಾಗಿ ತುಟಿಗಳು ನಡುಗುತ್ತಾ ಷಂಡಾಮರ್ಕರ ಕಡೆ ನೋಡಿ ಬ್ರಾಹ್ಮಣಾಧಮರೇ, ದುಷ್ಟರೇ ನಾನು ಏನು ಹೇಳಿದೆ ಅನ್ನುವುದನ್ನು ಲಕ್ಷ್ಯಕೊಡದೆ ನೀವು ನನ್ನ ಶತೃವಾದ ಹರಿಪಕ್ಷ ವಹಿಸಿ ಪ್ರಹ್ಲಾದನಿಗೆ ಇಲ್ಲಸಲ್ಲದೆ, ಅರ್ಥಹೀನ ದುರ್ವಿದ್ಯೆಯನ್ನು ಏಕೆ, ಹೇಗೆ ಹೇಳಿಕೊಟ್ಟಿರಿ. ವೇದಾಂತವನ್ನು ಬೋಧಿಸಿ ಪುತ್ರನ ಮತಿ ಕೆಡಿಸಿರುವಿರಿ. ಇಂತಹ ಮಹಾ ದ್ರೋಹ ಮಾಡಿರುವ ನಿಮ್ಮನ್ನು ಶಿಕ್ಷಿಸದೇ ಬಿಡುವುದಿಲ್ಲ ಎಂದು ಕೂಗಾಡಿದ. ಇದನ್ನು ಕೇಳಿ ಗುರುಪುತ್ರರು ಗಡಗಡ ನಡುಗಲಾರಂಭಿಸಿದರು. ದೈತ್ಯೇಂದ್ರ, ಈ ವಿದ್ಯೆಯನ್ನು ನಾವು ಖಂಡಿತವಾಗಿ ಕಲಿಸಿಲ್ಲ.

**ನಮತ್ಪ್ರಣೀತಂ ನ ಪರಪ್ರಣೀತಂ । ಸುತೋವದತ್ಯೆಷತವೇಂದ್ರಶತ್ರೋ**
**ನೈಸರ್ಗೀಕೀಯಂ ಮತಿರಸ್ಯರಾಜನ್ । ನಿಯಚ್ಛ ಮನ್ಯುಂ ಕ್ವತದಾತ್ಮಮಾನಃ ॥**

ನಿನ್ನ ಮಗನಿಗೆ ಸ್ವಾಭಾವಿಕವಾಗಿಯೇ ಬಂದಿರುವುದು. ನಮ್ಮ ಮಾತನ್ನು ನಂಬು ದಂಡಿಸಬೇಡ.

ಗುರುಪುತ್ರರ ಹೇಳಿಕೆಯನ್ನು ಗಮನಿಸಿ ಮಗನನ್ನು ಪ್ರಶ್ನೆ ಮಾಡಿದ. ಪ್ರಹ್ಲಾದ, ನಿನಗೆ ವಿಷ್ಣುಪಕ್ಷ ವಿಷಯಕ ಬುದ್ಧಿ ಯಾರು ಹೇಳಿಕೊಟ್ಟರು ? ಯಾರು ಆ ಅಧಮರು ? ಎಂದು. ಪ್ರಹ್ಲಾದನು ಉತ್ತರಿಸುತ್ತಾನೆ. ಅಪ್ಪಾ ಗುರುಗಳೆಂದೆನಿಸಿಕೊಂಡವರು ಹರಿಯಲ್ಲಿ ಭಕ್ತಿ ಹುಟ್ಟಿಸುವಂಥಾ ಉಪದೇಶ ನನಗೆ ಅಂಕುರಿಸಲಿಲ್ಲ. ಅವರಿಗೆ ಶ್ರೀಶನಲ್ಲಿ ಭಕ್ತಿಯಿಲ್ಲದ ಉಪದೇಶ ಯಾವ ಉತ್ತಮ ಪರಿಣಾಮವನ್ನೂ ಮಾಡುವುದಿಲ್ಲ. ಅವರೇ ಕುರುಡರಂತಿರುವಾಗ ಮತ್ತೊಬ್ಬ ಕುರುಡನಿಗೆ ಹೇಗೆ ದಾರಿ ತೋರಿಸುತ್ತಾರೆ ? ಇಬ್ಬರೂ



ಬಾವಿಯಲ್ಲಿ ಬೀಳುವರು. ಅಂತಹವರನ್ನು ಯಮಧರ್ಮರಾಜ ನಿಂದಿಸುತ್ತಾನೆ. **ಸ್ವಯಂ ಧೀರಾಃ ಪಂಡಿತಂಮನ್ಯಮಾನಾಃ ದಂಧ್ರಮ್ಯಾಮಾಣಾಃ ಪರಿಯಂತಿ ಮೂಢಾಃ । ಅಂಧೇನೈವ ನಿಯಮಾನೋ ಯಥಾಂಧಾಃ** ಎಂದು.

ಮಹತ್ಮರು ಜ್ಞಾನಿಗಳು ಜಿತೇಂದ್ರಿಯರಾಗಿ ಶ್ರೀರಮಾರಮಣನಲ್ಲಿ ಏಕಾಂತ ಭಕ್ತಿ ಉಳ್ಳವರು ಮಹಾತಪಸ್ವಿಗಳಾದ ಶ್ರೀಮದಾನಂದತೀರ್ಥರ, ಶ್ರೀಜಯತೀರ್ಥರ, ವ್ಯಾಸರಾಜರ, ರಘೂತ್ತಮರ, ಶ್ರೀರಾಘವೇಂದ್ರರಂಥಾ ಯತಿಶ್ರೇಷ್ಠರ ಪಾದಸೇವೆ ಎಲ್ಲಿಯವರೆಗೂ ಅಪೇಕ್ಷಿಸುವುದಿಲ್ಲವೋ ತಾವತ್ಪರ್ಯಂತ ಸಾಂಸಾರಿಕ ತೊಂದರೆಗಳು, ವಿಘ್ನಗಳು ನಿವಾರಿಸಲಾಗದು. ಶ್ರೀಹರಿಯ ಚರಣಗಳಲ್ಲಿ ನಿರ್ವಾಜ ಭಕ್ತಿ ಹೊಂದಿರಬೇಕು.

ಹೇ ತಂದೆಯೇ ಕೇಳು. ನಿನ್ನಂತಹ ಗ್ರಹಸ್ತ ನಿರಂತರ ಶ್ರೀಹರಿಯಲ್ಲಿ ಮನಸ್ಸು ಲಗ್ನವಾಗಲೂ ಹರಿಭಕ್ತರ ಸೇವೆಯ ಮಹತ್ವ ಏನೆಂದು ಬಣ್ಣಿಸಲಿ ?

**ನೈಷಾಂ ಮತಿಸ್ತಾವದ್ ಉರುಕ್ರಮಾಂಘ್ರಿಂ**
**ಸ್ಪೃಶತ್ಯನರ್ಥಾಪಗಮೋ ಯದ್ರೃತ್ಥಃ ।**
**ಮಹೀಯಸಾಂ ಪಾದರಣೋಭಿಷೇಕಂ**
**ನಿಷ್ಕಿಂಚನಾನಾಂ ನವೃಣೀತ ಯಾಪತ್ ॥**

ಪ್ರಹ್ಲಾದನು ತಾನು ವಯಸ್ಸಿನಲ್ಲಿ ಚಿಕ್ಕವನಾದರೂ ತಂದೆಗೆ ಬುದ್ಧಿವಾದ ಮಾಡುವಂಥಾ ಮಾತುಗಳನ್ನು ಹೇಳಿದ.

ಹಿರಣ್ಯಕಶಿಪುವಿಗೆ ಮಗನ ಮಾತುಗಳು ಕಾಸಿದ ಸೀಸ ಕಿವಿಯಲ್ಲಿ ಹಾಕಿದಂತಾಯಿತು. ಸಹಜ ದುರ್ಬುದ್ಧಿಗಳಿಗೆ ಇಂತಹ ಸದ್ಬುದ್ಧಿ ಹಿಡಿಸುವುದಿಲ್ಲ. ಅಂತೆಯೇ ದೈತ್ಯರಾಜನಿಗೆ ನುಂಗದ ತುತ್ತಾಯಿತು. ಅವನ ಸಿಟ್ಟು ಇನ್ನಷ್ಟು ಜಾಸ್ತಿಯಾಗಿ ಪ್ರೀತಿಯ ಮಗನನ್ನು ದ್ವೇಷಿಸಲಾರಂಭಿಸಿ ತನ್ನ ತೊಡೆಯಿಂದ ಕೆಡವಿದ. ಕೆಳಗೆ ಬಿದ್ದ ಮಗನನ್ನು ಕಂಡು ತನ್ನ ಸೇವಕರಿಗೆ ಜೋರಾಗಿ ಅರುಚುತ್ತಾ ಸೇವಕರೇ, ಕೇಳಿ. ಇವನು ನನ್ನ ಶತೃ, ಪಾಪಿ. ಇನ್ನು ಬದುಕಿರಬಾರದು. ಇಂತಹ ಕುಲಘಾತಕನನ್ನು ಕೊಲ್ಲುವುದೊಂದೇ ಮಾರ್ಗ. ಕೊಂದು ಬಿಡಿರಿ. ನನ್ನ ಮಗನೆಂಬ ದಾಕ್ಷಿಣ್ಯ ಪಡಬೇಡಿರಿ.

ಪ್ರಹ್ಲಾದನನ್ನು ರಾಕ್ಷಸರು ವಿವಿಧ ರೀತಿ ಹಿಂಸೆ ಯಾತನೆ ಕೊಟ್ಟರು.

ಭಾಗವತದಲ್ಲಿ ವಿವರವಾಗಿ ಸಾಕಷ್ಟು ಎಲ್ಲಾ ರೀತಿಯ ಸಾಮ, ದಾನ, ಭೇದಾದಿಗಳಿಂದ ಯಾತನೆ ಕೊಟ್ಟರೆಂದು ೧೨ ಶ್ಲೋಕಗಳಲ್ಲಿ ವರ್ಣಿತವಾಗಿದೆ.

ಪ್ರಹ್ಲಾದನನ್ನು ಸಂಹರಿಸಲು ದೈತ್ಯರು ಅವನನ್ನು ಶೂಲ, ಖಡ್ಗ, ಗದಾ ಇತ್ಯಾದಿ ಆಯುಧಗಳಿಂದ ಪ್ರಯತ್ನಿಸಿದರು. ಅಭಿಚಾರಿಕೆ, ವಾಮಾಚಾರ, ಮದ್ದಾನೆಗಳಿಂದ ತುಳಿಸಿ

ಪುಡಿ ಪುಡಿ ಮಾಡಲು ಯತ್ನಿಸಿದರು. ಆ ಗಜಗಳ ಕ್ರೂರ ಕೋರೆಗಳು ಭಗ್ನವಾದವೇ ವಿನಃ ಪ್ರಹ್ಲಾದನಿಗೆ ಕಿಂಚಿತ್ ಹಾನಿಯಾಗದೆ ಯಥಾ ಪ್ರಕಾರ ಹಾಯಾಗಿ ಹಸನ್ಮುಖಿಯಾಗಿ ಜೀವಿಸಿದ. ಕ್ರೂರ ರಾಕ್ಷಸ ಕಿಂಕರರಿಗೆ **"ವಿಷ್ಣು ಶಾಸ್ತ್ರೇಷು ಯಸ್ಮಾಸುಮಯಿ । ಚಾಸಾ ವ್ಯವಸ್ಥಿತಃ । ದೇತೇಯಾಸ್ತೇನ ಸತ್ಯೇನ ಮಾಕ್ರಕುಂತ್ರಾಯುಧಾನಿಮೆ ॥"**

ಶ್ರೀಮಹಾವಿಷ್ಣು ನಿಮ್ಮಲ್ಲಿ ನನ್ನಲ್ಲಿ ಇರುವಾಗ ಶಸ್ತ್ರಗಳು ನನ್ನ ಮೇಲೆ ಯಾವ ಪರಿಣಾಮವೂ ಆಗುವುದಿಲ್ಲವೆಂದು ಪ್ರಹ್ಲಾದನು ಶ್ರೀಹರಿಯಲ್ಲಿನ ದೃಢ ವಿಶ್ವಾಸವಿದ್ದುದರಿಂದ ಶ್ರೀಶನು ಆಯುಧಗಳಿಂದ ಹಾನಿಯಾಗದಂತೆ ಮಾಡಿದನು.

ಆನೆಯ ಕೋರೆ ಹಲ್ಲುಗಳು ಪುಡಿ ಪುಡಿಯಾದವು. **"ದಂತಾ ಗಜಾನಾಂ ಕುಲಿ ಶಾಲಾ ನಿಷ್ಠುರಃ ಶೀರ್ಣಾಯ ದೇತೇನ ಬಲಂ ಯ ಮೈತತ್ । ಮಹಾ ವಿಪತ್ತಾ ಪ ವಿನಾಶನೋಽಯಂ ಜನಾರ್ದನ ನಾಮಸ್ಮರಣಾನುಭಾವಂ"** (ವಿಷ್ಣು ಪು. ೧-೨೦/೪೪)

ಆನೆಯ ಕೋರೆಯ ಹಲ್ಲುಗಳು ನಿಷ್ಪ್ರಯೋಜನವಾಗಲು ಶ್ರೀಹರಿ ಸ್ಮರಣೆಯನ್ನು ನಾನು ಸದಾ ಚಿಂತಿಸುತ್ತಿರುವುದರಿಂದ ಅವುಗಳ ಹಲ್ಲುಗಳು ಮುರಿದವೇ ಹೊರತು ನನಗ್ಯಾವ ಹಾನಿಯಾಗಲಿಲ್ಲವೆಂದು ಪ್ರಹ್ಲಾದನ ಮಾತುಗಳನ್ನು ಕೇಳಿ ದೈತ್ಯೇಂದ್ರ ಇನ್ನಷ್ಟು ಕೋಪಿಷ್ಟನಾಗಿ ಅವನನ್ನು ಸುಡಬೇಕೆಂದು ಕಾಷ್ಠಗಳಿಗೆ ಬೆಂಕಿ ಹಚ್ಚಿ ಮಧ್ಯ ಕೂಡಿಸಿದರೂ ವಹ್ನಿ ಜ್ವಾಲೆ ತಣ್ಣಗಾದವು. ಪ್ರಹ್ಲಾದನು ಅಗ್ನಿನಾಮಕ ಹರಿಯನ್ನು ಧ್ಯಾನಿಸಿದ ಪರಿಣಾಮ

**ತಾತ ವಿಷ ವಹ್ನಿಃ ಪವನೇನ ಪ್ರೇರಿತೋ ಸ ಮಾಂ ದಹತ್ಯತ್ರ ।**
**ಸಮಂತತೋಹಂ ಪಶ್ಯಾಮಿ ಪದ್ಮಾಸ್ತರಣಾ ಸ್ಮೃತಾನಿ ಶೀತಾನಿ**
**ಸರ್ವಾಣಿ ದಿಶಾಂಮುಖಾನಿ** ವಿ.ಪು.

ಈ ಬೆಂಕಿಯು ವಾಯುವಿನಿಂದ ಕೂಡಿದ್ದರಿಂದ ವಹ್ನಿ ಆರಿಹೋಗಿ ತಂಪಾದ ಗಾಳಿ ಬೀಸಿದಂತಿರುವುದು. ನನ್ನನ್ನು ಕಟ್ಟಿಗೆಯ ಮೇಲೆ ಕೂಡಿಸಿದ್ದು ಕಮಲ ದಳಗಳ ಮೇಲೆ ಮೆತ್ತಗೆ ಕೂತಂತಾಗಿರುವುದು.

ಇದನ್ನು ಕೇಳಿದ ಹಿರಣ್ಯಕನಿಗೆ ಕೋಪ ಮಿತಿಮೀರಿ ಹೋಯಿತು ಹಾಗೂ ಅವನ ಬಗ್ಗೆ ದ್ವೇಷ ಇಮ್ಮಡಿಸಿತು.

ಪ್ರಹ್ಲಾದನನ್ನು ವಧಿಸಲು ಪರ್ವತಗಳ ಶಿಖರದಿಂದ ತಳ್ಳಿದ. ಸಮುದ್ರ (ಆಳವಾದ) ಮಧ್ಯದಲ್ಲಿ ಮುಳುಗಿಸಿದ. ಕೊನೆಗೇ ತಾಯಿ ಕಯಾದುವಿನ ಕೈಯಿಂದ ಕಾಲಕೋಟ ವಿಷಪಾನ ಮಾಡುವಂತೆ ಮಾಡಿದ. ಮರಣ ವಾಮಾಚಾರ ಮಾಡಿಸಿದ. ಕೃತ್ಯ (ಪಿಶಾಚಿ)ಯನ್ನು ಪುರೋಹಿತರಿಂದ ಪ್ರಯೋಗ ಮಾಡಿಸಿದ. ಅದು ಜ್ವಾಲೆಯಂತೆ ಸುಡುತ್ತಾ ಪ್ರಹ್ಲಾದನತ್ತ ಧಾವಿಸಿ ಬಂದರೂ ಅದು ನಿಸ್ತೇಜವಾಗಿ ಮಣ್ಣು ಮುಕ್ಕಿತು. ಪ್ರಹ್ಲಾದನು ಶ್ರೀಹರಿ ಎಂಬ



ಕವಚ ಧಾರಣ ಮಾಡಿದ್ದರ ಫಲವಾಗಿ ಶಾಂತಿಪ್ರಿಯ ಧರ್ಮಾತ್ಮನ ಮೇಲೆ ಆ ಪ್ರಯೋಗವು ಪ್ರಹ್ಲಾದನ ಒಂದು ರೋಮವುವೂ ಅಲೆಗಾಡಿಸಲು ಅಸಮರ್ಥವಾಗಿ ಕೃತ್ಯವು ತಿರುಗುಬಾಣವಾಗಿ ಪುರೋಹಿತನನ್ನೇ ದಹಿಸಲೂ ಹೋಯಿತು. ದಯಾಮಯನಾದ ಪ್ರಹ್ಲಾದ ಶಾಂತನಾಗಿ ಕೃತ್ಯಕ್ಕೆ ಹೇಳಿದ. ಭಗವಂತ ಶ್ರೀಹರಿ ಈ ಪುರೋಹಿತರು ಎಷ್ಟೇ ಅಪಚಾರ ನನ್ನ ಮೇಲೆ ಮಾಡಿದರೂ ಆಪದ್ಬಾಂಧವ ರಕ್ಷಕ ಶ್ರೀನಾರಾಯಣನೇ ನನ್ನ ಎಲ್ಲದರಿಂದ ಕಾಪಾಡಿದೆ. ಸ್ವಾಮೀ, ದಯೆತೋರಿ ನನ್ನ ಮೊರೆ ಕೇಳಿ ಇವನನ್ನು ಕಾಪಾಡು ಎಂದು ಪ್ರಾರ್ಥಿಸಿದ. ಆ ಪುರೋಹಿತರನ್ನು ಅಮೃತಪಾಯವಾದ ಹಸ್ತದಿಂದ ಮುಟ್ಟಲು ಕೃತ್ಯವು ಮಾಯವಾಗಿ ಪುರೋಹಿತ ಬದುಕಿದ.

ಪ್ರಯೋಗ ಮಾಡಿದ ಬ್ರಾಹ್ಮಣ ಪ್ರಹ್ಲಾದನ ಸಹಿಷ್ಣುತೆಗೆ ನಾಚಿ ಎದ್ದು ನಿಂತು ಕೈಜೋಡಿಸಿ ಕಣ್ಣೀರು ಸುರಿಸುತ್ತಾ ಆಶೀರ್ವಾದ ಮಾಡಿದರು. **"ದೀರ್ಘಾಯು ಪ್ರತಿ ಹತೋಬಲ ವೀರ್ಯ ಸಮನ್ವಿತಃ । ಪುತ್ರ ಪೌತ್ರಧನೈಶ್ವರ್ಯ ಯುಕ್ತೋವತ್ಸ ಭವೋತ್ತಮಃ"** (ವಿ.ಪು. ೧-೧೭/೪೫) (ಶ್ರೀಮದ್ಭಾಗವತದಲ್ಲಿ ಇದರ ಇಷ್ಟು ವಿವರಣೆ ಇರುವುದಿಲ್ಲ.)

ಪ್ರಹ್ಲಾದನಿಗೆ ತಂದೆ ಎಷ್ಟೆಷ್ಟು ವಿಧವಾಗಿ ಅವನನ್ನು ಸಂಹಾರ ಮಾಡಬೇಕೆಂದು ಪ್ರಯತ್ನಿಗಳು ವಿಫಲವಾಯಿತು. ಪ್ರಹ್ಲಾದನನ್ನು ಮುಗಿಸಬೇಕೆಂದು ನಾನಾವಿಧ ಕೃತ್ಯಗಳು.

(೧) ಅಷ್ಟ ದಿಗ್ಗಜಗಳಿಂದ ತುಳಿಸಿದ ಗಜಗಳ ಹಲ್ಲುಗಳು ತುಂಡಾದವು.

(೨) ಅತಿ ಕ್ರೂರ ಭಯಂಕರ ವಿಷಪೂರಿತ ಹಾವುಗಳಿಂದ ಕಚ್ಚಿ ಸಾಯುವಂತೆ ಮಾಡಲು ಹೋಗಿ ತಮ್ಮ ಹಲ್ಲುಗಳನ್ನೇ ಮುರಿದುಕೊಂಡವು.

(೩) ವಾಮಾಚಾರ ಅಭಿಚಾರಿಕೆಗಳಿಂದ ಮಾಟ ಮಾಡಿಸಿದರೆ ಶ್ರೀನೃಸಿಂಹ ಭಕ್ತನಿಗೆ ಸಫಲವಾಗಲಿಲ್ಲ.

(೪) ಒಂದು ಆಳವಾದ ಗುಂಡಿಯಲ್ಲಿ ಹೂಳಿಟ್ಟರೂ ಭೂ ವರಾಹ ಸ್ವಾಮಿಯನ್ನು ನೆನೆದು ಮೇಲಕ್ಕೆ ಬಂದನು.

ಹೀಗೆ ಏನು ಮಾಡಿದರೂ ಅನಘನಾದ ಪ್ರಹ್ಲಾದನನ್ನು ಕೊಲ್ಲಲಾಗಲಿಲ್ಲ. ಹಿರಣ್ಯಕಶಿಪುವಿಗೆ ಆಶ್ಚರ್ಯವಾಗಿ ಏಕೆ ಹೀಗಾಗುತ್ತಿದೆ ? ಚಿಂತೆಯಿಂದ ಕೊರಗಿ ಹೀಗೆ ಯೋಚಿಸಿದ.

"ನಾನು ಎಷ್ಟು ರೀತಿ ಯಾರಿಂದಲೂ ಮರಣ ಬಾರದೆಂಬ ವರವನ್ನು ಕೇಳಿದಾಗ ಬ್ರಹ್ಮದೇವರಿಗೆ ಸರಿಯಾಗಿ ಕೇಳಿಸಿತೋ ಇಲ್ಲವೋ. ವರ ನನಗೆ ಕೊಡುವುದನ್ನು ನನ್ನ ಮಗನಿಗೆ ಕೊಟ್ಟನೋ ಹೇಗೆ ?" ಎಂದು ವಿಚಾರಮಾಡಿದ.

ಇಷ್ಟಾದರೂ ಪ್ರಹ್ಲಾದ ನನ್ನನ್ನು ದ್ವೇಷಿಸುತ್ತಿಲ್ಲ. ಎಲ್ಲದರಿಂದ ವಿಜಯವಂತನಾಗಿ ಬಂದು ಹಸನ್ಮುಖಿನಾಗಿ ನಿಂತಿರುತ್ತಾನೆ. ನನ್ನನ್ನು ಅಣಕಿಸು (ಹಾಸ್ಯ)ತ್ತಾನೆಂಬ ಮುಖದಿಂದ ನೋಡುತ್ತಾನೆ. ನನ್ನ ಮೇಲಿನ ಪ್ರೀತಿ ಕಡಿಮೆ ಆಗಲಿಲ್ಲ. ಏನುಕಾರಣವೆಂದು ಬಹಳ ಯೋಚಿಸಲಾರಂಭಿಸಿದ.

ನಿನ್ನಿಂದ ನನಗೆ ಮರಣವು ಹೇತುವಾಗುವುದೇ ನಿಶ್ಚಯ.

**ಇತಿ ತಚ್ಚಿಂತಯಾ ಕಿಂಚನ್‌ಮ್ಲಾನಶ್ರಿಯಮಧೋಮುಖಮ್ ।**
**ಶಂಡಾಮರ್ಕಾವ್ಯೆಸನಸೌ ವಿವಿಕ್ತಃ ಇತಿ ಹೋಚತುಃ ॥**

ಈ ರೀತಿ ದೀರ್ಘವಾಗಿ ಚಿಂತಿಸುತ್ತಾ ಕೆಳಮುಖ ಮಾಡಿ ಕೂತಿರುವ ರಾಜನನ್ನು ಶಂಡಾಮರ್ಕರು ಏಕಾಂತದಲ್ಲಿ ಕಂಡು, ರಾಕ್ಷಸ ರಾಜ, ಹೀಗೆ ಕೂತಿರುವುದು ನಿನ್ನಂಥ ಶೂರನಿಗೆ ಯೋಗ್ಯವಲ್ಲ. ಮರೆತೆಯಾ ನಿನ್ನ ಪರಾಕ್ರಮ. ತ್ರಿಲೋಕಗಳನ್ನು ನೀನು ಜಯಿಸಿ ದೇವತೆಗಳು ಕಂಗಾಲಾಗಿ ನಡುಗುತ್ತಾ ನಿನ್ನ ಕರುಣಾಕಟಾಕ್ಷಕ್ಕಾಗಿ ನಿಂತಿರುತ್ತಾರೆ. ವೀರಾಧಿವೀರನಾದ ನೀನು, ಒಬ್ಬ ಬಾಲಕನ ವಿಷಯವಾಗಿ ಯೋಚಿಸುವುದು ಉಚಿತವಲ್ಲ. ಪ್ರಹ್ಲಾದ ಇನ್ನು ಬಾಲಕ. ಅನ್ಯರ ಮಾತನ್ನು ಗಿಳಿಯಂತೆ ಆಡುತ್ತಿದ್ದಾನೆ. ಅವನಿಗೆ ಸರಿಯಾದ ವಿವೇಕವಿರುವುದಿಲ್ಲ. ದೊಡ್ಡವನಾದ ಮೇಲೆ ಅವನ ಬುದ್ಧಿ ಬದಲಾಗುವುದು. ಮಗನನ್ನು ಕೊಲ್ಲುವ ಹವ್ಯಾಸ ಬಿಡು. ರಾಜನ್, ನಾವು ಅವನನ್ನು ವರುಣ ಪಾಶದಿಂದ ಕಟ್ಟಿ ಯಾರ ಸಂಗವಾಗದಂತೆ ಮಾಡಿ ಅವನಿಗೆ ಸರಿಯಾದ ಬುದ್ಧಿ ಬೋಧಿಸುತ್ತೇವೆ. ವಯಸ್ಸಾಗುತ್ತಾ ವಿವೇಕಿಯಾಗಿ ನಮ್ಮಂತೆ ಸರಿಯಾದ ಮಾರ್ಗದಲ್ಲಿ ನಡೆಯುತ್ತಾನೆ. ಆಗ ನಮ್ಮ ತಂದೆ ಗುರುಗಳು ಅನ್ಯ ಉಪಾಯ ತಿಳಿಸುತ್ತಾರೆ. ತಾವತ್ ಪರ್ಯಂತ ನಮ್ಮ ವಶದಲ್ಲಿರಲಿ. ವಿನಾಕಾರಣ ನಿನ್ನ ಬುದ್ಧಿ ಕೆಡಿಸಿಕೊಳ್ಳಬೇಡ. ಚಿಂತೆ ತ್ಯಜಿಸು ಎಂದು ಹೇಳಿದಾಗ ದೈತ್ಯರಾಜ ಅವರ ಮಾತಿನಲ್ಲಿ ಸತ್ಯವಿದೆ ಎಂದು ಸಮ್ಮತಿಸಿ, ಬೀಳ್ಕೊಡುವಾಗ ಹೇಳಿದ, ಎಚ್ಚರವಿರಲಿ, ಧರ್ಮ, ಅರ್ಥ, ಕಾಮಗಳನ್ನಷ್ಟೇ ಹೇಳಿಕೊಡಿರಿ.

ಹೀಗೆ ಮಗನನ್ನು ಅವರೊಂದಿಗೆ ಕಳುಹಿಸಿಕೊಟ್ಟ.

## ಗುರುಗಳ ಪುನಃ ಪಾಠಾರಂಭ

ಪ್ರಹ್ಲಾದನಿಗೆ ಗೃಹಸ್ಥಾಶ್ರಮ ಧರ್ಮಗಳನ್ನು ರಾಜನೀತಿಗಳನ್ನು ಹೇಳಿಕೊಡಲಾರಂಭಿಸಿದರು.

ಪ್ರಹ್ಲಾದನಿಗೆ ಅವರ ಅಪಪಾಠದ ಬಗ್ಗೆ ಶ್ರದ್ಧೆ ಹುಟ್ಟದೆ, ಅವು ರಾಗದ್ವೇಷಗಳ ಬೋಧನೆ ಅಯುಕ್ತವೆಂದು ತಿಳಿದು ಆಸಕ್ತಿ ತೋರಿಸಲಿಲ್ಲ.



## ದೈತ್ಯಬಾಲಕರಿಗೆ ಬೋಧನೆ

ಗುರುಪುತ್ರರು ಪಾಠ ಸಮಯಾ ನಂತರ ವಿರಾಮದಲ್ಲಿ ತಮ್ಮ ಗೃಹ ಕೃತ್ಯದಲ್ಲಿ ಮಗ್ನರಾಗುತ್ತಿದ್ದರು. ಬಾಲಕರು ಆಟದ ಸಮಯವೆಂದು ಪ್ರಹ್ಲಾದನನ್ನು ತಮ್ಮೊಡನೆ ಆಟವಾಡಲು ಕರೆದರು. ಆದರೆ ಆ ದೈತ್ಯರಿಗೆ ಗುರೂಪದೇಶ ಹಿಡಿಸಲಿಲ್ಲ. ಹರಿಭಕ್ತಿ ರಹಿತ ವಿದ್ಯೆಯಲ್ಲಿ ಎತ್ಕಿಂಚಿತ್ ಮನಸ್ಸಿಲ್ಲದೆ ಪ್ರಹ್ಲಾದನ ಬಳಿ ಬಂದು ಏಕೆ ಆಟವಾಡಲು ಬರುವುದಿಲ್ಲ ? ಏಕಾಂಗಿಯಾಗಿ ಏನೋ ಧ್ಯಾನಿಸುತ್ತಿರುವೆ. ದೈತ್ಯೇಂದ್ರ ಬಾಲಕನನ್ನು ಸ್ನೇಹದಿಂದ ಮಾತನಾಡಿಸಿದರು.

ಇಂತು ಮುಗ್ಧ ಬಾಲಕರು ತನ್ನ ಮೇಲಿದ್ದ ವಾತ್ಸಲ್ಯ ಅರಿತು ಶ್ರೀರಮಾರಮಣನ ವಿಷಯ ಅವನಲ್ಲಿ ಭಕ್ತಿ ಹುಟ್ಟುವಂತೆ ಅವರನ್ನು ಸುತ್ತುಗೂಡಿಸಿಕೊಂಡು ಹೇಳಲಾರಂಭಿಸಿದ. ಬಾಲಕರು ಆಸಕ್ತಿಯಿಂದ ಆಟವಾಡುವುದನ್ನು ಬಿಟ್ಟು ಕೂತರು.

**ಪರ್ಯುಪಾಸಕ ರಾಜೇಂದ್ರ ತನ್ನಸ್ಯಸ್ತ ಹೃದಯೇಕ್ಷಣಾಃ ।**
**ತಾನಾಹ ಕರುಣೋ ಮೈತ್ರೋ ಮಹಾಭಾಗವತೋಽಸುರಃ ॥**

## ಪ್ರಹ್ಲಾದನ ಉಪದೇಶ

ಬಾಲಕರೇ, ಮೊದಲು ನನ್ನ ಪ್ರಶ್ನೆಗೆ ಉತ್ತರ ಕೊಡಿ. ಗುರುಗಳು ಹೇಳಿಕೊಟ್ಟ ಪಾಠ ನಿಮಗೆ ಅರ್ಥವಾಯಿತಾ ? ಅವರು ಕಲಿಸುತ್ತಿರುವುದು ನಿಮಗೆ ಸರಿ ಎಂದೆನಿಸುತ್ತಿದೆಯೇ ?

ಬಾಲಕರು ಉತ್ತರಿಸುತ್ತಾರೆ. ರಾಜಪುತ್ರ, ಸತ್ಯ ಹೇಳಬೇಕೆಂದರೆ ಅವರು ಏನು ಹೇಳುತ್ತಾರೋ ನಮಗೆ ಬೋಧವಾಗುತ್ತಿಲ್ಲ. ಗಿಳಿಗಳಂತೆ ಅವರು ಹೇಳಿದ್ದನ್ನು ಉಚ್ಚರಿಸುತ್ತೇವೆಯೇ ಆಗಲಿ ಅದರ ಅರ್ಥ ಸ್ವಲ್ಪವೂ ಆಗಿಲ್ಲ. ಏನೋ ಧರ್ಮ, ರಾಜನೀತಿ ಅರ್ಥ (ದ್ರವ್ಯ) ಸಂಪಾದನೆ ಕಾಮಗಳೆಂಬುವ ವಾಕ್ಯಗಳು ನಮ್ಮ ಬುರುಡೆಯಲ್ಲಿ ಸೇರುತ್ತಿಲ್ಲ. ಏನು ಮಾಡುವುದು ? ವಿಧಿಯಿಲ್ಲ. ಕೇಳುತ್ತೇವೆ. ಪ್ರಹ್ಲಾದ, ನೀನು ಏನು ಹೇಳುವೆಯೋ ಅದನ್ನು ಶ್ರದ್ಧೆಯಿಂದ ಕೇಳುತ್ತೇವೆ ಎಂದರು.

ಪ್ರಹ್ಲಾದರಾಜನು ಗುರುಗಳು ಹೇಳುವುದು ನನಗೆ ಅರ್ಥವಾಯಿತೇ ಆಗಲಿ ಅದರ ಪುರುಷಾರ್ಥ ಶ್ರೇಯಸ್ಸಾಗುವುದಿಲ್ಲ ಎಂದು ತಿಳಿದಿರುವೆ. ಆದ್ದರಿಂದ ಹೇ ಸಖರೇ, ನನ್ನ ಮಾತು ಕೇಳಿ. ನಿಮಗೂ, ನನಗೂ ಶುಭವಾಗುವುದು. ನೀವು ಆಟವಾಡಿ ನಿಮ್ಮ ಆಯುಸ್ಸು ವ್ಯರ್ಥವಾಗುವುದು. **"ಹ್ಯಾಂಗೆ ಮಾಡಲಯ್ಯಾ ಕೃಷ್ಣ ವ್ಯರ್ಥವಾಗುತಿದೆ ಆಯುಸ್ಸು"** ಎಂಬಂತೆ ಕಾಲ ನಿಮಗಾಗಿ ಕಾಯುವುದಿಲ್ಲ. (Time and tide never waits for a man) ಕಾಲ ನದೀ ನೀರಿನ ಪ್ರವಾಹದಂತೆ ಹರಿದು ಹೋಗುವುದು, ನಮಗೆ ಅದರ ಪರಿವೆಯೇ

ಇರುವುದಿಲ್ಲ. ನಿಮ್ಮ ಹಿರಿಯರು, ತಾತ ಮುತ್ತಾತಂದಿರೆಲ್ಲರೂ ಕಾಲಪ್ರವಾಹದಲ್ಲಿ ಹರಿದು ಹೋಗಿರುತ್ತಾರೆ. ಅಂತೆಯೇ ನೀವು ಇಂದಲ್ಲಾ ನಾಳೆ ಎಂದಾದರೂ ಒಂದು ದಿನ ಯಮಪುರಿಗೆ ಹೋಗಲೇಬೇಕು. ಯಾರಿಂದಲೂ ತಪ್ಪಿಸಲಾಗದು. ಹೇಳಿ. ನಿಮ್ಮ ಅಜ್ಜ ಇದ್ದಾರೆಯೇ ? ಇಲ್ಲ. ಹಾಗೆ ನೀವೂ ನಿಮ್ಮ ತರುವಾಯ ಸುತ ಸತಿಯರನ್ನು ಕಾಲನಾಮಕ ಶ್ರೀಹರಿ ಕೊಂಡೊಯ್ಯುವನು. ಈಗ ನೀವು ಬಾಲಕರಾಗಿರುವಿರಿ. ದೊಡ್ಡವರಾಗಿ ಕಾಲಚಕ್ರಕ್ಕೆ ಸಿಕ್ಕುವಿರಿ. ಆದ್ದರಿಂದ ಈಗ ಯಮಪುರಿಗೆ ಹೋಗುವ ಪೂರ್ವದಲ್ಲಿ ಸಾಧನೆ ಮಾಡಿ ವೈರಾಗ್ಯ ಜ್ಞಾನ, ಅಧ್ಯಯನ, ಹರಿನಾಮ ಸ್ಮರಣೆ ಭಜಿಸಿ ಮೋಕ್ಷ ಮಾರ್ಗ ಹಿಡಿಯಬೇಕು. ಈಗ ನೀವು ಅಜ್ಞಾನವೆಂಬ ನಿದ್ರೆಯಿಂದ ಎಚ್ಚರಗೊಳ್ಳದಿದ್ದರೆ ಮಹಾ ಅನರ್ಥವಾಗುವುದು. ಇಂತಹ ಶ್ರೀಶನಲ್ಲಿ ಭಕ್ತಿ ಗುರುಗಳಿಗಿದೆಯೋ ಕೇಳಿ. ನಾವು, ನೀವು ಎಲ್ಲರಂತೆ ಅವರವರ ತಂದೆ ಅಷ್ಟೇಕೆ. ನನ್ನ ತಂದೆಯನ್ನೂ ಯಮರಾಜನು ಬಿಡುವುದಿಲ್ಲ. ಹೀಗೆ ತಿಳಿಯದೇ ಮಿಥ್ಯಾಜ್ಞಾನ ಬೋಧನೆಯಿಂದ ಅವರಿಗೂ ಶ್ರೇಯಸ್ಸಾಗುವುದಿಲ್ಲ. ಆದ್ದರಿಂದ ಬಾಲಕರೇ ತ್ರಿವರ್ಗದಿಂದ ಮೋಕ್ಷ ಸಾಧನೆ ಆಗುವುದಿಲ್ಲ. ಹಿಂದೆ ಅನೇಕ ಮಹನೀಯರು ಸನಕಾದಿ ಮುನಿಗಳು, ಮಾರ್ಕಂಡೇಯರು ತಮ್ಮ ಶ್ರೇಯೋ ಮಾರ್ಗವನ್ನು ತಿಳಿದು, ಆಚರಿಸಿ ಪರಮಾತ್ಮನ ಪ್ರೀತಿ ಸಂಪಾದನೆ ಪಡೆದರು. ಇದಕ್ಕೆ ವಿರುದ್ಧವಾಗಿ ಕೇವಲ ಅರ್ಥ ಕಾಮಗಳನ್ನು ಬೋಧಿಸುವ ವಿದ್ಯೆ ಕುವಿದ್ಯೆ ಎನಿಸುವುದು. ಇಂತು ತಿಳಿಸಿದ ಗುರುಗಳ ಪಾಠವನ್ನು ನಂಬದೇ ತ್ಯಜಿಸಬೇಕು.

**ನಪುರಾ ವಿವಶಂ ಬಾಲಾ ಆತ್ಮನೋಽರ್ಥೇ ಪ್ರಿಯೈಷಿಣಃ ।**
**ಗುರೂಕ್ತಮಪಿ ನಗ್ರಾಹ್ಯಂ ಯದನರ್ಥೇಽರ್ಥಕಲ್ಪನಂ ॥**

ಇಲ್ಲಿರುವ ಗುರುಗಳು ಹೇಳಿಕೊಡುವ ಪಾಠದಿಂದ ಏನು ಕಲಿತಿರಿ ? ಅದು ನಮ್ಮನ್ನು ಮತ್ತೆ ಮತ್ತೆ ಸಂಸಾರವೆಂಬ ಮಡುವಿನಲ್ಲಿ ಕೆಡುವುದು. ಮೇಲೇಳಲೂ ಅಸಾಧ್ಯ. ಇಂತಹ ಪ್ರೇಯಸ್ಸಾಧನ ವಿದ್ಯೆ ಹೇಳಿಕೊಡುವವರು ಗುರುಗಳೆಂದು ಹೇಳಿಕೊಳ್ಳಲೂ ಬರುವುದಿಲ್ಲ. ಅವರು ಕಲಿಸುತ್ತಿರುವುದು ವಿದ್ಯೆಯೇ ಅಲ್ಲ. ಪರಮಾತ್ಮನ ವಿಷಯ ತತ್ವಗಳನ್ನು ಯಥಾವತ್ತಾಗಿ ನಾವು ತಿಳಿದು ಅನುಸರಿಸಿ ಬೋಧಿಸುವವರೇ ನಿಜ ಗುರುಗಳು.

[ಹಿಂದೆ ಗುರುಗಳು ನಾವು ಬರೆದ ಭಾಷ್ಯ ಉತ್ತಮವೆಂದು ಭಾಷ್ಯಕಾರರೂ ಅಜ್ಞಾನ, ಅನ್ಯಥಾಜ್ಞಾನ, ಮಿಥ್ಯಾಜ್ಞಾನ ಉಪದೇಶಿಸಿದರು. ಅದರಿಂದ ಸುಜೀವರಿಗೆ ಎಚ್ಚರವಾಗಲಿಲ್ಲ. ಒಬ್ಬ ಶ್ರೀಮದಾನಂದತೀರ್ಥರು ನಿಜಭಾಷ್ಯ ರಚಿಸಿ ಎಬ್ಬಿಸಿ ಅಮೃತ ಸದೃಶವಾದ ಭಾಷ್ಯ (೨೨ನೇ) ಬರೆದು ಪರಮಾತ್ಮನ ತತ್ವಜ್ಞಾನ ನೀಡಿದ ಜಗದ್ಗುರುಗಳು].

**ಕಶ್ಚಿನ್ಮಾಮ್ ತತ್ವತಃ**

ಬಾಲಕರೇ, ಕೇಳಿರಿ. ಅಜ್ಞಾನವನ್ನು ಬಿಟ್ಟು ನಿವೃತ್ತಿ ಮಾರ್ಗದಿಂದ ಶ್ರೀಹರಿಯಲ್ಲಿ ಭಕ್ತಿಮಾಡಿ ಬೋಧಿಸುವವನೇ ಗುರು ಮತ್ತು ಉತ್ತಮಾಧಿಕಾರಿ.



ಇಷ್ಟು ಉಪದೇಶ ಮಾಡಿದ ಮೇಲೆ ದೈತ್ಯ ಬಾಲಕರು ಕೆಲವು ಬುದ್ಧಿವಂತರು ಪ್ರಹ್ಲಾದನನ್ನು ಪ್ರಶ್ನಿಸುತ್ತಾರೆ.

(೧) ಪ್ರಶ್ನೆ : ದಾನವ ರಾಜಕುಮಾರ, ನಿನ್ನ ಉಪದೇಶವನ್ನು ಕೇಳಿದೆವಾದರೂ ಕೆಲ ಸಂಶಯಗಳಿವೆ. ಉತ್ತರಿಸುವೆಯಾ ? ಎಂದು.

ನಾವಿನ್ನೂ ಬಾಲಕರು. ನಮಗೆ ಮುಂದೆ ಬೆಳೆದು ದೊಡ್ಡವರಾಗಿ ಲೋಕಾನುಭವ ಹೊಂದಿದ ಮೇಲೆ ವಯಸ್ಸಾದ ನಂತರ ನಿನ್ನ ಬೋಧನೆ ಹಿಡಿಸಿ, ಅದರಂತೆ ನಡೆಕೊಳ್ಳುತ್ತೇವೆ. ಈಗಿನಿಂದಲೇ ಈ ತತ್ವಾನುಷ್ಠಾನ ಏಕೆ ? ನಾವು ಮುದುಕರಾದಾಗ ವಿಚಾರ ಮಾಡೋಣ.

(೨) ಪ್ರಶ್ನೆ : ನಮ್ಮ ಗುರುಗಳು ಹೇಳಿದ ಅರ್ಥ, ಕಾಮಗಳು ನಮ್ಮ ಮುಂದಿನ ಜೀವನದಲ್ಲಿ ಅನುಸರಿಸಬೇಕು. ನಾವು ಬದುಕಿರಬೇಕು ಬದುಕಬೇಕು ಅಂತಲೇ ಧನಸಂಪತ್ತನ್ನು ಪಡೆಯಬೇಕೆಂದಿದೆ. ಅದನ್ನೇ ಗುರುಗಳು ಹೇಳಿಕೊಡುತ್ತಾರೆ. ಅವರ ಬೋಧನೆಯಲ್ಲಿ ಕಾಹಾನಿಃ ಈಗಿನಿಂದಲೇ ಶ್ರೀಹರಿಯ ಜ್ಞಾನದ ಬಗ್ಗೆ ಏಕೆ ತಿಳಿಯಬೇಕು ? ಇದೆಯಲ್ಲಾ ಸಾಕಷ್ಟು ವಯಸ್ಸು. ನೋಡೋಣ. ನಮಗೆ ನಿನ್ನ ಬೋಧನೆ ಈಗ ಸರಿಕಾಣುವುದಿಲ್ಲ.

(೩) ಪ್ರಶ್ನೆ : ಇನ್ನೊಬ್ಬ ಹುಡುಗ ಪ್ರಹ್ಲಾದ ಈ ಹರಿಭಕ್ತಿ ವಿಷಯವಾಗಿ ನಿಮ್ಮ ತಂದೆಗೆ ಏಕೆ ಉಪದೇಶಿಸಿಲ್ಲ ? ನಿಮ್ಮ ತಂದೆಗೆ ಸಾಕಷ್ಟು ವಯಸ್ಸಾಗಿದೆಯಲ್ಲಾ. ನಿನಗೆ ಆತನನ್ನು ತಿದ್ದಿ ಸರಿಮಾರ್ಗಕ್ಕೆ ಏಕೆ ತರಲಿಲ್ಲ ? ಚಿಕ್ಕವನಾದರೂ ನೀನು ಮಹಾ ಬುದ್ಧಿಶಾಲಿ. ಆದರೆ ರಾಜನಿಗೆ ನೀನು ಮೊದಲು ಉಪದೇಶಿಸಬೇಕಿತ್ತು ಅಲ್ಲವೇ ?

(೪) ಪ್ರಶ್ನೆ : ಇನ್ನೊಬ್ಬ ಕೇಳಿದ. ಪ್ರಹ್ಲಾದ, ಈ ಪರತತ್ವ ನಮ್ಮ ಗುರುಗಳ ತಂದೆಯಾದ ಶುಕ್ರಾಚಾರ್ಯರಿಗೆ ಗೊತ್ತಿಲ್ಲವೇ ? ಆದರೂ ವಿರುದ್ಧ ಬೋಧನೆ ಮಾಡಲು ಏನು ಕಾರಣ?

(೫) ಪ್ರಶ್ನೆ : ಐದನೆಯವ ಕೇಳಿದ. ರಾಜಪುತ್ರ ನಿನಗೂ ನಮಗೂ ಷಂಡಾಮರ್ಕರೇ ಗುರುಗಳು. ಹೀಗಿರುವಾಗ ಅವರನ್ನು ಹೊರೆತು ಈ ಬ್ರಹ್ಮವಿದ್ಯೆಯನ್ನು ನೀನು ಯಾರಿಂದ ಕಲಿತೆ ? ಪ್ರಹ್ಲಾದ, ನಿನ್ನ ತಂದೆಯೇ ಬ್ರಹ್ಮನೆಂದು ಹೇಳಿರುವಾಗ ನಮಗೆ ಅವನನ್ನು ಹೊರತು ಬೇರೆ ಈಶ್ವರನಿಲ್ಲವೆಂದು ತಿಳಿದಿರುತ್ತೇವೆ. ಆದರೆ ನೀನು ಭಗವಂತ ಸಾಕ್ಷಾನ್ನಾರಾಯಣನೆಂದು ತಿಳಿಸಿದಾಗ ಭ್ರಾಂತರಾಗಿದ್ದೇವೆ. ಸಂಶಯ ನಿವಾರಿಸು.

ಷಂಡಾಮರ್ಕರು ಅಭ್ಯಸಿಸದೆ ಇರುವ ಬ್ರಹ್ಮವಿದ್ಯೆ ನಾವೇಕೆ ತಿಳಿಯಬೇಕು ? ನಮಗೆ ಸದ್ಯ ಈಶ್ವರನೆಂದರೆ ನಿನ್ನ ತಂದೆ. ಹಿರಣ್ಯಕಶಿಪು. ರಾಜಾಂತಪುರದಲ್ಲಿ ಆಗಲಿ, ಇಲ್ಲಿಯಾಗಲಿ ನಿನಗೆ ಯಾರ ಸಂಗದಿಂದ ಈ ವಿದ್ಯೆ ಹೇಗಾಯಿತು ? ನಂಬಬಹುದೇ ? ನನಗೆ ತಿಳಿಸು.

ಪ್ರಹ್ಲಾದನು ಆ ಎಲ್ಲರ ಸಂದೇಹ ಪರಿಹರಿಸಲು ಸೂಕ್ತ ಉತ್ತರಿಸುತ್ತಾನೆ.

(೧) ಬ್ರಹ್ಮವಿದ್ಯೆಯ ವಿಷಯವಾಗಿ ತಿಳಿಯಬೇಕಾದರೆ ವಯಸ್ಸು ಕಾರಣವಲ್ಲ. ನೀವು ಹೇಳಿದಂತೆ ವಯಸ್ಸಾದಾಗ ತಿಳಿಯೋಣವೆಂದೇನು ಹೇಳಿದಿರಿ ಅದು ನಿಮ್ಮ ಅಜ್ಞಾನ. ನಾವು ನೀವು ಮುದುಕರಾಗುವವರೆಗೆ ಬದುಕಿರುತ್ತೇವೆ ಅಂತ ಯಾರು ಹೇಳಿದರು ? ಯಾರು ಖಾತ್ರಿ ಕೊಟ್ಟಿದ್ದಾರೆ ? ಎಲ್ಲಿಯವರೆಗೂ ನೀವು ಜೀವಿಸಬಹುದು. ಆದರೆ ಆಗ ನಿಮ್ಮ ಇಂದ್ರಿಯಗಳು ಕುಂಠಿತವಾಗಿ ದೇಹಾರೋಗ್ಯ ಕೆಟ್ಟು ಪರಾಧೀನರಾಗುವಾಗ ಏನು ಕಲಿಯುವಿರಿ ? ಕಲಿಯುವ ವ್ಯವಧಾನವೂ ಇರುವುದಿಲ್ಲ. ಯಮಪಟ್ಟಣಕ್ಕೆ ಹೋಗಲು ನಿಮಗೆ ಕರೆ ಯಾವಾಗ ಬರುವುದೋ ಗೊತ್ತಿದೆಯಾ ? ಹಿರಿಯರು ಹೇಳಿದ್ದಾರೆ. ದೇಹದಲ್ಲಿ ವಯಸ್ಸು ಧಾರಢ್ಯ ಚೇತನ ಇರುವಾಗ ಹರಿಪ್ರಸಾದವೆಂದು ಯೋಗ್ಯತಾನುಸಾರ ಸಾಧನೆಮಾಡಿಕೊಳ್ಳಬೇಕು. ಪರಮಾತ್ಮನ ಪುಣ್ಯಕ್ಷೇತ್ರ ದರ್ಶನ ಅವನ ಪಾದ ನಿಶ್ರಿತ ನದಿಗಳಲ್ಲಿ ಮಿಂದು ಹರಿಮೂರ್ತಿಗಳ ದರ್ಶನ ಎಲ್ಲದಕ್ಕೂ ಮಿಗಿಲಾಗಿ ಸಚ್ಛಾಸ್ತ್ರ ಶ್ರವಣ ನಿಧಿ ಧ್ಯಾನ ಮಾಡಿಕೊಂಡಾಗ ಬದುಕು ಸಾರ್ಥಕವಾಗುವುದು.

ಆದ್ದರಿಂದ ಚಿಕ್ಕ ವಯಸ್ಸಿರುವಾಗಲೇ ಶ್ರೀಹರಿಯ ಮಹಿಮೆಯನ್ನು, ಅವನನ್ನು ಪಡೆಯುವ ಸಾಧನಗಳನ್ನು ಅರಿತು ನಡೆದುಕೊಳ್ಳಬೇಕು. "ಸಂತತಂ ಚಿಂತಯೇಽನಂತ ಮಂತಕಾಲೇ ವಿಶೇಷತಃ"

ಹೇ ದೈತ್ಯ ಬಾಲಕರೇ,

**ಕೌಮಾರೇ ಆಚರೇತ್ ಪ್ರಾಜ್ಞಃ ಧರ್ಮಾನ್ ಭಾಗವತಾನಿಹ ।**
**ದುರ್ಲಭಂ ಮಾನುಷಂ ಜನ್ಮ ತದಪ್ರಧ್ರುವಮರ್ಥದಮ್ ॥**

ಈಗ ಯಾವ ಪೂರ್ವಜನ್ಮ ಸುಕೃತದಿಂದ ಮನುಷ್ಯಜನ್ಮ ಬಂದಿದೆ ಅದೂ ಸಹ ಶ್ರೀಹರ್ಯನುಗ್ರಹದಿಂದ. ಮುಂದೆ ಮಾನವ ಜನ್ಮ ಬರುವುದೆಂದು ಖಚಿತವಿಲ್ಲ. ನೀಚ ಯೋನಿಗಳಲ್ಲಿ ಹುಟ್ಟಿದರೆ ಸಾಧನ ಮಾಡಿಕೊಳ್ಳಲು ಆಗುವುದೋ ? ತಸ್ಮಾತ್ ಲಭ್ಯ ಮಾನವ ಜನ್ಮವನ್ನು ಸಾರ್ಥಕ ಮಾಡಿಕೊಳ್ಳಬೇಕಾದರೆ ಈಗಲೇ ಧರ್ಮದ ಕಡೆ ಜ್ಞಾನ ಆಚರಣೆ ಇರಬೇಕು.

**ತತ್ರಾಪಿ ಜನ್ಮಶತಕೋಟಿಷು ಮಾನವತ್ವಂ**
**ತತ್ರಾಪಿ ಜನ್ಮಶತಕೋಟಿಷು ವೈಷ್ಣವತ್ವಂ**
**ತತ್ರಾಪಿ ಜನ್ಮಶತಕೋಟಿಷು ಮತ್ಪರತ್ವಮ್** ಎಂದು ಸ್ಮೃತಿ ತಿಳಿಸುವುದು.

ಬರೀ ಮಾನವ ಜನ್ಮ ಬಂದರೆ ಸಾಲದು. ವೈಷ್ಣವ ಜನ್ಮ ಅತಿ ದುರ್ಲಭವಾಗಿ ಶ್ರೀಹರಿ ಪ್ರಸಾದದಿಂದ ಬಂದಿದೆ. (ಏನು ಪುಣ್ಯಮಾಡಿದ್ದೇವೋ ನಮ್ಮ ಹಿರಿಯರ ಪುಣ್ಯ



ಭಾಗ್ಯವೋ. ಈಗ ನಮಗೆ ಪರಮ ಭಾಗವತೋತ್ತಮರಾದ ವಾಯುದೇವರ ಅವತಾರ ಹೊಂದಿದ ಶ್ರೀಮನ್ಮಧ್ವಾಚಾರ್ಯರ ಸಂಗ ದೊರೆಯುವ ಸುಯೋಗ ಬಂದಿದೆ. ಮತ್ತೆ ಬರುವುದೆಂಬ ಖಾತ್ರಿಯಿಲ್ಲ. ಶ್ರೀಮದಾಚಾರ್ಯರ ಸಚ್ಛಾಸ್ತ್ರ ಗ್ರಂಥಗಳ ಗಾಳಿ ಬೀಸಿದಾಗ ಅದರ ಲಾಭ ಪಡೆಯೋಣ ಅಲ್ಲವೇ ?)

ಮುಂದಿನ ಪ್ರಶ್ನೆಗಳಿಗೆ ಉತ್ತರ.

ನೀವು ಹೇಳುವುದು ನಿಜ. ಆದರೆ ಅರ್ಥಕಾಮನೆಯಲ್ಲೇ ತಲ್ಲೀನರಾಗಿ ಇದೇ ಪರಮ ಪುರುಷಾರ್ಥ ಅಂತ ತಿಳಿಯುವಂತೆ ಅವಿವೇಕಿಯಾಗಬಾರದು. ಅರ್ಥ (ಸಂಪತ್ತು) ಬೇಕು. ಆದರೆ ಆ ಸಂಪತ್ತು ಶ್ರೀಹರಿಯನುಗ್ರಹದಿಂದಲೇ ಲಭಿಸಿದೆ. ಅದರ ಕಿಂಚಿತ್ ಭಾಗವನ್ನು ಶ್ರೀಶನ ಆರಾಧನೆ, ಪೂಜೆ, ಸೇವೆಯಲ್ಲಿ ವಿನಿಯೋಗಿಸಿದರೆ ಸಂಪಾದನೆ ಸಾರ್ಥಕವಾಗುವುದು.

ಹಾಗೆ ಕಾಮನೆ ಬೇಕು. ಎಂತಹ ಕಾಮನೆ ? ಹರಿ ಪೂಜಾ, ಹರಿಭಕ್ತರ ಪಾದಸೇವಾ, ಹರಿ ವಿಷಯ ತಿಳಿಸುವ ಶಾಸ್ತ್ರಗಳ ಶ್ರವಣ, ಧ್ಯಾನ, ಹರಿನಾಮ ಸ್ಮರಣೆ ಇತ್ಯಾದಿಯಾಗಿ ಸದಾ ಇರಲಿ ಎಂಬ ಕಾಮನೆ ಇರಬೇಕು.

ಗುರುಗಳು ಹೇಳಿಕೊಡುವ ವಿದ್ಯೆ ನಿಜವಾಗಿಯೂ ಸನ್ಮಾರ್ಗದತ್ತ ಒಯ್ಯುವುದಿಲ್ಲ. ಎಲ್ಲಾ ಅನ್ಯಥಾ ಜ್ಞಾನ ತಿಳಿಸುವುದರಿಂದ ಅದನ್ನು ಬೋಧಿಸುವ ಗುರುಗಳನ್ನು ತ್ಯಜಿಸಬೇಕು ಎಂದು ಶಾಸ್ತ್ರ ತಿಳಿಸುವುದು. ಹರಿ ವಿಷಯವನ್ನು ಬಿಟ್ಟು ಪಾಠವು ಕುವಿದ್ಯೆ ಎನ್ನಲಾಗಿದೆ.

**ಗುರುರ್ನಸ್ತಸ್ಯಾತ್ ಜನನೀ ನ ಸಶ್ಯಾತ್**
**ನ ಮೋಚಯೇದ್ ಯಃ ಸಮುಪೇಕಮೃತ್ಯುಮ್**

ಅವರು ಗುರುಗಳೇ ಅಲ್ಲ. ತಪ್ಪು ದಾರಿಗೆ ಕೊಂಡೊಯ್ಯುವ ತಾಯಿ ತಾಯಿ ಎಂದೆನಿಸುವುದಿಲ್ಲ. ಆದ್ದರಿಂದ ಆ ಗುರುಗಳ ಬೋಧನೆ ಪರಲೋಕ ಸಾಧನೆ ಆರಂಭದಿಂದಲೇ ಆಗಬೇಕು.

ಇನ್ನು ನಮ್ಮ ತಂದೆಗೇಕೆ ಬೋಧಿಸಿಲ್ಲಾ ಎಂದಿರಿ ?

ನಮ್ಮ ತಂದೆ ಗುರು ಆಶ್ರಮದಿಂದ ಪ್ರಥಮ ಬಾರಿ ಬಂದಾಗಲೇ ತಿಳಿಸಿ ಎಚ್ಚರಿಸಿದೆ. ಸಾಧುವಿದ್ಯೆ ಏನೆಂದು ವಿವರಿಸಿದೆ. ಆದರೂ ತಂದೆಗೆ ರುಚಿಸಲಿಲ್ಲ. ಕಾರಣ ಅವನ ಜೀವಸ್ವರೂಪವೇ ಹರಿದ್ವೇಷವಿರುವಾಗ ನನ್ನ ಮಾತು ಪಥ್ಯವಾಗಲಿಲ್ಲ. ಅದು ನನ್ನ ದುರ್ದೈವವಷ್ಟೆ. ನಾನು ತಂದೆಗೆ ಎಚ್ಚರಿಸಲಿಲ್ಲ ಅನ್ನುವುದು ತಪ್ಪು ಕಲ್ಪನೆ.

ಶುಕ್ರಾಚಾರ್ಯರು ಜ್ಞಾನಿಗಳೇ ನಿಜ. ದೇವತೆಗಳ ಗುರುವಾದ ಬೃಹಸ್ಪತಿಯ ವೈರಿ.

ಇದನ್ನರಿತು ದೈತ್ಯರು ಅವರನ್ನು ವಿಶೇಷವಾಗಿ ಸೇವೆ ಮಾಡಿದ ಪರಿಣಾಮವಾಗಿ ಅವರು ಗುರುಗಳಾಗಲು ಸಮ್ಮತಿಸಿದರು. ದೈತ್ಯರ ಸ್ವರೂಪಕ್ಕೆ ತಕ್ಕಂತೆ ಅವರಿಗೆ ಹಾಗೇ ಬೋಧನೆ ಮಾಡಿದರು.

ಬಲಿಚಕ್ರವರ್ತಿಗೆ (ಶ್ರೀವಿಷ್ಣು ವಾಮನನಾಗಿ ಬಂದಾಗ) ಭೂದಾನ ಕೊಡಬೇಡವೆಂದು ಹೇಳಿದರೂ ಹರಿಸಂಕಲ್ಪಾನುಸಾರ ಚಕ್ರವರ್ತಿಯಂತೆ ಶರಣಾದರು. ಅವರಿಗೆ ಶ್ರೀಪರಮಾತ್ಮನ ಮಹಿಮೆ ತಿಳಿದಿತ್ತು. ರಾಜಸ ಗುಣದಿಂದಾಗಿ ದೈತ್ಯರ ಗುರುಗಳಾಗಬೇಕಾಯಿತು.

**ಏಷವೈರೋಚಸೇ ಸಾಕ್ಷಾದ್‌ಭಗವಾನ್ ವಿಷ್ಣುರವ್ಯಯಃ ।**
**ಕಶ್ಯಪಾದಿತಿರ್ಜಾತೋ ದೇವಾನಾಂ ಕಾರ್ಯಸಾಧಕಃ** (ಭಾಗ. ೮–೧೮ನೇ ಅಧ್ಯಾಯ)

ಶುಕ್ರಾಚಾರ್ಯರು ಜ್ಞಾನಿಗಳಾಗಿದ್ದರೂ ಕಾಮಾದಿ ಅರಿಷಡ್ವರ್ಗಗಳನ್ನು ಗೆದ್ದಿರಲಿಲ್ಲ. ಅವರ ಮಗಳು ದೇವಯಾನಿ ಯಯಾತಿರಾಜನನ್ನು ಮದುವೆಯಾದಳು. ಯಯಾತಿಗೆ ಈಕೆ ಹಿಂದೆ ಶರ್ಮಿಷ್ಠಾಳೆಂಬುವ ರಾಜಕುಮಾರಿಯೊಂದಿಗೆ ಮದುವೆಯಾಗಿತ್ತು. ಶುಕ್ರಾಚಾರ್ಯರು ದೇವಯಾನಿಯನ್ನು ಲಗ್ನವಾಗುವಾಗ ರಾಜನಿಗೆ ಎಚ್ಚರಿಕೆ ಕೊಟ್ಟಿದ್ದರು. ದೇವಯಾನಿಯನ್ನು ಬಿಟ್ಟು ಅನ್ಯ ಸ್ತ್ರೀಯರ ಸಂಗ ಮಾಡಬಾರದೆಂದು.

ಆದರೆ ಯಯಾತಿ ಗುಪ್ತವಾಗಿ ಶರ್ಮಿಷ್ಠಾಳಲ್ಲಿ ಇಬ್ಬರು ಪುತ್ರರನ್ನು ಪಡೆದ. ಹಾಗೆ ದೇವಯಾನಿಯಲ್ಲಿಯೂ ಮಕ್ಕಳಾದರು. ಇಬ್ಬರು ಮಕ್ಕಳೂ ತಮ್ಮ ಜನಕ ಯಯಾತಿ ಎಂದೇ ತಿಳಿದಾಗ ಶುಕ್ರಾಚಾರ್ಯರಿಗೆ ವಿಪರೀತ ಕೋಪ ಬಂದು ಯಯಾತಿಗೆ ನೀನು ಮುದುಕನಾಗು ಎಂದು ಶಾಪವಿತ್ತರು. ಯಯಾತಿ ಹಣ್ಣು ಹಲ್ಲು ಮುದುಕನಾದ. ದೇವಯಾನಿ ತನ್ನ ತಂದೆ ಶುಕ್ರಾಚಾರ್ಯರನ್ನು ದಂಡಿಸಿ "ತಂದೆ, ನನ್ನ ಪತಿ ಅತಿ ಮುದುಕನಾದ. ನನ್ನ ಗತಿ ಭವಿಷ್ಯದ ಬಗ್ಗೆ ಏಕೆ ಯೋಚಿಸಲಿಲ್ಲ." ಆಗ ಶುಕ್ರಾಚಾರ್ಯರು ಹೌದಲ್ಲಾ, ಕೋಪದಲ್ಲಿ ಅನರ್ಥ ಕಾರ್ಯವಾಯಿತು ಎಂದು ಮೊರಗಿದರು. ಹೀಗೆ ಶುಕ್ರಾಚಾರ್ಯರು ಅಜ್ಞಾನಿಯಾಗಿ ನಡೆದರೆಂದು ತಿಳಿಸುತ್ತದೆ. ಅಂತಹವರಿಗೂ ಕಲಿಪ್ರಭಾವ ಬಿಡಲಿಲ್ಲ. ಕಲಿಪ್ರಭಾವಿತರಾಗಿದ್ದಾಗ ತಮ್ಮ ಮಕ್ಕಳಿಗೆ ದುರ್ಬೋಧನೆ ಮಾಡಿದರೆಂದು ತಿಳಿದುಬರುವುದು.

## ಪ್ರಹ್ಲಾದರಾಜನ ಉಪದೇಶ ಸಾರಾಂಶ

ಮಾನುಷ್ಯ ಜನ್ಮ ದುರ್ಲಭ ಅದರಲ್ಲೂ ವೈಷ್ಣವ ದೇಹ ಬರಲು ಶ್ರೀಹರಿಯ ಅನುಗ್ರಹವೇ ಮುಖ್ಯ. ಮನುಷ್ಯನಾಗಿ ಒಂದು ನೂರು ವರ್ಷ ಬದುಕುತ್ತಾನೆ ಅಂತ ತಿಳಿಯೋಣ. ಆ ನೂರು ವರ್ಷದಲ್ಲಿ ೫೦ ವರ್ಷ ನಿದ್ರೆಯಲ್ಲೇ ಆಗುವುದು. ಇನ್ನುಳಿದ ವರ್ಷ ೧೦ ವರ್ಷದವರೆಗೆ ಶೈಶವ ಬಾಲ್ಯದಲ್ಲಿ. ನಂತರ ೨೫ ವರ್ಷ ಯೌವನ,



ಸಂಸಾರ ಭರಣ, ಮಡದಿ ಮಕ್ಕಳ ಪೋಷಣೆ, ದುಡಿಮೆ ಇದರಲ್ಲೇ ಹೋಗುತ್ತದೆ. ಬಾಕಿ ವರ್ಷ ವೃದ್ಧಾಪ್ಯ ಹಿಂದೆ ಹೇಳಿದಂತೆ ಇಂದ್ರಿಯಗಳು ಕುಂಠಿತವಾಗುವುದು. ಹೀಗೆ ಆಯುಷ್ಯ ನಿಮಗೆ ಗೊತ್ತಿಲ್ಲದೇ ಕಳೆದುಹೋಗುವುದು. ಹೀಗಿರುವಾಗ ಮನುಷ್ಯ ಯಾವಾಗ ತನ್ನ ಮುಂದಿನ ಮಾರ್ಗ ಗತಿ ಎಂದು ಚಿಂತಿಸಲೂ ಸಮಯವಿರುವುದಿಲ್ಲ. ಮುಪ್ಪು ಬಂದಾಗ ಎಚ್ಚರವಾಗುತ್ತಾನೆ. ನಾನು ಏನೂ ಸಾಧನೆ ಮಾಡಿಕೊಳ್ಳಲಿಲ್ಲ. ಸಂಸಾರ ಭಾರ ಹೊತ್ತು ದೇಹ ಕುಗ್ಗಿದೆ. ಇವರ ರಕ್ಷಣೆ, ಪಾಲನೆ ನಮಗೆ ಸರ್ವಸ್ವವೆಂದು ದನ ದುಡಿದಂತೆ ಅವರ ಸುಖಕ್ಕಾಗಿ ಶ್ರಮಿಸಿದೆ. ಈ ಮುದಿ ವಯಸ್ಸಿನಲ್ಲಿ ಎಚ್ಚರವಾಗಿದೆ. ಏನು ಮಾಡುವುದು ಅಂತ ಪಶ್ಚಾತ್ತಾಪ ಪಡುತ್ತಾನೆ. ಇವನ ಗೋಳು ಕೇಳುವವರು ಯಾರು ? ಯಾರಿಗೆ ಯಾರೋ ಪುರಂದರ ವಿಠಲ. ಆಗ ಭಗವಂತನ ಕಡೆ ತಿರುಗುತ್ತಾರೆ ಕೆಲವರು ಮಾತ್ರ. ಈ ತತ್ವವು ಸ್ತ್ರೀಯರಿಗೂ ಅನ್ವಯಿಸುವುದೆಂದು ತಿಳಿಯಬೇಕು.

ಈಗ ಹೇಳಿ ದೈತ್ಯ ಬಾಲಕರೇ, ನಾನು ಹೇಳಿದ್ದು ತಿಳಿಯಿತೋ ?

ದೈತ್ಯಬಾಲಕರು, ಅರ್ಥವಾಯಿತು. ರಾಜಪುತ್ರ ನಮಗೆ ಮುಂದಿನ ಮಾರ್ಗವನ್ನು ತಿಳಿಸು ಎಂದರು.

ಒಬ್ಬ ಬಾಲಕ ಪ್ರಶ್ನೆ ಮಾಡಿದ. ನಮಗೆ ಇನ್ನೊಂದು ಸಂಶಯವೇನೆಂದರೆ ನಾವು ನೀನು ವಯಸ್ಸಿನಲ್ಲಿ ಸಮರೇ ಆಗರುತ್ತೇವೆ. ಗುರುಗಳು ಒಬ್ಬರೇ ಆಗಿ ಪಾಠ ಅವರೇ ಹೇಳಿಕೊಡುತ್ತಾರೆ. ಆದರೆ ನಮ್ಮ ಗುರುಗಳು ಹೇಳಿಕೊಡದೇ ಇರುವ ತತ್ವಜ್ಞಾನ ಶ್ರೀಹರಿಯ ಮಹಿಮೆಯು ನಮಗೆ ತಿಳಿಯದೆ ನೀನು ಯಾರಿಂದ ಕಲಿತೆ ? ಯಾರು ಆ ಗುರುಗಳು ? ತಿಳಿಸುವೆಯಾ ?

**ಪ್ರಹ್ಲಾದ ತ್ವಂವಯಂಚಾಪಿ ನರ್ತೇನ್ಯಂ ವಿದ್ಮಹೆ ಗುರುಮಾತಾಭ್ಯಾಂ ಗುರುಪುತ್ರಾಭ್ಯಾಂ ಬಾಲಾನಪಿ ಹೀ ಸ್ವರಃ (೬.೩೫)**

**ಪ್ರಹ್ಲಾದನ ಉತ್ತರ :** ನನಗೆ ಈಗ ತಿಳಿಯಿತು. ನೀವು ಹರಿಯಲ್ಲಿ ಮಗ್ನರಾಗಿರುವಿರೆಂದು. ಸಂತೋಷ. ನಾನು ನಿಮಗೆ ಬೋಧಿಸಿದುದು ನನ್ನ ಕಲ್ಪನಾ ಜ್ಞಾನವಲ್ಲ. ಈ ಬ್ರಹ್ಮಜ್ಞಾನ ಅನಾದಿ ಕಾಲದಿಂದಲೂ ಬರುತ್ತಿರುವುದು.

ಭಕ್ತವತ್ಸಲನಾದ ಶ್ರೀಮನ್ನಾರಾಯಣನು ಸೃಷ್ಟಿಪೂರ್ವದಲ್ಲೇ ತನ್ನ ಜೇಷ್ಠ ಪುತ್ರನಾದ ಬ್ರಹ್ಮದೇವರಿಗೆ ಉಪದೇಶಿಸಿದ. ಬ್ರಹ್ಮದೇವ ನಾರದರಿಗೆ ಉಪದೇಶ ಮಾಡಿದರು.

**ಜ್ಞಾನಂ ತದೇತದಖಿಲಂ ದುರವಾಪಮಾಹ ।**
**ನಾರಾಯಣೋ ನರಸಖಃ ಕಿಲ ನಾರದಾಯ ॥**
**ಏಕಾಂತಿನಾಂ ಭಗವತಸ್ತದಕಿಂಚನಾನಾಂ ।**
**ಪಾದಾರವಿಂದರಜಸಾಽಽಪ್ಲುತ ದೇಹಿನಾಂ ಸ್ಯಾತ್ ॥**

ಈ ಜ್ಞಾನವು ಭಗವಂತನ ಏಕಾಂತ ಭಕ್ತರೀಗೇನೆ ಸಿಗುವುದು. ಏಕಾಂತಭಕ್ತರು ಹರಿಚರಣ ಧೂಳಿನಿಂದ ತಮ್ಮ ಶರೀರ ತೊಯ್ದಿರಬೇಕು. ಅದನ್ನು ವಿನಃ ಬೇರೆ ಏನನ್ನೂ ಬಯಸರು.

ಅಂತಹ ಭಗವದ್ಭಕ್ತರಾದ ಪರಿಶುದ್ಧರಾದ ನಾರದರಿಂದ ನಾನು ಕೇಳಿ ತಿಳಿದಿರುವೆನು.

**''ಶೃತಮೇ ತನ್ಮಯಾ ಪೂರ್ವಂ ಚಾವಿನರ್ತೇಽನ್ಯಂ ವಿದ್ಮಹೇ ಗುರುಮಾ । ಪಿತಾಭ್ಯಾಂ ಗುರುಪುತ್ರಾಭ್ಯಾಂ ಬಾಲಾನಮಪಿಹೀಶ್ವರಃ ॥''**

ನಿಮ್ಮ ಹಿಂದೆ ಜನೇ ಪ್ರಶ್ನೆಗೆ ಉತ್ತರ ಕೊಡುತ್ತೇನೆ.

**ಏವಂ ದೈತ್ಯಸುತೈಃ ಪೃಷ್ಟೋ ಮಹಾಭಾಗವತೋಽಸುರಃ ।**
**ಉವಾಚ ಸ್ಮಯಮಾನಸ್ತಾನ್ ಸ್ಮರನ್ ಮದನು ಶಾಸನವ್ ॥**

ಭಾಗವತೋತ್ತಮನಾದ ಅಸುರಶ್ರೇಷ್ಠ ಪ್ರಹ್ಲಾದ ತನ್ನ ಪೂರ್ವಕಥಾ ವಿವರಿಸುತ್ತಾನೆ.

**ಪ್ರಹ್ಲಾದ ಉವಾಚ.**

ದೈತ್ಯಬಾಲಕ ಮಿತ್ರರೇ ಕೇಳಿ. ನನ್ನ ತಂದೆ ರಾಕ್ಷಸರಾಜ ಬ್ರಹ್ಮದೇವರನ್ನು ಮೆಚ್ಚಿಸಿ ಅಸಾಧಾರಣ ವರಗಳನ್ನು ಪಡೆಯಬೇಕೆಂದು ತಪಸ್ಸನ್ನು ಮಾಡಲು ಮಂದರ ಪರ್ವತಕ್ಕೆ ತೆರಳಿದ. ದೇವತೆಗಳಿಗೆ ತಿಳಿದು ಈ ದೈತ್ಯ ತಪಸ್ಸು ಸಾಕಷ್ಟು ವರ್ಷಗಳಾಗಿರಬಹುದು. ಅಲ್ಲಿಯವರೆಗೆ ನಮಗೆ ಶಾಂತಿ, ಸಮಾಧಾನವಾಗುವುದು. ಅವನಿಲ್ಲವೆಂದ ಮೇಲೆ ಅವನ ಹಿಂಸೆ ಇರುವುದಿಲ್ಲ. ಆದರೆ ಆ ದುಷ್ಟ ದೈತ್ಯ ತನ್ನ ಗರ್ಭಿಣಿ ಮಡದಿಯನ್ನು ಬಿಟ್ಟು ತಪಸ್ಸಿಗೆ ಹೋಗಿದ್ದಾನೆ. ಇದೇ ಸುಸಮಯವೆಂದು ದೈತ್ಯರ ಮೇಲೆ ಆಕ್ರಮಿಸಿದರು.

**ಪಿತರಿ ಪ್ರಸ್ಥಿತೇಽಸ್ಮಾಕಂ ತಪಸೇ ಮಂದರಾಚಲಮ್ ।**
**ಯುದ್ಧೋದ್ಯೋಗಂ ಪರಂ ಚಕ್ರುರ್ವಿಬುಧಾ ದಾನವಾನ್‌ಪ್ರತಿ ॥**

ದೇವತೆಗಳು ಜಯಗಳಿಸಿದಾಗ ದೈತ್ಯರು ಹೆದರಿ ದಿಕ್ಕಾಪಾಲಾಗಿ ಪಲಾಯನ ಮಾಡಿದರು. ಇಂದ್ರ ಅರಮನೆಯನ್ನು ಹೊಕ್ಕು ನನ್ನ ಜನನಿ ಕಯಾದುವನ್ನು ಜರೆದು, ಹಿಡಿದು ತನ್ನ ಲೋಕಕ್ಕೆ ಕರೆದೊಯ್ಯಲು ಉದ್ಯುಕ್ತನಾದ

**ಇಂದ್ರಸ್ತು ರಾಜ ಮಹಿಷೀಂ ಮಾತರಂ ಮಮಚಾಗ್ರಹೀತ್ ।**

ನನ್ನ ತಾಯಿ ಹೀಗೆ ಹಟಾತ್ತಾಗಿ ಆಕ್ರಮಿಸಿದುದನ್ನೂ ತನ್ನನ್ನು ಹಿಡಿದು ಎಳೆದುಕೊಂಡು ಹೋಗುವ ಇಂದ್ರನನ್ನು ನೋಡಿ ನಿರಪರಾಧಿಯಾದ ತಾನು ಹೆದರಿ ಕೂಗಲಾರಂಭಿಸಿದಳು. ಆಗ ದೈವಯೋಗದಿಂದ ದೇವರ್ಷಿ ನಾರದರು ಪ್ರತ್ಯಕ್ಷರಾಗಿ ಇಂದ್ರನ ಆ ಕೃತ್ಯವನ್ನು ತಡೆದರು.

ಹೇಳಿದರು. ದೇವರಾಟ್ ಏಕೆ ಈ ಹೆಂಗಸನ್ನು ಕರೆದೊಯ್ಯುತ್ತಿರುವಿ. ಇದು ದೇವತೆಗಳಾದವರು ಮಾಡತಕ್ಕದಲ್ಲ. ನಿನಗೆ ಶೋಭವಾಗುವುದಿಲ್ಲ. ಬಿಟ್ಟು ಬಿಡು ಎಂದರು. ನಾರದ ಮಹರ್ಷಿಗಳೇ, ಈಕೆ ದೈತ್ಯಶ್ರೇಷ್ಠನಾದ ಹಿರಣ್ಯಕಶಿಪುವಿನ ಮಡದಿ. ಈಗ ಗರ್ಭಿಣಿಯಾಗಿರುತ್ತಾಳೆ. ಇವಳ ಮಗನು ಮುಂದೆ ತನ್ನ ತಂದೆಗಿಂತ ಮಹಾದೈತ್ಯರಾಜನಾಗುತ್ತಾನೆ. ಹಿರಣ್ಯಕನ ಕಾಟತಡೆಯಲಾಗದ



ಮೇಲೆ ಇವನಿಂದ ಜನಿಸಿದ ಪುತ್ರ ಇನ್ನಷ್ಟು ಕ್ರೂರಿ ರಾಕ್ಷಸನಾಗಬಲ್ಲ. ಮುಂದೆ ಇವನಿಂದ ಆಗಬಹುದಾದ ಆಪತ್ತು ಹಿಂಸೆಯನ್ನು ಹೇಗೆ ತಡೆಯಲಾಗುವುದು ? ಆದ್ದರಿಂದ ಬೀಜ ಅಂಕುರಿಸಿ ಮರವಾಗುವ ಮುಂಚೆಯೇ ಬೀಜವನ್ನು ನಾಶಪಡಿಸಲು ನಾನು ಕರೆದುಕೊಂಡು ಹೋಗಿ ನಾಶಮಾಡಿದ ಮೇಲೆ ಬಿಟ್ಟುಬಿಡುತ್ತೇನೆ ಎಂದನು.

**ಅಸ್ತ್ಯೇನ್ಯಾಜಠರೇ ವೀರ್ಯಮವಿಷ್ಹ್ಯಾಹ್ಯಂ ಸುರದ್ವಿಷಃ**
**ಆಸ್ಯಾಂತಾಂ ಯಾವತ್ ಪ್ರಭವಂ ಮೋಕ್ಷ್ಯೇಽರ್ಥಪದವೀಂ ॥ (೭-೯)**

ನಾರದರು ನಗುತ್ತಾ, ರಾಜೇಂದ್ರ ಎಂತಹ ಮೂರ್ಖತನವಿದೆ ನಿನ್ನ ಮಾತಿನಲ್ಲಿ. ಆಕೆ ಗರ್ಭದಲ್ಲಿ ನಿಷ್ಪಾಪಿಯಾದ ಪರಮಭಾಗವತೋತ್ತಮ ಶ್ರೀಮನ್ನಾರಾಯಣನ ಅನನ್ಯ ಭಕ್ತನು ಇರುವನು. ಇವನು ದೇವತೆಗಳಾದ ನಿಮಗೆ ಬಂಧುವಾಗುತ್ತಾನೆ. ಶತೃವಲ್ಲದ ಮೇಲೆ ಶ್ರೀಹರಿಯ ಕೃಪಾಕಟಾಕ್ಷದಿಂದ ಮಹಾಪರಾಕ್ರಮಶಾಲಿಯಾಗಿರುವವನನ್ನು ನೀನು ಸಂಹರಿಸಲು ಆಗುವುದಿಲ್ಲ. ಆದ್ದರಿಂದ ಕಯಾದು ಮಹಾಪತಿವ್ರತೆ ಭಕ್ತಾಗ್ರಣಿಯ ತಾಯಿ ಎಂದು ಹೇಳಿದಾಗ, ದೇವೇಂದ್ರ ನಾರದರ ಮಾತಿನಂತೆ ಆಕೆಯನ್ನು ಬಿಟ್ಟು ಗರ್ಭಸ್ತನಾಗಿರುವ ಹರಿಭಕ್ತನಿಗೆ ಪ್ರದಕ್ಷಿಣೆ ಮಾಡಿ ನಾರದರ ವಶಕ್ಕೊಪಿಸಿ ಹೊರಟುಹೋದನು.

**ಇತ್ಯುಕ್ತಸ್ತಾಂ ವಿಹಾಯೇಂದ್ರೋ ದೇವರ್ಷೇಃ ಮಾನಯುನ್ ವಚಃ ।**
**ಅನಂತಪ್ರಿಯಭಕ್ತ್ಯೈನಾಂ ಪರಿಕ್ರಮ್ಯ ದಿವಂಯಯೌ ॥**

ಆಮೇಲೆ ನಾರದರು ನನ್ನ ತಾಯಿಯನ್ನು ತಮ್ಮ ಆಶ್ರಮಕ್ಕೆ ಕರೆದುಕೊಂಡು ಹೋದರು. ಸಮಾಧಾನ ಹೇಳಿ, ಪುತ್ರಿ ಯೋಚಿಸಬೇಡ. ನಿನ್ನ ಪತಿ ತಪಸ್ಸನ್ನು ಮುಗಿಸಿಬರುವವರೆಗೂ ಧೈರ್ಯ ಸಂತೋಷದಿಂದ ಇರು. ನನ್ನ ಜನನಿಗೆ ಸಮಾಧಾನ ಶಾಂತಿ ದೊರೆಯಿತು. ನಿರ್ಭೀತಳಾಗಿ ನಾರದರ ಸೇವೆ ಮಾಡುತ್ತಿದ್ದಳು. ನಾರದರಲ್ಲಿ ಪ್ರಾರ್ಥಿಸಿದಳು. ಮಹರ್ಷಿಗಳೇ ನನಗೆ ಎರಡು ವರ (ವಾಗ್ದಾನ) ಕೊಡಿರಿ. (೧) ನನ್ನ ಪತಿದೇವ ತಪಸ್ಸಿನಿಂದ ವಾಪಸ್ಸಾದ ನಂತರವೇ ನನ್ನ ಪ್ರಸವವಾಗಬೇಕು. (೨) ಅಲ್ಲಿಯವರೆಗೂ ಗರ್ಭ, ಗರ್ಭ ಶಿಶು ಸುಕ್ಷೇಮವಾಗಿರಬೇಕು.

ನಾರದರು ತಥಾಸ್ತು ಎಂದರು. ನಾರದರು ಆಶ್ರಮದಲ್ಲಿದ್ದಾಗ ನಿತ್ಯ ಭಾಗವತ್ಕಥಾ ಭಕ್ತಿಯ ಬಗ್ಗೆ ಪ್ರವಚನ ಮಾಡುತ್ತಿದ್ದರು. ಗರ್ಭದಲ್ಲಿದ್ದ ನಾನು ಕೇಳುತ್ತಿದ್ದೆ. ಕಾಲ ಆಧಿಕ್ಯದಿಂದ ನನ್ನ ತಾಯಿ ನಾರದರು ಹೇಳುತ್ತಿರುವುದನ್ನು ಸ್ವಲ್ಪ ಹೊತ್ತು ಕೇಳುತ್ತಿದ್ದಳು. ಸ್ತ್ರೀಸ್ವಭಾವ ಮೇಲೆ ಗರ್ಭಿಣಿ ಕೇಳುತ್ತಾ ನಿದ್ರಿಸುತ್ತಿದ್ದಳು. ಆದರೆ ನಾನು ಒಳಗಿದ್ದು ಎಲ್ಲವನ್ನೂ ಶ್ರದ್ಧೆಯಿಂದ ಕೇಳುತ್ತಿದ್ದೆ. ನಾನು ಕೇಳುತ್ತಿದ್ದೇನೆಂಬುದನ್ನು ಒಳಗಿನಿಂದ ಹೂಗುಟ್ಟುತ್ತಿದ್ದೆ. ಇದನ್ನು ಗಮನಿಸಿದ ನಾರದರು ನನ್ನನ್ನುದ್ದೇಶಿಸಿ ನಿರಂತರ ಉಪದೇಶ ಮಾಡುತ್ತಿದ್ದರು. ಈಗ ನನಗೆ ಅವೆಲ್ಲವೂ ನೆನಪಾಗುವುದು. ಇಷ್ಟು ಹೇಳಿ ದೈತ್ಯ ಬಾಲಕರಿಗೆ ಮತ್ತೆ ಹೇಳಿದ.

ಕೇಳಿದಿರಾ, ನನ್ನ ಪೂರ್ವ ಜನ್ಮ ವೃತ್ತಾಂತ ನಿಮಗೆ ನನ್ನ ಮಾತಿನಲ್ಲಿ ನಂಬಿಕೆ ಇದ್ದ ಪಕ್ಷದಲ್ಲಿ ನಿಮಗೂ ಭಗವದ್ವಿಷಯಕ ಜ್ಞಾನವಾಗುವುದು.

ಪ್ರಹ್ಲಾದನಾದ ನನಗೆ ಜ್ಞಾನವಾಯಿತು. ಅದರಿಂದ ನಮಗೇನು ಲಾಭ ಪ್ರಯೋಜನವೆನ್ನಬೇಡಿರಿ. ನನ್ನ ವಾಕ್ಯದಲ್ಲಿ ವಿಶ್ವಾಸವಿದ್ದರೆ, ಶ್ರದ್ಧೆಯಿದ್ದರೆ ನಿಮ್ಮೆಲ್ಲರಿಗೂ ಜ್ಞಾನ ಪ್ರಾಪ್ತವಾಗುವುದು.

**ಬಾಲಕರು :** ಪ್ರಹ್ಲಾದ ನಾವು ನಿನ್ನಂತಹ ಜ್ಞಾನಿಯ ವಾಕ್ಯದಲ್ಲಿ ವಿಶ್ವಾಸವಿಡದೇ ಯಾರಲ್ಲಿ ನಂಬಿಕೆ ಇಡಬೇಕು. ನೀನು ನಮ್ಮ ರಾಜ್ಯದ ರಾಜಪುತ್ರನು. ನಮ್ಮ ಗುರುಗಳಾದ ಷಂಡಾಮರ್ಕರು ಉಪದೇಶಿಸಿದ್ದು ಮಿಥ್ಯಾ ಎಂದು ಈಗ ಅರಿವಾಗಿದೆ. ಆದ್ದರಿಂದ ನಮಗೆ ನೀನೇ ಗುರು. ಮುಂದಿನ ಮಾರ್ಗ ಏನೆಂಬುದನ್ನು ತಿಳಿಸು ಎಂದರೆ

**ಪ್ರಹ್ಲಾದ ಹೇಳಿದ :** ನಿಮಗೆ ಶ್ರದ್ಧೆ ಹುಟ್ಟಿದರೆ ತತ್ವಜ್ಞಾನ ಪ್ರಾಪ್ತವಾಗುವುದು. ಇದಕ್ಕೆ ಎಲ್ಲರೂ ಅಧಿಕಾರಿಗಳೆ. ವಯಸ್ಸು, ವರ್ಣ, ಜಾತಿ ಸ್ತ್ರೀಯರಿಗೂ ಪರಮಾತ್ಮನ ತತ್ವಜ್ಞಾನ ಆಗೇ ಆಗುವುದು. ಇದನ್ನು ಸಂಪಾದನೆ ಮಾಡಲು ಭಗವಂತನಲ್ಲಿ ಭಕ್ತಿ, ಹರಿಕಥಾಶ್ರವಣ ಶ್ರದ್ಧೆ ಇರಬೇಕು. ಅವರವರ ಯೋಗ್ಯತಾನುಸಾರ ಜ್ಞಾನವಾಗುವುದು. ನಿತ್ಯ ನೈಮಿತ್ಯ ಸ್ವಉಚಿತ ಕರ್ಮಾನುಷ್ಠಾನ ಮಾಡಲೇಬೇಕು. ಭಕ್ತಿ ಹುಟ್ಟಲು ತಕ್ಕ ಶ್ರಮ ಮಾಡಬೇಕು. **ಶ್ರದ್ಧಾವಾನ್ ಲಭತೇ ಜ್ಞಾನಂ.**

ಹುಟ್ಟು ಬೆಳೆಯುವುದು ಹ್ರಾಸವಾಗುವುದು. ಮರಣ ಈ ನಶ್ವರ ದೇಹಕ್ಕೆ ಮಾತ್ರ. ಜೀವನು ಶಾಶ್ವತ. ಜೀವನಿಗಲ್ಲ. ದೇಹಾಂತರ್ಯಾಮಿ ಜೀವನಿಯಾಮಕ ಶ್ರೀಹರಿಯೊಬ್ಬನೆ ನಿತ್ಯನು. ಶ್ರೀಹರಿಯಾದರೋ ಪ್ರಾಕೃತ ದೇಹಸಹಿತನು. ಜ್ಞಾನನಂದಮಯನು ಎಂದು ವಿವೇಕಿ ಮಾತ್ರ ತಿಳಿಯುತ್ತಾನೆ.

ಹಾಗೆಂದ ಮಾತ್ರಕ್ಕೆ ನೀವು ಎಲ್ಲವನ್ನು ಬಿಟ್ಟುಬಿಡಿರಿ ಅಂತ ಹೇಳುತ್ತಿಲ್ಲ. ನೀವು ಈ ಕೂಡಲೇ ಹರಿಯಲ್ಲಿ ಭಕ್ತಿ ಹೊಂದಲು ಏನು ಉಪಾಯ ? ಯಾರು ನಿಜಮಾರ್ಗದರ್ಶನ ಮಾಡುತ್ತಾರೆ ಅಂತ ವಿಚಾರಿಸಿ ಸಮೀಚೀನ ಯಥಾವತ್ತಾಗಿ ತಿಳಿಸುವ ಗುರುಗಳು ನಿಸ್ವಾರ್ಥಪರರು. ನಿಮ್ಮ ಶ್ರೇಯಸ್ಸನ್ನು ಬಯಸುವ ಮಹಾಜ್ಞಾನಿಗಳಾದ ಗುರುಗಳಲ್ಲಿ ಹೋಗಿ ಬ್ರಹ್ಮೋಪದೇಶ ಮಾಡಿರಿ ಅಂತ ವಿನಯಪೂರ್ವಕ ಪ್ರಾರ್ಥಿಸಬೇಕು. ಸಂಸಾರವಿರಬೇಕು. ಆದರೂ ಸಂಸಾರವೆಂಬ ವಸ್ತುಗಳಾದ ಮಡದಿ, ಪುತ್ರರು, ಬಂಧು, ಧನಗಳಿದ್ದಂತೆ, ಯಥಾಯೋಗ್ಯ ಪ್ರೀತಿ ಇರಬೇಕು. ಇವೆಲ್ಲಕ್ಕಿಂತ ಹೆಚ್ಚು ಪ್ರೀತಿ, ಭಕ್ತಿ ಶ್ರೀಹರಿಯಲ್ಲಿರಬೇಕು. ಶ್ರೀಶನಲ್ಲಿ ಭಕ್ತಿ ಏಕ್ದಂ ಹುಟ್ಟುವುದಿಲ್ಲ. ಬಹು ಪ್ರಯತ್ನ ಪಡಬೇಕು. ಗುರು ಶುಶ್ರೂಷಾ ಮಾಡಿ ಅವರ ಅನುಗ್ರಹಕ್ಕೆ ಪಾತ್ರರಾದ ಮೇಲೆ ಜ್ಞಾನೋಪದೇಶ ಮಾಡುತ್ತಾರೆ.

ಮುಖ್ಯ ವಿಷಯ ತಿಳಿಯಿರಿ. ಭಕ್ತಿ ಎಂಬ ಉಪಾಯದಿಂದ ನಮ್ಮಲ್ಲಿ(ಶರೀರ)ರುವ ಕೊಳಕನ್ನು ವೈರಾಗ್ಯವೆಂಬ ಭಕ್ತಿಯಿಂದ ಸುಟ್ಟು, ಜ್ಞಾನವೆಂಬ ಅಮೃತವನ್ನು ಪಡೆಯುವುದೇ ಜನ್ಮಸಾರ್ಥಕ.



ಈ ದೇಹದಲ್ಲಿ ೨೪ ತತ್ವಗಳಿರುವುದು. ಇದೆಲ್ಲದರ ಮೇಲೆ ಶ್ರೀಹರಿಯು ೨೫ನೇ ತತ್ವವೆಂದು ಗುರುಗಳು ತಿಳಿಸಿದಾಗ ಅರಿವಾಗುವುದು.

**ಅಷ್ಟಾ ಪ್ರಕೃತಯಃ ಪ್ರೋಕ್ತಾಸ್ತ್ರಯ ಏವ ಹಿ ತದ್ಗುಣಾಃ ।**
**ವಿಕಾರಾಃ ಷೋಡಶಾಚಾರ್ಯೈಃ ಪ್ರಮಾನೇಕಃ ಸಮನ್ವಯಾತ್ ॥**

ಮೂಲಪ್ರಕೃತಿಯಲ್ಲಿ ಎಂಟು ವಿಧ. ಅವನ್ನು ತತ್ವಗಳೆಂದು ಹೇಳಲಾಗಿದೆ. ಮಹತತ್ವ (ಬ್ರಹ್ಮ), ಅಹಂಕಾರ ತತ್ವ (ಗರುಡ, ಶೇಷ, ರುದ್ರರು), ಆಕಾಶ (ಗಣೇಶ), ವಾಯು (ಪ್ರವಾಹವಾಯು), ತೇಜಸ್ಸು (ಅನಿಲ ಅಗ್ನಿ), ಜಲ (ಅಬ್‌–ವರುಣ), ಭೂಮಿ (ಧರಾದೇವಿ) ಇವರು ಅಭಿಮಾನಿ ದೇವತೆಗಳು.

ತ್ರಿಗುಣಗಳು : ಸತ್ವ, ರಾಜಸ, ತಾಮಸ ಇವು ಪ್ರಕೃತಿಗೆ ಸೇರಿದ್ದರಿಂದ ಎಂಟರಲ್ಲಿ ಸೇರಿರುತ್ತವೆ.

ಪ್ರಕೃತಿ ವಿಕಾರಗಳಾದ ಮನಸ್ಸು, ಐದು ತನ್ಮಾತ್ರಗಳು ಹೀಗೆ ಎಲ್ಲಾ ಸೇರಿದರೆ ೨೪ ತತ್ವಗಳಾಗುವುವು. ಭಗವಂತನು ಎಲ್ಲ ತತ್ವಗಳಲ್ಲಿ ವ್ಯಾಪ್ತನಾಗಿ ಅವನೇ ನಿಯಮಿಸುವುದರಿಂದ ೨೫ನೇ ತತ್ವ. ಇದನ್ನೇ ಕ್ಷೇತ್ರಜ್ಞವೆನ್ನುವರು. ಪ್ರಕೃತಿಯಿಂದ ಈ ದೃಶ್ಯಮಾನವಾದ ಜಗತ್ತು ಅದರ ಕಾರ್ಯವೆನಿಸಿ ಸೃಷ್ಟಿಸಲ್ಪಟ್ಟಿದೆ. ಪ್ರಕೃತಿಯ ವಿಕಾರವೇ ಗಿಡ ಗಂಟ ಗುಡ್ಡ ಕಲ್ಲು ಮೃಗಗಳು ಎಂದು ತಿಳಿದ ವಿವೇಕಿಯು ಅದರಲ್ಲಿ ಆಸಕ್ತಿ ಪಡೆಯದೇ ಶ್ರೀ ಮಹಾವಿಷ್ಣುವೇ ಸರ್ವೋತ್ತಮನೆಂದು ತಿಳಿದು ಮನುಷ್ಯ ತನ್ನ ಶರೀರದಲ್ಲಿ ಇರುವನೆಂದು ತಿಳಿದು ವಿಚಾರ ಮಾಡುತ್ತಾ ಮಾಡುತ್ತಾ ಜ್ಞಾನವು ಪಕ್ವವಾಗುವುದು.

**ದೇಹಸ್ತು ಸರ್ವಸಂಘಾತೋ ಜಗತ್‌ತಸ್ಥುಡೀತಿ ದ್ವಿಧಾ ।**
**ಅತ್ರೈವ ಮೃಗ್ಯಃ ಪುರುಷೋನೇತಿತ್ಯತತ್ ತ್ಯಜನ್** (೭/೫/೨೩)

**ಅಭಿಮಾನ್ಯಪೇಕ್ಷಯಾ ವಿಷ್ಣುಃ ಪಂಚವಿಂಶ ಇತಿ ಸ್ಮೃತಃ ।**
**ಜಡಾದ್ಯಪೇಕ್ಷಯಾ ಜೀವಃ ಸಮ್ಯಕ್ ಜ್ಞೇಯೋಹರಿಃಸ್ಮೃತಃ ॥** (ಭಾ.ಗ. ತಾ.)

ಜೀವನಿಗೆ ಎಲ್ಲಿಯವರೆಗೆ ಭಗವಂತನ ಜ್ಞಾನವಾಗುವುದಿಲ್ಲವೋ ಅಲ್ಲಿಯ ತನಕ ಸಂಸಾರ ಚಕ್ರದಲ್ಲಿ ತಿರುಗಿ ತಿರುಗುತ್ತಾನೆ. ಆದರೆ, ಸಂಸಾರವು ಸತ್ಯವೇ. ನಿತ್ಯವಲ್ಲ. ಅದರ ನಿವೃತ್ತಿ ಶ್ರೀಹರಿಯ ಆ ಪರಮಾನುಗ್ರಹದಿಂದಲೇ ಆಗುವುದು.

**ಏತದ್ವಾರೋ ಹಿ ಸಂಸಾರೋ ಗುಣಕರ್ಮನಿಬಂಧನಃ ।**
**ಅಜ್ಞಾನಮೂಲೋಽಪ್ಯಾರ್ಥೋಽಪಿ ಪುಂಸಃ ಸ್ವಪ್ನ ಇವಾಪ್ಯತೇ ॥**

ಜೀವರಿಗೆ ಅಜ್ಞಾನ ಮೂಲಕ ಈ ಸಂಸಾರವು ದುಃಖವನ್ನು ತಂದುಕೊಡುವುದು. ಸಂಸಾರವು ಸ್ವಪ್ನದಂತೆ. ಸ್ವಪ್ನದಲ್ಲಿ ಕೆಲ ವಿಷಯಗಳು ಇಷ್ಟವಿಲ್ಲದಿದ್ದರೂ

ಅನುಭವಿಸುತ್ತೇವೆ. ಹಾಗೇ ಸುಖವನ್ನೂ ಹೊಂದುತ್ತೇವೆ. ಆದರೆ ಸ್ವಪ್ನದಲ್ಲಿ ಕಂಡ ವಿಷಯಗಳು ನಿಜವಲ್ಲ. ಸ್ವಪ್ನ ಮಾತ್ರ ನಿಜ. ಎಚ್ಚರವಾದ ಮೇಲೆ ಸ್ವಪ್ನದಲ್ಲಿ ಕಂಡ ವಿಷಯ, ಪದಾರ್ಥಗಳು ಇರುವುದಿಲ್ಲ. ಅದರ ನೆನಪು ಮಾತ್ರವಿರುವುದು. ವಾಸನಾಮಯದಿಂದ ಜೀವನು ಅಸ್ವತಂತ್ರನಾಗಿ ಸುಖ ದುಃಖಗಳನ್ನು ಕನಸಿನಲ್ಲಿ ಅನುಭವಿಸುತ್ತಾನೆ. ಈ ರೀತಿ ಸ್ವಪ್ನ ಜಾಗ್ರತಾವಸ್ಥೆಯನ್ನು ಸ್ವತಂತ್ರನಾದ ಶ್ರೀಮನ್ನಾರಾಯಣನೇ ತೋರಿಸುತ್ತಾನೇ ಆಗಲಿ ಅವನಿಗೆ ಅದರ ಪರಿಣಾಮವೇ ಇರುವುದಿಲ್ಲ.

ಹೀಗೆ ಸರ್ವೇಂದ್ರಿಯ ವ್ಯಾಪಾರಗಳನ್ನು ಜೀವನಿಂದ ಮಾಡಿಸಿ ತಾನು ಮಾತ್ರ ದೇಹದಲ್ಲಿದ್ದರೂ ಜೀವರುಗಳು ಅನುಭವಿಸುವ ಸುಖದುಃಖಗಳನ್ನು ಶ್ರೀಹರಿಯೂ ಅನುಭವಿಸುತ್ತಾನೆ ಅಂತ ಹೇಳುವ ಅಜ್ಞಾನಿಗಳು ಜೀವೇಶ್ವರ ಭೇದ ತಿಳಿಯರು. ಜೀವನು ಹರಿಯೂ (ಜೀವ ಅಭೇದವಿದೆ) ಅಂತ ಉಪದೇಶ ಮಾಡುವವರು ಮೂರ್ಖರೇ ಸರಿ.

**ವಾಯುದೃಷ್ಟಾಂತ :** ವಾಯು (ಗಾಳಿ) ಸುಗಂಧ ಪುಷ್ಪ ಅಥವಾ ದುರ್ಗಂಧ ಪದಾರ್ಥಗಳ ಸಂಪರ್ಕವಾಗಿ ಸುಗಂಧ ದುರ್ಗಂಧವು ಬರುವುದು. ಆದರೆ, ವಾಯುವಿಗೆ ಆ ಗುಣಗಳು ನೈಜವಾಗಿ ಇರುವುದಿಲ್ಲ. ಹಾಗೇನೆ ಭಗವಂತ ದೇಹಾದಿಗಳಲ್ಲಿ ಜೀವನ ಸಂಗಡ ಇರುವಾಗ ಜೀವನು ಮಾಡುವ ಕರ್ಮಗಳಿಗೆ ಬಾಧ್ಯನಾಗುವುದಿಲ್ಲ. ಏಕೆ ? ಅವನು ಸ್ವತಂತ್ರ.

**ದುಃಖ ರೂಪೋಽಪಿ ಸಂಸಾರೋ ಬುದ್ಧಿ ಪೂರ್ವಮವಾಪ್ಯತೇ ।**
**ಯಥಾ ಸ್ವಪ್ನೆ ಶಿರಚ್ಛೇದಂ ಸ್ವಯಂ ಕೃತ್ವಾಽಽನೋಽವಶಃ ॥** (ಭಾ.ಗ.ತಾ.)

ಬಾಲಕರೇ, ನೀವು ಅಜ್ಞಾನವನ್ನು ಹೊಂದಬೇಡಿರಿ. ಜೀವ ಬೇರೆ, ಪರಮಾತ್ಮ ಬೇರೆ ಎಂಬ ಭೇದಜ್ಞಾನ, ಪರಮಾತ್ಮ, ಸ್ವತಂತ್ರ, ಸರ್ವಜ್ಞ. ಜೀವನಾದರೋ ಅಸ್ವತಂತ್ರ, ಅಜ್ಞಾನಿಯೂ ಸಮೀಚೀನ ಜ್ಞಾನ ಪಡೆಯಲು ಉಪಾಯವನ್ನು ಹುಡುಕಿರಿ.

**ಸುಲಭೋಪಾಯು**ವೆಂದರೆ ಸರ್ವ ಸತ್ಕರ್ಮಗಳನ್ನು ಫಲಾಪೇಕ್ಷೆ ಇಲ್ಲದೆ ಶ್ರೀಹರಿಯಲ್ಲಿ ಸಮರ್ಪಿಸಿರಿ. ಸರ್ವಕರ್ಮ ಫಲತ್ಯಾಗವೆಂದರೆ ಯಾರಲ್ಲಿ ಅಂತ ಕೇಳಬೇಡಿರಿ. ಶ್ರೀಹರಿಯೇ ಸರ್ವ ಸತ್ಕರ್ಮ ಫಲ ಭೋಕ್ತ. ಅವನ ವಿಷಯಕ ಜ್ಞಾನ ಗುರು ಸೇವಾದಿಂದಲೇ ಲಭಿಸುವುದು.

ನಿರಂತರ ಭಗವತ್ಕಥಾಶ್ರವಣ, ಮನನ, ಸಜ್ಜನ ಸಂಗ, ಅಂತಃಕರಣ ಶುದ್ಧಿಯಿಂದ ಭಕ್ತನು ಪುಲತಾಂಕಿತನಾಗುತ್ತಾನೆ. ಅನಾಯಾಸ ಆನಂದ ಬಾಷ್ಪಗಳಿಂದ ಹರಿಗುಣಗಾನ ಮಾಡುತ್ತಾ ನರ್ತಿಸುವನು. ಶ್ರೀಹರಿ ಚರಿತ್ರೆಯನ್ನು ಬೋಧಿಸುವನು. ಶ್ರೀಹರೇ ನಾರಾಯಣ ಜಗತ್ಪತೇ ಲಕ್ಷ್ಮೀರಮಣ ಮುಕುಂದ ಅನಾಥರಕ್ಷಕನೆಂದು ಉಚ್ಚ ಸ್ವರದಲ್ಲಿ ಕೊಂಡಾಡುವನು.



ಈ ರೀತಿಯಾಗಿ ಉನ್ಮತ್ತನಂತೆ ಕೂಗುವನು. ಇಂಥವನನ್ನು ಏಕಾಂತಭಕ್ತನೆಂದು ಸ್ಥೂಲವಾಗಿ ತಿಳಿಯಬಹುದು.

ಪರಮಾತ್ಮ ಎಲ್ಲಿಯೋ ಇರುತ್ತಾನೆಂದು ತಿಳಿಯದೇ ನಮ್ಮ ಹೃದಯ ಮಂದಿರದಲ್ಲಿ ನೆಲಸಿರುವನು. ಅವನನ್ನು ಸಾಕ್ಷಾತ್ಕಾರದಿಂದ ಕಾಣಬಹುದು. ಸುಲಭನೋ ಹರಿ ತನ್ನವರನ್ನು ಅರಗಳಿಗೆ ಬಿಟ್ಟಗಲನು. ಇಂತಹ ಸರ್ವೇಶ್ವರನನ್ನು ಕ್ಷುಲ್ಲಕ ನಶ್ವರ ಲೌಕಿಕ ವರವನ್ನು ಕೇಳದೇ ಶ್ರೀಹರಿಯ ಪಾದಾರವಿಂದಗಳಲ್ಲಿ ನಿಶ್ಚಲ ಭಕ್ತಿ, ಅವನ ಭಕ್ತರಲ್ಲಿ ಗೌರವ ಸದಾ ದಯಪಾಪಿಸು ಎಂದು ಬೇಡಬೇಕು. ನಿರಂತರ, ಶಾಶ್ವತ, ಸುಖರೂಪ, ಮೋಕ್ಷವನ್ನು ಬೇಡದೆ ನಶ್ವರ ಸ್ವರ್ಗಾದಿಗಳನ್ನು ಅಪೇಕ್ಷಿಸುವವನು ಮೂಢನೇ ಸರಿ. ಮೋಕ್ಷದಾತನಾದ ಶ್ರೀಹರಿ ಐಹಿಕ ಸಂಪತನ್ನು ಕೊಡದೇ ಇರುವನೇ ? ನಮಗೆ ದೃಢ ವಿಶ್ವಾಸವಿರಬೇಕು. ಇವ ಎಂಥಾ ಭಕ್ತ ಅಂತ ಅನ್ಯರು ಹೊಗಳುವುದರಿಂದ ಶ್ರೀಶನ ಪ್ರಸನ್ನತೆ ಆಗುವುದಿಲ್ಲ. ಆ ರೀತಿ ಹೊಗಳಿಸಿಕೊಳ್ಳಬೇಕೆಂದೇ ನಟಿಸುವರು ಡಾಂಭಿಚಾರಿಗಳು.

ಹಿರಿಯ ಪ್ರಶಾಂತ ಭಕ್ತರು ಬ್ರಾಹ್ಮಣರೇ ಆಗಬೇಕೆಂದಿಲ್ಲ. ಕ್ಷತ್ರಿಯ, ವೈಶ್ಯ, ಶೂದ್ರ, ಗಂಧರ್ವ ಅಸುರರೂ ಭಜಿಸಿ ಹರಿಕಟಾಕ್ಷಕ್ಕೆ ಪಾತ್ರರಾಗಿರುವ ದೃಷ್ಟಾಂತಗಳು ಸಾಕಷ್ಟು ಕಾಣಬಹುದು.

ಗೋವಿಂದನಲ್ಲಿ ಉತ್ಕೃಷ್ಟ ಲಾಭವಾಗುವುದು.

**ಏತಾವಾನೇವ ಲೋಕೇಸ್ಮಿನ್ ಪುಂಸಃ ಸ್ವಾರ್ಥಃ ಪರಃಸ್ಮೃತಃ ।**
**ಏಕಾಂತ ಭಕ್ತಿಗೋವಿಂದೇ ಯತ್ ಸರ್ವತ್ರ ತದೀಕ್ಷಣಂ ॥**

ವೇದಾದಿಗಳಲ್ಲಿ ಸ್ತುತ್ಯನಾದ ಗೋವಿಂದನಲ್ಲಿ ಭಕ್ತಿಮಾಡುವುದು ಮಾನವನು ಹುಟ್ಟಿದ್ದಕ್ಕೆ ಸಾರ್ಥಕತೆ.

**ತನ್ಮಾದೇಕೇನ ಮನಸಾ ಭಗವಾನ್ ಸಾತ್ವತಾಂ ಪತಿಃ ।**
**ಶ್ರೋತವ್ಯಃ ಕೀರ್ತಿತವ್ಯಶ್ಚ ಧ್ಯೇಯಃ ಪೂಜ್ಯಶ್ಚ ನಿತ್ಯದಾ ॥** (ಭಾಗ. ೧-೨-೧೬)

**ವಾಸುದೇವಪರಂ ಜ್ಞಾನಂ ವಾಸುದೇವ ಪರಂ ತಪಃ ।**
**ವಾಸುದೇವ ಪರೋಧರ್ಮೋ ವಾಸುದೇವ ಪರಾಗತಿಃ ॥** (ಭಾಗ. ೧-೨-೩೦)

ಹೀಗೆ ಏಕೇನ ಮನಸಾ ಹರಿಯಲ್ಲಿ ಅಚಲ ಮನಸ್ಸು, ಭಕ್ತಿ ಇರಬೇಕು. ಅಲ್ಲದೇ, ಇತರ ವಿಷಯಗಳಲ್ಲಿ ಮನಸ್ಸು ಮಾಡಿದರೆ ಕೇವಲ ದೈಹಿಕ ಶ್ರಮವೇ ಸರಿ.

**ಧರ್ಮಃ ಸ್ವನಷ್ಠಿತಃ ಪುಂಸಾಂ ವಿಷ್ವಕ್ಸೇನ ಕಥಾಶ್ರಯಾಮ್ ।**
**ನೋತ್ಪಾದಯೇದ ಯದಿ ರತಿಂ ಶ್ರಮ ಏವಹಿ ಕೇವಲಮ್** (ಭಾಗ. ೧-೨-೭)

ಇದಕ್ಕೆ ಸಂವಾದಿಯಾಗಿ ಮೂರು ಶ್ಲೋಕಗಳಿಂದ ಪದ್ಮಪುರಾಣ ತಿಳಿಸುತ್ತದೆ.

**ಕುರ್ವಂತಿ ಶಾಂತಿಂ ವಿಬುಧಾ ಪ್ರಹೃಷ್ಟಾಃ ಕ್ಷೇಮಂ ಪ್ರಕುರ್ವಂತಿ ಪಿತಾಮಹಾದ್ಯಾಃ।**
**ಸ್ವಸ್ತಿಂ ಪ್ರಯಚ್ಛಂತಿ ಮುನೀಂದ್ರ ಮುಖ್ಯಾಃ ಗೋವಿಂದಭಕ್ತಿಂ ವಹತಾಂ ನರಾಣಾಮ್।**

**ಶುಭಾಗೃಹಾ ಭೂತ ಪಿಶಾಚಾಯುಕ್ತಾಃ ಬ್ರಹ್ಮಾದಯೋದೇವ ಗಣಾಃ ಪ್ರಸನ್ನಾಃ ।**
**ಲಕ್ಷ್ಮೀಸ್ಥಿರಾ ತಿಷ್ಠತಿ ಮಂದಿರಂ ಚ ಗೋವಿಂದಭಕ್ತಿಂ ವಹತಾಂ ನರಾಣಾಮ್ ।**

**ಗಂಗಾಗಯಾ ನೈಮಿಷ ಪುಷ್ಕರಣಿ ಕಾಶೀ ಪ್ರಯಾಗಃ ಕುರುಜಾಂಗಲಾನಿ ।**
**ತಿಷ್ಠಂತಿ ದೇಹೇ ಕೃತಭಕ್ತಿ ಪೂರ್ವಂ ಗೋವಿಂದಭಕ್ತಿಂ ವಹತಾಂ ನರಾಣಾಮ್ ॥**

ಗೋವಿಂದನಲ್ಲಿ ಭಕ್ತಿ ಮಾಡಿದರೆ ಅವನಲ್ಲಿ ದೇವತೆಗಳು ಸಂತುಷ್ಟರಾಗುವರು. ಪಿತೃದೇವತೆಗಳು ಕ್ಷೇಮಬಯಸುತ್ತಾರೆ. ಋಷಿಮುನಿಗಳು ಸ್ವಸ್ಥಿತಿ ಆಗಲೆಂದು ಆಶೀರ್ವದಿಸುತ್ತಾರೆ. ಅಶುಭ ಗ್ರಹಗಳು ಗೋವಿಂದನಾಮ ಸ್ಮರಣೆಯಿಂದ ಶುಭಪ್ರದರಾಗುವರು. ದುಷ್ಟ ಪಿಶಾಚಾದಿಗಳ ಬಾಧೆಯಾಗುವುದಿಲ್ಲ. ಬ್ರಹ್ಮ ವಾಯುಗಳು ಪ್ರಸನ್ನರಾಗುತ್ತಾರೆ. ಮಹಾಲಕ್ಷ್ಮೀ ಪ್ರಸನ್ನಳಾಗಿ ನಮ್ಮ ಮನೆಯಲ್ಲಿ ಸ್ಥಿರವಾಗಿ ನೆಲೆಸುತ್ತಾಳೆ. ಗಂಗಾದಿ ನದಿ ಪುಣ್ಯಕ್ಷೇತ್ರಗಳೆನಿಸಿದ ಕಾಶೀ ಪ್ರಯಾಗಗಳಿಗೆ ಹೋದ ಪುಣ್ಯ ಲಭಿಸುವುದು. ಹೀಗೆ ಗೋವಿಂದನಾಮೋಚ್ಚರಣೆ ಸ್ಮರಣೆಯಿಂದ ಏನೆಲ್ಲಾ ಲಭಿಸುವುದು. ಇದು ಸತ್ಯ. ನಲಕೋಬರ ಮಣಿಗ್ರೀವರೆಂಬ ಯಕ್ಷರು ಶಿಶುಪಾಲದೈತ್ಯ (ಪೂತನಾ ರಾಕ್ಷಸಿಯಲ್ಲಿ ಊರ್ವಶೀ ಎಂಬ ಅಪ್ಸರೆ ಇದ್ದಳೆಂದು ತಿಳಿಸಲಾಗಿದೆ.) ವಿಧುರ ಹೀಗೆ ಅನೇಕರು ಏಕಾಂತ ಭಕ್ತಿಯಿಂದ ಮುಕ್ತರಾಗಿರುತ್ತಾರೆಂದ ಮೇಲೆ ನೀವುಗಳು ರಾಕ್ಷಸಕುಮಾರರಾದರೂ ಶ್ರೀ ಗೋವಿಂದನಲ್ಲಿ ಈಗಿನಿಂದಲೇ ಅಭ್ಯಸಿಸಿರಿ. ಇಷ್ಟು ಉಪದೇಶ ಮಾಡಿರುವೆನು.

ನಾನು ಹೇಳಿದ್ದು ಸಮಸ್ತ ಶಾಸ್ತ್ರಗಳಲ್ಲಿ ಪ್ರತಿಪಾದ್ಯನಾದ ಶ್ರೀಹರಿ ಮಹಿಮೆ ತಿಳಿಸುವ ಸಾರ. ಎಷ್ಟು ವಿವರಿಸಿದರೂ ಶ್ರೀಶನ ಗುಣಗಳು ತಿಳಿಸಲು ಅನಂತವಾಗಿರುವುದು. ಇಷ್ಟು ತಿಳಿಯಿರಿ. ಇದೇ ಶ್ರೇಷ್ಠ ಫಲದಾಯಕ.

ಇಷ್ಟು ಉಪದೇಶ ಮಾಡಿ ಸುಮ್ಮನಾದನು.

**ಏತಾವಾನೇನ ಲೋಕೇಽಸ್ಮಿನ್ ಪುಂಸಾಂಸ್ವಾರ್ಥಪರಃಸ್ಮೃತಃ ।**
**ಏಕಾಂತ ಭಕ್ತಿಗೋವಿಂದೇಯತ್ ಸರ್ವತ್ರ ತದೀಕ್ಷಣಮ್ ॥**

**ವಿಶೇಷ ವಿವರಣೆ :** ಪ್ರಹ್ಲಾದ ದೈತ್ಯ ಬಾಲಕರಿಗೆ ಅತಿ ಗೂಢವಾದ ಭಗವತತ್ತ್ವವನ್ನು ಉಪದೇಶಿಸಿದ. ಸರಿ. ಆದರೆ ಎರಡು ಅಂಕ ಹುಟ್ಟುವುದು. (೧) ಪ್ರಹ್ಲಾದ ತಾನು ತಾಯಿಯ ಗರ್ಭದಲ್ಲಿ ಸಾವಿರಾರು ವರ್ಷಗಳು ವಾಸಮಾಡುವಾಗ ನಾರದರಿಂದ ತತ್ವೋಪದೇಶ ಹೊಂದಿದ. ರಾಕ್ಷಸ ಬಾಲಕನಿಗೆ ಮಹಾಮುನಿಗಳು ಹೇಗೆ ಉಪದೇಶಿಸಿದರು ಎಂಬ ಅನುಮಾನಕ್ಕೆ ಪ್ರಹ್ಲಾದ ದೈತ್ಯವೀರ್ಯದಿಂದ ಜನಿಸಿದರೂ ಅವನ ಜೀವ ಸಾತ್ವಿಕ



ಸ್ವರೂಪವಾಗಿತ್ತು. (ಅ) ಹಿರಣ್ಯಕಶಿಪುವಿನಲ್ಲಿ ಜಯ ಎಂಬ ದೇವತೆ ಇದ್ದು ಸದ್ಬುದ್ಧಿ ಹುಟ್ಟುವಂತೆ ಪ್ರಾಯಶಃ ಗರ್ಭದಲ್ಲಿ ಒಂದಂಶದಿಂದ ಸೇರಿರಲೂ ಸಾಕು. (ಆ) ಆದರೂ ಪ್ರಹ್ಲಾದ ಸ್ವರೂಪದಿಂದಲೇ ದೈವಭಕ್ತನಾಗಿ ಕರ್ಮಜದೇವತೆಯಾಗಿ ಬ್ರಹ್ಮದೇವರ ಕೈಂಕರ್ಯ ಮಾಡಿದ ಫಲವಾಗಿ ಈ ಬ್ರಹ್ಮಜ್ಞಾನ ಪಡೆಯಲು ಯೋಗ್ಯನಾದ. ಇದು ಸರಿ. ಆದರೆ ಅವನಂತೆ ದೈತ್ಯ ಬಾಲಕರು ಹೇಗೆ ಅಧಿಕಾರಿಗಳಾದರು ? (೨) ದೈತ್ಯ ಬಾಲಕರು ಇನ್ನೂ ೮-೯ ವರ್ಷದವರು. ಬ್ರಹ್ಮಜ್ಞಾನ ಹೇಳಿದರೂ ಗ್ರಹಿಸುವ ಶಕ್ತಿ, ಬುದ್ಧಿ ಇದ್ದಿತೇ?

ಪ್ರಹ್ಲಾದ ಹೇಳಿದ್ದನ್ನೆಲ್ಲಾ ಅರ್ಥಮಾಡಿಕೊಳ್ಳುವಷ್ಟು ಚೈತನ್ಯವಿದ್ದಿತೇ ? ವರ್ಷಾನುಗಟ್ಟಲೆ ಅಧ್ಯಯನ, ಧ್ಯಾನ, ಚಿಂತನ ಮಾಡಿದ ಎಂಥಾ ಮೇಧಾವಿಗಳಿಗೂ ಸರಿಯಾಗಿ ಇನ್ನೂ ತಿಳಿಯದಿದ್ದಾಗ ಈ ಬಾಲಕರು ಪ್ರಹ್ಲಾದನ ಮಾತಿಗೆ ಓಗೊಟ್ಟು ಸಮ್ಮತಿಸರೆಂದಿದೆ. ಅಂದರೆ ಅಸುರ ಬಾಲಕರು ಹಿಂದಿನ ಜನ್ಮದಲ್ಲಿ ದೇವತೆಗಳಾಗಿ ಯಾವುದೋ ನಿಮಿತ್ತ ಕಾರಣದಿಂದ ಶಾಪದಿಂದ ಈ ಜನ್ಮದಲ್ಲಿ ಅಸುರ ಯೋನಿಯಲ್ಲಿ ಹುಟ್ಟಿರಬೇಕು. ಅವರೂ ಸಹ ಕರ್ಮದೇವತೆಗಳಾಗಿರಲಿಕ್ಕೇಬೇಕು.

ಕರ್ಮದೇವತೆಗಳು ಒಂದು ಗುಂಪು. ಶ್ರೀಹರಿಯನ್ನು ಪೂಜಿಸಲು ಬ್ರಹ್ಮದೇವರೇ ಮೊದಲಾದವರ ಸೇವೆ ಮಾಡುತ್ತಿರುವವರು. ಇವರು ಜನ್ಮಾಂತರದಲ್ಲಿ ಸಾತ್ವಿಕ ಕರ್ಮಾಚರಣೆ ಮಾಡುತ್ತಾ ಶ್ರೀಹರಿಯ ಮತ್ತು ಅವರ ಭಕ್ತರ ಸೇವೆ ಮಾಡಲು ಶ್ರೀಹರಿ ಅನುಗ್ರಹದಿಂದ ದೇವತ್ವವನ್ನು ಪಡೆದವರು. ಯಾವುದೋ ಒಂದು ಅಚಾತುರ್ಯದಿಂದ ಹರಿಸಂಕಲ್ಪಾನುಸಾರ ಪ್ರಹ್ಲಾದನಂತೆ ಅಸುರತ್ವವನ್ನು ಪಡೆದರು. ಸ್ವರೂಪದಿಂದಲೇ ಸಾತ್ವಿಕರಾಗಿದ್ದರಿಂದ ಪ್ರಹ್ಲಾದನು ಬ್ರಹ್ಮೋಪದೇಶ ಹಿಡಿಸಿತೆಂದು ತಿಳಿಯಬಹುದು. ಇವರು ತಾರತಮ್ಯದಲ್ಲಿ ೧೮ನೇ ಕಕ್ಷಕ್ಕೆ ಸೇರುತ್ತಾರೆ.

ಹೀಗೆ ತಿಳಿದರೆ ವಿರೋಧ ಬರಲಾರದು.

**ಅಥ ದೈತ್ಯಸುತಾಃ ಸರ್ವೇ ಶೃತ್ವಾ ತದನುವರ್ಣಿತಮ್ ।**
**ಜಗೃಹುರ್ನಿರವದ್ಯತ್ವಾನ್ನೈವಗುರ್ವನುಶಿಕ್ಷಿತಮ್ ।**

ಹೀಗೆ ಪ್ರಹ್ಲಾದನಿಂದ ಉಪದೇಶ ಹೊಂದಿದ ದೈತ್ಯ ಬಾಲಕರು ಅವನನ್ನೇ ಗುರುವೆಂದು ಭಾವಿಸಿ ವಿಶ್ವಾಸದಿಂದ ಹರಿಭಕ್ತರಾದರು. ಷಂಡಾಮರ್ಕರು ಇವರಿಗೂ ಬೋಧಿಸಿದ್ದು ಮಿಥ್ಯಾಜ್ಞಾನವೆಂದು ತ್ಯಜಿಸಿದರು.

ಹರಿಃ ಓಂ

ಶ್ರೀನೃಸಿಂಹಪಾಹಿ

# ಶ್ರೀ ನರಸಿಂಹದೇವರ ಪ್ರಾದುರ್ಭಾವ

**ಶ್ರೀ ಧ್ಯಾಯೇನ್ನೃಸಿಂಹಮುರುವೃಕ್ತರವಿ ತ್ರಿನೇತ್ರಂ**
**ಜಾನು ಪ್ರಸಕ್ತ ಕರಯುಗ್ಮ ಮಥಾಪರಾಭ್ಯಾಮ್ ।**
**ಚಕ್ರಂಧರಂ ಚ ದಧತಂ ಪ್ರಿಯಯಾ ಸಮೇತಂ**
**ತಿಗ್ಮಾಂ ಶು ಕೋಟ್ಯಧಿಕತೇಜ ಸಮುಗ್ರ ಶಕ್ತಿಮ್**

॥ ಓಂ ಶ್ರೀಮಹಾಲಕ್ಷ್ಮೀನೃಸಿಂಹಾಯನಮಃ ಓಂ ॥

## ಗುರುಪುತ್ರರ ಆಗಮನ ಆಶ್ರಮದಲ್ಲಿ ಎಲ್ಲೆಲ್ಲಿಯೂ ಶ್ರೀಹರಿನಾಮ ಸಂಕೀರ್ತನ

ಗುರುಪುತ್ರರಾದ ಷಂಡಾಮರ್ಕರು ಬರುತ್ತಾರೆ. ಆಶ್ರಮದಲ್ಲಿ ವಾತಾವರಣವೇ ಬದಲಾಗಿ ಮೂಲೆ ಮೂಲೆಯಿಂದ ಶ್ರೀಹರಿನಾಮ ಸಂಕೀರ್ತನೆ ಕೇಳಿಬರುವುದು. ಗುರುಗಳು ಇದನ್ನು ಕೇಳುತ್ತಲೇ ದಂಗು ಬಡಿದವರಂತೆ ಭಯಭೀತರಾಗಿ "ತಮಗೆ ಅಂತ್ಯಕಾಲ ಪ್ರಾಪ್ತವಾಗಿದೆ. ಹಿರಣ್ಯಕಶಿಪು ನಮ್ಮನ್ನು ಸುಮ್ಮನೆ ಬಿಡುವುದಿಲ್ಲ. ಏನು ಗತಿ ?" ಎಂದು ದಿಕ್ಕುತೋಚದೆ ಎಲ್ಲಿಂದ ಬಂದನಪ್ಪಾ ಈ ದೈತ್ಯ ಪ್ರಹ್ಲಾದ. ನಮಗೆ ಮೃತ್ಯುರೂಪನಾಗಿದ್ದಾನೆ. ತಾನು ಹಾಳಾಗುವುದಲ್ಲದೆ, ಇತರೆ ಮಕ್ಕಳನ್ನು ಮರುಳು ಮಾಡಿ ಹಾಳುಮಾಡುತ್ತಿದ್ದಾನೆ. ಬಾಳೆಗಿಡಗಳ ಮಧ್ಯೆ ಮರ್ಕಟ ಸೇರಿದಂತಾಯಿತು. ಇವನನ್ನು ನಮ್ಮಲ್ಲಿ ಇಟ್ಟುಕೊಳ್ಳಲು ಮಹಾಹಾನಿಯಾಗುವುದು ಎಂದು ಚಿಂತಾಕ್ರಾಂತರಾಗಿ ತಕ್ಷಣ ಪ್ರಹ್ಲಾದನನ್ನು ಹಿರಣ್ಯಕಶಿಪುವಿನ ಬಳಿಗೆ ಕರೆದೊಯ್ಯುತ್ತಾರೆ.

ದೈತ್ಯರಾಜನಿಗೆ ಪ್ರಹ್ಲಾದನ ದುರ್ವಿನಿತ ವರ್ತನೆ ದೈತ್ಯ ಬಾಲಕರ ಬುದ್ಧಿಗಳನ್ನು ಕೆಡಿಸಿ ವಿಷ್ಣುಭಕ್ತರನ್ನಾಗಿ ಮಾಡಿರುವ ವಿಷಯ ವಿಸ್ತಾರವಾಗಿ ವರ್ಣಿಸಿ "ರಾಜನ್, ನೀನುಂಟು, ನಿನ್ನ ಮಗನುಂಟು. ನಮ್ಮದೇನು ಅಪರಾಧವಿಲ್ಲ" ಎಂದು ತಿಳಿಸಿದರು.

**ಅಥಾ ಚಾರ್ಯಸುತ ಸ್ತೇಷಾಂ ಬುದ್ಧಿಮೇಕಾಂತಸಂಸ್ಥಿತಮ್ ।**
**ಆಲಕ್ಷ್ಯ ಭೀತಸ್ತ ಜರಿತೋರಾಜ್ಞ ಆವೇದಯದ್‌ಯಥಾ ॥**

ಗುರುಪುತ್ರರು ವಿವರಿಸಿದಂತೆ ಎಲ್ಲವನ್ನೂ ಕೇಳಿ ಅತಿಕೋಪಿಷ್ಠನಾಗಿ ರಾಕ್ಷಸೇಂದ್ರ ತನ್ನ ಮಗ ವಿಷ್ಣುಭಕ್ತನಾಗುವುದಲ್ಲದೇ ಇತರರ ಬುದ್ಧಿಗಳನ್ನೂ ಕೆಡಿಸುವವನಾಗಿ ತನ್ನ ಮಾರ್ಗವನ್ನು ಅವಲಂಬಿಸದೆ ಮೂರ್ಖನಾಗಿದ್ದಾನೆ. ಇನ್ನು ಇವನ ನಡತೆ ಮಿತಿಮೀರಿದೆ. ಸಹಿಸಲು ಆಗದು ಎಂದು. ಪ್ರಹ್ಲಾದನನ್ನು ತಾನೇ ಸಂಹಾರ ಮಾಡುವುದಾಗಿ ನಿಶ್ಚಯಿಸಿದನು.



ಇಷ್ಟಾದರೂ ಪ್ರಹ್ಲಾದನಿಗೆ ತಂದೆಯ ಮೇಲೆ ಕೋಪ ದ್ವೇಷ ಹುಟ್ಟಲಿಲ್ಲ. ವಿನಯದಿಂದ ತಂದೆಯ ಮುಂದೆ ಕೈಮುಗಿದು ನಿಂತಿರುವ ಪುತ್ರನನ್ನು ನೋಡಿ ಇನ್ನಷ್ಟು ಕೋಪೋದ್ರೇಕದಿಂದ ಎಲೋ, ದುರಾತ್ಮ, ದುರ್ವಿನಿತ ಮಂದಾತ್ಮನ್. **ಕುಲಭೇದಕ ಕುಲಾಧಮಾ । ಸ್ತಬ್ಧಂ ಮಚ್ಛಾಸನೋದ್ಧೂತಂನ್ನೈಷ್ಯೇತ್ವಾಽದ್ಯಂಸಮಕಕ್ಷಯಮ್॥**

ನೀಚ, ಮಂದಮತಿಯೇ, ನನ್ನ ಆಜ್ಞೆಯನ್ನು ತಿರಸ್ಕರಿಸಿದ ನೀನು ರಾಕ್ಷಸಕುಲಕ್ಕೆ ಕಳಂಕ ತರುವೆಯಾ. ಕುಲವನ್ನೇ ನಾಶಮಾಡಲು ಹುಟ್ಟಿರುವೆ. (ಹೌದು ಪ್ರಹ್ಲಾದನ ಅವತಾರವೇ ರಾಕ್ಷಸ ಕುಲ ನಾಶಮಾಡಲು ಬಂದನೆಂಬುದನ್ನು ಹಿರಣ್ಯಕಶಿಪುವು ಭವಿಷ್ಯವನ್ನು ನುಡಿದನು). ಈಗಲೇ ನಿನ್ನನ್ನು ಯಮಪುರಿಗೆ ಕಳುಹಿಸುತ್ತೇನೆ.

ನನ್ನನ್ನು ಕಂಡರೆ ಲೋಕವೇ ದೇವತೆಗಳೂ ನಡುಗುತ್ತಾರೆ. ನನ್ನ ಶಾಸನವೆಂದರೆ ಏನೆಂದು ತಿಳಿದಿರುವೆ ? ನನ್ನ ಆಜ್ಞೆಯನ್ನು ಧಿಕ್ಕರಿಸುವೆಯಾ ? ಹೇಳು. ಹಿರಣ್ಯಕಶಿಪು ಇಷ್ಟು ರೋಷ ಕೋಪದಿಂದ ಕೂಗುತ್ತಿದ್ದರೂ, ಪುತ್ರ ಪ್ರಹ್ಲಾದ ಶಾಂತಿ ಸಮಾಧಾನ ಚಿತ್ತನಾಗಿ ಹೆದರದೆ :

ತಂದೆ ರಾಜನೇ ನಿನ್ನ ನನ್ನ ಎಲ್ಲರ ಬಲಿಷ್ಠರಾದ, ಎಲ್ಲರಿಗೂ ಬಲಪ್ರದನಾಗಿ ಬಲನೆಂದು ಕರೆಸಿಕೊಳ್ಳುವ ಶ್ರೀಹರಿಯು ದೇವತೆಗಳಿಗೆ ಬ್ರಹ್ಮರುದ್ರಾದಿ ಎಲ್ಲರಿಗೂ ಶ್ರೀನಾರಾಯಣನೇ ಬಲಪ್ರದನೆಂದು ತಿಳಿಯುವವನಾಗು.

ಸ್ಥಾವರ ಜಂಗಮ ರೂಪ ಸಕಲ ಪ್ರಾಣಿಗಳಿಗೂ ಬಲದಾತ ಶ್ರೀಹರಿಯೇ. ಅವನ ಆಜ್ಞಾನುಸಾರ ಎಲ್ಲವೂ ನಡೆಯುತ್ತಿರುವುದು. ಹೀಗಿರುವಾಗ ನಾನು ಅತ್ಯಂತ ಬಲಿಷ್ಠನೆಂದು ಆತ್ಮಶ್ಲಾಘನೆ ಹುಚ್ಚುತನ.

**ನಕೇವಲಂ ಮೇ ಭವತಶ್ಚ ರಾಜನ ಸ ವೈಬಲಂಬಲಿನಾಂ ಚಾಪರೇಷಾಮ್ ।**
**ಪರಾವರೇಽಮೀ ಸ್ಥಿರ ಜಂಗಮಾಯ್ಯೈ। ಬ್ರಹ್ಮಾದಯೋ ಯೇನ ವಶಂ ಪ್ರಣೀತಾಃ॥**

### ವಿಶೇಷ ವಿವರಣೆ

ಈ ಶ್ಲೋಕದಲ್ಲಿ ಪ್ರಹ್ಲಾದನು ತಂದೆಯನ್ನು **ರಾಜನ್** ಎಂದು ಕರೆದುದಕ್ಕೆ ಸತ್ಯಧರ್ಮತೀರ್ಥರ ವಿವರಣೆಯು ಚಮತ್ಕಾರವಾಗಿರುವುದು. **ರಾಜನ್** ಎಂದರೆ ಚಂದ್ರನನ್ನು ಹೇಳಿದಂತಾಯಿತು. ಚಂದ್ರ ಕೃಷ್ಣಪಕ್ಷದಲ್ಲಿ ಕಳೆಗುಂದಿ ಕೊನೆಗೆ ಅಮಾವಾಸ್ಯೆ ಎಂದು ಕ್ಷಯವಾಗುತ್ತಾನೆ. ಹಾಗೆ ರಾಜನೇ ನೀನು ಇಷ್ಟರಲ್ಲೇ ಕ್ಷಯ (ನಾಶ) ಹೊಂದುವೀ ಎಂಬುದನ್ನು ಮಾರ್ಮಿಕವಾಗಿ ತಿಳಿಸಲಾಗಿದೆ.

**ಕೇವಲಂ ನ ಮೇ :** ರಾಜನೇ ಏಕೆ **ಮೇ ಮೇ** ಅಂತ ಮೇಕೆಯಂತೆ ನಾನು ನನಗೆ ಅಂತ ವೃಥಾ ಒದರುತ್ತೀಯ. ಇಲ್ಲಿ ನನಗೂ ನಿನಗೂ ಎಂದು ತಿಳಿಸಲು ಶ್ರೀಹರಿಗೆ

ನೀನ್ಯಾವ ಲೆಕ್ಕ. ಇಂದ್ರಾದಿ ದೇವತೆಗಳಿಗೂ, ಇಂದ್ರನಿಗೂ ರುದ್ರ ಬಲಪ್ರದ. ರುದ್ರದೇವರಿಗೆ ಬ್ರಹ್ಮ ವಾಯುಗಳು, ವಾಯುದೇವರಿಗೆ ಮಹಾಲಕ್ಷ್ಮೀ, ಲಕ್ಷ್ಮೀದೇವಿಗೆ ಶ್ರೀಹರಿಯೇ ಬಲದಾತ. ಆದರೆ ಶ್ರೀಹರಿಗೆ ಬಲದಾತರು ಬೇರೆ ಯಾರೂ ಇರುವುದಿಲ್ಲ. ಸರ್ವೋತ್ತಮನಾದ್ದರಿಂದ.

**ಬಲಯಿಂದ್ರಸ್ಯ ಗಿರೀಶಃ ಗಿರೀಶಸ್ಯ ಬಲಂ ಮರುತ್ ।**
**ಮರುತಸ್ತು ಹರಿಃ ಸಾಕ್ಷಾತ್ ನ ಹರೇರ್ಬಲಮನ್ಯತಃ ॥**

ಬ್ರಹ್ಮಾಂಡಪುರಾಣದಲ್ಲಿಯೂ ಹೀಗಿದೆ.

**ನ ಕೇವಲಂ ಮೇ ಭವತಶ್ಚಾಪಿ ನಿತ್ಯಂ ಸರ್ವೈಬಲಂಬಲಿನಾಂ ಚಾಪರೇಷಾಮ್ ।**
**ನ ಕೇವಲಂ ಮೇ ಭವತಶ್ಚಾಪಿ ನಿತ್ಯಂ ತ್ವದ್ದೇವ ರುದ್ರಸ್ಯ ಬಲಂಮುರಾರಿಃ ।**
**ನ ಕೇವಲಂ ರುದ್ರದೇವಸ್ಯ ಮೂಢ ಪಿತುಃ ಶಿವಸ್ಯಾಪಿ ಬಲಂ ಬಲೀಯಾನ್ ॥**

ಇಲ್ಲಿ ತಂದೆಯನ್ನು ಮೂಢನೆಂದು ಕರೆದು ನಿನ್ನ ಆರಾಧ್ಯದೇವ ರುದ್ರನಿಗೂ ಬಲಕೊಡುವವನೂ ಮುರಾರಿ ಎಂದಿದೆ. ಹಿರಣ್ಯಕನು, ನಾನೇ ದೇವರು. ನನಗಿಂತ ಅನ್ಯದೇವರೆಲ್ಲಿದ್ದಾನೆಂದುಕೊಳ್ಳುವಾಗ ಅಹಂ ಬ್ರಹ್ಮಾಸ್ಮಿ ಅಂತ ತಿಳಿದಿರುವವನು ಶಿವನನ್ನು ಏಕೆ ಪೂಜೆ ಮಾಡುವಿ ? ಸ್ವವ್ಯಾಹತಿ ಎಂದು ಕಾಕು ಸ್ವರದಿಂದ ತನ್ನ ತಂದೆಯನ್ನು ಜರಿಯುತ್ತಾನೆಂಬುದು ಭಾವ. ತಂದೆಯೇ ಆದ್ದರಿಂದ ಅಸುರ ಸ್ವಭಾವ ತ್ಯಜಿಸಿ ಶ್ರೀಹರಿಯನ್ನು ಎಲ್ಲೆಡೆಯಲ್ಲಿಯೂ ಸಮನಾಗಿರುವನೆಂದು ತಿಳಿದು ಹರಿಶರಣಾಗು. ನಿನಗೆ ಈ ಜಗತ್ತಿನಲ್ಲಿ ಶತೃಗಳೇ ಇರುವುದಿಲ್ಲ. ಮೂರ್ಖರು ಮಾತ್ರ ಕಾಮಕ್ರೋಧಗಳಿಗೆ ಬಲಿಯಾಗಿ ನನ್ನ ಸಮಾನರಿಲ್ಲವೆಂದು ಹೇಳಿಕೊಳ್ಳುವರು. ಸರ್ವೇಶ ಸರ್ವರಿಗೂ ಶಕ್ತಿಪ್ರದ ಜಗನ್ನಾಥನೊಬ್ಬನೇ ಮಹಾಬಲಶಾಲಿ ಎಂದು ಹೇಳಿದ.

ಇದನ್ನು ಕೇಳಿ ಹಿರಣ್ಯಕಶಿಪುವಿಗೆ ಕೋಪ ನೆತ್ತಿಗೇರಿತು. ತಡೆಯಲಾರದೆ ವಿಪರೀತಕ್ಕೆ ಮುಟ್ಟಿತು. ಮೂರ್ಖ ಪ್ರಹ್ಲಾದ, ನಿನ್ನ ಅಂತಿಮ ಘಳಿಗೆ ಬಂದಿದೆ ಅಂತ ಕಾಣುತ್ತೆ. ಸನ್ನಿ ಬಡೆದವರಂತೆ ಬಡಬಡಿಸುತ್ತಿರುವೆ. ನಿರ್ಭಾಗ್ಯ ಹೇಳೋ. ನನ್ನನ್ನು ಹೊರತು **ಜಗದೀಶ್ವರನು ಇದ್ದಾನೆಯೇ** ? ಇದ್ದ ಪಕ್ಷದಲ್ಲಿ ಎಲ್ಲಿರುವನು ? ಏಕೆ ಈ ಕಂಭದಲ್ಲಿ ಕಾಣುತ್ತಿಲ್ಲ ? ಈ ಕಂಭದಲ್ಲಿದ್ದಾನೆಯೋ ?

**(ಅನುಬಂಧ ನೋಡಿ)**

**ಯಸ್ತ್ವಯಾ ಮಂದಭಾಗ್ಯೋಕ್ತೋ ಮದನ್ಯೋಜಗದೀಶ್ವರಃ ।**
**ಕ್ವಾಸಾ ಯದಿಸ ಸರ್ವತ್ರ ತಸ್ಮಾತ್ ಸ್ಥಂಭೇನ ದೃಶ್ಯತೆ ॥**

ಹಿರಣ್ಯಕಶಿಪು ಪ್ರಶ್ನಿಸುತ್ತಾನೆ. **ಕಸ್ಮಾತ್ ಸ್ಥಂಭೇನ ದೃಶ್ಯತೆ.** ಈ ಕಂಭದಲ್ಲಿ ಏಕೆ ಕಾಣಿಸುತ್ತಿಲ್ಲ?

ಇದಕ್ಕೆ ಪ್ರಹ್ಲಾದ ಪ್ರಶ್ನೆಯಲ್ಲೇ ಉತ್ತರವಿದೆ ಎಂದು ತಿಳಿಸುತ್ತಾ **ಸ್ಥಂಭೇನ ಕಸ್ಮಾತ್ ದೃಶ್ಯತೆ** ಕಂಭದಲ್ಲಿ ಏಕೆ ಕಾಣಿಸುತ್ತಿಲ್ಲ ? ನನಗೆ ಕಾಣಿಸುತ್ತಿದ್ದಾನೆ. ಈ ಕಂಭದಲ್ಲಷ್ಟೇ ಅಲ್ಲದೆ ಎಲ್ಲ ಕಂಭಗಳಲ್ಲಿ ಅದೃಷ್ಯನಾಗಿದ್ದು ನಾನು ನೋಡುತ್ತಿರುವೆನು ಎಂದ.



ನಾನೇ ಬ್ರಹ್ಮನೆಂದು ಉಪಾಸನೆ ಮಾಡುವ ಮಂದ ಮತಿಗಳಿಗೆ ಶ್ರೀಹರಿ ಸಹಿಸುವುದಿಲ್ಲ. ತಕ್ಷಣ ಸಂಹಾರರೂಪ ಶಿಕ್ಷೆ ಮಾಡೇ ಮಾಡುತ್ತಾನೆ ಎನ್ನುವುದನ್ನು ತಿಳಿಯಬೇಕು.

ಹಾಗಾದರೆ ನಿನ್ನ ಈ ಹರಿಯನ್ನು ಕರೆ. ಅವನು ಬರಲಿ ನೋಡೋಣ. ಬಂದನೆಂದರೆ ಮೊದಲು ಅವನನ್ನು ಕೊಂದು ನಂತರ ನಿನ್ನನ್ನು ಸಂಹರಿಸುತ್ತೇನೆ ಎಂದು ಆರ್ಭಟಿಸುತ್ತಾ ರಾಕ್ಷಸಾಧಮ ಖಡ್ಗವನ್ನು ತೆಗೆದು ಸಿಂಹಾಸನದಿಂದ ಕೆಳಗಿಳಿದು ಪ್ರಹ್ಲಾದನ ಜಡೆ ಹಿಡಿದು ಸಭಾ ಮಧ್ಯದಲ್ಲಿರುವ ಕಂಭದ ಕಡೆಗೆ ಧಾವಿಸಿ ಕಾಲಿನಿಂದ ಜೋರಾಗಿ ಗುದ್ದಿದನು.

**ಖಡ್ಗಂ ಪ್ರಗೃಹ್ಯೋತ್ತತಿತೋ ವ ರಾಸನಾತ್ ।**
**ಸ್ತಂ ಭಂ ತತಾದಾತಿಬಲಃ ಸ್ವಮುಽಷ್ಟಿನಾ ॥**

ಇಲ್ಲಿ ಹಿರಣ್ಯಕನು ಕೈಯಲ್ಲಿ ಖಡ್ಗವನ್ನು ಹಿಡಿದು ಕಂಭವನ್ನು ಅತಿ ಬಲದಿಂದ ತನ್ನ ಮುಷ್ಠಿಯಿಂದ ಹೊಡೆದನೆಂದಿದೆ.

ಖಡ್ಗವನ್ನು ಹಿಡಿದ ಮೇಲೆ ಖಡ್ಗದಿಂದ ಹೊಡೆಯಲಿಲ್ಲ. ಅದರ ಬದಲು ತನ್ನ ಮುಷ್ಠಿಯಿಂದ ಹೊಡೆದ ಎಂದಿದೆ. ಪ್ರಾಯಶಃ ಖಡ್ಗಕ್ಕಿಂತ ತನ್ನ ಮುಷ್ಠಿಯ ಬಲ ಪ್ರಹಾರ ಹೆಚ್ಚು ಪರಿಣಾಮಕಾರಿಯಾಗಬಹುದೆಂದು ಇರಬೇಕು.

ನೃಸಿಂಹ ಪುರಾಣದಲ್ಲಿ "ಪಾದಾತ್ ಸ್ತಂಭಂ ತತಾಡ" ಎಂದಿದೆ. ಇನ್ನು ಪ್ರಹ್ಲಾದನು ಶ್ರೀಹರಿಯನ್ನೇ ಧ್ಯಾನಿಸುತ್ತಿರುವಾಗ ಶ್ರೀನೃಸಿಂಹನು ಕಂಭವನ್ನು ಸೀಳಿಕೊಂಡು ತಾನಾಗಿ ಆವಿರ್ಭವಿಸಿದನೆಂದಿದೆ.

**ವಿರೋಧ / ಸಮಾಧಾನ :** ನೃಸಿಂಹಾವತಾರ ಅನೇಕ ಕಲ್ಪಗಳಲ್ಲಿ ಆಗುತ್ತಿತ್ತು. ಒಂದು ಕಲ್ಪದಲ್ಲಿ ಹಿರಣ್ಯಕ ಖಡ್ಗದಿಂದ ಹೊಡೆದರೆ ಇನ್ನೊಂದು ಕಲ್ಪದಲ್ಲಿ ಕಾಲಿನಿಂದ ಹೊಡೆದನೆಂದು, ಮತ್ತೊಂದು ಕಲ್ಪದಲ್ಲಿ ಶ್ರೀನೃಸಿಂಹ ದೇವ ಹಿರಣ್ಯಕನಿಗೆ ಯಾವ ಅವಕಾಶವೂ ಕೊಡದೆ ಪ್ರಿಯ ಭಕ್ತ ಪ್ರಹ್ಲಾದನನ್ನು ಕಾಪಾಡಲು ಅವನ ಮಾತನ್ನು ಸತ್ಯಮಾಡಲೂ ಸ್ವಾಮಿ ತಾನಾಗಿಯೇ ಕಂಭ ಭೇದಿಸಿ ಹೊರಗೆ ಬಂದ ಅಂತ ಇಟ್ಟುಕೊಳ್ಳಬೇಕು. ಶ್ರೀಹರಿ ವ್ಯಾಪಾರ ಅಚಿಂತ್ಯ ಅದ್ಭುತವಲ್ಲವೇ ?

ಆವಾಗ ಹಿರಣ್ಯಕಶಿಪು ಖಡ್ಗದಿಂದ (ಮುಷ್ಠಿ ಪಾದದಿಂದ) ತಾಡನ ಮಾಡಿದನೋ ತಕ್ಷಣವೇ ಕಂಭವು ಸೀಳಿ ಇಬ್ಭಾಗವಾಗಿ ಪ್ರಪಂಚವೇ ಇಬ್ಭಾಗವಾಯಿತೋ, ಅಲ್ಲಿಂದ ಒಂದು ಭಯಂಕರ ಶಬ್ದವು ಹೊರಟಿತು. ಆ ಶಬ್ದವು ಹೇಗಿತ್ತೆಂದರೆ **''ಸಶಬ್ದಸ್ತು ಮುಲೋಽಭವತ್''** ದೈತ್ಯರು ಹೆದರಿ ದಿಕ್ಕಾಪಾಲಾಗಿ ಫಲಾಯನ ಮಾಡಿದರು.

ಹಿರಣ್ಯಕಶಿಪು ಈ ಶಬ್ದ ಎಲ್ಲಿಂದ ಬರುತ್ತಿದೆ ಎಂದು ಅತ್ತಿತ್ತ ನೋಡಿ ಕಾಣದೆ ಭಯಕ್ರಾಂತನಾಗಿ ಹುಡುಕಿದನು.

**ತದ್ಯೈವ ತಸ್ಮಿನ್ ನಿನದೋಽತಿ ಭೀಷಣೋ ಬಭೂವ ಯೇನಾಂಡ ಕಟಾಹಮಸ್ಫುಟತ್ ।**
**ಯಂ ವೈ ಸ್ವದಿಷ್ಣ್ಯೋಽಪ್ಯಗತಂ ಹ್ಯಜಾದಯಃ ಶ್ರುತ್ವಾ ಸ್ವಧಾಮಾಪ್ಯಯಮಂಗ ಮೇನಿರೆ ॥**

ಇಂತಹ ಭಯಂಕರ ಶಬ್ದವು ಸತ್ಯಲೋಕದವರೆಗೂ ಕೇಳಿ ಬ್ರಹ್ಮಾದಿ ದೇವತೆಗಳು ಏನಿದು ಪ್ರಳಯವೇ ಸಮೀಪಿಸಿದೆಯೇ ಎಂದು ಭಯಪಟ್ಟರು.

ಈ ವಿಚಿತ್ರ ಅದ್ಭುತ ಶಬ್ದವು ಹೇಗೆ ಎಲ್ಲಿಂದ ಹೊರಟಿದೆ ಎಂದು ಕಾಣದೆ ದಿಙ್ಮೂಂಢನಾಗಿ ಸ್ತಬ್ಧನಾಗಿ ಹಿರಣ್ಯಕಶಿಪು ನಿಂತನು.

ಕಂಭ ಮಧ್ಯದಿಂದ ಒಂದು ವಿಚಿತ್ರ ರೂಪ ಹೊರಬಂದಿತು. ಶ್ರೀಹರಿಯು ರೂಪ ಅತ್ತ ಮಾನವನಂತೆಯೂ ಆಗದೆ ಇತ್ತ ಮೃಗರೂಪವನ್ನು ಧಾರಣ ಮಾಡಿದೆ ಅಪೂರ್ವ ನರ + ಹರಿ (ನರಸಿಂಹ) ರೂಪ ತಾಳಿ ಬಂದನು.

ಶಿರಸ್ಸು ಸಿಂಹಾಕಾರ, ಶರೀರವು ಮಾನವಾಕಾರ. ಶ್ರೀನರಸಿಂಹ ರೂಪ ಧರಿಸಿ ಕಂಭದಿಂದ ಆವಿರ್ಭವಿಸಿದನು.

**ಓಂ ಸತ್ಯಂ ವಿದಾತುಂ ನಿಜಭೃತ್ಯಭಾಷಿತಂ ।**
**ವ್ಯಾಪ್ತಿಂಚ ಭೂತೇಷ್ವಖಿಲೇಷು ಚಾತ್ಮನಃ ।**
**ಅದೃಶ್ಯತಾತ್ಯದ್ಭುತರೂಪಮುದ್ವಹನ್ ।**
**ಸ್ತಂಭೇ ಸಭಾಯಂ ನ ಮೃಗಂ ನಮಾನುಷಮ್ ॥** (೧೮)

ಶ್ಲೋಕ ೧೮ ... ರವಿಶೇಷ ವಿವರಣೆ

**ಸತ್ಯಂ ವಿದಾತಂ ನಿಜಭೃತ್ಯಭಾಷಿತಂ**

ಈ ಒಂದೇ ವಾಕ್ಯದಲ್ಲಿ ಎಷ್ಟು ಅರ್ಥಗರ್ಭಿತವಾಗಿರುವುದನ್ನು ಸ್ವಲ್ಪ ವಿವರಿಸಲಾಗಿದೆ.

**೧) ಸತ್ಯಂ – ವಿಧಾತುಂ :** ಸತ್ಯಂ = ಎಂದರೇ ಶ್ರೀಮಹಾವಿಷ್ಣು. ಶ್ರೀಮನ್ನಾರಾಯಣನು. ನಿತ್ಯ ಸತ್ಯನು. ನಿತ್ಯ ಸ್ವರೂಪನು. ನಿತ್ಯ ಸಂಕಲ್ಪನು. ಸತ್ಯ ಜಗತ್ತಿಗೆ ಕಾರಣನು. ಜಗತ್ತಿಗಿಂತಲೂ ವಿಲಕ್ಷಣನು. ತ್ರಿಕಾಲದಲ್ಲಿಯೂ ಶಸ್ವದೇಕ ಪ್ರಕಾರ ಏಕರೂಪನು ಎಂದು ದೇವದಾನವರಿಗೆ ತನ್ನ ಮಹಿಮೆಯನ್ನು ಪ್ರಕಟಿಸಲೂ ಕಂಭದಿಂದ ಹೊರಬಂದನು.

**ಔತ್ತರೇಽಪ್ಯಪ್ಯಂತರೇ ವಿಷ್ಣುಃ ಸತ್ಯೈಃ ಸಹಸ್ವಧೋತ್ತಮೈಃ ।**
**ಸತ್ಯಯುಯಾಮಭವತ್ಸತ್ಯಃ ಸ್ವರೂಪೋ ಜನಾರ್ದನಃ** (ಕೂ.ಪು.)

**(ಅನುಬಂಧ–೩ ನೋಡಿ)**

**೨) ನಿಜಭೃತ್ಯಃ =** ಕಶ್ಯಪ ಮುನಿಗಳು ದಿತಿ ದೇವಿಯು ಕಾಮಪೀಡಿತಳಾದಾಗ ಲಲನೆ, ಇದು ಪ್ರದೋಷ ಕಾಲ ಸ್ತ್ರೀಪುರುಷರ ಸಂಗ ಬಯಸಬಾರದು. ಈ ದುಷ್ಟಕಾಲದಲ್ಲಿ ಮುಗಿಯಲಿ



ಎಂದು ಎಚ್ಚರ ಕೊಟ್ಟರೂ ವಿಧಿ ವಿಲಾಸಕ್ಕೆ ಸೋತಾಗ ಸತೀಮಣಿ ಕೇಳು. ನನ್ನ ಮಾತನ್ನು ಕೇಳದೆ ಬಲಾತ್ಕರಿಸಿದೆಯಾದ್ದರಿಂದ ನಿನ್ನ ಗರ್ಭದಲ್ಲಿ ಇಬ್ಬರು ಮಹಾ ದೊಡ್ಡ ದೈತ್ಯರು ಹುಟ್ಟುವರು. ಆದರೂ ಚಿಂತಿಸಬೇಡ. ನಿನ್ನ ಮೊಮ್ಮಗನು ಪರಮ ಭಾಗವತನಾಗಿ ಸಾಕ್ಷಾನ್ ನಾರಾಯಣನನ್ನೇ ಪ್ರತ್ಯಕ್ಷಿಸಿಕೊಂಡು ನಿನ್ನ ವಂಶವು ಪಾವನವಾಗುವುದು ಎಂದಾಗ ಅವರ ವಾಕ್ಯವನ್ನು ನಿಜಭೃತ್ಯ ಸತ್ಯಗೊಳಿಸಲು ಕಂಭದಿಂದ ಹೊರಬಂದನು.

೩) ದಿತಿದೇವಿ ಪತಿಯನ್ನು ಬೇಡಿದಳು. ನನ್ನ ಮಕ್ಕಳಿಬ್ಬರೂ ಶ್ರೀಹರಿಯಿಂದಲೇ ಸಂಹೃತರಾಗಲಿ ಎಂದು ಬೇಡಿದ್ದನ್ನು ಸತ್ಯ ಮಾಡಲೂ...

೪) ನಿಜಭೃತ್ಯರೆಂದರೆ ಬ್ರಹ್ಮದೇವರು ಹಿರಣ್ಯಕಶಿಪು ಕೇಳಿದ ವರಗಳನ್ನು ಕೊಟ್ಟಿರುವುದನ್ನು ಸತ್ಯಮಾಡಲೂ....

೫) ಜಯವಿಜಯರಿಗೆ ಸನಕಾದಿ ಮುನಿಗಳು ನಿಜಭೃತ್ಯರಾದ್ದರಿಂದ ಅವರು ಕೊಟ್ಟ ಶಾಪವನ್ನು ಸತ್ಯಮಾಡಲೂ....

೬) ಜಯವಿಜಯರು ಅಸುರರಾಗಿ ಹುಟ್ಟಿದರೂ ಯಾವ ಬ್ರಾಹ್ಮಣ ಮುನಿಗಳ ಶಾಪದಿಂದ ಮರಣಿಸದೆ ಶ್ರೀಹರಿ ನಿನ್ನ ಕರಕಮಲಗಳಿಂದಲೇ ಸಾವು ಬರಲಿ ಎಂದಿದ್ದನ್ನು ಸತ್ಯಮಾಡಲೂ...

೭) ಹಿರಣ್ಯಕಶಿಪು ತನಗೆ ಮರಣವು ವಿವಿಧ ಪ್ರಕಾರಗಳನ್ನು ಕೇಳಿದಾಗ ಅವನ ಕೋರಿಕೆಯಂತೆ ಸತ್ಯಮಾಡಲೂ.....

೮) ದೇವತೆಗಳು ಹಿರಣ್ಯಕನ ಹಿಂಸೆ ತಡೆಯಲಾರದೆ ಈ ಹರಿಯಲ್ಲಿ ಹೋಗಿ ಕಾಪಾಡು ಎಂದು ಕೇಳಿದಾಗ ಭಗವಂತ ವೇದಗಳಿಗೆ ದೇವತೆಗಳಿಗೆ ಗೋಬ್ರಾಹ್ಮಣರಿಗೆ ದ್ರೋಹ ಮಾಡುವನೋ ಆಗ ನಾನು ಆ ದೈತ್ಯನನ್ನು ಸಂಹರಿಸುತ್ತೇನೆ ಎಂಬ ಆಶ್ವಾಸನೆಯ ಪ್ರಕಾರ ದೇವತೆಗಳು ನಿಜ ಭೃತ್ಯರಾದ್ದರಿಂದ ತನ್ನ ಮಾತನ್ನು ಸತ್ಯಮಾಡಲೂ....

೯) ನಿಜಭೃತ್ಯನೆಂದರೆ ಪ್ರಹ್ಲಾದ. ಹರಿ ಎಲ್ಲಿರುವನೋ ಈ ಕಂಭದಲ್ಲಿದ್ದಾನೆಯೇ ಎಂದು ತಂದೆ ಪ್ರಶ್ನೆಗೆ ಶ್ರೀಹರಿ ಸರ್ವತ್ರವ್ಯಾಪ್ತ ಕಂಭದಲ್ಲೇಕೆ ಎಲ್ಲೆಲ್ಲೂ ಇರುವನು ಎಂಬುದನ್ನು ಹೇಳಿದ ತನ್ನ ಭಕ್ತನ ಮಾತನ್ನು ಸತ್ಯಮಾಡಲೂ....

೧೦) ಶ್ರೀಮುಖ್ಯಪ್ರಾಣರ ಮೂರನೇ ಅವತಾರ ಶ್ರೀಮನ್ಮಧ್ವಾಚಾರ್ಯರು ತಿಳಿದಂತೆ "ನ ಶುಕ್ಲರಕ್ತೈಃ ಪ್ರಭವೋಽಸ್ಯ" ಶ್ರೀನಾರಾಯಣನು ನಮ್ಮಂತೆ ಶುಕ್ಲ ಶ್ರೋಣಿತ ಗರ್ಭದಿಂದ ಬಂದವನಲ್ಲ. ಸ್ವಯಂ ಪ್ರಾದುರ್ಭವಿಸಿದ ಪರಮಾತ್ಮನೆಂಬ ಸಿದ್ಧಾಂತವನ್ನು ಸತ್ಯಮಾಡಲೂ...

ಶ್ರೀಮದಾಚಾರ್ಯರ ತತ್ವವನ್ನು ಅವರ ಭೃತ್ಯರಾದ ಶ್ರೀಮಜ್ಜಯತೀರ್ಥರು ವಿವರಿಸಿದ **"ಶುದ್ಧಾಢನಂ ದೋರು ಸಂವಿದ್ಯುತಿ ಬಲ ಬಹುಲೌದಾರ್ಯ ವೀರ್ಯಾದಿದೇಹಂ"** ಎಂದು

ವರ್ಣಿಸಿ ಶ್ರೀಹರಿಯ ಲಕ್ಷಣವನ್ನು ಸತ್ಯವೇ ಎಂದು ಸಾಧಿಸಲು ನಿಜಭೃತ್ಯರಾದ ಎಲ್ಲಾ ಭಕ್ತ ವರ್ಗದವರು ಕೊಂಡಾಡಿದುದನ್ನು ಸತ್ಯಮಾಡಲು ಕಂಭದಿಂದ ಆವಿರ್ಭವಿಸಿದನೆಂದು ತಿಳಿಯಬೇಕು.

**"ನಮೇ ಭಕ್ತಃ ಪ್ರಣಶ್ಯತಿ"** ಎಂಬ ವಚನಾನುಸಾರ ತನ್ನನ್ನು ನಂಬಿದ ಭಕ್ತರನ್ನು ಕಾಪಾಡಲೂ ಶ್ರೀಹರಿ ಪ್ರಕಟನಾದನು ಎಂದು ತಿಳಿಸಲಾಗಿದೆ.

ಶ್ರೀನೃಸಿಂಹದೇವ ಆ ದುಷ್ಟ ದೈತ್ಯನ ಕರುಳನ್ನು ಅವನ ಉದರದಿಂದ ತೆಗೆಯುತ್ತಾ ಇದ್ದನು. ಇದನ್ನು ನೋಡಿದ ದೇವತೆಗಳಿಗೆ ಆಶ್ಚರ್ಯವಾಯಿತು. ಹಿರಣ್ಯಕನನ್ನು ಸಂಹರಿಸಿ ಆಯಿತಲ್ಲಾ. ಮತ್ತೇಕೆ ಈ ಕರುಳನ್ನು ತೆಗೆಯುತ್ತಿದ್ದಾನೆ ಎಂದು ಆಶ್ಚರ್ಯದಿಂದ ನೋಡುತ್ತಿರುವವರಿಗೆ ಸಮಾಧಾನ ಶ್ರೀಸತ್ಯಧರ್ಮತೀರ್ಥರು ಹೀಗೆ ವಿವರಿಸುತ್ತಾರೆ.

ಈ ಹಿರಣ್ಯಕನ ದೇಹದಲ್ಲಿ ಪ್ರಹ್ಲಾದನಂಥಾ ಭಕ್ತಶಿರೋಮಣಿಗಳು ಇನ್ನೆಷ್ಟಿವೆಯೋ ನೋಡಬೇಕೆಂದು ಹಾಗೆ ಮಾಡಿದನೆಂದು ಚಮತ್ಕಾರವಾಗಿ ತಿಳಿಸುತ್ತಾರೆ.

ಶ್ರೀನೃಸಿಂಹದೇವ ದಾನವನ ಸಂಹಾರಾ ನಂತರ ಅವನ ಸಿಂಹಾಸನದಲ್ಲಿ ಹೋಗಿ ಕುಳಿತದ್ದು ಇನ್ನೂ ಆಶ್ಚರ್ಯ. ಶ್ರೀಹರಿ ಶತೃವಿನ ದುಷ್ಟ ಪಾಪಿ ಸಿಂಹಾಸನವನ್ನೇಕೆ ಅಲಂಕರಿಸಿದ ಎಂದರೆ ಇನ್ನು ಮುಂದೆ ನನ್ನ ಭಕ್ತ ಶಿಖಾಮಣಿ ಈ ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ ಚಕ್ರವರ್ತಿಯಾಗಿ ಈ ಸಿಂಹಾಸನದಲ್ಲಿ ಪವಡಿಸಲು ಶ್ರೀಹರಿ ತಾನು ಮೊದಲು ಅಲಂಕರಿಸಿ ಸಿಂಹಾಸನವನ್ನು ಪವಿತ್ರಗೊಳಿಸಲು ಹಾಗೆ ಮಾಡಿದನೆಂದು ತಿಳಿಸುತ್ತಾರೆ. ಶ್ರೀನೃಸಿಂಹನ ವಿಚಿತ್ರ ಉಗ್ರ ಅತಿರೂಪದಿಂದ ಕಾಣುತ್ತಿರಲು ಬ್ರಹ್ಮಾದಿ ದೇವತೆಗಳು ಭಯದಿಂದ ಕಂಪಿಸುತ್ತಿದ್ದರು. ಪ್ರಹ್ಲಾದನು ಮಾತ್ರ ಶಾಂತ ಮನಸ್ಕನಾಗಿ ಶ್ರೀಹರಿಯ ಅದ್ಭುತ ರೂಪವನ್ನೇ ನೋಡಿ ಆನಂದಪಡುತ್ತಿದ್ದಾಗ ದೇವತೆಗಳು ಕೇಳಿದರು. ಪ್ರಹ್ಲಾದ ನಿನಗೆ ಅಂಜಿಕೆಯಾಗುತ್ತಿಲ್ಲವೇ ? ಎಂದು. ಪ್ರಹ್ಲಾದ ಹೇಳಿದ. ನಾನು ಸಿಂಹದ ಮರಿ. ಮರಿ ತಂದೆ ಸಿಂಹವನ್ನು ನೋಡಿ ಎಂದಿಗಾದರೂ ಅಂಜುವುದೇ ಎಂದನಂತೆ.

ಶ್ರೀ ಪೂಜ್ಯ ವಾದಿರಾಜ ಸ್ವಾಮಿಗಳು ದಶಾವತಾರಸ್ತುತಿಯಲ್ಲಿ ನರಸಿಂಹ ದೇವರನ್ನು ಸ್ತೋತ್ರ ಮಾಡುತ್ತಾ ಚಮತ್ಕಾರವಾಗಿ ತಿಳಿಸುತ್ತಾರೆ. ವೇದವ್ಯಾಸರಿಗೆ ಕಪಿಲ ಭಗವಂತನಿಗೆ ವಾಮನನಿಗೆ ಶ್ರೀರಾಮಕೃಷ್ಣರಿಗೆ ಮಾತಾಪಿತೃಗಳಿಂದ ಹುಟ್ಟಿದರು ಎನ್ನುವ ದೋಷನಿರಾಕರಿಸಿ ಈಗ ಹೇಳಿ ನೃಸಿಂಹ ದೇವನಿಗೆ ಯಾರು ತಂದೆ ತಾಯಿ ? ಆದ್ದರಿಂದ ನೃಸಿಂಹದೇವರನ್ನು **"ಸ್ತಂಭಾರ್ಭಕ"** ಕಂಭದ ಮಗನೆಂದು ವರ್ಣಿಸಿರುತ್ತಾರೆ.

---



## ಶ್ರೀನೃಹರಿ ಪಾಹಿ

**ಓಂ ಸತ್ಯಂವಿಧಾತುಂ ನಿಜ ಭೃತ್ಯ ಭಾಷಿತಂ**
**ವ್ಯಾಪ್ತಿಂಚ ಭೋತೇಷ್ವಭಿಲೇಷು ಚಾತ್ಮನಃ**
**ಅದೃಶ್ಯತತ್ಯದ್ಭುತ ರೂಪಮುದ್ವಹನ್**
**ಸ್ತಂಭೇ ಸಭಾಯಾಂ ನ ಮೃಗಂ ನಮಾನುಷಂ ॥**

ಹೀಗೆ ಶ್ರೀಮನ್ನಾರಾಯಣನು ಸಭಾ ಮಧ್ಯದಲ್ಲಿರುವ ಕಂಭವನ್ನು ಸೀಳಿಕೊಂಡು ಹೊರಗೆ ಆವಿರ್ಭೂತನಾದ.

ಹೀಗಿದ್ದನೆಂದರೆ ಅತ್ಯದ್ಭುತ ರೂಪ ಲೋಕ ವಿಲಕ್ಷಣ ಆಕೃತಿ ನರನೂ ಆಗದೇ ಸಿಂಹನೂ (ಮೃಗವೂ) ಆಗದೆ ಎರಡರ ಸಮ್ಮಿಳನ ರೂಪ ಧಾರಣ ಮಾಡಿದ್ದನ್ನು ವರ್ಣಿಸುವನಾದ ಹಿರಣ್ಯಕಶಿಪುವಿನ ಮಾತಿನಿಂದಲೇ ತಿಳಿಯೋಣ.

ಅರ್ಧ ಕುತ್ತಿಗೆಯವರೆಗೆ ನರಾಕಾರ ಕುತ್ತಿಗೆಯಿಂದ ಮೇಲೆ ಅರ್ಧ ಸಿಂಹಾಕಾರವನ್ನು ವೀಕ್ಷಿಸಿ ಆಶ್ಚರ್ಯಭರಿತನಾಗಿ ಏನಿದು ಪ್ರಾಣಿ ?

**ನಸತ್ವಮೇವಂ ಪರಿತೋವಿಪಶ್ಯನ್ಸ್ತಂಭಸ್ಯ ಮಧ್ಯಾದನು ನಿರ್ಜೀಹಾನಮ್**
**ನಾಯಂ ಮೃಗೋ ನಾಪ್ಯಮೃಗೋ ವಿಚಿತ್ರಮಹೋಕಿಮೇತೆನ್ನೃಗೇಂದ್ರರೂಪಮ್**

ಶ್ರೀಹರಿಯ ಈ ರೀತಿ ವಿಚಿತ್ರ ರೂಪದಿಂದ ಬಂದುದನ್ನು ಕಂಡು ಹಿರಣ್ಯಕಶಿಪು ನಾಮಕರಣ ಮಾಡಿದನು ನೃಗೇಂದ್ರ – "ನೃಸಿಂಹ" (ನೃಹರಿ) ಎಂದು.

ಇಂತಹ ಅತದ್ಭುತ ರೂಪ ನೋಡಲಾದೀತೇ ? ಬಂಗಾರದಂತೆ ಹೊಳೆಯುವ ಕಣ್ಣುಗಳು ಪ್ರಕಾಶಮಾನವಾದ ಕೇಸರಿ ಆ ಎಂದ ತೆಗೆ ಬಾಯಿ ಕೋರೆಗಳು, ಸಿಂಹ ಗರ್ಜನೆ, ಬಾಯಿ ತೆರೆದಿರುವುದು ಒಂದು ಪರ್ವತ ಗುಹೆಯಂತೆ ವಿಶಾಲವಾಗಿ, ವಿಶಾಲವಾದ ಎದೆ, ನಡುವು (ಸೊಂಟವು) ಸಣ್ಣದಾಗಿ ಕೈಗಳು ಎಲ್ಲ ಕಡೆ ಹರಡಿರುವಾಗ ಅದರ ಉಗುರುಗಳೇ ತೀಕ್ಷ್ಣ ಆಯುಧಗಳಂತೆ ಹೊಳೆಯುತ್ತಿತ್ತು. ಇಂತಹ ವಿಚಿತ್ರ ರೂಪವನ್ನು ನೋಡಿ ಯಾರಿಗೂ ಧೈರ್ಯ ಬರಲಿಲ್ಲ. ದೈತ್ಯರನ್ನು ತನ್ನ ಹಸ್ತದಲ್ಲಿ ಚಕ್ರಾಯುಧದಿಂದ ಪಡೆದು ಓಡಿಸುತ್ತಿದ್ದನು.

ಶ್ರೀಹರಿಯ ವಿಚಿತ್ರ ರೂಪವನ್ನು ವೀಕ್ಷಿಸಿ ರಾಕ್ಷಸೇಂದ್ರ "ಏನಿದು. ನಾನು ನನ್ನ ಮಗನನ್ನು ಸಂಹರಿಸಲು ಹೊರಟೆ. ಆದರೆ ನನ್ನ ಸಹಜ ಶತ್ರು ಹರಿ ಈ ರೂಪ ಧರಿಸಿ ಕೊಲ್ಲಲು ಇದೊಂದು ವೇಷವೇ ಆಗಿರಬೇಕು" ಎಂದು ಚಿಂತಿಸಿ ಗರ್ಜಿಸುತ್ತಾ ಗದೆಯನ್ನು ಹಿಡಿದು ಶ್ರೀನರಹರಿಯ ಮೇಲೇರಿ ಹೋದನು.

ಪತಂಗವು ದೀಪವನ್ನು ನುಂಗಲು ಹೋಗಿ ಅಲ್ಲಿಯೇ ಸುಟ್ಟು ಭಸ್ಮವಾದಂತೆ ಆಯಿತು.

ಶ್ರೀಹರಿಯನ್ನು ಅಟ್ಟಹಾಸ ಮಾಡುತ್ತಾ ಹೊಡೆಯಲು ಪ್ರಯತ್ನಪಟ್ಟನು. ವಜ್ರ ಕಠೋರ ಶರೀರವುಳ್ಳ ಶ್ರೀನರಸಿಂಹನಿಗೆ ಸೋಕಲೇ ಇಲ್ಲ. ನೃಸಿಂಹದೇವರ ಅವತಾರ ಮಧ್ಯಾಹ್ನ (ಅಭಿಜಿತ್)ವಾಯಿತು. ಕೂಡಲೇ ಏಕೆ ಸಂಹರಿಸಲಿಲ್ಲವೆಂದರೆ ದುರುಳನ ವರವನ್ನು ಸತ್ಯ ಮಾಡಲು ಸಂಜೆ ಸಂಧ್ಯಾಕಾಲದವರೆಗೆ ಅವನೊಂದಿಗೆ ಯುದ್ಧಮಾಡಿದನು.

ಶ್ರೀ ತ್ರಿವಿಕ್ರಮಪಂಡಿತಾಚಾರ್ಯರು ಶ್ರೀಹರಿವಾಯುಸ್ತುತಿಯನ್ನು ರಚಿಸಿದರು. ತತ್ಪೂರ್ವದಲ್ಲಿ ಎರಡು ಶ್ಲೋಕಗಳಿಂದ ಶ್ರೀಲಕ್ಷ್ಮೀನೃಸಿಂಹರ ನಖಗಳ ಸ್ತೋತ್ರಗಳನ್ನು ಅಲಂಕಾರವಾಗಿ ಶ್ರೀಮದಾಚಾರ್ಯರು ರಚಿಸಿರುತ್ತಾರೆ.

**ಪಾಂತ್ವಸ್ಮಾನ್ ಪುರುಹೂತವೈರಿಬಲವನ್ಮಾತಂಗಮಾದ್ಯದ್ಘಟಾ**
**ಕುಂಭೋಚ್ಚಾದ್ರಿವಿಪಾಟನಾಧಿಕಪಟುಪ್ರತ್ಯೇಕವಜ್ರಾಯಿತಾಃ ।**
**ಶ್ರೀಮತ್ಕಂಠೀರವಾಸ್ಯಪ್ರತತಸುನಖರಾ ದಾರಿತಾರಾತಿದೂರ**
**ಪ್ರಧ್ವಸ್ತಧ್ವಾಂತಶಾಂತಪ್ರವಿತತಮಾನಸಾ ಭಾವಿತಾ ನಾಕಿವೃಂದೈಃ ॥**

ಈ ಶ್ಲೋಕದಲ್ಲಿ ಮೊದಲ ಎರಡು ಚರಣಗಳಿಂದ ''ಶಾರ್ದೂಲ ವಿಕ್ರೀಡಿತ ವೃತ್ತ'' ಎರಡನೇ ಎರಡು ಚರಣಗಳು ''ಸ್ರಗ್ಧರಾ ವೃತ್ತ''ದಲ್ಲಿ ಹೆಣೆಯಲಾಗಿದೆ. ಇಂತಹ ವೃತ್ತವನ್ನು **''ಉಪಜಾತಿ ವೃತ್ತ''**ವೆಂದು ಕರೆಯಲಾಗಿದೆ.

ಶ್ರೀನೃಸಿಂಹದೇವರ ಅವತಾರವೂ ಮಿಶ್ರರೂಪದಲ್ಲಿದ್ದುದರಿಂದ ಶ್ರೀಮದಾಚಾರ್ಯರು ನೃಸಿಂಹದೇವರು ಮಿಶ್ರರೂಪದಲ್ಲಿದ್ದುದನ್ನು ಕಂಡು ಎರಡು ಶ್ಲೋಕಗಳು ಮಿಶ್ರವೃತ್ತದಲ್ಲಿ ರಚಿಸಲ್ಪಟ್ಟಿದೆ.

ಹಿರಣ್ಯಕಶಿಪು ಕ್ಷುಲ್ಲಕ ರಾಕ್ಷಸನಲ್ಲ. ಮಹಾಬಲಶಾಲಿ. ವರಗಳಿಂದ ಮದ್ದಾನೆಯಂತಿರುವವನ ಪೌರುಷವನ್ನು ತೋರಿಸಲು ಮಹಾಪುರುಷ ರಾಜನಾದ ಶ್ರೀಹರಿ ಅವನೊಂದಿಗೆ ಯುದ್ಧವೆಂಬ ಆಟವಾಡಿದನು. ಬೆಕ್ಕು ಒಂದು ಇಲಿ (ಮೂಷಕ)ಯನ್ನು ಹಿಡಿದು ಅದರೊಂದಿಗೆ ಸ್ವಲ್ಪ ಆಟವಾಡಿ ನಂತರ ಫಕ್ಕನೆ ಕೊಂದುಬಿಡುವಂತೆ ಈ ಮೂಷಕನಂತಿರುವ ದೈತ್ಯನನ್ನು ಸಂಜೆಯವರೆಗೆ ಆಟವಾಡಿದ. ದೇವತೆಗಳು ಭಯದಿಂದ ಸ್ವಾಮೀ, ಹೀಗೆ ಸಂಹರಿಸದೆ ಏಕೆ ತಡೆಮಾಡುತ್ತಿದ್ದಾನೆ ? ಎಂದು ಚಿಂತಿಸುತ್ತಿದ್ದರು.

ಶ್ರೀಹರಿ ರಾಕ್ಷಸಾಧಮನನ್ನು ಬಿಗಿಯಾಗಿ ಹಿಡಿದು ಅವನನ್ನು ಎಳೆದುಕೊಂಡು ಸಭಾ ಮಹಾದ್ವಾರದ ಬಳಿ ತಂದು ಹೊಸ್ತಿಲಿನ ಮೇಲೆ ಕುಳಿತನು. ದೈತ್ಯನನ್ನು ತನ್ನ ತೊಡೆಯ ಮೇಲೆ ಅಡ್ಡವಾಗಿ ಮಲಗಿಸಿ ಅವನ ಉದರವನ್ನು ತನ್ನ ತೀಕ್ಷ್ಣವಾದ ಉಗುರುಗಳಿಂದ ಬಗೆದಾಗ ಅವನ ದೇಹದಿಂದ ರಕ್ತವು ಚಿಮ್ಮಿತು. ಅವನ ರಕ್ತ ಚಿಮ್ಮಿದಾಗ ಶ್ರೀಹರಿಯ



ಕೇಸರಗಳು ಕೆಂಪಾಗಿ ಹೊಳೆಯಲಾರಂಭಿಸಿತು. ರಕ್ತ ಪ್ರವಾಹವೇ ಆಯಿತು. ಬ್ರಹ್ಮಾದಿ ದೇವತೆಗಳು ಸಂತೋಷಭರಿತರಾಗಿ ಜೈಜೈಕಾರ ಮಾಡಿದರು. ನರಸಿಂಹದೇವ ದುಷ್ಟನ ಸಂಹಾರವಾದ ನಂತರ ಅವನ ಶರೀರವನ್ನು ಕೆಳಗೆ ಬಿಸಾಡಿದನು.

ನಂತರ ಸಿಂಹಾಸನದಲ್ಲಿ ಆಸೀನನಾಗಿ ಎಲ್ಲ ಕಡೆ ತನ್ನ ದೃಷ್ಟಿ ಬೀರಿದನು. ಕೋಪವು ಕಡಿಮೆಯಾಗಲಿಲ್ಲ. ಕ್ರೋಧವನ್ನು ಅಂಜಿ ದೂರದಲ್ಲೇ ನಿಂತು ವಿಸ್ಮಯದಿಂದ ಶ್ರೀಹರಿಯ ಈ ವಿಲಕ್ಷಣ ರೂಪವನ್ನು ಬ್ರಹ್ಮದೇವರೇ ಮೊದಲಾಗಿ ಸ್ತೋತ್ರ ಮಾಡಲಾರಂಭಿಸಿದರು. ೧೭ ಶ್ಲೋಕಗಳ ಸ್ತುತಿ ಇರುವುದು. ಆ ಶ್ಲೋಕಗಳ ಸಾರಾಂಶ ಮಾತ್ರ ತಿಳಿಸಲಾಗಿದೆ.

**ಬ್ರಹ್ಮಾಂಡಯೋ ನೃಸಿಂಹಸ್ಯ ಶಂಕಯಾ ಕುಲ ಚೇತಸಃ ।**
**ಆರಾದೇವಾಸ್ತುವನ್ ಸಪ್ತದಶ ಶ್ಲೋಕೈಃ ಪೃಥಕ್ ಪೃಥಕ್ ॥**

ಬ್ರಹ್ಮ, ರುದ್ರ, ಇಂದ್ರ, ಋಷಿಗಳು, ಪಿತೃಗಳು, ಸಿದ್ಧರು, ವಿದ್ಯಾಧರರು, ನಾಗರು, ಮನುಗಳು, ಪ್ರಜಾಪತಿಗಳು, ಗಂಧರ್ವರು, ಚಾರಣರು, ಯಕ್ಷರು, ಕಿಂ ಪುರುಷರು, ವೇತಾಳರು, ಕಿನ್ನರರು, ವಿಷ್ಣುಪಾರ್ಷದರು ಹೀಗೆ ಕ್ರಮವಾಗಿ ಶ್ರೀಹರಿಯನ್ನು ಸ್ತೋತ್ರ ಮಾಡಿದ್ದರಿಂದ ದೇವಲೋಕದಲ್ಲಿಯೂ ತಾರತಮ್ಯವಿರುವುದೆಂದು ತಿಳಿಸಿದ್ದು ಗಮನಾರ್ಹ. ಇಲ್ಲಿ ಮುಖ್ಯವಾಗಿ ಬ್ರಹ್ಮದೇವರ, ರುದ್ರದೇವರ, ಇಂದ್ರದೇವರ ಸ್ತೋತ್ರವನ್ನು ಮಾತ್ರ ವಿವರಿಸಲಾಗಿದೆ.

**ಬ್ರಹ್ಮೋವಾಚ**

**ನತೋಽಸ್ಮ್ಯನಂತಾಯ ದುರಂತಶಕ್ತಯೇ**
**ವಿಚಿತ್ರವೀರ್ಯಾಯ ಪವಿತ್ರಕರ್ಮಣೇ ।**
**ವಿಶ್ವಸ್ಯಸರ್ಗಸ್ಥಿತಿಸಂಯಮಾನ ಗುಣೈಃ**
**ಸ್ವ ಲೀಲಯಾ ಸಂದಧತ್ತೇಽವ್ಯಯಾತ್ಮನೇ ॥**

ಅನಂತಗುಣಗಳಿಂದ ದೇಶದಲ್ಲಿ ಸದಾ ಜ್ಞಾನ, ಅತಿಯಾದ ಶಕ್ತಿ ಸಾಮರ್ಥ್ಯಗಳ ಸ್ವರೂಪನಾಗಿರುವೆ. ವಿಚಿತ್ರ ಚರಿತೆಯುಳ್ಳವನಾದ ನಿನಗೆ ನಮೋನಮಃ. ಸೃಷ್ಟಿಸ್ಥಿತ್ಯಾದಿಗಳನ್ನು ಲೀಲಾಜಾಲವಾಗಿ ಮಾಡಿದ ನಿತ್ಯಾನಂದ ಅವ್ಯಯನು.

**ರುದ್ರ ಉವಾಚ**

**ಕೋಪಕಾಲೋ ಯುಗಾಂತಸ್ತೆ ಹತೋಽಯಮಸುರೋಽಲ್ಪಕಃ ।**
**ತತ್ಸಾತಂಪಾಹ್ಯನುಸೃತಂ ಭಕ್ತಂ ತೇ ಭಕ್ತವತ್ಸಲ ॥**

ನೀನು ಭಕ್ತವತ್ಸಲನಲ್ಲವೇ. ಪ್ರಳಯ ಕಾಲದಲ್ಲಿ ಬ್ರಹ್ಮಾಂಡವನ್ನು, ನಮ್ಮೆಲ್ಲರನ್ನು ನುಂಗುವಾಗ ಮಾಡುವ ಸಿಟ್ಟ ಈಗೇಕೆ ಸ್ವಾಮಿ. ಕ್ರಿಮಿಯಂತಿದ್ದ ರಾಕ್ಷಸಾಧಮ ಸಂಹೃತನಾದನು. ನಿನ್ನನ್ನೇ ಉಪಾಸಿಸಿ ನಂಬಿ ಶರಣಾದ ಭಕ್ತನಾದ ಪ್ರಹ್ಲಾದನನ್ನು ಕಾಪಾಡು.

ಇಂದ್ರ ಉವಾಚ

**ಪ್ರತ್ಯಾಸೀತಾಃ ಪರಮಭವತಾ ನಃ ಸ್ವಭಾಗಾಃ ।**
**ದೈತ್ಯಾಕಾಂತಂ ಹೃದಯ ಕಮಲಂ ತ್ವದ್ಗೃಹಂ ಪ್ರತ್ಯಬೋಧಿ ।**
**ಕಾಲಗ್ರಸ್ತಂ ಕಿಯದಿದಮಹೋ ನಾಥ ಶುಶ್ರೂಷತಾಂ ತೇ**
**ಮುಕ್ತಿಸ್ತೇಷಾಂ ನಹಿ ಬಹುಮತಾ ನಾರಸಿಂಹಾರಪರ್ಯೈಃ ಕಿಮ್ ॥**

ನಿನ್ನ ದಯೆ ಏನೆಂದು ವರ್ಣಿಸಲಿ, ದೈತ್ಯನನ್ನು ಸಂಹರಿಸಿದ್ದರಿಂದ ದೇವತೆಗಳಾದ ನಮಗೆ ಹವಿರ್ಭಾಗ ಪುನಃ ಬರುವಂತೆ ಮಾಡಿದೆ. ನಮ್ಮ ಹೃದಯದಲ್ಲಿ ನೀನು ಮೊಗ್ಗಿನಂತೆ ಇದ್ದೆ. ಈಗ ನೀನು ನಮ್ಮ ಹೃದಯವೆಂಬ ವಸತಿಯಲ್ಲಿ ಅರಳಿ ಪ್ರಕಾಶವಾಗುವಂತೆ ಮಾಡಿದೆ. ಏಕಾಂತಭಕ್ತರಿಗೆ ನಿನ್ನ ಉತ್ತಮ ಹೃದಯವನಾಶ್ರಯಿಸು. ಅಪೇಕ್ಷೆ ಇದ್ದವರಿಗೆ ಅದೇ ಪುರುಷಾರ್ಥ. ಇದನ್ನು ಹೊರತು ಮೋಕ್ಷವೂ ಬೇಡವೆನ್ನುತ್ತಾರೆ. ಅಂತಹ ಭಕ್ತರಿಗೆ ನಶ್ವರ ಸ್ವರ್ಗದಿಂದ ಯಾವ ಪ್ರಯೋಜನವಿದ್ದಿತು.

ಹೀಗೆ ಮುನಿಗಳೆಲ್ಲರೂ ಭಗವಂತನ ಮಹಾಮಹಿಮೆಯನ್ನು ತಮ್ಮ ತಮ್ಮ ಯೋಗ್ಯತಾನುಸಾರ ಸ್ತೋತ್ರಮಾಡಿ ಕೊಂಡಾಡಿದರು.

ತಪಸ್ಸು, ಯಾಗ ಕುಂಠಿತವಾಗಿತ್ತು. ಈಗ ಅವು ಪುನಃ ಲಭ್ಯವಾಗುವಂತೆ ಜ್ಞಾನಕಾರ್ಯ ಅವಿಘ್ನವಾಗಿ ನಡೆಯುವಂತೆ ಆಯಿತು. ತಪಸ್ಸು ಎಂದರೆ ಆಲೋಚನೆ. ಜ್ಞಾನಕ್ಕೆ ಸಮನಾದ ತಪಸ್ಸನ್ನು ಮಾಡುವುದನ್ನು ದುಷ್ಟ ನಿಲ್ಲಿಸಿದ್ದ. ಈಗ ತಪೋರೂಪಿ ಜ್ಞಾನ ಚಿಂತನೆ, ಆಲೋಚನೆ ಪುನರುಜ್ಜೀವನವಾಯಿತು.

ಸರಿ. ಆದರೆ ತಪಸ್ಸು ಅನೇಕ ಯುಗ ಕಲ್ಪಗಳಲ್ಲಿ ನಾಶವಾಗುವುದು, ಪುನಃ ಹುಟ್ಟುವುದು, ನಡೆದೇ ಇದ್ದಿತು. ಈಗ ರಾಕ್ಷಸನು ನಾಶಮಾಡಿದ್ದರಿಂದ ಉಜ್ಜೀವವಾಯಿತು ಎನ್ನುವುದನ್ನು ಹೇಗೆ ತಿಳಿಯಬೇಕು? ಎಂದರೆ

**ತದ್ ಪ್ರವಿಲುಪ್ತಮಿತಿಸಾದೃಶ್ಯಾಭೇದವಚನಮ್ ।**
**ಆಲೋಚನಮೇವ ತಪಃ । ಯಸ್ಯ ಜ್ಞಾನಮಯಂ ತಪಃ ॥** ಭಾ.ತಾ. (ಇತಿ ಶೃತಿಃ)

ತಪಸ್ಸು, ಆಲೋಚನೆ ಎನ್ನುವುದು ಪ್ರವಾಹದಂತೆ ಇದ್ದೇ ಇದ್ದಿತು. ಹಿಂದೆ ನಾಶವಾಗಿತ್ತು ಎಂದರೆ ಲುಪ್ತವಾಗಿತ್ತು. (ಕಳವಳ + ಆತಂಕ). ಗಾಬರಿಯಿಂದ ಮರೆಮಾಡಲ್ಪಟ್ಟಿತು. ಈಗ ದೈತ್ಯನಿಂದ ತಿರೋಹಿತವಾಗಿತ್ತು ಎಂದು ತಿಳಿಯಬೇಕು. ಹೀಗೆ ಶ್ರೀಮದಾಚಾರ್ಯರು **''ಯಸ್ಯ ಜ್ಞಾನಮಯಂ ತಪಃ''** ಎಂದು ತಿಳಿಸುತ್ತಾರೆ. (ಭಾಗ.ತಾ.)

ಹೀಗೆ ಬ್ರಹ್ಮದೇವರೇ ಮೊದಲಾಗಿ ಎಲ್ಲರೂ ಪರಿಪರಿಯಾಗಿ ಸ್ತೋತ್ರ ಮಾಡಿದರೂ ನರಸಿಂಹ ದೇವರ ಉಗ್ರ ರೂಪ ಶಾಂತವಾಗಲಿಲ್ಲ.



**ಏವಂ ಸುರಾದಯಃ ಸರ್ವೇ ಬ್ರಹ್ಮರುದ್ರಪುರಸ್ಸರಾಃ ।**
**ನೋಪೇತುಯಶಕನ್ ಮನ್ಯುಸಂಗ್ರಹಂ ಸುದರಾಸದಮ್ ॥**

ಈ ಶ್ಲೋಕದಲ್ಲಿ **''ಮನ್ಯುಸಂಗ್ರಹಂ''** ಎಂದಿದೆ. ಭಗವಂತನಿಗೆ ಕೋಪವೇ ಇರುವುದಿಲ್ಲ. ಕೋಪಿಸುವುದು ಒಂದು ದೋಷ. ನಿರ್ದೋಷನಾದ ನರಸಿಂಹನು ಅತಿ ಉಗ್ರರೂಪದಿಂದ ಕಾಣಿಸಿದ್ದು ದುಷ್ಟ ಜನ ಅಭಕ್ತರಿಗೆ ಹಾಗೆ ಕಾಣಿಸಿದನೇ ಹೊರತು ಜ್ಞಾನಾನಂದಮಯನಾದವನಿಗೆ ಸಿಟ್ಟು ಸಂಭಾವಿತವೇ ಆಗುವುದಿಲ್ಲ.

ಹಾಗಾದರೆ ಬ್ರಹ್ಮ ರುದ್ರಾದಿ ದೇವತೆಗಳು ಸಕಲರು ಶ್ರೀನರಸಿಂಹನ ಉಗ್ರ ರೂಪ ಕಂಡರಲ್ಲಾ ಎಂದರೆ, ಬ್ರಹ್ಮಾದಿ ದೇವತೆಗಳು ಭಗವಂತನ ಈ ರೂಪಕ್ಕೆ ಹೆದರುವರೇ? ಎಂದಿಗೂ ಸಾಧ್ಯವಿಲ್ಲ. ಭಕ್ತರಾದ ದೇವತೆಗಳು ಶ್ರೀಹರಿ ಸಂಕಲ್ಪಾನುಸಾರ ಭಯಗ್ರಸ್ಥರಾದವರಂತೆ ನಟಿಸಿದರು. ಇವನ ಇಚ್ಛೆ ಹಾಗಿತ್ತು. ಅಂತೆಯೇ ವಿಜ್ಞಾಪಿಸಿದರು.

ರಾಕ್ಷಸಪುತ್ರ ಪ್ರಹ್ಲಾದನೇ ಹೆದರಲಿಲ್ಲವೆಂದ ಮೇಲೆ ಬ್ರಹ್ಮರುದ್ರರು ಅಂಜುವುದುಂಟೆ? ಅವನ್ನು ಅನುಗ್ರಹಿಸಿ ಬೇಕೆಂದೇ ಹಾಗೆ ಕಾಣಿಸಿಕೊಂಡನು.

**ಉಗ್ರೋಽಪಿ ಅನುಗ್ರಹಏವಾಯಂ ಸ್ವಪೋತಾನಾಂ ನೃಕೇಸರಿ ।**
**ಕೇಸರೀಽಪ ಸ್ವಪೋತಾನಾಂ ಅನ್ಯೇಷಾಮುಗ್ರವಿಗ್ರಹಃ ॥**

ಆದರೂ ಲೋಕ ವಿಡಂಬನಾರ್ಥವಾಗಿ ಬ್ರಹ್ಮದೇವರು ತಾಯಿ ಲಕ್ಷ್ಮೀದೇವಿಯನ್ನು, ಮಾತೇ ನಿಮ್ಮ ಯಜಮಾನರನ್ನು ಶಾಂತರಾಗಲು ಪ್ರಾರ್ಥಿಸು ಎಂದರು. ಲೋಕದಲ್ಲಿ ''ಊರಿಗೆ ಸರದಾರ ಮನೆ ಮಡದಿಗೆ ಪಿಂಜಾರ'' ಎನ್ನುವಂತೆ ಶ್ರೀಹರಿ ನೀನು ವಿನಂತಿಸಿದ ತಕ್ಷಣ ತಣ್ಣಗಾಗುತ್ತಾನೆ.

ಪತ್ನಿ ಯಾಕ್ರಿ ಸಿಟ್ಟು ಬಿಡ್ರಿ ಅಂದಾಗ, ಪತಿ ಏನಿಲ್ಲ ಹಾಗೆ ಮಾಡದೆ, ಅಂತ ಶಾಂತನಾಗುವುದನ್ನು ಕಾಣುತ್ತೇವೆ.

ಹಾಗೆ ಶ್ರೀ ಲಕ್ಷ್ಮೀದೇವಿ ಹೋಗಿ ನಿಂತಾಕ್ಷಣ ಹರಿ ಕೋಪ ಮಂಜುಗಡ್ಡೆಯಂತೆ ಕರಗಿ ಹೋಗಬಹುದು ಎಂದುಕೊಂಡರೆಂದು ಭಾವಿಸೋಣ. ಆಗ ಲಕ್ಷ್ಮೀದೇವಿ, ''ಇವರು ನನ್ನ ಯಜಮಾನರೇ ಆಗದಿದ್ದಾಗ ಶಾಂತರಾಗಿ ಅಂತ ನಾನು ಯಾರಿಗೆ ಹೇಳಬೇಕು ? ಏಕೆಂದರೆ ಇಂತಹ ವಿಚಿತ್ರ ರೂಪವನ್ನು ಹಿಂದೆ ನೋಡಿಯೇ ಇಲ್ಲ'' ಎಂದಳು.

ಹೀಗೆ ಹೇಳಬೇಕಾದರೆ ಶ್ರೀಹರಿಯ ಆಟದಂತೆ ತಾನೂ ಆಡುವಳು. ನಿತ್ಯಮುಕ್ತಳಾದ ಲೋಕಮಾತೆ ಇಂತಹ ಕೋಪಗಳನ್ನು ಪಡೆದ ಸ್ವಾಮಿಯನ್ನು ಎಷ್ಟೋ ಸಲ ಕಂಡಿದ್ದಳು.

ಸ್ವಲ್ಪ ಕಾಲದ ಹಿಂದೆ ತನ್ನ ಪತಿ ವರಾಹರೂಪಿಯಾಗಿ ಕೋಪದಿಂದ ಹಿರಣ್ಯಾಕ್ಷನನ್ನು

ಸಂಹರಿಸಿದ ಮೇಲೆ ಆ ರೂಪವನ್ನು ನೋಡಿ ಶ್ರೀಶನ ತೊಡೆಯ ಮೇಲೆ ಅಲಂಕೃತಳಾಗಿದ್ದಳು ಲಕ್ಷ್ಮೀ ವರಾಹನೆಂದು.

ಹಾಗಾದರೆ ಈಗೇಕೆ ನರಸಿಂಹನ ಬಳಿ ಹೋಗಿ ಪ್ರಶಾಂತನಾಗು ಏಕೆ ಹೇಳಲಿಲ್ಲವೆಂದರೆ, ಲಕ್ಷ್ಮೀದೇವಿ ಬ್ರಹ್ಮಾದಿಗಳಿಗೆ ಉತ್ತರಿಸುತ್ತಾಳೆ.

ಈ ಉಗ್ರ ವಿಚಿತ್ರ ರೂಪ ಶ್ರೀಹರಿ ಪಡೆದದ್ದು ನನ್ನ ನಿಮ್ಮ ಪ್ರಾರ್ಥನೆಗಾಗಿ ಅಂತ ತಿಳಿಯಬೇಡಿ. ಶ್ರೀಹರಿ ನರಸಿಂಹನಾಗಿ ಅವತರಿಸಿದ್ದು ಭಕ್ತ ಪ್ರಹ್ಲಾದನು ತೋರಿಸಿದ ಅಚಂಚಲ ಭಕ್ತಿ ವಾತ್ಸಲ್ಯವನ್ನು ಜಗತ್ತಿಗೆ ಪ್ರಕಟಿಸಲು ನಿಂತಿರುವಾಗ ಬಾಲಕನ ಮುಗ್ಧ ಸ್ತೋತ್ರವನ್ನು ಕೇಳಬೇಕೆಂದೇ ಇರುವಾಗ, ನಾನು ಭಕ್ತವತ್ಸಲನ ಭಕ್ತನ ಮಧ್ಯೆ ಏಕೆ ಹೋಗಲಿ ? ಕೂಡದು ಎಂದಳು.

ಭಗವಂತ ನರಸಿಂಹಾವತಾರ ಪಡೆದದ್ದು ನಿಮ್ಮ ಪ್ರಾರ್ಥನೆಗೆ ಅಂತ ತಿಳಿಯಬಾರದು. ಏಕಾಂತ ಭಕ್ತನನ್ನು ಅನುಗ್ರಹಿಸಬೇಕೆಂದೇ ಅವತರಿಸಿರುವನು ಎಂದು.

ಪ್ರಹ್ಲಾದನನ್ನೇ ಕೇಳಿರಿ. ತನ್ನ ಸ್ವಾಮಿಯನ್ನು ಸ್ತುತಿಸಿ ಶಾಂತನಾಗು ಎಂದು. ಹೀಗೆ ಲಕ್ಷ್ಮೀದೇವಿಯೂ ಭಯಪಟ್ಟವಳಂತೆ ತೋರಿಸಿದಳು.

**ಅದೃಷ್ಟಾಶ್ರುತ ಪೂರ್ವತ್ವಾತ್ ಅನ್ಯೈಃ ಸಾದಾರಣ್ಯೈಃಜನ್ಯೈಃ ।**
**ನೃಸಿಂಹಂ ಶಂಕಿತೇವ ಶ್ರೀಃ ಲೋಕವೋಹಾಯ ನೋ ಯಯೌ ॥** ಭಾಗ.ತಾ.

ಬ್ರಹ್ಮದೇವ ನಿನ್ನ ನನ್ನ ಭಕ್ತಿ ಶ್ರೀಹರಿಯಲ್ಲಿರುವುದೆಂದು ಜಗತ್ಪ್ರಸಿದ್ಧಿ. ಆದರೆ ಪ್ರಸ್ತುತ ಪ್ರಸಂಗದಲ್ಲಿ ಭಕ್ತಾಗ್ರಣಿ ದೈತ್ಯ ಬಾಲಕನು ಶ್ರೀನರಸಿಂಹನನ್ನು ಏಕಪ್ರಕಾರ ತಾಯಿಯ ಉದರದಲ್ಲಿದ್ದಾಗಿನಿಂದಲೂ ಭಗವಂತನನ್ನು ಅನನ್ಯ ಭಕ್ತಿಯಿಂದ ಭಜಿಸಿ ಸ್ಮರಣೆ ಮಾಡುವುದು ಹೆಚ್ಚಲ್ಲವೇ. ಅವನ ಕೀರ್ತಿ ತ್ರಿಲೋಕಗಳಲ್ಲಿ ತ್ರಿಕಾಲಗಳಲ್ಲಿಯೂ ಪ್ರಖ್ಯಾತವಾಗಬೇಕೆಂದು ನನ್ನ ಸ್ವಾಮಿಯ ಸಂಕಲ್ಪವಿದೆ. ತಸ್ಮಾತ್ ಪ್ರಹ್ಮಾದನನ್ನೇ ಕೇಳಿರಿ ಎಂದು, ಶ್ರೀನೃಹರಿ ಪ್ರಹ್ಲಾದನ ಮಂದಸ್ಮಿತ ಮುಖಾರವಿಂದದಿಂದ ಅವನ ಸ್ತೋತ್ರವನ್ನು ಕೇಳಬೇಕೆಂದಿರುವನು.

ತಂದೆ ತನ್ನನ್ನು ದ್ವೇಶಿಸಿ, ಕೊಲ್ಲಲೂ ಪ್ರಯತ್ನಪಟ್ಟ, ಆದರೂ ಪ್ರಹ್ಲಾದನು ತನ್ನ ಜನಕನಿಗೆ ಪ್ರೀತಿ ಗೌರವ ತೋರಿಸುತ್ತಲೇ ಇದ್ದ. ಈಗ ತನ್ನನ್ನು ಪಡೆದವನನ್ನು ಕಣ್ಣೆದುರಿಗೇ ಸೀಳಿ ಉದರ ಭೇದನ ಮಾಡಿ ಸಂಹಾರ ಮಾಡಿದಾಗಲೂ ವಿಚಲನಾಗಲಿಲ್ಲ. ಇಂತಹ ಪರಮ ಭಾಗವತೋತ್ತಮ ಹರಿಭಕ್ತನಂಥ ದೃಷ್ಟಾಂತ ಬೇರೆಲ್ಲಿಯೂ ಕಾಣಲಾಗದು ಎಂದು ತಿಳಿಸಿದಳು.



ಇಷ್ಟು ಹೇಳಿ ಬ್ರಹ್ಮದೇವರು ಪ್ರಹ್ಲಾದ ಕೈಮುಗಿದು ವಿನಯಾನ್ವಿತನಾಗಿ ನಿಂತಿರುವವನಲ್ಲಿ ಹೋಗಿ ಮಗು ಪ್ರಹ್ಲಾದ, ಶ್ರೀನೃಸಿಂಹ ನಿನ್ನ ತಂದೆಯನ್ನು ಕೋಪದಿಂದ ಕೊಂದಾದ ಮೇಲೆ ಆ ದೇವನ ಸಿಟ್ಟು ಕಡಿಮೆಯಾಗಲಿಲ್ಲ. ನೀನಾದರೂ ಸಮಾಧಾನಗೊಳಿಸು.

**ಪ್ರಹ್ಲಾದಂ ಪ್ರೇಷಯಾಮಾಸ ಬ್ರಹಾಽವಸ್ಥಿಮಂತಿಕೇ ।**
**ತಾತ ಪ್ರಶಮಯೋಪೇಹಿ ಸ್ವಪೀತ್ರೇ ಕುಪಿತಂ ಪ್ರಭುಮ್ ॥**
**ಸ್ವಪಾದಮೂಲೇ ಪತಿತಂ ತಮರ್ಭಕಂ ।**
**ವಿಲೋಕ್ಯ ದೇವಃ ಕೃಪಯಾ ಪರಿಪ್ಲುತಃ ॥**
**ಉತ್ಥಾಪ್ಯ ತಚ್ಛೀರ್ಷ್ಣಿ ಅದಾತ್ ಕರಾಂಬಜಂ ।**
**ಕಾಲಾಹಿ ನಿರ್ದಷ್ಟಧಿಯಾ ಕೃತಭಯಮ್ ॥**

ಪ್ರಹ್ಮಾದ ಸಣ್ಣವನಾಗಿದ್ದರೂ (ವಯಸ್ಸಿನಲ್ಲಿ, ಯೋಗ್ಯತೆಯಲ್ಲಿ ಕಡಿಮೆಯವನಾಗಿದ್ದರೂ) ಭಕ್ತ ಶಿರೋಮಣಿಯನ್ನು ಬ್ರಹ್ಮದೇವರು ಹೇಳಿದ ಮಾತಿಗೆ ಮನ್ನಣೆ ಕೊಟ್ಟು ಅಸ್ತು ಎಂದ. ಶ್ರೀ ದೇವರ ಬಳಿಗೆ ಬಂದು ಕೈಗಳನ್ನು ಜೋಡಿಸಿ ಶಿರಸಾಷ್ಟಾಂಗ ಮಾಡಿದನು.

**ತಥೇತಿ ಶನಕೈ ರಾಜನ್ ಮಹಾಭಾಗವತೋಽರ್ಭಕಃ ।**
**ಉಪೇತ್ಯ ಭುವಿ ಕಾಯೇನ ನನಾಮ ವಿಧೃತಾಂಜಲಿಃ ॥**

ಶ್ರೀನೃಸಿಂಹನು ತನ್ನ ಪಾದಕಮಲದಲ್ಲಿ ಬಿದ್ದಿರುವವನನ್ನು ನೋಡಿ ಕರುಣಾದೃಷ್ಟಿಯಿಂದ ಅವನನ್ನು ಶ್ರೀಹರಿಯು ಕರಕಮಲಗಳಿಂದ ಎತ್ತಿ ತಲೆಯ ಮೇಲೆ ಕೈಯಿಟ್ಟು ವತ್ಸಾ, ಪ್ರಹ್ಲಾದ, ನಾನು ಅವತರಿಸಲು ತಡವಾಯಿತೇ ಮಗು. ನಿನ್ನ ತಂದೆ ಕೊಟ್ಟ ಯಾತನೆಗಳು ಅದೆಷ್ಟು. ನಿನ್ನ ಸುಕುಮಾರ ಶರೀರವು ಎಷ್ಟು ನೋವನ್ನು ಅನುಭವಿಸಿದರೂ ವಿಕಾರನಾಗದೇ, ನಿಶ್ಚಲ ಭಕ್ತಿ ಎಂಥಾದ್ದೆಂದು ಲೋಕಕ್ಕೆ ತೋರಿಸಿಕೊಟ್ಟ ಭಾಗವತೋತ್ತಮ.

**ಕೇದಂ ಪಪುಃ ಕ್ವ ಚ ವಯಃ ಸುಕುಮಾರಮೇತತ್ ।**
**ಕ್ವೇತಾಃ ಪ್ರಮತ್ತಕೃತದಾರುಣಯಾತನಾಸ್ತೇ । ಆಲೋಚಿತೋ**
**ಹಿ ವಿಷಯೋಽಯಭೂತಪೂರ್ವಃ ಕ್ಷಂತ ವ್ಯಮಂಗಽಯದಿವೇಸಯಯೋ ವಿಲಂಚಃ**

ಹೀಗೆ ಹೇಳಿ ಪ್ರಹ್ಲಾದನನ್ನು ದೇವನು ತನ್ನ ಅಮೃತಮಯ ಕರ ಸೋಕಿದಾಕ್ಷಣ ಪ್ರಹ್ಲಾದನಿಗೆ ಅಭೂತಪೂರ್ವ ಆನಂದೋದ್ರೇಕವಾಗಿ ಮೈಯೆಲ್ಲಾ ರೋಮಾಂಚನವಾಯಿತು. ತಡೆಯಿಲ್ಲದೆ ಕಣ್ತುಂಬ ಅಶ್ರುಧಾರೆ ಹರಿದು ಹೋಯಿತು. ಗದ್ಗದ ಕಂಠಯುಕ್ತನಾಗಿ ಶ್ರೀಹರಿಯನ್ನು ನೋಡುತ್ತಾ ಮೆಲ್ಲಮೆಲ್ಲನೆ ಸ್ತುತಿಸಲಾರಂಭಿಸಿದನು.

ಪ್ರಹ್ಲಾದರಾಜ ಶ್ರೀನೃಸಿಂಹದೇವನನ್ನು ಸ್ತೋತ್ರ ಮಾಡುತ್ತಾನೆ (೪೦ ಶ್ಲೋಕಗಳಿಂದ ಸ್ತುತಿ ಕೂಡಿರುವುದು. ಆದರೆ ಕೆಲ ಶ್ಲೋಕಗಳನ್ನು ತಿಳಿಸಿ ಬಾಕೀ ಶ್ಲೋಕಗಳ ಸಾರ ಮಾತ್ರ ವಿವರಿಸಲಾಗಿದೆ)

ಪುರಂದರದಾಸರ ಒಂದು ಸುಳಾದಿ ಹೀಗಿದೆ.

**ಹಿರಣ್ಯಕಶಿಪುವಿನ ಉದರ ಬಗಿದ ಬಳಿಕ**
**ಕರಳು ಮಾಲಿ ತೆಗೆದು ಕೊರಳೊಳಿಟ್ಟ ಬಳಿಕ**
**ಉರಿಯುನುಗುಳುವೇತಕೆ ಸಿರಿಯು ನುಡಿಸಲೇತಕೆ**
**ಹರಿ ಬೊಮ್ಮಾದಿಗಳ ಸರಕು ಮಾಡಲೇತಕೆ**
**ಸಿರಿ ಮುದ್ದು ನರಸಿಂಹ ಪುರಂದರ ವಿಠಲ**
**ಪ್ರಹ್ಲಾದದೇವ ಬಂದರೆ ಹಿಡಿದು ಮುದ್ದಾಡಲೇತಕೆ**

**ಪ್ರಹ್ಲಾದ ಉವಾಚ**

**ಬ್ರಹ್ಮಾದಯಃ ಸುರಗಣಾಃ ಮನಯೋಽಥ ಸಿದ್ಧಾಃ ।**
**ಸತ್ವೇಕತಾನಮತಯೋ ವಚಸಾಂ ಪ್ರವಾಹೈಃ ।**
**ನಾಂತಂ ಪರಶ್ಯಪರತೋಽಪ್ಯಧುನಾಽಪಿ ಯಾಂತಿ ।**
**ಕಿ ತೋಷ್ಟ ಮರ್ಹತಿ ಸ ಮೇ ಹರಿರುಗ್ರ ಜಾತೇಃ ॥**

ಶ್ರೀಹರೇ, ನಾರಸಿಂಹನೇ, ಬ್ರಹ್ಮಾದಿ ದೇವತೆಗಳು, ಋಷಿ ಮುನಿ ಪುಂಗವರು, ಸಿದ್ಧರು, ಸಮಸ್ತ ಮುಕ್ತರು ನಿನ್ನನ್ನು ಸ್ತೋತ್ರ ಮಾಡಿದರು. ಮುಂದೆ ಮಾಡುತ್ತಾರೆ. ಆದರೂ ನಿನ್ನಯ ಅನಂತ ಗುಣಗಳೇ ಅಂತ್ಯವೇ ಇಲ್ಲದಿದ್ದಾಗ ಎಷ್ಟು ವರ್ಣಿಸಿದರೂ ಪೂರ್ತಿಯಾಗದೇ ನಿಂತಿರುವಾಗ ರಾಕ್ಷಸಕುಲದಲ್ಲಿ ಜನಿಸಿದ ಅಲ್ಪನು ಎಷ್ಟೆಂದು ಸ್ತೋತ್ರ ಮಾಡಬಲ್ಲೆ.

My vocabulary is insufficient to describe your unending qualities.

ಹೇ ದೇವ ದೇವ, ನಾನು ರಾಕ್ಷಸ ಯೋನಿಯಲ್ಲಿ ಹುಟ್ಟಿದವ. ನಿನ್ನನ್ನು ಏನೆಂದು ಸ್ತೋತ್ರ ಮಾಡಬಲ್ಲೆ ? ಆದರೂ ನನ್ನನ್ನು ಭಕ್ತನೆಂದು ಸ್ವೀಕಾರ ಮಾಡಿ ನನ್ನ ಸ್ತುತಿಯನ್ನು ಕೇಳಬೇಕೆಂದು ಇಷ್ಟವಾಗಿದೆಯಲ್ಲಾ. ನನ್ನ ಭಾಗ್ಯವೇ ನಿನ್ನ ಅನುಗ್ರಹವು.

ಗಜರಾಜನಿಗೆ ಯಾವ ಕುಲವಿದ್ದಿತು ? ಸುಂದರನೂ ಆಗಿರಿಲಿಲ್ಲ. ವಿದ್ಯೆಯೂ ಇರಲಿಲ್ಲ. ಆದರೂ ಅವನು ಭಕ್ತಿಯಿಂದ ಕೃಷ್ಣಾ, ಪರಮಾತ್ಮಾ, ನಾರಾಯಣಾ ಅಂತ ಆರ್ತನಾದವನು ಕೇಳಿ ಕಾಪಾಡಲಿಲ್ಲವೇ ? ಜಾತಿ, ಯೋನಿ ಮುಖ್ಯವಲ್ಲ. ನಿನ್ನಲ್ಲಿ ನಿನ್ನ ವಿಷಯಕ ಜ್ಞಾನ ಸಹಿತ ಭಕ್ತಿ ಇದ್ದರೆ ಮಾತ್ರ ಕೂಡಲೇ ರಕ್ಷಿಸುವಿ, ಅಂದ ಮೇಲೆ ನೀನು ಕೇವಲ ಭಕ್ತಿಯಿಂದ ಒಲಿಯುವವನು. ಕುಚೇಲನು ಬಹುದರಿದ್ರನಾದರೂ ದೇಹೀ ಎಂದು ಒಂದು ದಿನವೂ ಅನ್ಯರಲ್ಲಿ ಕೇಳದೆ ನಿನ್ನಲ್ಲಿ ಅಚಲ ಭಕ್ತನಾದ್ದರಿಂದ, ಸ್ವಾಮೀ ನೀನು ಅನುಗ್ರಹಿಸಲಿಲ್ಲವೇ? ಜ್ಞಾನಿಯಾದ ವಿಪ್ರೋತ್ತಮನೂ ಸಹ ನಿನ್ನ ಚರಣಗಳನ್ನಾಶ್ರಯಿಸಲೇಬೇಕು. ಹಾಗಿಲ್ಲದೆ ಬ್ರಾಹ್ಮಣನಲ್ಲಿ



ಇರಬೇಕಾದ ಗುಣಸಹಿತ ಭಕ್ತಿ ನಿನ್ನಲ್ಲಿ ಮೂಡದೇ ಇರುವವನಿಗಿಂತ ಪಾಪಯೋನಿಯಲ್ಲಿ ಹುಟ್ಟಿದರೂ ನಿನ್ನ ಅಂತರಂಗ ಭಕ್ತರೇ ಉತ್ತಮರೆಂದು ತಿಳಿದಿರುವೆನು.

ಬ್ರಾಹ್ಮಣನಾದವನಲ್ಲಿ ೧೨ ಗುಣಗಳಿರಬೇಕು.

**ಜ್ಞಾನಂಚ ಸತ್ಯಂಚ ದಯಃ ಶಮಶ್ಚ । ಅಮಾತ್ಸರ್ಯಂ ಹ್ರೀತಿತೀಕ್ಷಾನಸೂಯಾ । ದಾನಂಚಯುಜ್ಞಶ್ಚತಪಃ ಶೃತಂ ಚ । ಮಹಾವ್ರತಾದ್ವಾದಶ ಬ್ರಾಹಣಸ್ಯ ।**

ವಿಭೀಷಣ ರಾಕ್ಷಸನಲ್ಲವೇ ? ಆಶ್ರಯ ಕೊಟ್ಟ. ಬಕಾಸುರ ರಾಕ್ಷಸರನ್ನು ನಿನ್ನ ಪುತ್ರ ಕೊಲ್ಲಲಿಲ್ಲವೇ ? ರಾವಣ ಬ್ರಾಹ್ಮಣನಾದರೂ ಸಂಹೃತನಾದ.

ನೀನು ಜೀವರಿಗೆ ಬಿಂಬರೂಪಿಯಾಗಿರುವೆ. ಜೀವರು ಪ್ರತಿಬಿಂಬವಾಗಿರುವರು. ಜೀವನು ಅಲಂಕಾರ ಮಾಡಿಕೊಳ್ಳಬೇಕೆಂದರೆ ಬಿಂಬರೂಪಿಯಾದ ನಿನಗೆ ಪೂಜಾ ಅಲಂಕಾರ ಮಾಡಿದಂತೆ **ದೇಹೋಽಯಂ ವಿಷ್ಣುರಥಃ** ಎಂಬಂತೆ.

ಸ್ವಾಮೀ, ನಾರಸಿಂಹನೇ ನಿನ್ನ ಮಹಿಮೆ ಅತ್ಯಂತ ಅದ್ಭುತ. ಗುಣಗಳು ನಿನ್ನ ಸ್ವರೂಪವೇ ಆಗಿರುವಾಗ ಅಜ್ಞಾನಿಯಾದ ನಾನು ಪೂರ್ಣವಾಗಿ ಬಣ್ಣಿಸಲಾರೆ. ಅಷ್ಟು ಸಾಮರ್ಥ್ಯ ನನ್ನಲ್ಲಿ ಇರುವುದಿಲ್ಲ. ಆದರೂ ಅಲ್ಪನಾದ ನನ್ನ ಸ್ತೋತ್ರದಿಂದ ಸಂತುಷ್ಟನಾಗಿರುವೆ ಎಂದು ಬೇರೆ ಹೇಳಬೇಕೇ ದೇವ ದೇವ.

ಸ್ವಾಮೀ, ನಿನ್ನ ಕೋಪವು ಹಿರಣ್ಯಕಶಿಪು ನಿಮಿತ್ತ ಉಂಟಾಗಿದೆ. ಈಗ ನಿನ್ನ ಕೋಪಾಗ್ನಿ ಜ್ವಾಲೆಯಲ್ಲಿ ಭಸ್ಮಿತನಾಗಿರುತ್ತಾನೆ. ದೇವ, ಈಗಲಾದರೂ ನಿನ್ನ ಉಗ್ರರೂಪವನ್ನು ಉಪಸಂಹಾರ ಮಾಡಿ ಶಾಂತನಾಗಿ ಕರುಣಿಸು. ನನ್ನ ಅಸುರ ತಂದೆಯನ್ನು ಸಂಹರಿಸಿದೆ ಎಂದು ನಾನು ಆನಂದಪಡುತ್ತೇನೆ. ಏಕೆಂದರೆ ತಂದೆ ದುಷ್ಟ, ಲೋಕಕಂಟಕನಷ್ಟೆ. ದುಷ್ಟ ಮತವನ್ನು ಪ್ರಚಾರ ಮಾಡಿದವನನ್ನು ಸಂಹರಿಸಿ ಶ್ರೀಹರಿಯೇ ಸರ್ವೋತ್ತಮನೆಂಬುದನ್ನು ಸ್ಥಾಪಿಸಿದೆ. ನಿನಗೆ ನಮೋ ನಮಃ

## ಪ್ರಹ್ಲಾದನ ನರಸಿಂಹದೇವರಸ್ತುತಿ

ತನ್ನ ಜನಕನಾದ ಹಿರಣ್ಯಕಶಿಪುವನ್ನು ಸಂಹರಿಸಿದ್ದರಿಂದ ಪ್ರಹ್ಲಾದನಿಗೆ ವ್ಯಥೆ, ಕೋಪ ಸ್ವಲ್ಪವೂ ಆಗಲಿಲ್ಲ. ಪ್ರಸ್ತುತ ತನಗೆ ಸಂತೋಷವೇ ಆಗಿದೆ ಎಂದು ಹೇಳುತ್ತಾ, "ಹೇ ದೇವ ದೇವ, ನನ್ನ ತಂದೆ ನಿನ್ನನ್ನು ಎಷ್ಟು ದ್ವೇಷ ಮಾಡಿದರೂ ಸಹಿಸಿದೆ. ಆದರೆ, ನಿನ್ನ ಅಂತರಂಗಭಕ್ತನಾದವನನ್ನು ವಿಚಿತ್ರ ರೀತಿಯ ಹಿಂಸೆ, ಕೊನೆಗೆ ಸಂಹರಿಸಲೂ ಪ್ರಯತ್ನ ಪಟ್ಟಾಗ ನೀನು ಅವತರಿಸಿ ನನ್ನನ್ನು ಕಾಪಾಡಿದೆ. ಆದ್ದರಿಂದ ನನ್ನ ಜನಕನನ್ನು ಸಂಹರಿಸಿದ್ದರಿಂದ ನನಗೆ ಸಂತೋಷವೇ ಆಗಿದೆ."

ಲೋಕದಲ್ಲಿ ದುಷ್ಟರು, ದುರಾತ್ಮರು, ಲೋಕಕಂಟಕರಾಗಿ ಸಜ್ಜನರಿಗೆ ಹಿಂಸೆ ಕೊಡುವವರನ್ನು ಸಂಹರಿಸಿದರೆ ಜಗತ್ತಿಗೆ ಕ್ಷೇಮವೇ ಆಗುವುದು. **''ಪರಿತ್ರಾಣಾಯ ಸಾಧೂನಾಂ ವಿನಾಶಾಯಚ ದುಷ್ಕೃತಾಂ''** ಎಂಬಂತೆ ಆಗಿದೆ. ಹಾವು, ಚೇಳು ಇತ್ಯಾದಿ ದುಷ್ಟ ಕ್ರಿಮಿಗಳನ್ನು ಸಂಹರಿಸಿದರೆ ಪಾಪವಾಗುವುದಿಲ್ಲ. ಒಬ್ಬ ದುರಾತ್ಮನ ವಧೆಯಿಂದ ಜಗತ್ತಿಗೆ ಕಲ್ಯಾಣವಾಗುವುದಾದರೆ ದುಃಖಿಸಬಾರದು.

**ಮೋದೇತ ಸಾಧುರಪಿ ವೃಶ್ಚಿಕಸರ್ಪಹತ್ಯಾ ।**
**ರೂಪಂ ನೃಸಿಂಹ ವಿಭವಾಯ ಜನಾಃಸ್ಮರಂತಿ ॥**

ನಿನ್ನ ಈ ಉಗ್ರರೂಪವನ್ನು ಕಂಡು ಭಯವಾಗುವುದಿಲ್ಲ.

**ನಾಹಂ ಭಿಭೇಮ್ಯಜಿತ ತೇಽತಿಭಯಾನಕಸ್ಯ ।**
**– – – – – – – – – – – – –**
**ಆಂತ್ರಸ್ರಜಃ ಕ್ಷತ್ರಜಕೇಸರಶಂಕುಕರ್ಣಾತ್ ।**

**''ಕೇಸರ ಶಂಕು ಕರ್ಣಾತ್''** ಎನ್ನುವ ವಾಕ್ಯವಿದೆ. **ಶಂಕುಕರ್ಣ**ನ ಹೆಸರು ಇರುವುದು. ಇಲ್ಲಿ ಶಂಕುಕರ್ಣ ಎಂದಾಗ ಪ್ರಹ್ಲಾದರು ಹಿಂದಿನ ಜನ್ಮದಲ್ಲಿ ಬ್ರಹ್ಮದೇವರ ಸೇವೆ ಮಾಡುತ್ತಿದ್ದ, ಕರ್ಮಜದೇವನಾಗಿದ್ದ ತಾನು **ದೇವಸ್ವರೂಪ**ನಾಗಿದ್ದರಿಂದ ಬ್ರಹ್ಮದೇವರು ಪೂಜಾ ಸಮಯದಲ್ಲಿ ಶ್ರೀಮನ್ನಾರಾಯಣನೇ ಪ್ರತ್ಯಕ್ಷ ಪೂಜಾ ಸ್ವೀಕಾರ ಮಾಡುತ್ತಿದ್ದನು, ನೋಡುತ್ತಿದ್ದ... ಆದ್ದರಿಂದ ಅದೇ ಶಂಕುಕರ್ಣ ಈ ಪ್ರಹ್ಲಾದನಾಗಿ ಅವತರಿಸಿದಾಗ ಶ್ರೀನೃಸಿಂಹದೇವರ ಉಗ್ರರೂಪವನ್ನು ಕಂಡು ಹೆದರಲಿಲ್ಲ ಎಂಬುದೂ ಸೂಚಿಸಿದಂತಾಯಿತು. **''ಶಂಕುಕರ್ಣಾಖ್ಯ ದೇವಸ್ತು ಬ್ರಹ್ಮಶಾಪಾಚ್ಚ ಭೂತಲೆ''** ಎಂದಿರುವುದು. ಇದೇ ಪ್ರಹ್ಲಾದರಾಜರು ಶ್ರೀಹರಿ ಅನುಗ್ರಹದಿಂದ ತುಂಗಾತೀರದಲ್ಲಿ ಶ್ರೀರಾಘವೇಂದ್ರ ಸ್ವಾಮಿಗಳಾಗಿ ಅವತರಿಸಿದರು ಎನ್ನುವುದನ್ನು **''ದೇವಸ್ವರೂಪೋ ದಿವಿಜದ್ರುಮೋಯು''** ಎಂದು ಅವರ ಸ್ತೋತ್ರಗಳಲ್ಲಿ ಉಲ್ಲೇಖವಿದೆ. ಅಲ್ಲದೇ, ಶ್ರೀಮದ್ರಾಘವೇಂದ್ರ ಗುರುರಾಜರ ಮೂಲ ಬೃಂದಾವನದ ಮೇಲೆ ಶ್ರೀಲಕ್ಷ್ಮೀನರಸಿಂಹದೇವರ ಮೂರ್ತಿ ಇಂದಿಗೂ ಕಾಣಬಹುದು ಎಂಬ ಮರ್ಮವಿದೆ.

ಹೇ ನೃಸಿಂಹದೇವಾ, ನೀನು ಈಗ ಭಯಂಕರ ಉಗ್ರರೂಪ, ಕೆಂಪಾದ ನೇತ್ರಗಳು, ಕೋರೆ ಹಲ್ಲುಗಳು, ಕೊರಳಲ್ಲಿ ಧರಿಸಿದ ಕರುಳು ಮಾಲೆ, ನಿಮಿರಿ ನಿಂತಿರುವ ನಿನ್ನ ಕಿವಿಗಳು, ಮೀಸೆ–ಕೇಸರಗಳು, ನನ್ನನ್ನು ಭಯವಾಗುವಂತೆ ಮಾಡುವುದಿಲ್ಲ. ಆದರೆ ನನ್ನ ಜನ್ಮಾಂತರಗಳಲ್ಲಿ ಕರ್ಮಗಳೆಂಬ ಸುಳಿಯು ಜನನ ಮರಣವೆಂಬ ಚಕ್ರದಲ್ಲಿ ಬಿದ್ದು ನರಳುವುದನ್ನು ನೆನೆದು ಭಯವಾಗುವುದು. ನಿನ್ನ ಪ್ರಸನ್ನತಿಯೇ ಇವುಗಳಿಗೆ ತಾರಕ ಮಂತ್ರವಲ್ಲವೇ ದೇವ ದೇವೋತ್ತಮ.



ಸರ್ವೇಶ್ವರಾ, ನಾನು ಯಾವ ಯೋನಿಯಲ್ಲಿ ಹುಟ್ಟಿದರೂ ಸಂಸಾರವೆಂಬ ಚಕ್ರದಲ್ಲಿ ಭ್ರಮಿಸುತ್ತಿರುವಾಗ ನಿನ್ನ ನಾಮಸ್ಮರಣೆ ಚಿಂತನೆಯಿಂದ ಸಂಸಾರ ಸಾಗರದಿಂದ ದಾಟುವ ಉಪಾಯವೇ ನಿನ್ನ ಸೇವಾ ಭಾಗ್ಯ. ಕರುಣಿಸು.

ನೀನೇ ಸರ್ವೇಷ್ಟನು. ರಕ್ಷಕನು ತಂದೆಯೂ ನೀನೆ. ಅಹಂ ಮಮ ಎಂಬೆರಡು ರೋಗಗಳಿಗೆ ನಿನ್ನ ನಾಮ ಸಂಕೀರ್ತನೆ ಒಂದೇ ಔಷಧ.

ಲೋಕದಲ್ಲಿ ರೋಗಿಗೆ ಔಷಧ ಕೊಟ್ಟರೂ ಗುಣವಾಗದೇ ಮರಣಿಸುವ ಸಾಧ್ಯತೆ ಕಾಣುತ್ತೇನೆ. ಹಾಗೆ ನದಿಯನ್ನು ದಾಟಲು ದೋಣಿಯ ಸಹಾಯ ಪಡೆಯುತ್ತೇವೆ. ಮುಂದಿನ ದಡ ಮುಟ್ಟುತ್ತೇವೆಂಬ ನಂಬಿಕೆ. ಆದರೆ ದೋಣಿಯೇ ಮುಳುಗಿದರೆ ನೀರು ಜೀವಕ್ಕೆ ಕಾರಣ, ಅದೇ ನೀರು ಮರಣಕ್ಕೂ ಕಾರಣವಾಗಬಹುದಲ್ಲಾ.

ಆದ್ದರಿಂದ ಶ್ರೀಹರಿ ನಿನ್ನ ಪ್ರೇರಣೆ ಅನುಗ್ರಹವಿಲ್ಲದೆ ನರರೇ ಆಗಲಿ, ದೇವತೆಗಳೇ ಆಗಲಿ ಸುರಕ್ಷಿತವಾಗಿರಲು ಸಾಧ್ಯವಿಲ್ಲ.

ಹೇ ಪರಮಾತ್ಮನೇ, ನನಗೆ (ನಮಗೆ) ನೀನೇ ಸರ್ವಸ್ವ.

**ಮಾತಾ ನೃಸಿಂಹಶ್ಚ ಪಿತಾ ನೃಸಿಂಹೋ**
**ಭ್ರಾತಾ ನೃಸಿಂಹಶ್ಚ ಸಖಾ ನೃಸಿಂಹಃ ।**
**ವಿದ್ಯಾನೃಸಿಂಹೋ ದ್ರವಿಣಂ ನೃಸಿಂಹಃ**
**ಸ್ವಾಮೀ ನೃಸಿಂಹೋ ಸಕಲಂ ನೃಸಿಂಹಃ ॥**

ಜೀವನು ಸಂಸಾರವೆಂಬ ಸುಳಿಯಲ್ಲಿ ಸಿಕ್ಕಿ, ಮತ್ತೆ ಮತ್ತೆ ಸುಳಿಯಲ್ಲಿ ತಿರುಗಿ ತಿರುಗಿ ನಾನಾ ವಿಧ ಕಷ್ಟ ರೋಗಗಳಿಗೆ ತೌರಾದ ಈ ಶರೀರವು ದುಃಖಮಯವಾಗಿದೆ ಎಂದು ತಿಳಿದೂ ಅದರಿಂದ ತೇರ್ಗಡೆ ಹೊಂದಲು ಮೊದಲು ವೈರಾಗ್ಯದಿಂದ ಈ ಸಂಸಾರವು ಅನಿತ್ಯವೆಂಬ ಭಾವನೆ ಹುಟ್ಟಬೇಕು. ಆಗ ಮಾತ್ರ ನಿನ್ನ ಚರಣ ಸ್ಮರಣೆ ಕಾಪಾಡುವುದು.

ಆದರೆ ಸಾಮಾನ್ಯವಾಗಿ ನರನು ಕಾಮಾಗ್ನಿಯನ್ನು ಶಾಂತ ಮಾಡಲು ತುಪ್ಪದಿಂದಲೇ ಶಾಂತವಾಗುವಂತೆ ಮಾಡಿದಾಗ ಇನ್ನಷ್ಟು ಕಾಮನೆಗಳನ್ನು ಹೆಚ್ಚು ಮಾಡುವುದು. ಹೀಗಿರುವಲ್ಲಿ ನಿನ್ನ ಕಥಾಶ್ರವಣ ಮಾಡಲು ಮನುಷ್ಯನಿಗೆ ಸಮಯವಿರುವುದಿಲ್ಲ. ಯಾವ ಕಾಮಗಳನ್ನು ಪ್ರಸನ್ನಗೊಳಿಸಲು ಪ್ರಯತ್ನ ಮಾಡುವನೋ ಅದರ ಸಂಗ್ರಹಕ್ಕಾಗಿ ಮಾಡಬಾರದ ಪಾಪಗಳನ್ನು ಮಾಡಿ ತೃಪ್ತಿ ಕಾಣದೆ ವ್ಯಾಕುಲವಾದ ಮನಸ್ಸುಳ್ಳವನಾಗುತ್ತಾನೆ.

ಇಂತಹ ಸ್ಥಿತಿ ನನಗೆ ಬಾರದಂತೆ ಸದಾ ನಿನ್ನ ನಾಮ ಸಂಕೀರ್ತನೆಯಲ್ಲೇ ಮನಸ್ಸನ್ನು ಪ್ರಸಾದಮಾಡು.

**ಯಾವತ್ ಸೇವಾಪರೇ ತತ್ವೇ ತಾವತ್ ಸುಖವಿಶೇಷಾತ್ ॥** (ಭಾಗ.ತಾ.)

**''ಉಪನಯಮಾಂ ನಿಜಭೃತ್ಯಪಾರ್ಶ್ವಂ''** ಎನ್ನುವ ಮಾತಿನಿಂದ ಸ್ವಾಮಿ ನರಸಿಂಹ ನೀನು ನನ್ನಲ್ಲಿ ದಯ ತೋರಿಸಿ ಪಾಪಿಗಳ ಸಂಗವಾಗದೆ ನಿನ್ನ ಭಕ್ತ ದಾಸರುಗಳಾದ ಅವರ ಭಕ್ತರ ಭಕ್ತರ ದಾಸನೆಂದು ಪರಿಗ್ರಹಿಸು. **''ತ್ವದ್ದಾಸದಾಸ ದಾಸ ಇತಿ ಮಾಮ್ ಸ್ಮರ ಲೋಕನಾಥ''**

ಹೀಗೆ ಪ್ರಹ್ಲಾದ ಕೇಳಿದಾಗ ಅವನ ವಾಕ್ಯವು ಔಪಚಾರಿಕವಾಗಿರದೇ ಮನಸಾ ಪ್ರಾರ್ಥಿಸಿದನೆಂದು (ಶ್ರೀ ಸತ್ಯಧರ್ಮರು ತಿಳಿಸಿರುತ್ತಾರೆ)

ನಿನ್ನನ್ನು ತ್ರಿಯುಗ ಎಂದು ಕರೆಯಲಾಗಿದೆ. ಕೃತ, ತ್ರೇತಾ, ದ್ವಾಪರಗಳಲ್ಲೇ ಅವತರಿಸಿ, ಮತ್ಸ್ಯ, ಕೂರ್ಮ, ವರಾಹ, ನಾರಸಿಂಹ, ರಾಮ, ಕೃಷ್ಣ, ಯಜ್ಞವೆಂಬುಗಳಿಂದ ಕರೆಸಿ ಧರ್ಮವನ್ನು ಉದ್ಧಾರ ಮಾಡುವಿ.

ವೈಕುಂಠನಾಥನೇ, ಮನುಷ್ಯನ ಇಂದ್ರಿಯಗಳು ಕಾಮದ ಕಡೆಗೆ ಒಯ್ಯುವುದು. ಅದರಲ್ಲೂ ಜಿಹ್ವೇಂದ್ರಿಯ ಅತೀತ ವೇಗವಾಗಿ ತಿನ್ನಬೇಕು, ಕುಡಿಯಬೇಕು ಎಂದು ಹೋಗಿ ಸಂತೋಷ ಕಾಣದೆ, ಪುನಃ ಪುನಃ ರಸಸ್ವಾದನೆ ಕಡೆಗೆ ಧಾವಿಸುವುದು. ಹೀಗಿರುವಾಗ ಇಂದ್ರಿಯ ಜಯ ಹೊಂದದೆ ನಿನ್ನ ಪ್ರಸಾದ ಲಭಿಸದು. ಆದ್ದರಿಂದ ಮುಕುಂದ, ನನ್ನ ಇಂದ್ರಿಯಗಳು ನನ್ನ ಹತೋಟಿಯಲ್ಲಿರುವಂತೆ ಮಾಡು ಸರ್ವೇಶ.

ಹೀಗೆ ನಾನು ಈ ಸಂಸಾರವೆಂಬ ವೈತರಣಿಯಲ್ಲಿ ಬೀಳದಂತೆ. ಏಕೆಂದರೆ ನದಿಯನ್ನು ದಾಟುವ ಬಗೆ ಕಾಣದಾಗಿದ್ದೇನೆ. ಆದ್ದರಿಂದ ಹೇ ಆಪ್ತಬಂಧೋ, ನಿನ್ನನ್ನೇ ನಂಬಿರುವ ಈ ದಾಸನನ್ನು ದಡದಿಂದ ರಕ್ಷಿಸು.

**ಮೂಢೇಷುವೈ ಮಹದನುಗ್ರಹ ಆರ್ತಬಂಧೋ ।**
**ಕಿಂ ತೇನತೇ ಪ್ರಿಯಜನಾನನು ಸೇವಮಾನಃ ॥**

ನೀನಲ್ಲದೆ ಬೇರೆಯವರ್ಯಾರಿದ್ದಾರೆ ಹೇಳು ದೇವ. ನಿನ್ನ ಮಹಿಮೆ ಎಷ್ಟೆಂದು ವರ್ಣಿಸಲಿ ಪ್ರಭು.

ಪ್ರಹ್ಲಾದನು ಶ್ರೀಹರಿಯನ್ನು ಸ್ತುತಿಸುತ್ತಾ ಉಪಸಂಹಾರ ಮಾಡುತ್ತಾನೆ.

**ತತ್ವೇ ಮನೋ ದರ್ಶನೇ ದೃಗಪಿ ಸ್ತುತೌ ಚ ।**
**ವಾಕ್ ಕರ್ಮಣಿ ಹ್ವಪಿಕರೌ ಶ್ರವಣಂ ಕಥಾಯಾಂ ।**
**ಸಂಸೇವಯಾ ತ್ವಯಿ ವಿನೇತಿಷಡಂಗಯಾ**
**ಕಿಂ ಭಕ್ತಿಂ ಜನಃ ಪರಮಹಂಸಗತೌ ಲಭೇತ ॥**



ಶ್ರೀ ಕೃಪಾಸಾಗರ ನಾರಸಿಂಹನೇ, ನಾನು ನಿನ್ನನ್ನು ಇಷ್ಟು ಮಾತ್ರ ಬೇಡುವೆನು. ನನ್ನ ಸಕಲೇಂದ್ರಿಯಗಳಿಂದ ನಿನ್ನನ್ನೇ ಧ್ಯಾನಿಸುವಂತೆ ನಿನ್ನ ರೂಪವನ್ನೇ ನೋಡುವಂತೆ, ನಿನ್ನನ್ನೇ ಸ್ತುತಿಸುವಂತೆ ನಿನ್ನ ಪುಣ್ಯ ಕಥಾಶ್ರವಣ ಕೇಳುವಂತೆ, ನಿನ್ನ ಪರಮ ಪಾವನ ಕ್ಷೇತ್ರಗಳಿಗೆ ಹೋಗುವಂತೆ, ನಿನ್ನ ಸೇವೆಯಿಂದ ನಿನ್ನಲ್ಲಿ ಭಕ್ತಿ ಹುಟ್ಟುವಂತೆ ನಿನ್ನ ಭಕ್ತರ ಸರಣಿಯಲ್ಲಿ ನನ್ನನ್ನೂ ಒಬ್ಬನಾಗಿ ಪರಿಗಣಿಸಿ ಉದ್ಧಾರ ಮಾಡು ಶ್ರೀರಂಗನಾಥ. ನಿನಗೆ ಅನಂತಾನಂತ ಶಿರಸಾಷ್ಟಾಂಗ ನಮನವು.

ಶ್ರೀನೃಸಿಂಹದೇವರು ಪ್ರಹ್ಲಾದನಿಗೆ ವರ ಕೊಟ್ಟಿದ್ದನ್ನು ನಾರದರು ಧರ್ಮರಾಜನಿಗೆ ಹರಿಮಹಿಮೆಯನ್ನು ವರ್ಣಿಸುತ್ತಾ, ಧರ್ಮರಾಜನ್ ಕೇಳು.

**ಏತಾವದ್ವರ್ಣಿತಗುಣೋ ಭಕ್ತ್ಯಾ ಭಕ್ತೇನ ನಿರ್ಗುಣಃ ।**
**ಪ್ರಹ್ಲಾದಂ ಪ್ರಣಿತಂ ಪ್ರೀತೋ ಗತಮನ್ಯುಃ ಅಭಾಷತ್ ॥**

ಭಕ್ತವತ್ಸಲನಾದ ಶ್ರೀನೃಸಿಂಹನು ತನ್ನ ಭಕ್ತನಾದ ಪ್ರಹ್ಲಾದನು ಈವರೆಗೆ ಸ್ತೋತ್ರವನ್ನು ಕೇಳಿ ಅಪ್ರಾಕೃತ ಶರೀರವುಳ್ಳ ದೇವ ಕೋಪವನ್ನು ಉಪಶಮನ ಮಾಡಿ ಮಂದಸ್ಮಿತ ವದನನಾಗಿ ವಿನಯದಿಂದ ನಮಸ್ಕರಿಸುತ್ತಿರುವ ಭಕ್ತಪ್ರಹ್ಲಾದನನ್ನು ಕುರಿತು ಹೇಳಿದನು.

**ಶ್ರೀಭಗವಾನುವಾಚ**

**ಪ್ರಹ್ಲಾದ ಭದ್ರ ಭದ್ರಂತೇ ಪ್ರೀತೋಽಹಂತೇಽಸುರೋತ್ತಮ ।**
**ವರಂ ವೃಣೀಪ್ವಾಭಿಮತಂ ಕಾಮಪೂರೋಽಸ್ಮಹಂ ನೃಣಾಃ ॥**

ವತ್ಸ, ಪ್ರಹ್ಲಾದ! ನಿನಗೆ ಶುಭವಾಗಲಿ. ನಾನು ಪ್ರೀತನಾಗಿರುವೆನು. ಭಕ್ತರ ಮನೋಭೀಷ್ಟಗಳನ್ನು ಕೊಡಬೇಕೆಂದೇ ಬಂದಿರುವೆನು. ನಿನ್ನ ಇಚ್ಛಾನುಸಾರ ವರವನ್ನು ಕೇಳು. ಕೊಡುತ್ತೇನೆ ಎಂದನು.

ದೀರ್ಘಾಯುಷ್ಯವಂತನಾಗು. ನಾನು ಪ್ರತ್ಯಕ್ಷನಾಗಲು ಭಕ್ತಿಯಿಂದ ನನ್ನನ್ನು ಮೆಚ್ಚಿಸಿದ ಪುರುಷನಿಗೇ ಲಭ್ಯನು. ಅನ್ಯಥಾ ಅಭಕ್ತರಿಗೆ ನನ್ನ ದರ್ಶನ ದುರ್ಲಭವೇ.

ನನ್ನ ದರ್ಶನ ಭಾಗ್ಯ ಪಡೆದವನಿಗೆ ಐಹಿಕ ಆಮುಕ್ತಿಷ್ಮಿಕ ಕಾಮನೆಗಳು ಕೊರತೆ ಎಂದಿಗೂ ಇರುವುದಿಲ್ಲ. ತಮ್ಮ ಕಾಮನೆಗಳನ್ನು ಪೂರೈಸಲು ಭಕ್ತರು ತಮ್ಮನ್ನು ನನ್ನಲ್ಲಿ ಸಮರ್ಪಣೆ ಮಾಡುತ್ತಾರೆ.

ಪ್ರಹ್ಲಾದನು ನೃಸಿಂಹದೇವರ ಮಾತನ್ನು ಕೇಳಿ ಎಲ್ಲರಂತೆ ಎಷ್ಟೆಷ್ಟು ಆಸೆಗಳನ್ನು ತೋರಿಸಿದರೂ ಏಕಾಂತಭಕ್ತನಾದ ಪ್ರಹ್ಲಾದ ಯಾವ ವರವನ್ನು ಕೇಳಲಿಲ್ಲ. ಆಶಿಸಲೂಯಿಲ್ಲ.

ನಾನು ಇಷ್ಟು ಭಕ್ತಿಯಿಂದ ನಿನ್ನ ಭಜನೆ ನಾಮಸಂಕೀರ್ತನೆ ಮಾಡಿದೆ. ಆದರೂ

ತಂದೆಯಿಂದ ಅನೇಕ ರೀತಿಯ ಯಾತನೆ ಹಿಂಸೆ ಅನುಭವಿಸಿದ್ದರೂ ನಿನ್ನಲ್ಲಿ ಭಕ್ತಿ ಹುಟ್ಟಿ ಅಚಲವಾಗಿರುವುದಕ್ಕೆ ನಿನ್ನ ಚರಣ ಪಡೆಯಬೇಕೆಂಬುದೊಂದೇ ನನ್ನ ಗುರಿಯಾಗಿರುವಾಗ ನಿನ್ನಿಂದ ವರ ಪಡೆಯಬೇಕೆಂಬ ಆಸೆ ನನಗಿರುವುದಿಲ್ಲ. ಇದ್ದಿಲ್ಲ. ಅಂದ ಮೇಲೆ ನನ್ನಲ್ಲಿ ದುರಾಶೆ ಇರುವುದಿಲ್ಲ ಸ್ವಾಮಿ.

ವರ ಕೇಳದೆ ಅದನ್ನು ನೀನು ದಯಪಾಲಿಸಿದೆಯಾದರೆ ಅವೆಲ್ಲವೂ ನಿನ್ನ ವಿಷಯಕ ಜ್ಞಾನ ಭಕ್ತಿ ಪಡೆಯಲು ವಿಘ್ನವಾಗುವುದು. ನನ್ನಲ್ಲಿ ನನಗೆ ಅಹಂಭಾವನೆ ಹುಟ್ಟುವುದು. ಮುಕ್ತಿಮಾರ್ಗಕ್ಕೆ ಅಡ್ಡಿಯಾಗುವುದಲ್ಲವೇ ದೇವೇಶ, ಪ್ರಲೋಭ ಹುಟ್ಟಿಸಬೇಡ.

**ಮಾಮಾಪ್ರಲೋಭಯೋತ್ತತ್ತ್ವಾಽಽಸಕ್ತಂ ಕಾಮೇಷುತೈರ್ವರೈಃ ।**
**ತತ್ಸಂಗಭೀತೋ ನಿರ್ವಿಣ್ಣೋ ಮುಮುಕ್ಷುಃ ತ್ವಾಮುಪಾಶ್ರಿತಃ ॥**

ಭಕ್ತಪರಾಧೀನ ಶ್ರೀನೃಸಿಂಹ ನಾನು ನಿನ್ನ ಭಕ್ತನೆಂದು ನೀನು ಗ್ರಹಿಸಬೇಕು. ನಿನ್ನ ಭೃತ್ಯನು ನನ್ನಲ್ಲಿ ಈ ಸಾಂಸಾರಿಕ ವಿಷಯಗಳಿಂದ ಕಟ್ಟಬೇಡ. ಅಸತ್ತಾದ ಬಂಧವು (ಮಿಥ್ಯೆಯಲ್ಲ) ಅನಿತ್ಯವು ಇದರಿಂದ ಅನಿತ್ಯವಾದ ಪದಾರ್ಥಗಳಲ್ಲಿ ಪ್ರೇರಿಸುತ್ತಿರುವೆ. ಬೇಡ ಸ್ವಾಮಿ, ದಯಾನಿಧಿಯಾದ ನೀನು ನನ್ನನ್ನು ಅಜ್ಞರನ್ನು ಸೆಳೆಯುವಂತೆ ಮಾಡಬೇಡ. ಆದರೂ ನೀನಾಗಿ ವರ ಕೊಡುತ್ತೇನೆ ಅಂದಾಗ ನಾನು ಹೇಗೆ ಬೇಡವೆನ್ನಲಿ ? ಹಾಗೆಂದಾಗ ನಿನ್ನ ಸರ್ವಜ್ಞತ್ವವನ್ನು ತಿರಸ್ಕರಿಸಿದಂತಾಗುವುದು. ತಸ್ಮಾತ್ ಪ್ರಭೋ, ವರ ಕೊಡುವುದಾದರೆ ನನ್ನದೊಂದು ಕೋರಿಕೆಯಿದೆ. ನನ್ನ ಮನಸ್ಸಿನಿಂದಲೂ ಕಾಯಕವಾಗಿಯೂ ದುಷ್ಟ ವಿಷಯಗಳ ಅಭಿಲಾಷೆ ಹುಟ್ಟದಂತೆ ಮಾಡುವುದಲ್ಲದೇ, ಸದಾ ನಿನ್ನ ಸುಂದರ ಅದ್ಭುತ ರೂಪವನ್ನು ತೋರುತ್ತಾ ಈ ಸಂಸಾರದಿಂದ ಉದ್ಧರಿಸುವವನಾಗು.

**ಯದಿ ರಾಸೀಶ ಮೇ ಕಾಮಾನ್ ವರಾನ್‌ತ್ವಂ ವರದರ್ಷಭ ।**
**ಕಾಮಾನಾಂ ಹೃದ್ಯಸಂರೋಹಂ ಭವತಸ್ತು ವೃಣೆ ವರಮ್ ॥**

ಆದ್ದರಿಂದ ನನ್ನ ಮನಸ್ಸು ಭಯರಹಿತವಾಗುವಂತೆ ಕರುಣಿಸು. ಪ್ರಹ್ಲಾದ, ನಿನಗೆ ಇಂತಹ ಉತ್ತಮ ಜ್ಞಾನ ಹೇಗೆ ಬಂದಿತು ? ಎಂದು ಕೇಳುವೆಯಾ. ಪರಮ ದೇವರ್ಷಿಗಳಾದ ನಾರದರು ನಿನ್ನ ಭಕ್ತರಲ್ಲವೇ ? ಅವರು ನನ್ನ ಮೇಲೆ ಕರುಣೆಯಿಂದ ಉಪದೇಶ ಮಾಡಿದ ತತ್ವಜ್ಞಾನ. ಅವರ ಕೃಪೆಯಿಂದ ನರಸಿಂಹ ಮಂತ್ರವನ್ನು ನನಗೆ ಉಪದೇಶಿಸಿದರು.

**ಓಂ ನಮೋ ಭಗವತೇ ತುಭ್ಯಂ ಪುರುಷಾಯ ಮಹಾತ್ಮನೆ ।**
**ಹರಯೋಽದ್ಭುತ ಗಾತ್ರಾಯ ನೃಸಿಂಹಾಯು ಬ್ರಹ್ಮಣೆಪರಮಾತ್ಮನೇ ॥**

ಸಮಸ್ತ ಗುಣಪೂರ್ಣನಾದ್ದರಿಂದ ನಿನ್ನನ್ನು ಓಂ ಎಂದು ಸಕಲೈಶ್ವರ್ಯಾದಿಗಳಿಂದ ಸಂಪೂರ್ಣನು (ಭಗವತೆ) ಬ್ರಹ್ಮಣೆ (ಬ್ರಹ್ಮ = ವೇದಗಳು ಅವುಗಳಲ್ಲಿ ಪ್ರತಿಪಾದ್ಯನಾಗಿರುವಿ) ಪುರುಷಾಯ ಪೂರ್ಣ ಮುಕ್ತಿಫಲದಾತನಾದ್ದರಿಂದ ಹರಿಯೇ ಈ ಸಂಸಾರದಿಂದ ಭಕ್ತರ ಪಾಪಗಳನ್ನು ಎಳೆದಾರುವೆ ಮಹಾತ್ಮನೇ. ರಮಾಬ್ರಹ್ಮಾದಿಗಳಿಗೆ ಏಕೈಕ ಸ್ವಾಮಿಯಾದ ಶ್ರೀನೃಸಿಂಹ ದೇವನೇ ನಿನಗೆ ಅನಂತ ನಮಸ್ಕಾರಗಳು.



ಇಷ್ಟು ಹೇಳಿದ ಪ್ರಹ್ಲಾದನನ್ನು ಕಂಡು ಭಗವಂತ, **ವತ್ಸ ನಿನ್ನ ಮಾತಿನಲ್ಲಿ ಸತ್ಯವಿದೆ.** ನಾನು ನನ್ನದು ಎಂದು ದುರಭಿಮಾನವುಳ್ಳ ಅಸಜ್ಜನರಿಗೆ ನನ್ನ ಬಗ್ಗೆ ನಿಜ ತಾತ್ವಿಕ ಜ್ಞಾನವಿರುವುದಿಲ್ಲ. ಹೀಗಿರುವಲ್ಲಿ ಸ್ವರೂಪದಿಂದಲೇ ನನ್ನ ಭಕ್ತನಾಗಿರುವೆ. ವರಾಪೇಕ್ಷೆ ಮಾಡಲಿಲ್ಲ. ಇಂತಹ ಏಕಾಂತ ಭಕ್ತರು ಅತಿವಿರಳ. ಆದರೂ ನಾನು ವರ ಕೊಡುತ್ತೇನೆ. ಅದು ನನ್ನ ಆಜ್ಞೆ ಎಂದೇ ಗ್ರಹಿಸು.

**ತಥಾಪಿ ಮನ್ವಂತರಮೇತದತ್ರ । ದೈತ್ಯೇಶ್ವರಾಣಾನುಭುಂಕ್ಷ್ವಭೋಗಾನ್ ॥**

ಭೂಲೋಕದಲ್ಲಿ ನೀನು ದೈತ್ಯ ಅಧಿಪತಿಯಾಗಿ ಸಕಲ ಭೋಗಗಳನ್ನು ಒಂದು ಮನ್ವಂತರ ಕಾಲ ಅನುಭವಿಸು. ನನ್ನ ಶಾಸನವನ್ನು ಶಿರಸಾವಹಿಸಿ ಪುಣ್ಯಭಾಗಿಯಾಗು.

ಹೀಗೆ ನನ್ನ ಅನೇಕ ಅವತಾರ ಕಥಾಶ್ರವಣ ಧ್ಯಾನ ಮಾಡು. ಮುಂದೆ ನಿನ್ನಿಂದ ಯಜ್ಞಗಳಿಂದ ಮುಂದಿನ ಜನ್ಮಕ್ಕೆ ಕಾರಣವಾಗದಂತೆ ಯಜ್ಞ ಹೋತೃವಾದ ನನ್ನಲ್ಲಿ ನಿಶ್ಚಲ ಭಕ್ತಿಯಿಂದ ಭಜಿಸು. ಇದರಿಂದ ನಿತ್ಯ ಸುಖಮಯ ಮೋಕ್ಷಕ್ಕೆ ಹೇತುವಾಗುವುದು.

ಪ್ರಾರಬ್ಧವನ್ನು ಅನುಭವಿಸಿಯೇ ಕಳೆದುಕೊಳ್ಳಬೇಕು. ಕರ್ಮವು ಪ್ರಾರಬ್ಧ, ಸಂಚಿತ ಆಗಾಮಿ ಎಂದು. ಸಂಚಿತ – ಈವರೆಗೂ ಮಾಡಿದ ಕರ್ಮಫಲವನ್ನು ಅನುಭವಿಸಲೇಬೇಕು. ಅದೇ ಕರ್ಮಗಳಿಂದ ಪುನರ್ಜನ್ಮಕ್ಕೆ ಕಾರಣವಾಗದಂತೆ ಪುಣ್ಯಕರ್ಮಗಳಿಂದ ಕಡಿಮೆ /

---

ಚತುರ್ಥ ಸ್ಕಂಧದಲ್ಲಿ ಬಾಲಧ್ರುವರಾಜನಿಗೂ ಇದೇ ನಾರದರು ಉಪದೇಶ ಮಾಡಿದ ಪ್ರಭಾವದಿಂದ ಶ್ರೀಹರಿ ಪ್ರತ್ಯಕ್ಷನಾದನೆಂಬುದನ್ನು ಇಲ್ಲಿ ನೆನಪಿಗೆ ತಂದುಕೊಳ್ಳಬೇಕು.

**ನಿಯುತೇನೈಕಭೂತೇನ ಮನಸಾ ವರದರ್ಷಭಮ್ । ಏವಂ ಭಗವತೋರೂಪಂ ಸುಭದ್ರಂ ಧ್ಯಾಯತೇ ಮನಃ । ನಿವೃತ್ಯಾ ಪರಮೋತೂರ್ಣಂ ಸಂಪನ್ನಂ ನ ನಿವರ್ತತೇ। ಜಪ್ಯಶ್ಚಪರಮೋ ಗುಹ್ಯಃ ಶ್ರೂಯತಾಂ ಮೇ ನೃಪಾತ್ಮಜ । ಯಂ ಸಪ್ತರಾತ್ರಂ ಪ್ರಪಠನ್ ಪ್ರಮಾನ್ ಪಶ್ಯತಿ ಖೇಚಕಾನ್ ॥**

**ಓಂ ನಮೋ ಭಗವತೇ ವಾಸುದೇವಾಯ**
**ಮಂತ್ರೇಣೇನೇನ ದೇವಸ್ಯ ಕುರ್ಯಾದ್ ದ್ರವ್ಯಮಯಿಂ ಬುಧಃ ॥**
**ಧ್ಯಾಯು ನ್ನಾರಾಯುಣಂ ದೇವಮೇವ ಮಂತ್ರಂ ಸದಾ ಜಪ ।**
**ಓಂ ನಮೋ ಭಗವತೇ ವಾಸುದೇವಾಯ ।**
**ಏಷಸಿದ್ಧಿಕರೋ ಮಂತ್ರೋದ್ವಾದಶಾಕ್ಷರ ಸಂಜ್ಞೀತೇ ॥**

ಅಥವಾ ಆಗದಂತೆ ನಡೆದುಕೊಳ್ಳಬೇಕು. ಕರ್ಮಗಳು ಪುಣ್ಯಾಪಾಪಗಳೆಂದು. ಪಾಪ ಕರ್ಮದಿಂದ ನರಕಾದಿ ಅನರ್ಥ ಲೋಕಗಳು ಪ್ರಾಪ್ತವಾಗುವುದು. ಪುಣ್ಯಕರ್ಮಗಳಿಂದ ಇಷ್ಟ ಪುಣ್ಯ ಅನಿಷ್ಟಪುಣ್ಯವೆಂದು. ಇಷ್ಟು ಪುಣ್ಯ ಕರ್ಮಾಪೇಕ್ಷೆಯಿಂದ ಲೌಕಿಕ ಸುಖ ಭೋಗಗಳನ್ನು ಪಡೆದು ಅನುಭವಿಸುವುದು. ಮುಗಿದ ನಂತರ ಪುನಃ ಜನ್ಮ ಹೊಂದುವುದು. ಇನ್ನು ಅನಿಷ್ಟಪುಣ್ಯ ಭಗವತ್ಪ್ರೀತ್ಯರ್ಥವಾಗಿ ಯಾವಾಗ ವಿಶಿಷ್ಟ ರೀತಿಯಿಂದ ಪುಣ್ಯ ಸಂಪಾದನೆ ಮಾಡಿದ್ದರಿಂದ ಮುಕ್ತಿ ಹೊಂದಲು ವಿಳಂಬವಾಗುವುದು. ಆದಕ್ಕಾಗಿ ಹೆಚ್ಚಿನ ಪುಣ್ಯ ದಾನ ಆಶೀರ್ವಾದ ವರ ಪಡೆಯುವುದುದರಿಂದ ಕಳೆದುಕೊಳ್ಳಬೇಕು. ಅಲ್ಲಿಯವರೆಗೂ ಲೋಕದಲ್ಲಿ ಅವತರಿಸುತ್ತಾರೆ. (ಶ್ರೀಜಯತೀರ್ಥರು, ವಾದಿರಾಜರು, ಶ್ರೀಪಾದರಾಜರು, ರಘೋತ್ತಮರು, ರಾಘವೇಂದ್ರರು, ವಿಜಯದಾಸರೇ ಸಾಕ್ಷಿ).

ಇಲ್ಲಿ ನರಸಿಂಹನು ಪ್ರಹ್ಲಾದನಿಗೆ ನಿನ್ನ ಅನಿಷ್ಟ ಪುಣ್ಯವನ್ನು ಭೋಗಾದಿಗಳಿಂದ (ರಾಜನಾಗಿದ್ದರಿಂದ) ಅನುಭವಿಸಲೇಬೇಕು. ಹಾಗೆ ಅದನ್ನು ಕಳೆದುಕೊಂಡು ದಯ ದಾನಾದಿಗಳಿಂದ ಕಡಿಮೆ ಮಾಡಿಕೊ. ಕಾಲ ಮುಗಿದ ನಂತರ ಈ ಪ್ರಾರಬ್ಧ ದೇಹವನ್ನು ಕಳೆದುಕೊಂಡು ದೇಹತ್ಯಾಗ ಮಾಡು.

ನಿನ್ನ ಕೀರ್ತಿ ಸುರಲೋಕದಲ್ಲಿ ಗಂಧರ್ವಾದಿಗಳು ಹೊಗಳುತ್ತಾರೆ. ಕೊನೆಗೆ ನನ್ನ ಅನುಗ್ರಹದಿಂದ ನನ್ನ ಲೋಕಕ್ಕೆ ಬರುವೆ.

**ಭೋಗೇನ ಪುಣ್ಯಂ ಕಶಲೇನ ಪಾಪಂಕಲೇವರಂ ಕಾಲಜವೇನ ಹಿತ್ವಾ ।**
**ಕೀರ್ತಿಂ ವಿಶುದ್ಧಾಂ ಸುರಲೋಕಗೀತತೌವಿತಾಯ ಮಾಮೇಷ್ಯಸಿ ಮುಕಬಂಧಃ ॥** ೧೧೧೪

ಭಕ್ತ, ಬಾಲ ಪ್ರಹ್ಲಾದ, ನೀನು ಸ್ತುತಿಸಿದುದನ್ನು ಯಾರು ನಿತ್ಯ ಯೋಗ್ಯಕಾಲದಲ್ಲಿ ಸ್ಮರಿಸುತ್ತಾರೋ, ಭಕ್ತಿಯಿಂದ ಪಾರಾಯಣ ಮಾಡುತ್ತಾರೋ ಅವರು ಕರ್ಮಫಲ ನೀಡುವ ಸಂಸಾರದಿಂದ ಮುಕ್ತರಾಗಿ ನನ್ನನ್ನು ಸೇರುತ್ತಾರೆ. ಅದನ್ನು ನಿಷ್ಕಾಮವೆನ್ನಲಾಗಿದೆ.

**ನಿಷ್ಕಾಮಂ ಜ್ಞಾನಪೂರ್ವಂಚ ನಿವೃತ್ತ ಮಿಹ ಚೋಚ್ಯತೆ ।**
**ನಿವೃತ್ತಂ ಸೇವಮಾನಸ್ತು ಬ್ರಹ್ಮಾಭ್ಯೇತಿ ಸನಾತನಮ್ ॥**

**ಯ ಏತತ್ ಕೀರ್ತಯೇನ್ಮಹ್ಯಂ ತ್ವಯಾ ಗೀತಮಿದಂ ನರಃ ।**
**ತ್ವಾಂ ಚ ಮಾಂ ಚ ಸ್ಮರನ್ ಕಾಲೇಕರ್ಮ ಒಂದಾದ್ವೆಮುಚ್ಯತೇ ॥**

ಪ್ರಹ್ಲಾದ ಹೇಳುತ್ತಾನೆ. ನಾನು ಹರಿಪ್ರೀತಿ ಒಳಗಾಗಿ ಅನುಗ್ರಹಿತನಾದರೆ ಪ್ರಾರ್ಥಿಸುತ್ತಾನೆ. ಜಗನ್ನಿಯಾಮಕ,

ನನಗೆ ಜನ್ಮಕೊಟ್ಟ ಹಿರಣ್ಯಕಶಿಪು ಅಸುರರಾಜನಾಗಿ ನಿಷ್ಕಂಟಕನಾಗಿ ನಿನ್ನ ಮೇಲೆ ದ್ವೇಷ ಮಾಡಿದ. ನನ್ನ ಚಿಕ್ಕಪ್ಪ ಹಿರಣ್ಯಾಕ್ಷನನ್ನು ನೀನು ಸಂಹರಿಸಿದ ಕಾರಣದಿಂದ ಹರಿದ್ವೇಷವು ಮತ್ತಷ್ಟು ಹೆಚ್ಚಾಗಿ, ಚಿತ್ರ ವಿಚಿತ್ರ ವರಗಳನ್ನು ಸಂಪಾದನೆ ಮಾಡಿ ಮದೋನ್ಮತ್ತನಾಗಿ ಸಜ್ಜನರು, ಮುನಿಗಳಿಗೆ ನಾನಾ ವಿಧ ಹಿಂಸೆಕೊಟ್ಟು ಅಲ್ಲದೆ ನಿನ್ನ ಭಕ್ತನೆನಿಸಿಕೊಂಡ ನನ್ನನ್ನೂ ಕೊಲ್ಲುವುದಾಗಿ ನಾನಾಪರಿ ಪ್ರಯತ್ನಪಟ್ಟರೂ ನಿನ್ನ ಪೂರ್ಣ ಕಟಾಕ್ಷದಿಂದ ನನಗೇನೂ ಆಗಲಿಲ್ಲ. ನಿನ್ನನ್ನು ನಿಂದಿಸಿ, ದ್ವೇಷಿಸಿ ತಾನೇ ಜಗತ್ಪ್ರಭು ಎಂದು ಕೂಗಾಡಿದವನು ಅಂಧಃ ತಮಸ್ಸಿಗೆ ಬೀಳಬೇಕು. ಆದರೆ ನನ್ನ ಕೋರಿಕೆ, ದೇವಾ ಅಂತಹ ಪಾಪಿಯಾದ ನನ್ನ ಜನಕನನ್ನು ಪವಿತ್ರನನ್ನಾಗಿ ಶುದ್ಧಗೊಳಿಸು.

ಈಗಾಗಲೇ ನಿನ್ನ ಕರಸ್ಪರ್ಶದಿಂದಲೂ ನಿನ್ನನ್ನು ನೋಡುತ್ತಲೇ ಮರಣಿಸಿದಾಗ ಶುದ್ಧನಾಗಿರುವನು. ದಯಮಾಡಿ ನನ್ನ ತಂದೆಯ ಪಾಪರಾಶಿಯನ್ನು ಗಣನೆಗೆ ತೆಗೆದುಕೊಳ್ಳದೇ ಅನುಗ್ರಹಿಸು ಎಂದಿಷ್ಟೇ ಬೇಡುವೆನು. ಸರ್ವಜ್ಞನಾದ ನಿನಗೆ ಹೊಸದಾಗಿ ಹೇಳುತ್ತಿಲ್ಲ. ಎಲ್ಲವನ್ನೂ ತಿಳಿದಿರುವೆ.

ಭಗವಂತ, ನರಸಿಂಹದೇವ ಪ್ರಸನ್ನನಾಗಿ, ಪರಿಶುದ್ಧನಾದ ಪ್ರಹ್ಲಾದ ನೀನು ರಾಕ್ಷಸಜಾತಿಯಲ್ಲಿ ಹುಟ್ಟಿದಾಕ್ಷಣದಿಂದ ನಿನ್ನ ಕುಲದಲ್ಲಿ ಹುಟ್ಟಿದ ಇಪ್ಪತ್ತೊಂದು ಪಿತೃಗಳು ಪವಿತ್ರರಾಗಿರುತ್ತಾರೆ. ಯೋಚಿಸಬೇಡ.

**ಸಪ್ತಭಿಃ ಪಿತಾಪುತ್ರಾಃ ಪಿತೃಭಿಃ ಸಹತೇ ಅನಘಾ ।**
**ಯತ್ಸಾಧೋಽಸ್ಯ ಕುಲೇ ಜಾತೋ ಭವಾನ್ ವೈಕುಲ ಪಾವನಃ ॥** (೧೦–೧೯)

ಯಾವ ದೇಶವೇ ಆಗಲಿ, ನೀಚಯಾನಿಗಳಲ್ಲಿ ಹುಟ್ಟಿದರೂ ನಿನ್ನಂತೆ ಶ್ರೀಹರಿಯು ಎಲ್ಲಾ ಪ್ರಾಣಿ ದೇಶಗಳಲ್ಲಿ ಅಂತರ್ಯಾಮಿಯಾಗಿಯೂ, ನಿಯಾಮಕನಾಗಿಯೂ ವಿಶಾನ ರಹಿತನಾಗಿ ನಾನು ಇರುವೆನೆಂದು ನನ್ನನ್ನು ಸಮದರ್ಶಿ ಎಂದೆ ಹೇಳಿಸಿಕೊಳ್ಳುತ್ತೇನೆ. ಹೀಗೆ ತಿಳಿದು ನನ್ನನ್ನು ಭಜಿಸುವ ನೀನು ಸಂಚರಿಸುವೆಯೋ ಅವೆಲ್ಲವೂ ಪವಿತ್ರಗೊಳ್ಳುವುದರಲ್ಲಿ ಸಂದೇಹವೇ ಇರುವುದಿಲ್ಲ.

ನಡವಳಿಕೆ ಭಗವಂತನ ವಿಷಯ ನಿಶ್ಚಿತ ಜ್ಞಾನವುಳ್ಳವರೆಲ್ಲಾ ನಿನ್ನಂತೆ ಎಲ್ಲರೂ ನನಗೆ ಭಕ್ತರಾಗಿರುತ್ತಾರೆ.

**ಭವಾನ್ ಮೇಖಲು ಭಕ್ತಾನಾಂ ಸರ್ವೇಷಾಂ ಪ್ರತಿರೂಪದೃಕ್ ।**

(ನಾರದರು ತಾತ್ವಿಕ ದೇವತೆಗಳನ್ನು ಬಿಟ್ಟು) ಬಾಕಿ ಎಲ್ಲರಿಗೂ ನೀನು ದೃಷ್ಟಾಂತ ಮಾರ್ಗದರ್ಶಿಯಾಗಿರುವೆ. ಇಷ್ಟು ಹೇಳಿ ಭಗವಂತನು ಪ್ರಹ್ಲಾದ, ಮುಂದಿನ ಕರ್ತವ್ಯ ನಿನ್ನ ತಂದೆಯ ಪಾರ್ಥಿವ ಶರೀರಕ್ಕೆ ಉತ್ತರಕ್ರಿಯೆ ಮಾಡು. ನನ್ನ ಕರಸ್ಪರ್ಶದಿಂದ ಪವಿತ್ರವಾಗಿರುವುದು ಅವನ ದೇಹ. ನಿನ್ನಂತಹ ಸತ್ಪುತ್ರನನ್ನು ಹೊಂದಿದ ಹಿರಣ್ಯಕಶಿಪುವಿಗೆ ಯಾವಾಗಲೋ ಉತ್ತಮ ಗತಿ ಆಗಿರುವುದು.

ನಿನ್ನ ತಂದೆ ಆಳಿದ ರಾಕ್ಷಸ ರಾಜ್ಯಕ್ಕೆ ಉತ್ತರಾಧಿಕಾರಿಯಾಗಿ, ಸಿಂಹಾಸನಾರೂಢನಾಗಿ ಬ್ರಹ್ಮಜ್ಞಾನಿಯಾದ ನಿನಗೆ ಕುಲಪುರೋಹಿತರಾದ ಶುಕ್ರಾಚಾರ್ಯರು ಪಟ್ಟಾಭಿಷೇಕ ಮಾಡುತ್ತಾರೆ. ಅವರ ಉಪದೇಶದಂತೆ ರಾಜ್ಯವನ್ನು ಧರ್ಮದಿಂದ ನಡೆಸಿ ನನ್ನಲ್ಲೇ ಮನಸ್ಸನ್ನು ಇಟ್ಟು ರಾಜ್ಯಭಾರ ನನ್ನ ಪೂಜೆ ಎಂದು ತಿಳಿದು ಸರ್ವ ಪುಣ್ಯಫಲ ನನಗೆ ಅರ್ಪಿಸು ಎಂದು ಹೇಳಿದನು. ಪ್ರಹ್ಲಾದನು ಪಟ್ಟಾಭಿಷಿಕ್ತನಾಗಿ ಹರಿಯಾಜ್ಞೆಯಂತೆ ಪ್ರಹ್ಲಾದರಾಜನಾಗಿ ರಾಜ್ಯವನ್ನಾಳಿದ.

ಶ್ರೀಹರಿ ನೃಸಿಂಹಾವತಾರ ತಾಳಿ ಉಗ್ರ ನೃಸಿಂಹ ದೇವ ಉಗ್ರತ್ವವನ್ನು ತ್ಯಜಿಸಿ ಪ್ರಸನ್ನ ಮುಖವುಳ್ಳವನಾಗಿ ದೂರ ನಿಂತಿರುವ ಲಕ್ಷ್ಮೀದೇವಿಯನ್ನು ತನ್ನ ತೊಡೆಯ ಮೇಲೆ ಕೂಡಿಸಿದ್ದರಿಂದ **ಶ್ರೀಲಕ್ಷ್ಮೀನೃಸಿಂಹ**ನೆಂದೇ ಕರೆಯಿಸಿಕೊಂಡ ಮಹಾಪ್ರಭು ಬ್ರಹ್ಮದೇವರ ಸ್ತೋತ್ರವನ್ನು ಕೇಳಿ,

ಬ್ರಹ್ಮದೇವ, ಈ ದುಷ್ಟ ದೈತ್ಯನಿಗೆ ಇಂತಹ ವರಗಳನ್ನು ಏಕೆ ಕೊಟ್ಟೆ ? ಹಾವಿಗೆ ಹಾಲು ಕುಡಿಸಿದಂತಾಯಿತು. ಇನ್ನು ಮುಂದಾದರೂ ವರ ಕೊಡುವ ಮುಂಚೆ ಜಾಗ್ರತೆ ಇರಲಿ ಎಂದು ಹಾಸ್ಯ ಮಾಡಿದನು.

ಬ್ರಹ್ಮದೇವ : ವರಕೊಡಲು ನನಗೇನು ಸ್ವಾತಂತ್ರವಿದೆ ದೇವ ? ನನ್ನಲ್ಲಿ ನಿಂತು ನೀನೇ ನುಡಿಸಿದ್ದನ್ನು ನನ್ನ ಬಾಯಿಯಿಂದ ಬರುವಂತೆ ಮಾಡಿದೆ. ಆದರೂ ನಿನ್ನ ಜೇಷ್ಠ ಪುತ್ರನಾದ ನನ್ನ ಮಾತನ್ನು ಸತ್ಯವನ್ನಾಗಿ ಮಾಡಿದೆಯಲ್ಲಾ. ಕರುಣಾಸಾಗರ ಶ್ರೀನೃಸಿಂಹ ನಿನಗೆ ನಮೋ ನಮಃ.

ಹೀಗೆ ಬ್ರಹ್ಮದೇವರಿಂದ ಪೂಜಿತನಾಗಿ ಶ್ರೀಹರಿಯು ಅಂತರ್ಧಾನ ಹೊಂದಿದನು.

**ಇತ್ಯುಕ್ತ್ವಾ ಭಗವಾನ್ ರಾಜನ್ ತತಶ್ಚಾಂತರ್ದಧೇ ಹರಿಃ**
**ಅದೃಶ್ಯಃ ಸರ್ವಭೂತಾನಾಂ ಪೂಜಿತಃ ಪರಮೇಷ್ಠಿನಾ ॥**

**ಹರಿಃ ಓಂ ಸಂಪೂರ್ಣಂ**
**ಶ್ರೀನೃಸಿಂಹಾರ್ಪಣಮಸ್ತು**



## ವಿಶೇಷಾಂಶಗಳು

**ಸ್ತಂಭಾರ್ಭಕಾಸಹನ ಡಿಂಭಾಯ ದತ್ತವರ ಗಂಭೀರನಾದ ನೃಹರೇ ।**
(ಶ್ರೀವಾದಿರಾಜರ ದಶಾವತಾರಸ್ತುತಿಃ)

ಶ್ರೀವಾದಿರಾಜರು ಭಗವಂತ ಅವತಾರ ಮಾಡಲು ಕಂಭವನ್ನು ಸೀಳಿ ಹೊರಗೆ ನೃಸಿಂಹರೂಪದಿಂದ ಪ್ರಕಟನಾದ ಎಂದಿದ್ದಾರೆ. (ಭಾಗವತದಲ್ಲಿಯೂ ಹೀಗೇ ವರ್ಣಿತವಾಗಿದೆ.)

ಶ್ರೀವಾದಿರಾಜರು ಹರಿಯನ್ನು ಕಂಭದ ಮಗನೇ ಎಂದು ಕರೆದಿದ್ದಾರೆ. ಇದರಿಂದ ಎರಡು ಅಂಶಗಳು ತಿಳಿಸಲಾಗಿದೆ. (೧) ಕಂಭ ಮರದಿಂದಲಾಗಲೀ, ಮಣ್ಣಿನಿಂದಾಗಲಿ, ಕಲ್ಲಿನಿಂದಾಗಲೀ ತಯಾರಾಗುವುದು. ಆಗ ಅದು ಜಡ (ನಿರ್ಜೀವ) ಪದಾರ್ಥ. ಶ್ರೀಹರಿ ಜಡಮಯವಾದ ಕಂಭದಿಂದ ಹೇಗೆ ಹುಟ್ಟಿದ ? ಮಗು ಜನಿಸಬೇಕಾದರೆ ತಾಯಿಯ ಉದರದಿಂದಲೇ ಹುಟ್ಟಬೇಕಲ್ಲವೇ ? (೨) ಚೇತನ ಪದಾರ್ಥಗಳು ಹೀಗಿರುವಾಗ ಜಡರೂಪ ಕಂಭವು ಮಗನಿಗೆ ಜನನಿ ಹೇಗಾಗುವುದು ? ಎಂದು ಪ್ರಶ್ನೆ ಮಾಡಬೇಡಿರಿ.

ಭಗವಂತ ಸಮಸ್ತ ಜಗತ್ತನ್ನು ಸೃಷ್ಟಿಸಲು ಅಚಿತ್ ಪ್ರಕೃತಿರೂಪವನ್ನು ಉಪಾದವನ್ನಾಗಿ ಮಾಡಿಕೊಂಡು ಸೃಷ್ಟಿಸುತ್ತಾನೆ. ಸೃಷ್ಟಿಸಿದ ಜಗತ್ತು ಜಡ ಆದರೆ ಜಡ ರೂಪ. ಜಗತ್ತಿಗೆ ಪ್ರವೃತ್ತಿ ಹುಟ್ಟಲೂ ತಾನು ಅದರಲ್ಲಿ ಪ್ರವೇಶಮಾಡುತ್ತಾನೆ. ಹಾಗೆಂದ ಮಾತ್ರಕ್ಕೆ ಮಾಯಾವಾದಿಗಳು ತಿಳಿಸಿದಂತೆ ಬ್ರಹ್ಮನೇ ಜಗತ್ತಾದ ಎನ್ನುವುದನ್ನು ನಿರಾಕರಿಸಲು "ತತ್ಸೃಷ್ಟ್ವಾ ತದೇನುಪ್ರಾವಿಶತ್" ಎಂಬಂತೆ ನಾನು ನಿಮಿತ್ತ ಕಾರಣನು ಅಂದ ಮೇಲೆ ಕಂಭವು (ದಲ್ಲಿ ಭಗವಂತೆ ಇದ್ದೇ ಇದ್ದ.) ಸಕಲ ಚರಾಽಚರಾತ್ಮಕ ವಸ್ತುಗಳಲ್ಲಿ ಬ್ರಹ್ಮನು ಸದಾ ಇರುತ್ತಾನೆ. ಸರ್ವವ್ಯಾಪ್ತನಾದ ಶ್ರೀಹರಿ ಒಂದು ಕಂಭದಲ್ಲಷ್ಟೇ ಅಲ್ಲದೆ ಸಭಾ ಎಲ್ಲಾ ಕಂಭಗಳಲ್ಲಿಯೂ ಅವ್ಯಕ್ತನಾಗಿ ಇದ್ದೇ ಇದ್ದ. ಈ ರೀತಿ ಪ್ರಹ್ಲಾದನಿಗೆ ಗೋಚರವಾಗುತ್ತಿತ್ತು. ಹಿರಣ್ಯಕನ ಪ್ರಶ್ನೆಗೆ ಉತ್ತರವಾಗಿ ಕಂಭದಿಂದಲೇ ಉದ್ಭವಿಸಿದ. ಹೀಗಾಗಿ ಕಂಭವೇ ಪರಮಾತ್ಮನಿಗೆ ಜನನೀ ಸಮಾನವಾಯಿತೆಂದು ತಿಳಿಸಲು ಶ್ರೀವಾದಿರಾಜರು ಚಮತ್ಕಾರವಾಗಿ ಕಂಭದ ಮಗನೆಂದು ತಿಳಿಸಿರುತ್ತಾರೆ.

ಇದರಿಂದ ಇನ್ನೊಂದು ತತ್ವವು ಹೊರಬೀಳುವುದು. ನಮ್ಮಂತೆ ಪರಮಾತ್ಮನಿಗೆ ಮಾತಾಪಿತೃಗಳ ಅವಶ್ಯಕತೆ ಬೇಕಿಲ್ಲವೆಂದಿರಿ. ನಿಮ್ಮ ವಿವರಣೆ ಸರಿಯಲ್ಲ. ಏಕೆಂದರೆ ಶ್ರೀರಾಮಚಂದ್ರ ಭಾರ್ಗವ ರಾಮ, ಕಪಿಲ, ವಾಮನ, ಶ್ರೀಕೃಷ್ಣಾದಿ ಅವತಾರಗಳಲ್ಲಿ ತಂದೆತಾಯಿ ನಿಮಿತ್ತ ಮಾತ್ರವಾಗಿರುವುದನ್ನು ಸ್ಪಷ್ಟವಾಗಿ ಪುರಾಣಗಳಲ್ಲಿ ತಿಳಿಸಿರುವಾಗ ಮಾತಾಪಿತೃಗಳ ಅವಶ್ಯಕತೆ ಇಲ್ಲದೆ ಹೇಗೆ ಹುಟ್ಟಲು ಸಾಧ್ಯ ?

ಪರಮಾತ್ಮನು ಸ್ವಾಯಂಭೂವಿಗೆ ಆಕೂತಿ, ದೇವಹೋತಿ, ಪ್ರಸೂತಿ ಎಂಬ ಮೂರು ಹೆಣ್ಣುಮಕ್ಕಳು.

೧. ಆಕೂತಿ – ರುಚಿಪ್ರಜೇಶ್ವರನ ಮಡದಿ. **ಯಜ್ಞನಾಮಕ ಹರಿ** ಜನಿಸಿದ.

೨. ದೇವಹೂತಿ – ಕರ್ದಮರ ಹೆಂಡತಿ. **ಕಪಿಲನಾಗಿ ಹರಿ** ಅವತಾರ.

೩. ಪ್ರಸೂತಿ – ದಕ್ಷಪ್ರಜೇಶ್ವರನ ಮಡದಿ. ಮಗಳೇ ಸತೀದೇವಿ ಶಿವನ ಹೆಂಡತಿ.

೪. ಪ್ರುಷ್ನಿ + ಸುತಪನನ್ನು ಲಗ್ನವಾಗಿ **ವಾರ್ಷ್ಣೇಯ ಶ್ರೀಹರಿ.**

೫. ಅದಿತಿ + ಕಶ್ಯರಲ್ಲಿ **ವಾಮನ** ಅವತಾರ.

೬. ಜಮದಗ್ನಿ – ರೇಣುಕೆಯರ ಮಗ **ಪರಶುರಾಮ.**

೭. ದಶರಥ ಕೌಸಲ್ಯ **ಶ್ರೀರಾಮ**ನ ಅವತಾರ.

೮. ದೇವಕೀ ವಸುದೇವರಲ್ಲಿ **ಶ್ರೀಕೃಷ್ಣ**ನಾಗಿ ಅವತಾರ.

೯. ಸತ್ಯವತೀ ಪರಾಶರರಲ್ಲಿ **ವೇದವ್ಯಾಸ**ರಾಗಿ ಅವತಾರ.

೧೦. ನಾಭಿರಾಜ ಮೇರುದೇವಿ ನಿಮಿತ್ತ **ಋಷಭ**ನಾಗಿ ಅವತಾರ.

೧೧. ಮಹೀದಾಸನಾಗಿ ಇತರಾದೇವಿಯಲ್ಲಿ ಅವತರಿಸಿದನೆಂದಿರುವುದು.

ಹೀಗೆ ಭಗವಂತ ಹುಟ್ಟಲು ತಾಯಿ ತಂದೆಯರ ಮೂಲಕವೇ ಆಗಿರುವುದು. ಆದ್ದರಿಂದ ವರಾಹ ನಾರಸಿಂಹ ಅವತಾರಗಳು ಯಾವ ಉದರದಿಂದಲೂ ಹುಟ್ಟಲಿಲ್ಲ ಎನ್ನುವುದನ್ನು ಹೇಗೆ ಸಮರ್ಥಿಸಬೇಕು ?

ಉತ್ತರ : ನಿಮ್ಮ ಪ್ರಶ್ನೆಯಲ್ಲಿಯೇ ಉತ್ತರ ತಿಳಿಸಿರುತ್ತೀರಿ. ಶ್ರೀಮನ್ನಾರಾಯಣನಿಗೆ ಗರ್ಭವಾಸವಿರುವುದಿಲ್ಲ. ಹಾಗೇನೇ ರಮಾದೇವಿಗೂ ಅವಳ ಅವತಾರಗಳಲ್ಲಿಯೂ ಗರ್ಭವಾಸ ಕಂಡುಬರುವುದಿಲ್ಲ. ಮುಖ್ಯಪ್ರಾಣ ದೇವರಿಗೂ ಸಹ ಗರ್ಭವಾಸ ಇರುವುದಿಲ್ಲ. ಪರಮಾತ್ಮನು ಹುಟ್ಟಿದನೆಂದರೆ ಪ್ರಾದುರ್ಭಾವವೆಂದೇ ತಿಳಿಯಬೇಕು. ಶ್ರೀಕೃಷ್ಣನ ಅವತಾರವೇ ನಿದರ್ಶನ.

ತಾಯಿ ತಂದೆಗಳಲ್ಲಿ ಅವತರಿಸಬೇಕಾದರೆ ಆ ಮಹಿಮರು ಮಾಡಿದ ತಪಸ್ಸಿಗೆ ಮೆಚ್ಚಿ ಅವರ ಪ್ರಾರ್ಥನೆಯಂತೆ ತಾನೂ ಅವರನ್ನು ನೆಪಮಾಡಿಕೊಂಡು ಅವರಿಗೆ ಲೋಕದಲ್ಲಿ ಭಗವಂತನ ತಾಯಿ ತಂದೆ ಎನಿಸಿಕೊಂಡ ಕೀರ್ತಿ ಪಡೆಯಲೆಂದೇ ಅವತಾರ ಮಾಡಿದನೇ ಹೊರತು ಗರ್ಭವಾಸವಿರುವುದಿಲ್ಲ.



ಇಲ್ಲಿ ನೃಸಿಂಹದೇವ ಕಂಭದಿಂದ ಬಂದಿದ್ದರಿಂದ ಅಥವಾ ತಾನೇ ಅವತಾರ ಮಾಡಬೇಕೆಂದು ಸಂಕಲ್ಪ ಮಾಡಿದಾಗ ಮಾತಾಪಿತೃಗಳ ಅವಶ್ಯಕತೆ ಬೇಕಿಲ್ಲ ಎಂದೂ ಲೋಕಕ್ಕೆ ತಿಳಿಸಲು ಅವತರಿಸಿದ. ಇದನ್ನೆ ಪ್ರಾದುರ್ಭಾವವೆನ್ನಲಾಗಿದೆ.

ಅದೇ ರೀತಿ ಹೇಗೆ ಬಂದನೋ ಹಾಗೇ ಅಂತರ್ಧಾನ ಹೊಂದಿದ.

**ಓಂ ಪೂರ್ಣಮದಃ ಪೂರ್ಣಮಿದಂ ಪೂರ್ಣಾತ್ ಪೂರ್ಣಮುದುಚ್ಯತೆ ।**
**ಪೂರ್ಣಸ್ಯ ಪೂರ್ಣಮಾದಾಯ ಪೂರ್ಣಮೇವಾವಶಿಷ್ಯತೇ ॥**

ಸರ್ವತ್ರ ವ್ಯಾಪ್ತನಾದ ಸರ್ವರಲ್ಲಿ ಇರುವ ಶ್ರೀಹರಿ ಹಿರಣ್ಯಕಶಿಪು "ಈ ಕಂಭದಲ್ಲೇಕೆ ಕಾಣಿಸುತ್ತಿಲ್ಲ?" ಎಂದದ್ದಕ್ಕೆ ಪ್ರಹ್ಲಾದನು "ನನಗೆ ಕಾಣಿಸುತ್ತಿದ್ದಾನೆ" ಎಂದಾಗ ಕಶ್ಯಪನು "ಹಾಗಾದರೆ ಕರಿ ನಿನ್ನ ಹರಿಯನ್ನು" ಅಂದಾಗ ಇಬ್ಬರ ಮಾತನ್ನು ಸತ್ಯಮಾಡಬೇಕೆಂದು ತಾನು ಕಂಭದಿಂದ ಹೊರಬಂದ.

ಇನ್ನು ನಾರಸಿಂಹನಾಗಿ ಅರ್ಧ ನರ, ಅರ್ಧ ಸಿಂಹನಾಗಿ ಏಕೆ ಬಂದ ?

ಹಿರಣ್ಯಕಶಿಪುವಿನ ವರವೇನಿತ್ತು ? ತನಗೆ ಮರಣವು ಸಂಭವಿಸುವುದಾದರೆ (ನಾನು ಸಂಹೃತನಾಗುವುದಾದರೆ) ಸುಮಾರು ೨೬ ರೀತಿಗಳಿಂದ ತಾನು ಸಾಯಬಾರದು ಅಂತ ಕೇಳಿದಾಗ "ನ ಭೂತಾ ನಾಂಬರೇ ಮೃತ್ಯುರ್ನರೈರ್ನ ಮೃಗೈರಪಿ" ಎಂದು ವರಪಡೆದ. ಇಲ್ಲಿ **"ನ ಮೃಗೈರಪಿ"** ತಾನು ಬಯಸಿದಾಗ ಕಶ್ಚನ ನರಿ, ತೋಳ, ಹುಲಿ, ಚಿರತೆ ಇತ್ಯಾದಿಗಳಿಂದ ಮರಣವಾಗಬಾರದೆಂದು ಅಂದುಕೊಂಡನೇ ವಿನಃ ನರ(ಸಿಂಹ)ದಿಂದಾಗುವುದೆಂದು ಊಹಿಸಲೇ ಇಲ್ಲ.

ಹಿರಣ್ಯಕಶಿಪು ರಾಕ್ಷಸ ರಾಜ. ರಾಜನನ್ನು ರಾಜನೊಂದಿಗೆ ಯುದ್ಧಮಾಡಲು ಯಃ ಕಶ್ಚಿತ್ ಸಾಮಾನ್ಯ ಯೋಧನಾಗಬಾರದು. ರಾಜನೇ ಆಗಬೇಕು. ಸಮಸಮ ಬಲ ಪರಾಕ್ರಮವಿರಬೇಕು. ಸಿಂಹವು ವನರಾಜ. ಎಲ್ಲಾ ಪ್ರಾಣಿಗಳು ಸಿಂಹನನ್ನು ನೋಡುತ್ತಲೇ ಹೆದರಿ ಓಡಿಹೋಗುವುದು. ಆದ್ದರಿಂದ ವನರಾಜನಾದ ಸಿಂಹ ರಾಕ್ಷಸ ರಾಜನನ್ನು ಎದುರಿಸಿ ಸಂಹರಿಸಲು ಸಿಂಹರೂಪ ತಾಳಿದ. ನರರಿಂದಲೂ ಸಾವು ಬೇಡವೆಂದಿದ್ದ. ಆದ್ದರಿಂದ ನರನ ದೇಹ ಸಿಂಹ ಶಿರಸ್ಸು ಮಿಶ್ರಣವಾಗಿ ನರಸಿಂಹನೆಂದೆನಿಸಿಕೊಂಡ.

ಪ್ರಹ್ಲಾದನ ಇಷ್ಟವೂ ಹೀಗೆ ಆಗಿತ್ತೆಂದು ತಿಳಿದು ಶ್ರೀಹರಿ ಅವನಿಗೆ **"ದೃಷ್ಟುಮಿಚ್ಛಸಿ ಅಕ್ಷಿಭ್ಯಾಂಸ್ತು ಹಿತಂ ಭಕ್ತವತ್ಸಲಂ"** ಪ್ರಹ್ಲಾದ ನಿನ್ನ ಹೃದಯದಲ್ಲಿರುವ ನನ್ನ ರೂಪವನ್ನು (ನೃ. ಪುರಾಣ) ನೋಡಬೇಕೆಂಬ ಅಪೇಕ್ಷೆ ಇದೆಯಾ ? ಹಾಗಾದರೆ ನನ್ನನ್ನು ಸ್ತೋತ್ರಮಾಡು. ಹೀಗೆ ಪರಮಾತ್ಮನನ್ನು ಕನಸಿನಲ್ಲಿ ಕೇಳಿದಂತೆ ಸ್ತುತಿಸಿದಾಗ ಶಂಖಚಕ್ರಧಾರಿ ಅವನ ಮುಂದೆ ಕಾಣಿಸಿಕೊಂಡನು. ಪೂರ್ಣ ರೂಪವನ್ನು ನೋಡಿ ಆನಂದಪಡುತ್ತಿದ್ದಾಗ ಶ್ರೀಹರಿ

ಹೇಳಿದ. ಭಕ್ತ ಪ್ರಹ್ಲಾದ, ನನಗೆ ನೀನು ಅತಿ ಪ್ರೀತಿಪಾತ್ರನು. ನಿನ್ನ ಅಚಲ ಭಕ್ತಿಗೆ ಸಂತುಷ್ಟನಾಗಿರುವೆನು. ಹೇಳು. ನನ್ನ ಅವತಾರಗಳಲ್ಲಿ ಯಾವುದನ್ನು ಕಾಣಬೇಕೆಂದು ನಿನ್ನ ಕೋರಿಕೆ ? ಅದೇ ತೋರಿಸುತ್ತೇನೆ.

ಸ್ವಾಮೀ, ನನಗೇನೂ ಬೇಡ. ನಿನ್ನಲ್ಲಿ ನಿಶ್ಚಲ ಭಕ್ತಿ ಪ್ರಸಾದ ಮಾಡು ಎಂದಾಗ ಪರಮಾತ್ಮ ಹೇಳಿದ. ನಿನ್ನ ಸಕಲ ಇಷ್ಟಾರ್ಥವೂ ಸಂಪೂರ್ಣವಾಗಲಿ. ಇಂದಿನಿಂದ ಎರಡು ಮೂರು ದಿನಗಳಲ್ಲಿ ದುಷ್ಟ ರಾಕ್ಷಸನನ್ನು ಸಂಹರಿಸಲು ನಾನು **ನೃಸಿಂಹರೂಪ**ದಿಂದ ಕಾಣಿಸುವೆನು. ಆಗ ನೋಡುವೆ ನನ್ನ ಅದ್ಭುತ ರೂಪವನ್ನು ಎಂದ.

**ಪುನಃ ದ್ವಿತ್ರಿದಿನ್ಯೈಃ ತ್ವಂ ಮಾಂ ದೃಷ್ಟ್ವಾ ದೃಷ್ಟವಧೋದ್ಯತಂ ।**
**ಅಪೂರ್ವಾವಿಷತಾಕಾರಂ ನೃಸಿಂಹಂ ಪಾಪಭೀಷಣಂ ॥** ನೃ.ಪು. ೪೩ – ೮೬

ಪ್ರಹ್ಲಾದನು ಹೇಳಿದಂತೆ ವರ ಕೊಡುವುದಾದರೆ ನನ್ನನ್ನು ಈ ಭವ ಸಂಸಾರದಲ್ಲಿ ಬಿದ್ದವನನ್ನು ಮೇಲಕ್ಕೆ ಎತ್ತಿ ನಿನ್ನ ಲೋಕವನ್ನು ಸೇರುವಂತೆ ಅನುಗ್ರಹಿಸು. ಹನುಮಂತ ದೇವರೂ ಸಹ ಇದೇ ವರವನ್ನು ಬೇಡಿದನು.

**ನ ರಾಮರಾಜ್ಯೈಽಸುಲಭಂಚ ಕಿಂಚಿತ್ ತತ್ಪಾದಸೇವಾ ರತಿನ್ಯೈಚಚ್ಚತ್**
**ತಥಾಪಿಽಭೋಗಾನನುಸಾವಿರಕ್ತಿ ।**
**ಪ್ರವರ್ಧತಾಂ ಭಕ್ತಿರಲಂಕ್ಷಣೇಕ್ಷಣೇತ್ವಯೀಶ ಹ್ರಾಸವಿವರ್ಜಿತಾಸದಾ ॥** (ತಾ.ನಿ.)

ಪ್ರಹ್ಲಾದನನ್ನು ಒಂದು ಮನ್ವಂತರ ಕಾಲ ರಾಜ್ಯವನ್ನಾಳಬೇಕೆಂದು ಶ್ರೀನೃಸಿಂಹದೇವರ ಆದೇಶವಿದ್ದಿತು. (ಮನ್ವಂತರ = ಮಾನವ ಸಂಖ್ಯಾ ಪ್ರಕಾರ ೩೦ ಕೋಟಿ ೬೭ ಲಕ್ಷ ೩೦ ಸಾವಿರ ವರ್ಷಗಳು).

ಶ್ರೀನೃಸಿಂಹದೇವ ದೈತ್ಯ ಹಿರಣ್ಯಕಶಿಪುವನ್ನು ಸಂಹರಿಸಲು ಯಾವ ಆಯುಧಗಳನ್ನೂ ಉಪಯೋಗಿಸದೇ ತನ್ನ ನಖಗಳಿಂದಲೇ ಅವನ ಉದರ ಬಗೆದನು. ಇದೇ ರೀತಿ ವರಾಹಮೂರ್ತಿ ಹಿರಣ್ಯಾಕ್ಷನನ್ನು ತನ್ನ ಕೋರೆ ಹಲ್ಲಿನಿಂದ ಸಂಹರಿಸಿದನು. ಮುಂದೆ ಶ್ರೀ ಕೃಷ್ಣ ಕಂಸನನ್ನು ಸಂಹರಿಸಲು ಆಯುಧವಿಲ್ಲದೆ ಕೊಂದನು ಎಂಬುದು ಗಮನಾರ್ಹ.

ಶ್ರೀನರಸಿಂಹದೇವನ ಅವತಾರ ಅತ್ಯದ್ಭುತ. ಉಗ್ರರೂಪವನ್ನು ಕಂಡು ಪ್ರಹ್ಲಾದ ಭಯಪಡದೆ ನಿಂತಿರುವಾಗ ಅವನ ಸೋದರರು ಹೆದರಿ ಪಲಾಯನ ಮಾಡಿದರು. ಆದ್ದರಿಂದ ಪ್ರಹ್ಲಾದನೇ ತಂದೆಯ ಅಂತ್ಯಕ್ರಿಯೆ ಮಾಡಲು ಭಗವಂತನು ಹೇಳಿದನು.

ಶ್ರೀನೃಸಿಂಹ ಮಂತ್ರವು **ಓಂ ನಮೋ ಭಗವತೇ ವಾಸುದೇವ, ಓಂ ನಮೋ ಭಗವತೇ ಮಹಾವರಾಹ ರೂಪಾಯ ಓಂ** ಎಂಬುಗಳಂತೆ ಅನುಷ್ಟುಪ್ ಛಂದದಲ್ಲಿರುವುದಾಗಿ ಚಿಂತಿಸಬೇಕು.



**ಮುಖ್ಯ ವಿಷಯ :** ಹಿರಣ್ಯಕಶಿಪುವಿನ ಮಡಿದ ಕಯಾದು ಸಹ ಪತಿವ್ರತಾ ಶಿರೋಮಣಿಯರಲ್ಲಿ ಸೇರುತ್ತಾಳೆ. ಗಂಡ ಎಷ್ಟೇ ದುಷ್ಟನಾಗಿದ್ದರೂ ಪತಿಯನ್ನೇ ಅನುಸರಿಸಿದಳು. ಹೆತ್ತ ಮಗನಿಗೆ ವಿಷಪಾನ ಮಾಡಿಸು ಎಂದಾಗ ಪ್ರತಿಭಟಿಸಲಿಲ್ಲ. ಅಲ್ಲದೆ ನಾರದರ ಆಶ್ರಮದಲ್ಲಿದ್ದಾಗ ನಿತ್ಯ ಹರಿಕಥಾಶ್ರವಣ ಮಾಡುತ್ತಿದ್ದಳು. ಎಷ್ಟು ಕೇಳಿದರೂ ಹರಿಗುಣಗಾನವಲ್ಲವೇ ?

ಪರಮ ಪವಿತ್ರ ನೃಸಿಂಹ ದೇವರ ಕಥಾ ತತ್ಪ್ರಯುಕ್ತ ಭಕ್ತಾಗ್ರಣಿ ಪ್ರಹ್ಲಾದನ ಶುಭಚರಿತೆ ಎಷ್ಟು ವರ್ಣಿಸಿದರೂ ಸ್ವಲ್ಪವೇ. ಆದರೂ ಅಲ್ಪಮತಿಯಾದ ನಾನು ನನ್ನ ಯೋಗ್ಯತಾನುಸಾರ ಸಂಗ್ರಹ ಶೋಧನೆ ಮಾಡಿ ತಾತ್ವಿಕ ಪ್ರಮೇಯಗಳನ್ನು highlight ಮಾಡುವ ಉದ್ದೇಶದಿಂದ ಶ್ರೀಲಕ್ಷ್ಮೀರಮಣ ನೃಸಿಂಹದೇವರ ಕಥಾಸಂಗ್ರಹ ಮಾಡಲಾಗಿದೆ.

**ಬದರೀನಾಥಾಚಾರ್ಯ ಘೂಳೀ**

# ಶ್ರೀಲಕ್ಷ್ಮೀನೃಸಿಂಹ ಋಣಮೋಚನ ಸ್ತೋತ್ರಂ

**೧) ದೇವತಾಕಾರ್ಯಸಿದ್ಧ್ಯರ್ಥಂ ಸಭಾಸ್ತಂಭಸಮುದ್ಭವಂ**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ**

ದೇವತೆಗಳ ಕಾರ್ಯ ಹಾಗೂ ಭಕ್ತ ಪ್ರಹ್ಲಾದನನ್ನು ಅನುಗ್ರಹಿಸಲು ಸಭಾಸ್ತಂಭ ಮಧ್ಯದಿಂದ ಅವತರಿಸಿದ ಹೇ ಮಹಾವೀರನಾದ ನರಸಿಂಹದೇವಾ, ಋಣಮೋಚನೆ ಮಾಡೆಂದು ನಮಸ್ಕರಿಸುತ್ತೇನೆ.

**೨) ಲಕ್ಷ್ಮ್ಯಾಽಽಲಿಂಗಿತವಾಮಾಂಗಂ ಭಕ್ತಾನಾಂ ವರದಾಯಕಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ಶ್ರೀ ಲಕ್ಷ್ಮೀದೇವಿಯನ್ನು ನಿನ್ನ ಎಡ ತೊಡೆಯ ಮೇಲೆ ಕೂಡಿಸಿಕೊಂಡು ಭಕ್ತರ ಅಪೇಕ್ಷಿತ ವರಗಳನ್ನು ಕೊಡುವ ಶ್ರೀ ವೀರನರಸಿಂಹನಿಗೆ ನಮಸ್ಕಾರವು.

**೩) ಆಂತ್ರಮಾಲಾಧರಂ ಶಂಖಚಕ್ರಾಬ್ಜಾಯುಧಧಾರಿಣಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ಹಿರಣ್ಯಕಶ್ಯಪನನ್ನು ಸಂಹರಿಸಿ ಅವನ ಕರುಳುಗಳನ್ನು ಬಗೆದು ಮಾಲಾಕಾರವಾಗಿ ಧರಿಸಿದ ಶಂಖ ಚಕ್ರಾದಿ ಆಯುಧಗಳಿಂದ ಶೋಭಿಸುವ ಶ್ರೀ ನೃಸಿಂಹ ನಿನಗೆ ನಮಸ್ಕಾರವು. ಋಣಮುಕ್ತನನ್ನಾಗಿ ಮಾಡು.

**೪) ಸ್ಮರಣಾತ್ ಸರ್ವಪಾಪಘ್ನಂ ಕದ್ರೂಜವಿಷನಾಶನಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ನಾಮಸ್ಮರಣ ಮಾತ್ರ (ಶ್ರೀಲಕ್ಷ್ಮೀನೃಸಿಂಹ)ದಿಂದಲೇ ಸರ್ವ ಪಾಪಗಳೂ ನಶಿಸಿ ಕದ್ರುವಿನ ಮಕ್ಕಳಾದ ಸರ್ಪಗಳ ವಿಷವನ್ನು ಪರಿಹರಿಸುವ ಶ್ರೀಲಕ್ಷ್ಮೀನೃಸಿಂಹ ದೇವಾ! ಋಣಮುಕ್ತನನ್ನಾಗಿ ಮಾಡು.

**೫) ಸಿಂಹನಾದೇನ ಮಹತಾ ದಿಗ್ದಂತಿಭಯನಾಶನಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ಶತೃವಾದ ಹಿರಣ್ಯನ ಸಂಹಾರವಾದಾಗ ಏನು ಘರ್ಜನೆ ಮಾಡಿದಿ. ಅದರಿಂದಾಗಿ ಎಲ್ಲಾ ದಿಕ್ಕುಗಳು ನಿರ್ಭಯವಾಯಿತು. ಹೇ ನೃಸಿಂಹ, ಋಣಮುಕ್ತನನ್ನಾಗಿ ಮಾಡು. ನಿನ್ನಗೆ ನಮಸ್ಕಾರವು.



**೬) ಪ್ರಹ್ಲಾದವರದಂ ಶ್ರೀಶಂ ದೈತ್ಯೇಶ್ವರವಿದಾರಣಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ಭಕ್ತಾಗ್ರೇಸರನಾದ ಪ್ರಹ್ಲಾದನ ಮೊರೆ ಕೇಳಿ ಅವತರಿಸಿ ಬಂದು ದೈತ್ಯೇಶ್ವರನಾದ ಹಿರಣ್ಯಕನನ್ನು ಸಂಹರಿಸಿದೆ. ಭಕ್ತವತ್ಸಲ, ಶ್ರೀನೃಸಿಂಹ, ಋಣದಿಂದ ಪಾರುಮಾಡು. ನಿನಗೆ ನಮಸ್ಕಾರವು.

**೭) ಕೋಟಿಸೂರ್ಯಪ್ರತೀಕಾಶಮಾಭಿಚಾರಿಕನಾಶನಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ಕೋಟಿಗಟ್ಟಲೆ ಸೂರ್ಯಪ್ರಕಾಶವಿರುವನೇ, ಅಭಿಚಾರಕೆ ಇತ್ಯಾದಿ ದುಷ್ಟಕ್ರಿಯೆಗಳನ್ನು ನಾಶಮಾಡುವ ಮಹಾವೀರನಾದ ನಾರಸಿಂಹನೇ ನನ್ನನ್ನು ಋಣಮುಕ್ತನಾಗಿ ಮಾಡು. ನಿನಗೆ ನಮೋನಮಃ

**೮) ಕ್ರೂರಗ್ರಹೈಃ ಪೀಡಿತಾನಾಂ ಭಕ್ತಾನಾಮಭಯಪ್ರದಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ಕ್ರೂರಗ್ರಹಗಳಿಂದ ಪರಿತಪ್ತರಾದ ಭಕ್ತರಿಗೆ ಅಭಯಪ್ರದನಾಗು. ಶ್ರೀನೃಸಿಂಹದೇವ, ಋಣಮುಕ್ತನನ್ನಾಗಿ ಮಾಡು. ನಮಸ್ಕಾರಗಳು.

**೯) ವೇದಾಂತವೇದ್ಯಂ ಯಜ್ಞೇಶಂ ಬ್ರಹ್ಮರುದ್ರಾದಿಸಂಸ್ತುತಮ್ ।**
**ಶ್ರೀನೃಸಿಂಹಂ ಮಹಾವೀರಂ ನಮಾಮಿ ಋಣಮುಕ್ತಯೇ ॥**

ವೇದ ವೇದಾಂತಗಳಿಂದಲೇ ತಿಳಿಯಲ್ಪಡುವ ಹೇ ಸ್ವಾಮೀ, ಬ್ರಹ್ಮ ರುದ್ರಾದಿ ದೇವತೆಗಳಿಂದ ವಂದಿತನಾಗಿರುವೆ. ಶ್ರೀನೃಸಿಂಹಸ್ವಾಮಿ, ಋಣಮುಕ್ತನನ್ನಾಗಿ ಮಾಡು. ನಿನಗೆ ವಂದನೆ.

**೧೦) ಯ ಇದಂ ಪಠತೇ ನಿತ್ಯಮೃಣಮೋಚನಸಂಜ್ಞಕಮ್ ।**
**ಅನೃಣೋ ಜಾಯತೇ ಸದ್ಯೋ ಧನಂ ಶೀಘ್ರಮವಾಪ್ನುಯಾತ್ ॥**

ಈ ಋಣಮೋಚನವೆಂಬ ಸ್ತೋತ್ರವನ್ನು ಯಾರಾದರು ಭಕ್ತಿಯಿಂದ ನಿತ್ಯವೂ ಪಠಿಸುತ್ತಾರೋ ಅವರು ಶೀಘ್ರದಲ್ಲೇ ಋಣಮುಕ್ತರಾಗುವುದಲ್ಲದೇ, ದನಧಾನ್ಯ, ಆರೋಗ್ಯದಿಂದ ಶೋಭಿಸುತ್ತಾರೆ. ಇದು ಸತ್ಯ.

**ಶ್ರೀ ಲಕ್ಷ್ಮೀನೃಸಿಂಹ ಪಾಹಿಮಾಂ ಪಾಹಿಮಾಂ**

## ಅನುಬಂಧ – ೧

೧. ಹಿರಣ್ಯಕಶಿಪು ಅತ್ಯುತ್ತಮ ವಿಶಿಷ್ಟ ಬಲಾದಿಗಳನ್ನು ಸಂಪಾದಿಸಲು ಚತುರ್ಮುಖ ಬ್ರಹ್ಮದೇವನನ್ನು ಕುರಿತು ಉಗ್ರ ತಪಸ್ಸು ಮಾಡಿದ ಎಂದಿದೆ. ಹೀಗೆ ಅತ್ಯುಗ್ರ ತಪಸ್ಸಿನ ಫಲವಾಗಿ ಬ್ರಹ್ಮದೇವರನ್ನು ಮೆಚ್ಚಿಸಿ ದುರ್ಲಭವಾದ ವರಗಳನ್ನು ಪಡೆದನೆಂದಿದೆ.

೨. ಅದೇ ವಿಷಯ ತಿಳಿಸುತ್ತಾ ಬ್ರಹ್ಮದೇವರು ಪ್ರತ್ಯಕ್ಷವಾದುದನ್ನು ನೋಡಿ ಆನಂದವಾಯಿತು ಮತ್ತು ಚತುರ್ಮುಖನಿಗೆ ಶಿರಸಾಷ್ಟಾಂಗ ನಮಿಸಿ ಸ್ತೋತ್ರ ಮಾಡಿದನೆಂದಿದೆ. **ನನಾಮ ಶಿರಸಾ ಭೂಮೌತದ್ದರ್ಶನ ಮಹೋತ್ಸವಃ ।** ಅಲ್ಲದೇ ವಿವಿಧ ರೀತಿಯಿಂದ ಬ್ರಹ್ಮದೇವನನ್ನು ಕೊಂಡಾಡಿದ ಎಂದಿದೆ.

೩. ಮುಂದೆ ಇದೇ ಹಿರಣ್ಯಕಶಿಪು

೪. **"ಯಸ್ತ್ವಾಯಾ ಮಂದ ಭಾಗ್ಯೋಕ್ತೋ ಮದನ್ಯೋ ಜಗದೀಶ್ವರ"** ಹೇ ಮಂದಭಾಗ್ಯ ಪ್ರಹ್ಲಾದ, ನೀನು ಹೇಳಿದಂತೆ ನನ್ನನ್ನು ಹೊರತು ಜಗದೊಡೆಯ ಇದ್ದಾನೆಯೋ? **ನಾನೇ ಜಗದೀಶ್ವರ** ಎಂದು ಕೇಳಿದನೆಂದಿದೆ.

ಮೇಲೆ ತಿಳಿಸಿದ ರೀತ್ಯ ನಾಲ್ಕು ಸಂಗತಿಗಳು ಪರಸ್ಪರ ವಿರುದ್ಧವಾಗಿರುವುದೆಂದು ಸೂಚಿಸುವುದು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದದ್ದು.

೧. ಹಿರಣ್ಯಕಶಿಪು ತಾನೇ ಜಗತ್ಪತಿ ಅಂದರೆ **"ಅಹಂ ಬ್ರಹ್ಮಾಸ್ಮಿ"** ಎಂದು ಹೇಳಿದಂತಾಯಿತು. (ಹೇಳಿಕೊಂಡ)

೨. ತಾನೇ ಜಗದೀಶ್ವರನಾಗಿದ್ದ ಪಕ್ಷದಲ್ಲಿ ಬ್ರಹ್ಮದೇವರನ್ನು ಕುರಿತು ಉಗ್ರ ತಪಸ್ಸು ಮಾಡಿ ಅವರಿಂದ ವರ ಪಡೆಯುವ ಅಗತ್ಯವಿರುವುದಿಲ್ಲ. ಅವನು ಬಯಸಿದ ಬಲವೀರ್ಯಾದಿಗಳು ಬ್ರಹ್ಮನೆಂದೆನಿಸಿದವನಲ್ಲಿ ಇರಬೇಕಲ್ಲವೇ ? ಈಗ ಬ್ರಹ್ಮನು ನಾನೇ ಎಂದು ಕೂಗಿದವನು ಚತುರ್ಮುಖನ ವರದಾನದ ಪ್ರಶ್ನೆಯೇ ಬರುವುದಿಲ್ಲ.

ನಾನೇ ಬ್ರಹ್ಮ, ಸರ್ವಸಮರ್ಥನೆಂದು ಹೇಳಿಕೊಂಡು ಪ್ರತ್ಯೇಕ ವಿರಂಚಿಯಲ್ಲಿ ಏಕೆ ಕೇಳಿದ....ಸ್ವವಾಹತಿ. ಇದರಿಂದ ಎರಡು ಅಂಶ ಸ್ಪಷ್ಟವಾಗುವುದು. ಹಿರಣ್ಯಕಶಿಪುವಿಗೆ ತಪಸ್ಸಿನ ಪೂರ್ವದಲ್ಲಿ ತಾನು ಬ್ರಹ್ಮನೆಂಬುದು ಗೊತ್ತಿರಲಿಲ್ಲವೇ ?

ಗೊತ್ತಿರಲಿಲ್ಲವೆಂದರೆ ಅವನಿಗೆ ಅಜ್ಞಾನವಿದ್ದಿತು. (ಬ್ರಹ್ಮನಿಗೆ) ಗೊತ್ತಿತ್ತು ಎಂದರೆ ತಾನೇ ಸ್ವಯಂ ಬಲ ವೀರ್ಯಾದಿಗಳ ಸ್ವರೂಪನಾದ ಬ್ರಹ್ಮ, ಬ್ರಹ್ಮದೇವನನ್ನು ಪ್ರಾರ್ಥಿಸದನೇಕೆ?

ಅಂದಾಗ ಹಿರಣ್ಯಕಶಿಪು (ಬ್ರಹ್ಮನಾದವ) ಚತುರ್ಮುಖ ದೇವನನ್ನು ಪ್ರತ್ಯೇಕ ಏಕೆ ಸ್ತೋತ್ರ ಮಾಡಿದ ? ಇದರಿಂದಾಗಿ ಹಿರಣ್ಯಕಶಿಪು ವರ ಬ್ರಹ್ಮನಲ್ಲದವರಾದ ಚತುರ್ಮುಖನಿಂದ ವರಪಡೆದ ಎನ್ನಬಹುದೇ ?

ಬ್ರಹ್ಮನಾದ ಹಿರಣ್ಯಕಶಿಪು ಜೀವನಾದಾಗ ಅಜ್ಞಾನ ವಶಾತ್ ಅನ್ಯರಿಂದ ವರಪಡೆದ



ಎಂದ ಮೇಲೆ ಬ್ರಹ್ಮಸ್ವರೂಪನಾದ ಜೀವ ಬ್ರಹ್ಮದೇವರಿಗಿಂತ ಅವರು ಕೀಳು ಎಂದಾಗುವುದು. ಎಲ್ಲಾದರೂ ಉಂಟೇ ? ನೀಚರಿಂದ ಉತ್ತಮರು ವರ ಪಡೆಯಲಾದೀತೇ? ಹೀಗೆ ಹಿರಣ್ಯಕಶಿಪುವಿನ ಬಗ್ಗೆ ವಿಚಾರ ಮಾಡಿದಾಗ ಮೊದಲ ಸಂಗತಿಗೂ ಉತ್ತರ ಸಂಗತಿಗೂ ವಿರೋಧ ಬರುವುದು.

ಇಲ್ಲಿ ಮಾಯಾವಾದಿಗಳು **"ಅಹಂ ಬ್ರಹ್ಮಾಸ್ಮಿ"** ಅಂತ ತಿಳಿಸಿ ಅವರೇ ಭಗವಂತನನ್ನು ಭಜಿಸಿದರು. ಬ್ರಹ್ಮಸ್ವರೂಪರಾದ ಶಂಕರಾಚಾರ್ಯರು **"ಅಹಂ ಬ್ರಹ್ಮಾಸ್ಮಿ"** ಎಂದು ತಿಳಿಸಿ, ಮುಂದೆ ಅವರಿಗೆ ಜೀವಾಪತ್ತು ಬಂದಾಗ ಪರಬ್ರಹ್ಮನನ್ನು ಸ್ತೋತ್ರಮಾಡಿದ ವಿಷಯವನ್ನು ಅವರ ಅನುಯಾಯಿಗಳೇ ಬರೆದಿದ್ದಾರೆ.

ಒಮ್ಮೆ ಶಂಕರಾಚಾರ್ಯರು ಸಂಚಾರಕ್ರಮೇಣ ಶಿಷ್ಯರ ಸಮೇತ ಶ್ರೀಶೈಲಕ್ಕೆ ಹೋದರು. ಅಲ್ಲಿ ಮಲ್ಲಿಕಾರ್ಜುನನ ಸೇವಾದಿಗಳನ್ನು ಮುಗಿಸಿ ಹಿಂತಿರುಗುವಾಗ ದಾರಿ ಗುಡ್ಡುಗಾಡು ಅರಣ್ಯಮಯ ಕಾಡುಜನರು ವಾಸಿಸುತ್ತಿದ್ದರು. ಅವರೆಲ್ಲಾ ನರಭಕ್ಷಕರು. ಶಂಕರರು ಬರುತ್ತಿದ್ದುದನ್ನು ನೋಡಿ ಅವರ ಮೇಲೆ ಲಗ್ಗೆ ಹಾಕಿ ಬಂಧಿಸಿದರು. ಶಿಷ್ಯರು ಗಾಬರಿಗೊಂಡು ಓಡಿಹೋದರು. ಏಕಾಂಗಿಯಾದ ಶಂಕರರು ಬಂಧಿತರಾಗಿ ಕಾಡುಜನ ಇವರನ್ನು ತಮ್ಮ ದೇವತೆಗೆ ನರ ಬಲಿಕೊಡಲು ಇವರು ಸಿಕ್ಕಿದರು. ಶಂಕರರು ಸ್ಫುರದ್ರೂಪಿ– ಮೈಕಟ್ಟು ಯಾವ ಅಂಗ ಹೀನವಿರಲಿಲ್ಲ. ಇವರನ್ನು ತಮ್ಮ ಬಲಿಪಶುವನ್ನಾಗಿ ಮಾಡಲು ಒಂದು ಗಿಡಕ್ಕೆ ಕಟ್ಟಿಹಾಕಿದರು. ತಮ್ಮ ದೇವಿಪೂಜೆ ಮುಗಿಸಿ ನಂತರ ಇವರನ್ನು ಬಲಿಕೊಡಬೇಕೆಂದು ಹೋದರು. ಶಂಕರರಿಗೆ ಈ ಆಪತ್ತಿನಿಂದ ಹೇಗೆ ಪಾರಾಗಲು ಕಾಣದೆ ಶ್ರೀಲಕ್ಷ್ಮೀನೃಸಿಂಹ ದೇವರನ್ನು ಸ್ತುತಿಸಿ, **ಹೇ ಲಕ್ಷ್ಮೀನೃಸಿಂಹ ಮಮ ದೇಹಿ ಕರಾವಲಂಬಂ** ಎಂದು ನರಸಿಂಹ ಕರಾವಲಂಬ ಸ್ತೋತ್ರ ಮಾಡಿದರೆಂದಿದ್ದಾರೆ.

ಇದರಿಂದ ಶಂಕರರು ತಾವೇ ಬ್ರಹ್ಮರಾದಾಗ ತಮ್ಮ ರಕ್ಷಣೆ ಏಕೆ ಮಾಡಿಕೊಳ್ಳಲಿಲ್ಲ? ನರಸಿಂಹ ದೇವರನ್ನು ಏಕೆ ಸ್ತುತಿಸಿದರು ? ಇದಕ್ಕೆ ಸಮಾಧಾನವಿಲ್ಲ.

ಇದರಿಂದ ಶಂಕರಾಚಾರ್ಯರಿಗೆ ತಮ್ಮ ಸಿದ್ಧಾಂತವಾದ **"ಅಹಂ ಬ್ರಹ್ಮಾಸ್ಮಿ"** ಎಂಬುವುದರಲ್ಲಿ ಅವರಿಗೇ ನಂಬಿಕೆ ಇರಲಿಲ್ಲ. ತಾವು ಹೇಳುವುದೊಂದು, ಆಚರಿಸುವುದೇ ಬೇರೆ ಎಂದು ಜನರನ್ನು ಮರುಳು ಮಾಡಿ ತಪ್ಪು ದಾರಿ ತೋರಿಸುವುದಾಗಿದೆ. ಹೀಗೆಯೇ ಹಿರಣ್ಯಕಶಿಪುವೂ ಇವರಂತೆ ಪ್ರತಿಪಾದಿಸಿ ನಾಶಹೊಂದಿದ.

## ಅನುಬಂಧ – ೧(ಅ)

ಅಧ್ಯಾಯ – ೪, ಶ್ಲೋಕ–೧೨

**ತಸ್ಮಿನ್ ಮಹೇಂದ್ರಭವನೇ ಮಹಾಸುರೋ ಮಹಾಬಲೋ ನಿರ್ಜಿತ ಲೋಕ ಏಕರಾಟ್**
**ರೇಮೇಽಭಿವಂದ್ಯಾಂಘ್ರಿಯುಗಃ ಸುರಾದಿಭಿಃ । ಪ್ರತಾಪಿತೈರೂರ್ಜಿತ ಚಂಡಶಾಸನಃ ॥**

ಇಲ್ಲಿ ಸುರಾದಿಭಿಃ ಎಂದೂ ಅವರೆಲ್ಲಾ ಹಿರಣ್ಯಕನಿಗೆ ಕಪ್ಪ ಕಾಣಿಕೆ ಕೊಡುತ್ತಿದ್ದರೆಂದಿದೆ.

ಸುರಾದಿಭಿಃ = ದೇವತೆಗಳು ಎನ್ನುವ ಅರ್ಥ ಬರುವುದು. ಅಂದಾಗ ಎಲ್ಲಾ ದೇವತೆಗಳು ಅಂತ ತಿಳಿಯಬಾರದು. ಹಾಗಾದರೆ ಸುರಾದಿಭಿಃ ಅಂತ ತಿಳಿಸಿದಾಗ ಅವಾಂತರ ದೇವತೆಗಳು ಅಂತ ಅರ್ಥ. ಅವಾಂತರ ದೇವತೆಗಳು ಯಾರೆಂದರೆ ದೇವತೆಗಳಲ್ಲಿ ಎರಡು ಭಾಗ. ೧) ಯಜ್ಞ ಭಾಗಕ್ಕೆ ಅರ್ಹತೆ ಇಲ್ಲದವರು. ೨) ಹವಿರ್ಭಾಗಕ್ಕೆ ಅರ್ಹತೆ ಉಳ್ಳವರು ಎಂದು. ಈ ಶ್ಲೋಕದಲ್ಲಿ ಸುರಾ ಅನ್ನುವವರು ಹವಿರ್ಭಾಗಕ್ಕೆ ಅರ್ಹತೆ ಇಲ್ಲದವರೆಂದು ತಿಳಿಯಬೇಕು. ಇಂತಹವರು ರಾಕ್ಷಸನಿಗೆ ಕಾಣಿಕೆ ಕೊಡುತ್ತಿದ್ದರ. ಇವರ ಹವಿರ್ಭಾವವನ್ನು ಹಿರಣ್ಯಕ ಕಸಿದುಕೊಳ್ಳುತ್ತಿದ್ದನೆಂದೇ ಅರ್ಥ. **ಉಪಾಯನಂ ದದುಃ ಸರ್ವೇ ವಿನಾ ದೇವಾನ್ ಹಿರಣ್ಯಕೇ। ಆದಿತ್ಯವಸವೋರುದ್ರಾಃ ತ್ರಿವಿಧಾಹಿ ಸುರಾಯತಃ । ಮರುತಶ್ಚೈವ ವಿಶ್ವೇಚ ಸಾಧ್ಯಶ್ಚೈವಚ ತದ್ಗತಾಃ । ಅತಃ ತ್ರಯ ಇತಿ ಪ್ರೋಕ್ತಾಃ ಚತ್ವಾರೋ ಮಾನುಷಾಃ ಸ್ಮೃತಾಃ ॥** (ಭಾ.ತಾ.)

**ಅಯಜ್ಞ ಭಾಗೇಷ್ವಪಿ ತು ಸುರಶಬ್ದಃ ಪ್ರಯುಜ್ಯತೆ ।**
**ಯಜ್ಞಭಾಗ ಭುಜಸ್ತೇಷು ತ್ರಯಃ ಇತ್ಯಭಿಶಬ್ದಿತಾಃ ॥**

ಸುರಶಬ್ದ ಎಂಬಲ್ಲಿ ಯಜ್ಞಕ್ಕೆ (ಅರ್ಹತೆ ಇಲ್ಲದ) ಗಂಧರ್ವ ಇತ್ಯಾದಿ ಸಾಮಾನ್ಯ ದೇವತೆಗಳು ಎಂದೇ ತಿಳಿಯಬೇಕು. ಹೀಗೆ ಪೂಜ್ಯರಾದ ಉತ್ತಮ ದೇವತೆಗಳು ಪೂಜ್ಯರೇ. ಇಂಥವರು ಹಿರಣ್ಯಕನನ್ನು ಉಪಾಸನೆ ಮಾಡಿದರೆಂದು ತಿಳಿಯಬಾರದು. ಈ ವಿವರಣೆ ಶ್ರೀಮದಾಚಾರ್ಯರು ಸಂದೇಹ ಪರಿಹಾರ ಮಾಡಿರುತ್ತಾರೆ.

## ಅನುಬಂಧ – ೨

ಶ್ರೀನೃಸಿಂಹದೇವರು ಪ್ರಾದುರ್ಭವಿಸಿದ್ದನ್ನು ನರಸಿಂಹಪುರಾಣದಲ್ಲಿ ಬೇರೊಂದು ರೀತಿಯಾಗಿ ವರ್ಣಿತವಾಗಿದೆ.

ಪ್ರಹ್ಲಾದನಿಗೆ ಶ್ರೀಹರಿ ಗೋಚರಿಸಿ ಭಕ್ತ, ನಾನು ಯಾವ ಅವತಾರದಿಂದ ಕಾಣಿಸಿ ಹಿರಣ್ಯಕನನ್ನು ಸಂಹರಿಸಲಿ ಹೇಳು ಎಂದ.

ಪ್ರಹ್ಲಾದ ಹೇಳಿದ, ಸ್ವಾಮಿ ನಿನ್ನ ಎಲ್ಲಾ ರೂಪಗಳು ಅದ್ಭುತ ಅನಂತಾನಂತ ಅವತಾರಗಳಿರುವಾಗ ಏನೆಂದು ಹೇಳಲಿ ? ಆಗ ಭಗವಂತ ನೃಸಿಂಹ ರೂಪದಿಂದ ನೋಡಬಯಸುತ್ತೀಯ ? ಹಾಗಾದರೆ ಇನ್ನು ೨/೩ ದಿನಗಳಲ್ಲಿ ಅದ್ಭುತ ರೂಪವನ್ನು ಕಂಭದಿಂದ ಬರುವೆ ನೋಡು ಎಂದನಂತೆ.

ಹಿರಣ್ಯಕಶಿಪು ಮಗ ಪ್ರಹ್ಲಾದನನ್ನು ಕೊಲ್ಲಲೂ ವಿವಿಧವಾಗಿ ಪ್ರಯತ್ನಪಟ್ಟು ಕೊನೆಗೆ ಸಭಾ ಮಧ್ಯದಲ್ಲಿನ ಕಂಭವನ್ನು ತೋರಿಸಿ ಪ್ರಹ್ಲಾದ, ನಿನ್ನ ಹರಿ ಈ ಕಂಭದಲ್ಲಿದ್ದಾನೆಯೇ? ಕರಿ ಆ ಹರಿಯನ್ನು ಎಂದು ಹೇಳಿದಾಗ ಭಕ್ತ ಪ್ರಹ್ಲಾದ ಸ್ವಾಮೀ, ತಮಗೆ ಹಿಂದೆ ಹೇಳಿದ್ದನ್ನು ಸ್ಮರಿಸಿ ಭಕ್ತಿಯಿಂದ ನಮಿಸಿದ ತಕ್ಷಣ ಕಂಭದ ಮಧ್ಯದಿಂದ ಪಠ ಪಠಾ ಎಂಬ ಶಬ್ದವಾಗಿ ಶ್ರೀಹರಿ ನೃಸಿಂಹ ರೂಪದಿಂದ ಹೊರಗೆ ಬಂದ ಎಂದಿದೆ. ಇದರಿಂದ ಹಿರಣ್ಯಕಶಿಪು ಕಂಭವನ್ನು ತನ್ನ ಮುಷ್ಠಿಯಿಂದ ಹೊಡೆದಿಲ್ಲ ಎಂಬ ಅಂಶ ತಿಳಿದುಬರುವುದು.



**ಪೂರ್ವೋಕ್ತಂ ತದ್ವಚಃ ಸ್ಮೃತ್ವಾಪ್ರಣೇವಾಮಕೃತಾಂಜಲಿಃ**
**ತಾವತ್ ಸ್ಫುಟಸ್ತಂಭೋವೀಕ್ಷಿತೋದೈತ್ಯಸೂನುವಾ** (ನೃ.ಪು. ೪೦)

ಇಲ್ಲಿ ವಿಷಯವೇನೆಂದರೆ ಭಾಗವತಕ್ಕೂ, ನೃಸಿಂಹ ಪುರಾಣಕ್ಕೂ ವಿರೋಧ ಬಂದಂತೆ ಕಾಣುವುದು.

ಇದಕ್ಕೆ ಸಮಾಧಾನ : ಪರಮಾತ್ಮನ ಅವತಾರಗಳು ಕಾಲಕಾಲಕ್ಕೆ ಕಲ್ಪಾಂತರಗಳು ವಿವಿಧವಾಗಿರುವುದು. ನೃಸಿಂಹ ಪುರಾಣ ಪ್ರಸಂಗವೇ ಬೇರೆ. ಭಾಗವತೋಕ್ತಿಯೂ ಬೇರೆ ಇರುವುದು. ಮುಖ್ಯ ವಿಷಯ – ಭಗವಂತನ ಅವತಾರ ವಿಚಿತ್ರವೆಂದೇ ತಿಳಿಯಬೇಕು. ವಿರೋಧವಿರುವುದಿಲ್ಲವೆಂದು ತಿಳಿಯಬೇಕು. ಎದ್ಯಪಿ ಶ್ರೀವೇದವ್ಯಾಸರೇ ಎಲ್ಲಾ ಪುರಾಣಗಳನ್ನು ರಚಿಸಿದರೋ ಹಾಗೇ ಶ್ರೀಮದ್ಭಾಗವತವನ್ನೂ ರಚಿಸಿದರು.

ಶ್ರೀವೇದವ್ಯಾಸರು ದ್ವಾಪರದಲ್ಲಿ ಮಾತ್ರ ಅವತರಿಸಿದರೆಂದು ತಿಳಿಯಬಾರದು. ಹಿಂದೆ ನಾಲ್ಕು ಯುಗಗಳಲ್ಲಿ ಅವತರಿಸಿದ್ದರೆಂದು ಪದ್ಮಪುರಾಣ ತಿಳಿಸುತ್ತದೆ. ಅಂದ ಮೇಲೆ ಯುಗ ಭೇದದಿಂದಲೂ ವಿವಿಧವಾಗಿ ವರ್ಣಿತವಾಗಿರಬೇಕು. ವಿರೋಧ ಶಂಕ ಮಾಡಬಾರದೆಂದು ತಿಳಿಯಬೇಕು.

(೨) ಹಿರಣ್ಯಕಶಿಪುವಿಗೆ ವಾಯುದೇವರು ಪಕ್ಷಿರೂಪದಿಂದ ಬಂದು ಮುನ್ಸೂಚನೆ (ಎಚ್ಚರಿಕೆ) ಕೊಟ್ಟರೆಂದಿದೆ. ವಾಯುದೇವರೇ ಮುಂದೆ ರಾಮಾಯಣದಲ್ಲಿ ಕಪಿರೂಪದಿಂದ ರಾವಣನಿಗೆ ಎಚ್ಚರ ಕೊಟ್ಟರು ಎಂದಿದೆ. ಕಪಿ ಏಕೆ ಹೀಗೆ ಲಂಕಾವನಗಳನ್ನು ನಾಶಮಾಡಿದೆ? ಯಾರು ನೀನು ? ಎಂದು ರಾವಣ ಕೇಳಿದಾಗ,

**ಅವೈಹಿದೂತಮಾಗತಮ್ ದುರಂತ ವಿಕ್ರಮಸ್ಯ ಮಾಮ್ ।**
**ರಘೂತ್ತಮಸ್ಯ ಮಾರುತಿಂ ಕುಲಕ್ಷಯೇ ತವೇಶ್ವರಮ್ ॥**

**ನಚೇತ್ಪ್ರದಾಶ್ಯಸಿತ್ವರನ್ ರಘೂಮಪ್ರಿಯಾಂ ತದಾ ।**
**ಸಪುತ್ರಮಿತ್ರಬಾಂಧವೋ ವಿನಾಶಮಾಶು ಯಸ್ಯಸಿ ॥**

**ನರಾಮಬಾಣಧಾರಣೆ ಕ್ಷಮಾಃ ಸುರೇಶ್ವರಾ ಅಪಿ ।**
**ವಿರಂಚಶರ್ವಪೂರ್ವಕಾಃ ಕಿಮು ತ್ವಮಲ್ಪಸಾರಕಃ ॥**

ವಾಲ್ಮೀಕಿ ರಾಮಾಯಣದಲ್ಲಿಯೂ

**ಬ್ರಹ್ಮಾಸ್ವಯಂ ಭೂ ಶತುರಾನನೋವ ರುದ್ರೋರ್ತ್ರೆನೇತ್ರೋ ।**
**ತ್ರಿಪುರಾಂತಲವಾ ಇಂದ್ರೋ ಮಹೇಂದ್ರೋಸುರನಾಯಕಾವೋ ।**
**ಸ್ಥಾತುಂ ನ ಶಕ್ಯಾಃ ಯುಧಿರಾಘವಸ್ಯ** ಎಂದಿದೆ.

ಭಗವಂತನ ಸೇವೆ ಇಷ್ಟು ರೀತಿಯಿಂದ ಮಾಡಿದಕ್ಕೆ ಶ್ರೀಕೃಷ್ಣನು ಹೇಳುತ್ತಾನೆ. ವಾಯುದೇವ ನಿನ್ನ ಸೇವೆ ಅಮೋಘ. ಅದಕ್ಕಾಗಿ ನಾನೇ ನಿಮ್ಮ ದೂತನಾಗಿ ಧೃತರಾಷ್ಟ್ರನ ಸಭೆಗೆ ಹೋಗಿ ಪಾಂಡವರಾದ ನಿಮಗೆ ಯೋಗ್ಯ ಫಲವಾಗುವಂತೆ ಅನುಗ್ರಹಿಸುತ್ತೇನೆ. ಅಂದರೀತ್ಯ ಮಾರ್ಮಿಕವಾಗಿ ತಿಳಿಸಲಾಗಿದೆ.

## ಅನುಬಂಧ – ೩

**ವಿಶೇ :** ಬ್ರಹ್ಮಾಂಡ ಪುರಾಣದಲ್ಲಿ ಹಿರಣ್ಯಕನಿಗೆ ನರಸಿಂಹದೇವ ಮುನ್ಸೂಚನೆ ಕೊಟ್ಟಿರುವಾದಾಗ ವಾಯುದೇವರು ಪಕ್ಷಿರೂಪದಿಂದ ಕಾಣಿಸಿ ಹರಿಭಕ್ತನನ್ನು ಹಿಂಸಿಸಬೇಡ. ಶರಣುಹೋಗು. ಇಲ್ಲವಾದರೆ ನರಸಿಂಹದೇವ ಬಂದು ತನ್ನ ಉಗುರುಗಳಿಂದಲೇ ನಿನ್ನ ಉದರವನ್ನು ಬಗೆಯುತ್ತಾನೆ. ಇನ್ನು ಮೂರು ಯಾಮವಿದೆ. ಎಚ್ಚರದಿಂದಿರು.

**ನಾರಾಯಣಃ ಸ್ವಸ್ಯ ಜೋಶ ನಿಧಾಯ ಸಭಾಂಕುರ್ಯೈಃ ।**
**ಹೃತ್ವಾ ರೋಜಂ ತಾವದ್ಯಖನಿಷ್ಯತಿ ನಾತ್ರ ವಿಚಾರ್ಯಮಸ್ತಿ ॥ (ಬ್ರ.ಪು. ೩೯)**

ಹೀಗೆ ಹೇಳಿ ಪಕ್ಷಿ ರೂಪ ವಾಯುದೇವ ಹಾರಿದನೆಂದಿದೆ.

## ಅನುಬಂಧ – ೪

**ಶ್ರೀಮದಾಚಾರ್ಯರ ತಂತ್ರಸಾರಸಂಗ್ರಹದಲ್ಲಿ ಶ್ರೀಲಕ್ಷ್ಮೀನರಸಿಂಹಸ್ತುತಿ**

**ಧ್ಯಾಯೇನ್ನೃಸಿಂಹಮುರುವೃತ್ತ ರವಿತ್ರಿನೇತ್ರಂ ।**
**ಜಾನುಪ್ರಸಕ್ತ ಕರಯುಗ್ಮ ಮಥಾ ಪರಾಭ್ಯಾಮ್ ॥**
**ಚಕ್ರಂಧರಂ ಚ ದಧತಂ ಪ್ರಿಯಯಾ ಸಮೇತಮ್ ।**
**ತಿಗ್ಮಾಂಶು ಕೋಟ್ಯಧಿಕ ತೇಜ ಸಮಗ್ರಶಕ್ತಿಂ ॥** (೪–೧೫)

**ಅಗ್ನಿಪುರಾಣದಲ್ಲಿ ನೃಸಿಂಹ ಸ್ತುತಿ ಮಂತ್ರ**

**ಅನುಷ್ಟು ಭ ನೃಸಿಂಹೇ ನ ವಿಷವ್ಯಾಧಿನಾಶನಮ್ ।**
**ಓಂ॥ ಇಮ್ ಇಮ್ ಉಗ್ರಂ ವೀರಂ ಮಹಾವಿಷ್ಣುಂ ಜ್ವಲಂತಂ ಸರ್ವತೋಮುಖಂ।**
**ನೃಸಿಂಹಂ ಭೀಷ್ಣಂ ಭದ್ರಂ ಮೃತ್ಯು ಮೃತ್ಯುಂ ನಮಾಮ್ಯಹಂ ॥**
**ಅಯಮೇತು ಪಂಚಾಂಗೋ ಮಂತ್ರಃ ಸರ್ವಾರ್ಥಸಾಧಕಃ ॥**
**ಓಂ ಶ್ರೀಃ ಲಕ್ಷ್ಮೀನೃಸಿಂಹಾಯನಮಃ ಓಂ** ಎಂದು ಜಪಿಸಬೇಕು.

**ಗ್ರಂಥ ಋಣ** ೧) ಶ್ರೀಮದ್ಭಾಗವತ – ಮೂಲ ಶ್ರೀವೇದವ್ಯಾಸರಿಂದ ರಚಿತ ೭/೮ನೇ ಸ್ಕಂಧಗಳು (ಮೂಲವನ್ನು ವಿದ್ವಾನ್ ಶೇಷಗಿರಿ ಆಚಾರ್ಯರ ವೈಷ್ಣವ ಪಾಠ ಗ್ರಂಥವನ್ನು ಅನುಸರಿಸಿರುತ್ತೇನೆ) ೨) ಪದರತ್ನಾವಳಿ – ಶ್ರೀ ಶ್ರೀ ವಿಜಯಧ್ವಜೀಯ ಟಿಪ್ಪಣಿ. ೩) ಶ್ರೀ ಸತ್ಯಧರ್ಮರ ಟೀಕಾ. ೪) ಶ್ರೀವಿಷ್ಣುತೀರ್ಥರ ಭಾಗವತಸಾರೋದ್ಧಾರ. ೫) ಶ್ರೀಯಾದವಾರ್ಯರ ಟೀಕಾ. ೬) ಶ್ರೀಮದಾಚಾರ್ಯರ ಭಾಗವತ ತಾತ್ಪರ್ಯ ೭) ಬ್ರಹ್ಮಾಂಡಪುರಾಣ – ಅಗ್ನಿಪುರಾಣ ನೃಸಿಂಹಪುರಾಣ ೮) ಶ್ರೀಪುರಂದರದಾಸರು ೯) ಶ್ರೀ ಶ್ರೀ ಶ್ರೀಪಾದರಾಜರ ದಂಡಕ ೧೦) ನನ್ನ ತೀರ್ಥರೂಪರು ಬರೆದ ಭಾಗವತಾಮೃತಂ ಕೃತಿ (ಕನ್ನಡಾನುವಾದ)

ಇವೆಲ್ಲದರ ಸಹಾಯ ಪಡೆದಿದ್ದೇನೆ.

********